ಮಾನವಿಕ ಕರ್ಣಾಟಕ

ಸಂಪುಟ ೨ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೧

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨ ಸಂಚಿಕೆ ೧

ನವೆಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೧

MANAVIKA KARNATAKA, Kannada quarterly of the University of Mysore. Volume 2, Number 1, November 1971. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖಕರು

೧ ಪಿ. ಆರ್. ತಿಪ್ಪೇಸ್ವಾಮಿ	....	ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯದಲ್ಲಿ ಕ್ಷೇತ್ರ ಸಹಾಯಕರು
೨ ಕೆ. ಎಸ್. ನಾರಾಯಣಸ್ವಾಮಿ	....	ಗಾಂಧಿ ಪ್ರತಿಷ್ಠಾನ, ಮೈಸೂರು
೩ ಅ. ಪು. ಶ್ರೀನಿವಾಸಮೂರ್ತಿ	....	ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್
೪ ಕೆ. ಎಸ್. ಶಿವಣ್ಣ	....	ಮಾನಸಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರು
೫ ದೇ. ನಾ. ಶ್ರೀನಿವಾಸಮೂರ್ತಿ	....	ವಾಣಿಜ್ಯ ಅಧ್ಯಾಪಕರು, ಡಿ.ಆರ್.ಎಂ. ಕಾಲೇಜು, ದಾವಣಗೆರೆ
೬ ಸುಶೀಲಾ ಪದ್ಮನಾಭ ಉಪಾಧ್ಯಾಯ	....	ಸಹಾಯಕ ಸಂಶೋಧಕಿ, ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ, ಮೈಸೂರು
೭ ಎಂ. ಎಸ್. ಕೃಷ್ಣಮೂರ್ತಿ	....	ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಪ್ರಾಚೀನ ವಸ್ತು ಸಹಾಯಕರು
೮ ಎಚ್. ಎ. ಖಾನ್	....	ಮಾನಸಗಂಗೋತ್ರಿಯ ಗ್ರಂಥಾಲಯ ಶಾಸ್ತ್ರ ವಿಭಾಗದಲ್ಲಿ ರೀಡರ್
೯ ಎನ್. ಪ್ರಭುಸ್ವಾಮಿ	....	ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕರು
೧೦ ಕೆ. ಜಿ. ವಸಂತಮಾಧವ	....	ಇತಿಹಾಸ–ರಾಜ್ಯಶಾಸ್ತ್ರ ಅಧ್ಯಾಪಕರು, ವಿಜಯ ಕಾಲೇಜು, ಮೂಲ್ಕಿ, ದಕ್ಷಿಣ ಕನ್ನಡ
೧೧ ಡಾ. ಬಿ. ಷೇಕ್ ಅಲಿ	....	ಮಾನಸಗಂಗೋತ್ರಿಯ ಇತಿಹಾಸ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
೧೨ ಡಾ. ಎಂ. ಮಾದಯ್ಯ	....	ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್
೧೩ ಸಿ. ಕೆ. ರೇಣುಕಾರ್ಯ	....	ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರು
೧೪ ಎಚ್. ಎಂ. ಸದಾಶಿವಯ್ಯ	....	ಮಾನಸ ಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೧೫ ಕೈಂತಜೆ .... ಕೆ. ಗೋವಿಂದಭಟ್ಟ, ಅಡ್ವೊಕೇಟ್, ಮಂಗಳೂರು

೧೬ ಬಿ. ಕೆ. ಗುರುರಾಜರಾವ್ .... ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶದ ಸಹ ಸಂಪಾದಕರು

೧೭ ಬಿ. ಶಾಮಸುಂದರ .... ಕನ್ನಡ ಅಧ್ಯಯನ ಸಂಸ್ಥೆಯ ವಿಶ್ವಕೋಶ ವಿಭಾಗ

೧೮ ಎ. ವಿ. ಎನ್. .... ಡಾ. ಎ. ವಿ. ನರಸಿಂಹಮೂರ್ತಿ, ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗದ ರೀಡರ್, 'ಮಾನವಿಕ ಕರ್ಣಾಟಕ'ದ ಸಂಪಾದಕರಲ್ಲೊಬ್ಬರು

೧೯ ಹೊರೆಯಾಲ ದೊರೆಸ್ವಾಮಿ .... ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರು

ಸಿ. ಆರ್. ತಿಪ್ಪೇಸ್ವಾಮಿ

ಕಲಾತಪಸ್ವಿ ಕೆ. ವೆಂಕಟಪ್ಪ

ಪ್ರಸಿದ್ಧ ಕಲಾವಿದರಾಗಿದ್ದ ಕೆ. ವೆಂಕಟಪ್ಪನವರನ್ನು ಗೌರವಿಸುವ, ಅವರ ಕಲಾಕೃತಿಗಳನ್ನು ವೀಕ್ಷಿಸುವ ಸದವಕಾಶ ೧೯೬೭ರಲ್ಲೊಮ್ಮೆ ನಮ್ಮ ಜನರಿಗೆ ಒದಗಿತ್ತು. ಅವರಿದ್ದಲ್ಲೇ ಸನ್ಮಾನಸಮಾರಂಭವೊಂದನ್ನು ಕೇಂದ್ರ ಲಲಿತಕಲಾ ಅಕೆಡಮಿ ಏರ್ಪಡಿಸಿತ್ತು. ಇದರ ಅಂಗವಾಗಿ, ಇತರ ವೇಳೆಯಲ್ಲಿ ವೀಕ್ಷಿಸಲು ದುರ್ಲಭವಾದ, ಅವರ ಅಪೂರ್ವ ಚಿತ್ರಕಲಾಕೃತಿಗಳನ್ನೂ ಶಿಲ್ಪಕೃತಿಗಳನ್ನೂ ಪ್ರದರ್ಶಿಸಿ, ಕಲಾಭಿಮಾನಿಗಳಿಗೆ ಒಂದು ರಸದೌತಣವನ್ನು ಒದಗಿಸಲಾಗಿತ್ತು. ಬೆಂಗಳೂರಿನ ಮಲ್ಲೇಶ್ವರಂ ೧೮ನೆಯ ಅಡ್ಡರಸ್ತೆಯಲ್ಲಿ ಅವರ ಮನೆಯಲ್ಲೆ ಆಕರ್ಷಕ ಪ್ರದರ್ಶನವೂ ಸರಳ ಸಮಾರಂಭವೂ ಏರ್ಪಟ್ಟಿದ್ದುವು.

ವೆಂಕಟಪ್ಪನವರು ತಮ್ಮ ಬದುಕಿನಲ್ಲಿ ಯಾವ ರೀತಿಯ ಅಚ್ಚುಕಟ್ಟನ್ನು ಕಾಪಾಡಿಕೊಂಡು ಬಂದಿದ್ದರು ಎಂಬುದಕ್ಕೆ ಅಲ್ಲಿಯ ವಾತಾವರಣವೇ ಸಾಕ್ಷಿಯಾಗಿತ್ತು. ಅಲ್ಲಿ ಅವರ ಅಪೂರ್ವ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಜಲವರ್ಣದ ಇಪ್ಪತ್ತೆರಡು ಪ್ರಕೃತಿ ಚಿತ್ರಗಳನ್ನೂ ನಾಲ್ಕು ವೀಣೆಗಳನ್ನೂ ಆಳೆತ್ತರದ ನಾಲ್ಕು ಪ್ಲಾಸ್ಟರ್ ಉಬ್ಬುಚಿತ್ರಗಳನ್ನೂ (ರಿಲೀಫ್) ಕ್ರಮವಾಗಿ ಜೋಡಿಸಲಾಗಿತ್ತು. ಇವುಗಳ ಜೊತೆಗೆ ವೆಂಕಟಪ್ಪನವರಿಗೆ ಆಪ್ತರಾಗಿದ್ದ ಕಲ್ಕತ್ತ ಕಲಾಶಾಲೆಯ ಪ್ರಿನ್ಸಿಪಾಲ್ ಹಾರ್ವೇ ಮತ್ತು ಪರ್ಸಿ ಬ್ರೌನರವೇ ಅಲ್ಲದೆ ಮತ್ತೆ ಕೆಲವರ ಉಬ್ಬುಚಿತ್ರಗಳ ಛಾಯಾಚಿತ್ರಗಳನ್ನೂ ಅಲ್ಲಿ ಇರಿಸಲಾಗಿತ್ತು. ಇವೇ ಅಲ್ಲದೆ ದಂತದ ಫಲಕದ ಮೇಲೆ ಜಲವರ್ಣದಲ್ಲಿ ಬಿಡಿಸಿದ ಕೃಷ್ಣರಾಜ ಒಡೆಯರ ಮತ್ತು ಕಲಾಗುರು ಅಬನೀಂದ್ರನಾಥ ಠಾಕೂರರ ರೂಪಚಿತ್ರವನ್ನೂ ಅಲ್ಲಿ ವೀಕ್ಷಿಸಬಹುದಾಗಿತ್ತು.

ಕೆ. ವೆಂಕಟಪ್ಪನವರು ಅನೇಕ ಕ್ಷೇತ್ರಗಳಲ್ಲಿ ಕೈ ಆಡಿಸಿದ್ದರು. ಪ್ರತಿಯೊಂದರಲ್ಲೂ ಅಮೋಘ ಕೃತಿಗಳನ್ನು ರಚಿಸಿದ್ದರು. ವರ್ಣಚಿತ್ರ, ಶಿಲ್ಪ, ಪ್ಲಾಸ್ಟರ್ ಉಬ್ಬುಚಿತ್ರ ಕೆಲಸ, ತಾಮ್ರದ ತಗಡಿನ ಮೇಲೆ ಉಬ್ಬುಚಿತ್ರ ಕೆಲಸ, ವೀಣೆಗಳ ರಚನೆ, ವೀಣಾವಾದನ—ಇವುಗಳಲ್ಲೆಲ್ಲ ಅವರು ಸಿದ್ಧಹಸ್ತರಾಗಿದ್ದರು. ಇವುಗಳಲ್ಲಿ ಯಾವ

ಒಂದರಲ್ಲೇ ಆದರೂ ಅವರಷ್ಟು ಪ್ರಾವೀಣ್ಯ ಪಡೆದವರು ದೊಡ್ಡ ಕಲಾವಿದ ಎಂದು ಮೆರೆಯಬಹುದಿತ್ತು. ಆದರೆ ವೆಂಕಟಪ್ಪನವರು ಎಲೆಮರೆಯ ಹೂವಿನಂತಿದ್ದರು.

ಜಲವರ್ಣ ಚಿತ್ರರಚನೆಯಲ್ಲಿ ಇವರಷ್ಟು ಸಿದ್ಧಿ ಪಡೆದವರು ವಿರಳ. ಈ ಮಾಧ್ಯಮ ಕಷ್ಟಸಾಧ್ಯವಾದ ಕಲೆಗಾರಿಕೆ. ಒಮ್ಮೆ ವರ್ಣಗಳನ್ನು ಬಳಸಿದರೆ ಮತ್ತೆ ಮೇಲಿಂದ ಮೇಲೆ ತೈಲವರ್ಣಗಳಂತೆ ಬಳಸುವಂತಿಲ್ಲ. ಪ್ರಕೃತಿಚಿತ್ರರಚನಾ ಪ್ರಕಾರದಲ್ಲಿ ವೆಂಕಟಪ್ಪನವರು ತಮ್ಮ ಪ್ರಾವೀಣ್ಯವನ್ನು ಮೆರೆದಿದ್ದಾರೆ. ವರ್ಣ ಸ್ವಚ್ಛತೆ ಅವರ ಪ್ರತಿಯೊಂದು ಕೃತಿಯಲ್ಲೂ ಎದ್ದು ತೋರುವ ವಿಶೇಷ ಗುಣ. ನೀಲಗಿರಿ, ಕೊಡೈಕನಾಲ್ ಮತ್ತು ಚಾಮುಂಡಿ ಬೆಟ್ಟಗಳ ನಿಸರ್ಗ ದೃಶ್ಯಗಳನ್ನು ಆಯಾ ಋತುಗಳಿಗೆ ತಕ್ಕಂತೆ ರಚಿಸಿದ್ದಾರೆ. ಪ್ರತಿಯೊಂದು ಕೃತಿಯಲ್ಲೂ ಅವರು ಅತಿ ಸೂಕ್ಷ್ಮರೇಖಾವಿನ್ಯಾಸ ಮತ್ತು ವರ್ಣವೈಖರಿಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಬಿಳಿ ವರ್ಣವನ್ನು ಬಳಸದೆಯೇ ಕೃತಿ ರಚಿಸುವ ಚಮತ್ಕಾರ ಇವರದು. ರಾತ್ರಿಯ, ಸಂಜೆಯ ಸೊಬಗಿನ, ಬೆಳುದಿಂಗಳ, ಪ್ರಕೃತಿಯ ಪ್ರತಿ ಬಿಂಬದ, ದಟ್ಟ ಕಾನನದ, ಮಂಜುಗವಿದ ಮಳೆಗರೆದ ಸನ್ನಿವೇಶಗಳ, ಉದಯ ಕಾಲದ ಪ್ರಕೃತಿಯ ಪ್ರತಿರೂಪಗಳನ್ನು ಸೃಜಿಸಿದ್ದಾರೆ. ಈ ಕೃತಿಗಳಲ್ಲಿಯ ಜಲ, ಮೋಡ, ಬಂಡೆ, ಗಿಡ, ಮರ, ಬಳ್ಳಿ, ಹೂ, ಮಳೆ, ಮಂಜು, ನೆಳಲು, ಬಿಸಿಲು, ಬೆಳುದಿಂಗಳು, ಸಂಜೆ, ಮುಂಜಾವು ಮುಂತಾದವನ್ನು ಬಹು ಸ್ವಾಭಾವಿಕ ವರ್ಣ ಗಳಲ್ಲಿ ನಿರೂಪಿಸಿದ್ದಾರೆ. ಇಲ್ಲಿಯ ಕುಂಚವೈಭವಕ್ಕೆ ಕಲಾವಿದರ ಬಹುದಿನದ ಅಪಾರ ಅನುಭವ ಸಾಧನೆಗಳೇ ಕಾರಣ ಎನ್ನಬೇಕು. ಪ್ರತಿಯೊಂದು ಚಿತ್ರವೂ ಅವರ ತಪಸ್ಸಿನ ಪ್ರಸಾದವಾಗಿ ಕಲಾಭಿಮಾನಿಗಳನ್ನು ಚಕಿತಗೊಳಿಸುತ್ತದೆ.

ಕೆ. ವೆಂಕಟಪ್ಪನವರು ಜಲವರ್ಣ ಪ್ರಕೃತಿ ಚಿತ್ರಗಳ ಜೊತೆಗೆ ದಂತದ ಫಲಕದ ಮೇಲೆ ಜಲವರ್ಣದಲ್ಲಿ ರೂಪಚಿತ್ರ ಹಾಗೂ ಕಾವ್ಯಕಥಾಚಿತ್ರಗಳನ್ನೂ ರಚಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ ಇಂಥ ಎರಡು ದಂತಫಲಕ ಕೃತಿ ಗಳಲ್ಲಿಯ ಕಲೆಗಾರಿಕೆ, ಕುಂಚಕೌಶಲ ಕೌತುಕಪಡುವಂತಿದೆ. ಸೂಕ್ಷ್ಮದರ್ಶಿ ಯಿಂದ ನೋಡಿದರೂ ಅಲ್ಲಿಯ ವರ್ಣಗಳ, ರೇಖೆಗಳ ಜೀವಾಳ ವ್ಯಕ್ತವಾಗದಿರದು. ಈ ಕೃತಿಗಳ ಕಣ್ಣುಗಳಲ್ಲಿ ಜೀವ ತುಂಬಲು ಇವರು ಬಳಸಿರುವ ಸೂಕ್ಷ್ಮವರ್ಣಗಳು ಆಶ್ಚರ್ಯಪಡುವಂಥವು. ದಂತದ ಫಲಕದ ಮೇಲೆ ನೀರು-ಬಣ್ಣಗಳನ್ನು ನಿಲ್ಲಿಸು ವುದೇ ಸಾಹಸದ, ಶ್ರಮದ, ಜಾಣ್ಮೆಯ ಕೆಲಸ.

ಪ್ಲಾಸ್ಟರಿನ ಉಬ್ಬುಚಿತ್ರ ಕೆಲಸದಲ್ಲಿ ಇವರು ಚಿತ್ರಕಲೆಯಷ್ಟೇ ಅದ್ವಿತೀಯ ವಾದ ಪ್ರೌಢಿಮೆಯನ್ನು ತೋರಿರುವುದು ದೊಡ್ಡ ಸಾಧನೆ ಎನ್ನಬೇಕು. ಇದು ವರ್ಣರಹಿತ ಕಲೆ. ಆದರೂ ವರ್ಣಗಳ ಪ್ರಭಾವವನ್ನೇ ತರಬೇಕು. ಅವುಗಳ ರಚನೆಯಲ್ಲಿ ಉಬ್ಬುತಗ್ಗುಗಳ ಕೌಶಲ ಬಹು ಮುಖ್ಯವಾದುದು. ಅದು ಎಷ್ಟು ಸೂಕ್ಷ್ಮವಾಗಿರುತ್ತದೋ ಎಷ್ಟು ತೆಳುವಾಗಿರುತ್ತದೋ ಅಷ್ಟರಮಟ್ಟಿಗೆ ಶಿಲ್ಪಿಯ

ಕಲಾತಜ್ಞತೆ ವ್ಯಕ್ತವಾಗುತ್ತದೆ; ಕಲಾರಚನೆ ಅಷ್ಟರಮಟ್ಟಿಗೆ ಕಷ್ಟವಾಗುತ್ತದೆ. ಉಡುಪು ಹಾಗೂ ಚರ್ಮಗಳ ವ್ಯತ್ಯಾಸವನ್ನು ತೋರಿಸಬೇಕಾಗುತ್ತದೆ. ವೆಂಕಟಪ್ಪನವರ ನಾಲ್ಕು ದೊಡ್ಡ ಉಬ್ಬುಚಿತ್ರ ಕೃತಿಗಳು ಪ್ರೇಕ್ಷಕರ ದೃಷ್ಟಿಯನ್ನು ಸೆಳೆಯುತ್ತವೆ. ಅಂದಿನ ಪ್ರದರ್ಶನದಲ್ಲಿ ಅರಣ್ಯದ ನಡುವೆ ಗುಹೆಯೊಂದರಲ್ಲಿ ತನ್ನ ಗುರು ದ್ರೋಣಾಚಾರ್ಯರ ಪ್ರತಿಮೆಯನ್ನು ಇಟ್ಟುಕೊಂಡು ಧನುರ್ವಿದ್ಯಾಭ್ಯಾಸದಲ್ಲಿ ತೊಡಗಿರುವ ಏಕಲವ್ಯನ ಶ್ರದ್ಧಾಸಕ್ತಿಗಳು ಅನುಪಮವಾಗಿ ವ್ಯಕ್ತವಾಗುವಂತಿರುವ ಕೃತಿ ಒಂದೆಡೆ ಇದ್ದರೆ, ಅದರ ಪಕ್ಕದಲ್ಲೇ ಇದ್ದ, ಅದೇ ಮಹಾಭಾರತದಿಂದ ಆರಿಸಿಕೊಂಡ ದೃಶ್ಯದಲ್ಲಿ ಕೌರವಪಾಂಡವರಿಗೆ ದ್ರೋಣಾಚಾರ್ಯರು ಬಿಲ್ಲುವಿದ್ಯೆಯ ಶಿಕ್ಷಣ ಕೊಡುತ್ತಿರುವ ಅಸದೃಶವಾದ ರಮ್ಯಚಿತ್ರವಿತ್ತು. ಅವುಗಳ ಪಕ್ಕದಲ್ಲೇ ಶಿವತಾಂಡವರ ಅಪೂರ್ವ ಕೃತಿ ಆಕರ್ಷಕವಾದ ಭಂಗಿಯಲ್ಲಿ ಹೃದಯವನ್ನು ಸೆಳೆಯುತ್ತಿತ್ತು. ಇವೆಲ್ಲಕ್ಕಿಂತಲೂ ಮಿಗಿಲೆನಿಸಿದ 'ಶಕುಂತಲೆಯ ಬೀಳ್ಕೊಡುಗೆ' ದೃಶ್ಯ ಅಸಾಧಾರಣವಾದುದು. ತನ್ನ ಪತಿಯ ರಾಜಗೃಹಕ್ಕೆ ತೆರಳುತ್ತಿರುವ ಶಕುಂತಲೆಯ ಮುಖದಲ್ಲಿ ಮೂರು ಭಾವಗಳನ್ನು ಕಲಾವಿದರು ತಂದಿದ್ದಾರೆ. ತನ್ನ ಪತಿಯನ್ನು ಸೇರುವ ಸಂತೋಷ ಒಂದು ಕಡೆಯಾದರೆ, ತನ್ನ ಆಪ್ತೇಷ್ಟರನ್ನು ಬಿಟ್ಟು ತೆರಳುವ ವೇದನೆ ಮತ್ತೊಂದು ಕಡೆ. ಹೊಸ ಜನ ಹೊಸ ಸ್ಥಳಗಳ ಅನುಭವವನ್ನು ಪಡೆಯುವ ಕುತೂಹಲಜನಕ ಸಂಕೋಚ ಒಂದು ಕಡೆ. ಹೀಗೆಯೇ ಸಿದ್ಧಾರ್ಥನ ನಿರ್ಗಮನ ದೃಶ್ಯದಲ್ಲಿಯೂ ಶಾಂತಭಾವ ಅಪೂರ್ವವಾಗಿ ವ್ಯಕ್ತಪಟ್ಟಿದೆ. ಪ್ರತಿಮೆಗಳ ಪೈಕಿ 'ರವೀಂದ್ರ'ರ ಕೃತಿ ವಿಶಿಷ್ಟವಾದುದು. ೧೯೨೨ರಲ್ಲಿ ರವೀಂದ್ರರು ಮೈಸೂರಿಗೆ ಬಂದಿದ್ದರು. ಅವರ ಐದು-ಆರು ಭಂಗಿಗಳ ಭಾವಚಿತ್ರಗಳ ನೆರವಿನಿಂದ ರಚಿಸಿದ ಕೃತಿ ಇದು. ಮಹಾಕವಿಯ ಕೂದಲ ಎಳೆ ಎಳೆಯನ್ನೂ ಭಾವಪೂರ್ಣ ಮುಖಮುದ್ರೆಯನ್ನೂ ಮೂಡಿಸಿರುವುದರಲ್ಲಿ ಶಿಲ್ಪಿ ತಮ್ಮ ಪ್ರತಿಭೆಯನ್ನು ಬೆಳಗಿದ್ದಾರೆ.

ವೆಂಕಟಪ್ಪನವರು ತಮ್ಮ ಕಲಾಕೃತಿಗಳಿಗೆ ವಸ್ತುವನ್ನು ಆರಿಸಿಕೊಳ್ಳುವಲ್ಲಿ ಸಾಮಾನ್ಯರ ಬದುಕನ್ನು ನಿರ್ಲಕ್ಷಿಸಿಲ್ಲ. ಅವರ 'ಮಾಣಿ' ಈ ದೃಷ್ಟಿಯಿಂದ ಒಂದು ಅಪರೂಪದ ಕೃತಿ. ಆ ಮುಗ್ಧ ಬಾಲಕನ ಸಹಜ ಭಾವನೆಗಳನ್ನು ಶಿಲ್ಪಿಗಳು ಅತ್ಯಂತ ಸಹಜತೆಯಿಂದ ತಂದಿದ್ದಾರೆ. ಕಿವಿಯ ಸುತ್ತುಮುರಿ, ಬೋಳುತಲೆಯ ನಡುವೆ ಬತ್ತಿಯಂತಿರುವ ಪುಡಿಜುಟ್ಟು—ಹೀಗೆ ವಿಚಿತ್ರವಾಗಿ ತೋರುವ ಈ ಕೃತಿಯನ್ನು ಯಾರೂ ಮರೆಯುವಂತಿಲ್ಲ. ಅಲ್ಲಿಯೇ ನೆಲದ ಮೇಲೆ ಯಾರೋ ಅಜಾಗರೂಕತೆಯಿಂದ ತುಳಿದು ಭಿನ್ನವಾದ 'ಸಿದ್ಧಾರ್ಥ' ಅತ್ಯಂತ ಮೋಹಕವಾದ ತಾಮ್ರದ ಉಬ್ಬುಚಿತ್ರ ಕೃತಿ. ಅದನ್ನು ಅಲ್ಲಿಯೇ ಹಾಗೆಯೇ ಇರಿಸಲಾಗಿತ್ತು.

ನಾವು ಕೆಲವರು ೧೯೬೦ರಲ್ಲಿ ಕೆ.ವಿ.ಯವರನ್ನು (ಕೆ. ವೆಂಕಟಪ್ಪನವರನ್ನು ಹೀಗೆ ಕರೆಯುವ ವಾಡಿಕೆಯಿತ್ತು) ಸಂದರ್ಶಿಸಿದಾಗ ಅವರು ಹಾಸಿಗೆ ಹಿಡಿದಿದ್ದರು.

ಅನಾರೋಗ್ಯದಿಂದ ಅವರ ಶಕ್ತಿ ಕುಗ್ಗಿದಂತೆ ಕಂಡರೂ ಅವರ ಮುಖದ ತೇಜಸ್ಸು ಅಚ್ಚಳಿಯದೆ ಇತ್ತು. ಕಣ್ಣುಗಳಲ್ಲಿ ಅದೇ ಹೊಳಪು, ಅದೇ ಸೂಕ್ಷ್ಮದೃಷ್ಟಿ. ಸ್ಫುಟವಾಗಿ ಸ್ವಚ್ಛವಾಗಿ ಮಾತನಾಡುತ್ತಿದ್ದರು. ಎಪ್ಪತ್ತೈದರ ಗಡಿಯಲ್ಲಿದ್ದ ಅವರಿಗೆ ತಮ್ಮ ದೀರ್ಘವಯೋಮಾನದ ಬಹುಮುಖ ಕಲಾಸಾಧನೆಯ ತರುವಾಯ ವಿಶ್ರಾಂತಿ ಅಗತ್ಯವಾಯಿತೇನೋ ಎಂದೆನಿಸುತ್ತಿತ್ತು ನಮಗೆ. ಆದರೆ ಅವರು ಕೊನೆಯ ವರೆಗೂ ಕುಂಚವನ್ನು ಕೆಳಗಿಟ್ಟವರಲ್ಲ. ಅನೇಕ ವರ್ಷ ಅವರ ಸಹಪಾಠಿಯಾಗಿದ್ದ ವೀಣೆಯೂ ಆಗ ಮೌನ ತಾಳಿತ್ತು. ಮತ್ತೊಂದು ಕೊಠಡಿಯಲ್ಲಿ ವರ್ಣತೂಲಿಕೆಗಳೂ ಫಲಕಗಳೂ ಚಿತ್ರರಚನೆಯ ಚೌಕಟ್ಟುಗಳೂ ನಿರ್ಜೀವವಾಗಿ ಬಿದ್ದಂತೆ ಕಾಣುತ್ತಿದ್ದುವು. ಕಲಾಗಾರದಲ್ಲಿ ಆಳೆತ್ತರದ 'ಪ್ಲಾಸ್ಟರ್ ಆಫ್ ಪ್ಯಾರಿಸ್'ನ ನಾಲ್ಕು ದೊಡ್ಡದೊಡ್ಡ ಉಬ್ಬುಚಿತ್ರಗಳ ಮೇಲೆ ತೆಳುವಾದ ಬಾದಾಮಿ ಕಾಗದ ಹೊದಿಸಿದ್ದಿತು. ಮತ್ತೊಂದು ಕೋಣೆಯಲ್ಲಿ ಅವರ ಅಪೂರ್ವ ಶಿಲ್ಪಕೃತಿಗಳನ್ನು—ವೃತ್ತಾಕಾರದ ಸಿದ್ಧಾರ್ಥ, ರವೀಂದ್ರರು, ಮಾಣಿ—ತೆಳುವಾದ ಶುಭ್ರವಸ್ತ್ರದಲ್ಲಿ ಮುಚ್ಚಿದ್ದರು. ಕೆ.ವಿ.ಯುವರ ಅಂದಿನ ಸಹಪಾಠಿಗಳೆಂದರೆ ಇವೇ. ವಿಶಾಲವಾದ ಸೌಧದಲ್ಲಿ ತಮ್ಮ ಕಲಾಕೃತಿಗಳ ನಡುವೆ ಏಕಾಂಗಿಯಾಗಿ ಇದ್ದ ಈ ಕಲಾತಪಸ್ವಿ ಜನಜಂಗುಳಿಯನ್ನಾಗಲಿ ಸುಖಭೋಗಗಳನ್ನಾಗಲಿ ಬಯಸಿದವರಲ್ಲ. ಕಲಾರಾಧನೆಯೊಂದನ್ನೇ ತಮ್ಮ ಜೀವನದ ಉಸಿರಾಗಿ, ತಮ್ಮ ಬಾಳಿನ ಸರ್ವಸ್ವವಾಗಿ ಉಳಿಸಿಕೊಂಡು ಬಂದಿದ್ದರು.

ಅವರಾಗ ಕಲೆಯ ಬಗ್ಗೆ ಮಾತನಾಡುತ್ತಾ 'ಕಲೆಯಲ್ಲಿ ನಮ್ಮ ಜನಕ್ಕೆ ಅಭಿರುಚಿ ಕಡಿಮೆ' ಎಂದು ನುಡಿದು ದೃಷ್ಟಿಯನ್ನು ಒಂದು ಕಡೆ ಹೊರಳಿಸಿದರು. ಆ ಮಾತಿನ ಹಿಂದೆ ಅವರ ಬದುಕಿನಲ್ಲಿ ಕಂಡ ಸತ್ಯ ಅಡಗಿದಂತಿತ್ತು. ಈ ಕಲಾವಿದನ ಹಿರಿಮೆಯನ್ನು ಅರಿತೂ ನಮ್ಮ ಜನತೆ, ನಮ್ಮ ಸರ್ಕಾರ ಅವರನ್ನು ಔದಾಸೀನ್ಯದಿಂದ ಕಂಡುವು. ನಾಡಿಗೆ ಅವರಿಂದ ಹೆಚ್ಚು ಕಲಾಸೇವೆಯ ಅವಕಾಶವಿಲ್ಲದಂತಾಯಿತು. ಆದರೂ ಕೆ.ವಿ.ಯವರ ಉಳಿದಿರುವ ಅಲ್ಪಸ್ವಲ್ಪ ಕೃತಿಗಳೇ ನಮ್ಮ ನಾಡಿನ ಅಮೂಲ್ಯ ಆಸ್ತಿಗಳಾಗಿವೆ.

ವೆಂಕಟಪ್ಪನವರಿಗೆ ಕಲೆಯಲ್ಲಿ ಆಸಕ್ತಿ ವಂಶಪಾರಂಪರ್ಯವಾಗಿ ಬಂದ ಆಸ್ತಿ. ಅವರ ತಾತ ಪ್ರಸಿದ್ಧ ಚಿತ್ರಕಾರರಾಗಿದ್ದ ಚಿತ್ರದುರ್ಗದ ವೆಂಕಟಪ್ಪ. ಕೆ.ವಿ.ಯವರ ತಂದೆಯ ಹೆಸರು ಕೃಷ್ಣಪ್ಪ. ಕೆ. ವೆಂಕಟಪ್ಪನವರ ವಂಶದವರು ರಾಜರ ಕಾಲದಲ್ಲಿ ದುರ್ಗದಿಂದ ಮೈಸೂರಿಗೆ ಬಂದು ಸೇರಿ ರಾಜಾಶ್ರಯ ಪಡೆದವರು. ವೆಂಕಟಪ್ಪನವರು ಚಾಮರಾಜೇಂದ್ರ ಕಲಾಶಾಲೆಯಲ್ಲಿ ರಾಮಕೃಷ್ಣನ್ ಅವರ ನೇತೃತ್ವದಲ್ಲಿ ಕಲಾಭ್ಯಾಸ ನಡೆಸಿ ತಮ್ಮ ಮುಂದಿನ ಕಲಾಸಾಧನೆಗೆ ಉತ್ತಮ ಬುನಾದಿಯನ್ನು ಹಾಕಿಕೊಂಡರು. ಹೊಸ ಅರಮನೆಯನ್ನು ಕಟ್ಟುವ ಕಾಲದಲ್ಲಿ ನೂರಾರು ಜನ ಕಲಾವಿದರು ಅಲ್ಲಿ ಕೆಲಸಮಾಡಬೇಕಾದ ಸಂದರ್ಭ ಬಂದಾಗ ವೆಂಕಟಪ್ಪ

ನವರಿಗೂ ಅಲ್ಲಿ ಅವಕಾಶ ಸಿಕ್ಕಿತ್ತು. ಆಗಲೇ ನುರಿತ ಕಲಾವಿದರಂತೆ ಕೈಚಳಕ ತೋರುತ್ತಿದ್ದ ಈ ಬಾಲಕನೂ ತಮ್ಮಷ್ಟೇ ಶುಲ್ಕ ಪಡೆಯುತ್ತಿದ್ದುದನ್ನು ಕಂಡ ಕೆಲ ಹಿರಿಯ ಕಲಾವಿದರು ಗೊಣಗಾಡಿ 'ಮೀಸೆ ಹೊತ್ತ' ತಮಗೂ ಇನ್ನೂ ಮೀಸೆ ಚಿಗುರದ ಈ ಬಾಲಕನಿಗೂ ಸಮಾನ ಪುರಸ್ಕಾರವೆ ? ಎಂದು ಅಂದುಕೊಂಡರಂತೆ. 'ಕೆಲಸಮಾಡುವುದು ಮೀಸೆಯಲ್ಲ, ಹಸ್ತ !' ಎಂದು ಕೆ.ವಿ.ಯವರು ಚಾತುರ್ಯ ದಿಂದ ಉತ್ತರಿಸಿ ಅವರನ್ನೆಲ್ಲಾ ನಗಿಸಿದ್ದರಂತೆ.

ಒಮ್ಮೆ ಇವರ 'ಸಿಂಹ ಸಿಂಹಿಣಿ' ಎಂಬ ಚಿತ್ರವನ್ನು ಅರಮನೆಯ ಅಧಿಕಾರಿ ಗಳೊಬ್ಬರು ನೋಡಿ ಮಹಾರಾಜರ ದೃಷ್ಟಿಗೆ ತಂದಾಗ ಅವರು ಆ ಚಿತ್ರವನ್ನು ಆ ಹುಡುಗ ಬರೆದ ಕೃತಿಯೆಂದು ನಂಬಲಾಗಲಿಲ್ಲವಂತೆ! ಕೊನೆಗೆ ಮಹಾರಾಜರೇ ಅವರನ್ನು ಕರೆಸಿ ಒಂದು ಸಣ್ಣ ಪರೀಕ್ಷೆ ನಡೆಸಿ, ಅವರ ಕಲಾಪ್ರತಿಭೆಯನ್ನು ಖಚಿತ ಮಾಡಿಕೊಂಡರು. ಅವರ ಕಲಾಕೌಶಲವನ್ನು ಮೆಚ್ಚಿ ನೂರು ರೂಪಾಯಿಗಳ ಬಹುಮಾನ ನೀಡಿ ಪ್ರೋತ್ಸಾಹಿಸಿದರು. ಹೀಗೆ ರಾಜದೃಷ್ಟಿಗೆ ಬಿದ್ದ ಅವರಿಗೆ ಮುಂದೆ ತಮ್ಮ ಹೆಚ್ಚಿನ ಕಲಾಭ್ಯಾಸಕ್ಕೆ ಅವಕಾಶಗಳು ಒದಗಿಬಂದುವು. ನಾಲ್ವಡಿ ಕೃಷ್ಣರಾಜ ಒಡೆಯರು ಇವರ ಜಾಣ್ಮೆಯನ್ನು ತಕ್ಷಣವೇ ಗುರುತಿಸಿ ಹೆಚ್ಚಿನ ಕಲಾಶಿಕ್ಷಣಕ್ಕೆ ಇವರನ್ನು ಕಲ್ಕತ್ತಕ್ಕೆ ಕಳಿಸಲು ಅನುಕೂಲ ಮಾಡಿಕೊಟ್ಟರು. ಇವರಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸಿದರು. ಈ ಮೊದಲೇ ಪಾಶ್ಚಾತ್ಯ ಕಲಾ ಸಂಪ್ರದಾಯವನ್ನು ಕೈಗೂಡಿಸಿಕೊಂಡು ಮದ್ರಾಸ್ ಚಿತ್ರಕಲಾ ಪರೀಕ್ಷೆಗಳಲ್ಲಿ ಡಿಪ್ಲೊಮಾ ಗಳಿಸಿದ್ದ ವೆಂಕಟಪ್ಪನವರು ಕೃಷ್ಣರಾಜ ಒಡೆಯರ ಪ್ರೋತ್ಸಾಹದಿಂದ ೧೯೦೮ರಲ್ಲಿ ಸರ್ಕಾರದ ವಿದ್ಯಾರ್ಥಿವೇತನ ಪಡೆದು ಕಲ್ಕತ್ತ ಕಲಾಶಾಲೆಯಲ್ಲಿ ಉನ್ನತ ಶಿಕ್ಷಣಕ್ಕೋಸ್ಕರ ಹೋದರು. ಅಲ್ಲಿ ಪರ್ಸಿ ಬ್ರೌನ್ ಹಾಗೂ ಡಾ. ಅವನೀಂದ್ರನಾಥ ಠಾಕೂರ್ ಅವರ ಮಾರ್ಗದರ್ಶನದಲ್ಲಿ ಕೆ.ವಿ.ಯವರ ಕಲಾಭ್ಯಾಸ ಮುಂದುವರಿಯಿತು. ಎರಡು ವರ್ಷಗಳಲ್ಲಿ ಹಿಂದಿರುಗಬೇಕಾಗಿದ್ದ ಅವರು ಆರೇಳು ವರ್ಷಗಳ ಕಾಲ ಅಲ್ಲಿಯೇ ನಿಂತು ಬೌದ್ಧ, ರಜಪೂತ ಮತ್ತು ಮೊಗಲ್ ಸಂಪ್ರದಾಯಗಳನ್ನು ಅಭ್ಯಾಸ ಮಾಡಿಕೊಂಡರು. ದೇಶದ ನಾನಾ ಚಿತ್ರಸಂಗ್ರಹಾಲಯಗಳನ್ನು ಸಂದರ್ಶಿಸಿದರು. ೧೯೧೦ರಲ್ಲಿ ಲಂಡನ್ನಿನಿಂದ ಮಿಸೆಸ್ ಹೆರಿಂಗ್‌ಹ್ಯಾಮ್ ತಮ್ಮ ೬೦ನೆಯ ವಯಸ್ಸಿನಲ್ಲಿ ಅಜಂತ ಗುಹಾಲಯಗಳ ಪ್ರಾಚೀನ ಭಿತ್ತಿಚಿತ್ರಕಲಾಭ್ಯಾಸವನ್ನು ನಡೆಸಲು ಭಾರತಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಅವರ ಜೊತೆಯಲ್ಲಿ ಅಧ್ಯಯನಕ್ಕೆ ಪರ್ಸಿ ಬ್ರೌನರು ತಮ್ಮ ನಚ್ಚಿನ ಶಿಷ್ಯರಲ್ಲಿ ಇಬ್ಬರಾದ ನಂದಲಾಲ್ ಬಸು ಮತ್ತು ವೆಂಕಟಪ್ಪನವರನ್ನು ಕಳಿಸಿದ್ದರು. ಹೆಚ್ಚಿನ ಶಿಲ್ಪಕಲಾ ಪರಿಚಯಕ್ಕಾಗಿ ಇಟಲಿಗೆ ತೆರಳುವ ಅವಕಾಶ ವೆಂಕಟಪ್ಪನವರಿಗೆ ಒಂದನೆಯ ಮಹಾಯುದ್ಧದಿಂದಾಗಿ ತಪ್ಪಿಹೋಯಿತು. ಅನಂತರ ೧೯೧೭ರಲ್ಲಿ ಮೈಸೂರಿಗೆ ಹಿಂದಿರುಗಿದ ಮೇಲೆ ಸಂಗೀತದ ವ್ಯಾಮೋಹ ಹೆಚ್ಚಾಗಿ ಕೃಷ್ಣರಾಜ

ಒಡೆಯರ ಅಭಿಮತದಂತೆ ವೈಣಿಕಶಿಖಾಮಣಿ ವೀಣೆ ಶೇಷಣ್ಣನವರಲ್ಲಿ ಏಳು ವರ್ಷಗಳ ಕಾಲ ವೀಣಾಭ್ಯಾಸ ಮಾಡಿದರು. ಇದೇ ಸಂದರ್ಭದಲ್ಲಿ ಅವರ ಶ್ರೇಷ್ಠ ಕೃತಿ 'ವೀಣಾ ಹುಚ್ಚು' ಜಲವರ್ಣದಲ್ಲಿ ಸೊಗಸಾಗಿ ರಚಿತವಾಯಿತು. ಈ ಕೃತಿ ವಿಶ್ವದ ಪ್ರಮುಖ ಸಂಚಿಕೆಗಳಲ್ಲಿ ಪ್ರಕಟವಾಗಿ ಕೆ.ವಿ.ಯವರಿಗೆ ಅಪಾರ ಯಶಸ್ಸು ತಂದುಕೊಟ್ಟಿತು. ಅವನೀಂದ್ರನಾಥರು ಬಿಟ್ಟುಕೊಟ್ಟ ಕಲ್ಕತ್ತ ಕಲಾ ಶಾಲೆಯ ಮುಖ್ಯ ಪ್ರಾಧ್ಯಾಪಕ ಸ್ಥಾನಕ್ಕೆ ಕರೆ ಬಂದದ್ದು ಇದೇ ಕಾಲದಲ್ಲಿ. ಆದರೆ ವೆಂಕಟಪ್ಪನವರು ಅದಕ್ಕೆ ಮನಗೊಡಲಿಲ್ಲ.

ಮೈಸೂರು ನಗರದಲ್ಲಿ ೧೯೨೬ರಲ್ಲಿ ಕೆ.ವಿ.ಯವರು ನಡೆಸಿದ ಜೀವನ ಅಪೂರ್ವವಾದುದು; ತಪಸ್ಸದೃಶವಾದದ್ದು. ಕೃಷ್ಣರಾಜ ಒಡೆಯರ ಅಪೇಕ್ಷೆಯಂತೆ ಅವರು ಅರಮನೆಯಲ್ಲಿ ಶಿಲ್ಪಕೃತಿಗಳ ರಚನೆಗೆ ತೊಡಗಿದರು. ಅರಸರು ಈ ಕಲಾವಿದರಿಗೆ ನೀಡಿದ ಪ್ರೋತ್ಸಾಹ ಚಿರಸ್ಮರಣೀಯವಾದದ್ದು. ಆಗ ರಚಿಸಿದ ಕೆಲವು ಉಬ್ಬುಚಿತ್ರಗಳು ಈಗಲೂ ಮೈಸೂರು ಅರಮನೆಯ ಗಾಜಿನ ಮಹಡಿಯ ದರ್ಬಾರು ಭವನದ ಭಿತ್ತಿಯ ಮೇಲಿವೆ. ಇದೇ ಸಂದರ್ಭದಲ್ಲಿ ದೆಹಲಿಯ ವೈಸ್‌ರಾಯ್ ಭವನದ ಶೃಂಗಾರಕ್ಕೆ ಕರೆ ಬಂದರೂ ವೆಂಕಟಪ್ಪನವರು ಅದನ್ನು ಒಪ್ಪಿಕೊಳ್ಳದೆ ಕನ್ನಡ ನಾಡಿನಲ್ಲೇ ನಿಂತದ್ದು ಅವರ ನಾಡ ಪ್ರೇಮವನ್ನು ತೋರಿಸುತ್ತದೆ. ಮಹಾರಾಜರು ಕೆ.ವಿ.ಯವರಲ್ಲಿ ಆತ್ಮೀಯತೆಯಿಂದ ವರ್ತಿಸುತ್ತಿದ್ದರು. ಅವರು ಯಾವ ಕಟ್ಟುಪಾಡೂ ಇಲ್ಲದೆ ಸಾಧಾರಣ ಉಡುಪಿನಲ್ಲೇ ಮಹಾರಾಜರನ್ನು ಸಂದರ್ಶನಮಾಡುವ ಅವಕಾಶವಿತ್ತಿದ್ದರು. ವೆಂಕಟಪ್ಪನವರು ಸ್ವಲ್ಪ ಕಾಲ ಚಾಮುಂಡಿ ಬೆಟ್ಟದ ಮೇಲೆ ಬಾಡಿಗೆ ಮನೆಯಲ್ಲಿದ್ದು ಅನೇಕ ನಿಸರ್ಗ ದೃಶ್ಯಗಳ ಚಿತ್ರಗಳನ್ನು ರಚಿಸಿದರು. ನೀಲಗಿರಿಯಲ್ಲಿ ಕೆಲವು ಕಾಲ ನೆಲಸಿ ಅಲ್ಲಿಯ ನಿಸರ್ಗ ದೃಶ್ಯಗಳನ್ನು—ಬೇರೆ ಬೇರೆ ಋತುಗಳಲ್ಲಿ ಕಾಣುತ್ತಿದ್ದ ಹಾಗೆ—ಚಿತ್ರಿಸಿದರು. ಅವು ಇಂದೂ ಅನೇಕ ಕಲಾವಿದರಿಗೆ ಸ್ಫೂರ್ತಿ ನೀಡುತ್ತಿವೆ. ಮೈಸೂರಿನ ಜಗನ್ಮೋಹನ ಕಲಾಶಾಲೆಯಲ್ಲಿ ಇವರ 'ವೀಣಾ ಹುಚ್ಚು', 'ರಾಧಾ ಹರಿಣಿ', 'ಅರ್ಧನಾರೀಶ್ವರ', 'ಶಿವರಾತ್ರಿ' ಮತ್ತು 'ನೀಲಗಿರಿಯ ಪ್ರಕೃತಿ ಚಿತ್ರಗಳು' ಇಂದಿಗೂ ಕಲಾಭಿಮಾನಿಗಳನ್ನು ಆಕರ್ಷಿಸುತ್ತಿವೆ. ಇವರ ಇನ್ನೂ ಅನೇಕ ಕಲಾಕೃತಿಗಳು ಅಲ್ಲಲ್ಲಿ ಹಿತೈಷಿಗಳ ಮನೆಯಲ್ಲಿ ಹಂಚಿಹೋಗಿವೆ.

ಕೆ.ವಿ.ಯವರು ಹುಟ್ಟುಕಲಾವಿದರು. ಕಲಾವಿದರಿಗೆ ಸಹಜವಾದ ಏಕಾಂತ ಪ್ರಿಯತೆ ಅವರಲ್ಲಿ ಮನೆಮಾಡಿಕೊಂಡಿತ್ತು. ಸಂಜೆಯ ವೇಳೆ ಗಾಳಿಸಂಚಾರ ಹೊರಟಾಗ ನಡುವೆ ಕಲೆಗೆ ಸಂಬಂಧಪಟ್ಟ ಯಾವುದಾದರೂ ಭಾವ ಹೊಳೆದ ಕೂಡಲೇ ಮೋತಿಖಾನೆ ಮಹಡಿಯಲ್ಲಿದ್ದ ತಮ್ಮ ಚಿತ್ರಾಗಾರಕ್ಕೆ ಧಾವಿಸಿ ಬರುತ್ತಿದ್ದರಂತೆ. ಎಷ್ಟೋ ವೇಳೆ ರಾತ್ರಿ ನಿದ್ರೆಯ ಸಮಯದಲ್ಲಿಯೂ ಎದ್ದು ಕುಳಿತು ಕಲಾ ರಚನೆಯಲ್ಲಿ ತೊಡಗುತ್ತಿದ್ದರಂತೆ. ಕಲಾರಚನೆಯ ಕಾಲದಲ್ಲಿ ಬೇಕಾದ ಏಕಾಂತ




ಸಿದ್ಧಾರ್ಥನ ನಿರ್ಗಮನ (ಪ್ಲಾಸ್ಟರಿನ ಉಬ್ಬುಚಿತ್ರ)



ರವೀಂದ್ರರ ಎದೆ ವಿಗ್ರಹ



ಶಿವತಾಂಡವ ನೃತ್ಯ



ಕಣ್ವಾಶ್ರಮದಿಂದ ಶಕುಂತಲೆಯ
ಬೀಳ್ಕೊಡುಗೆ



ದ್ರೋಣರಲ್ಲಿ ಅರ್ಜುನನ ಧನುರ್ವಿದ್ಯೆ



ಏಕಲವ್ಯನ ಸಾಧನೆ



ಚರ್ಚ್ ಬೆಟ್ಟದ ಹಾದಿ, ಉದಕಮಂಡಲ



ಭೂದೃಶ್ಯ ವರ್ಣಚಿತ್ರ

ಕ್ಕೋಸ್ಕರ ಇವರು ಏನೇನೋ ಉಪಾಯಗಳನ್ನು ಹುಡುಕಬೇಕಾಯಿತು. "The studio is closed for public until further notice. Please do not disturb," ಎಂದು ಮುಂಬಾಗಿಲಿನ ಮೇಲೆ ಬೋರ್ಡು ಹಾಕಿ, ಹೊರಗೆ ಬೀಗ ಹಾಕಿಸಿ, ಹಿಂಬಾಗಿಲಿನಿಂದ ಒಳಗೆ ಸೇರಿ ಕಾರ್ಯಮಗ್ನರಾಗುತ್ತಿದ್ದರು! ಅನಗತ್ಯವಾಗಿ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಅಪ್ಪಟ ಶುದ್ಧಹೃದಯ, ನಿಷ್ಕಪಟಸ್ವಭಾವ, ವ್ಯಕ್ತಿತ್ವದಲ್ಲಿ ಸಾಧಿಸಿಕೊಂಡಿದ್ದ ಹಿರಿಮೆ—ಇವು ಕಲೆಯಲ್ಲಿ ಮೂಡಿಬಂದಿದ್ದುವು. ಕಲಾಯೋಗಿ, ಕಲಾತಪಸ್ವಿ ಎಂಬೆಲ್ಲ ಮಾತುಗಳ ಸಾರ್ಥಕ್ಯ ಇವರಂಥ ಹಿರಿಯ ಆದರ್ಶಜೀವಿಗಳಿಂದಲೇ ಎನ್ನಬೇಕು. ಹಿರಿಮೆಗೆ ಒಪ್ಪುವಂಥ ನಿಯಮ ಅವರದು. ಕೊನೆ ಗಳಿಗೆಯ ತನಕ ತಮ್ಮನ್ನು 'ಕಲಾ ವಿದ್ಯಾರ್ಥಿ' ಎಂದೇ ಕರೆದುಕೊಳ್ಳುತ್ತಿದ್ದರು. ಸಾಗರೋಪಮವಾದ ಲಲಿತಕಲೆಯಲ್ಲಿ ನನ್ನ ಜ್ಞಾನವೆಂಬುದು ಒಂದು ಹನಿ—ಎಂದು ಅವರು ಅನೇಕ ಸಾರಿ ಹೇಳುತ್ತಿದ್ದುದುಂಟು. ನಾಲ್ವಡಿ ಕೃಷ್ಣರಾಜ ಒಡೆಯರು ದಿವಂಗತರಾದಮೇಲೆ ಅರಮನೆಯಲ್ಲಿ ಕಲೆಗೆ ಸರಿಯಾದ ಪ್ರೋತ್ಸಾಹವಿಲ್ಲದೆ ಕೆ.ವಿ.ಯವರು ಬೆಂಗಳೂರಿಗೆ ಹೋಗಿ ನೆಲಸಬೇಕಾಯಿತು.

ಚಿತ್ರ, ಶಿಲ್ಪ ಮತ್ತು ಸಂಗೀತ ಕಲೆಗಳಲ್ಲಿ ತಳೆದಿದ್ದಷ್ಟೇ ಅಭಿರುಚಿಯನ್ನು ನಾಟಕ ಕಲೆಯಲ್ಲಿ ಪಡೆದಿದ್ದ ಕೆ.ವಿ.ಯವರು ವರದಾಚಾರ್ಯರ ಅಪೂರ್ವ ಅಭಿನಯ ಕಲೆಗೆ ಮಾರುಹೋಗಿದ್ದರು. ವರದಾಚಾರ್ಯರಿಗೆ ನೇರವಾಗಿ ಹಣ ಕೈಸೇರಲೆಂದು ಅವರೇ ಮೈಸೂರಿನಲ್ಲಿ ಬೂತಿನಲ್ಲಿ ಕೂತು ಟಿಕೆಟುಗಳನ್ನು ಮಾರಿದ ಪ್ರಸಂಗಗಳೂ ಉಂಟು.

ವೆಂಕಟಪ್ಪನವರ ಆತ್ಮಾಭಿಮಾನ ಬಹು ದೊಡ್ಡದು. ಕಲೆಗೆ, ಕಲಾವಿದರಿಗೆ ಅಪಚಾರವಾದರೆ ಧೈರ್ಯವಾಗಿ ಪ್ರತಿಭಟಿಸುವ ಕೆಚ್ಚಿನ ವ್ಯಕ್ತಿಯಾಗಿದ್ದ ಇವರು ಒಮ್ಮೆ ಕಲ್ಕತ್ತದ ರಾಮಕೃಷ್ಣ ಆಶ್ರಮದ ಕಾರ್ಯಾಲಯದವರು ತಮ್ಮ ಪತ್ರಿಕೆಯಲ್ಲಿ ಇವರ ಕಲಾಕೃತಿಯ ಭಾವಚಿತ್ರವೊಂದನ್ನು ಹಿಂದುಮುಂದಾಗಿ ಮುದ್ರಿಸಿದ್ದುದರಿಂದ ಅಲ್ಲಿಯ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಜಯ ಗಳಿಸಿದರು. ತಮ್ಮ ಪ್ರತಿವಾದಿಗೆ ಕೇವಲ ಒಂದೇ ರೂಪಾಯಿಯ ದಂಡವನ್ನು ವಿಧಿಸಿದ್ದರೂ ಸೋದರ ಕಲಾವಿದರಿಗೆ ಒಂದು ಗೌರವಪ್ರತಿಷ್ಠೆಗಳನ್ನು ತಂದುಕೊಟ್ಟಂತಾಯಿತೆಂದು ಇವರ ಐರೋಪ್ಯ ವಕೀಲರು ಪ್ರಶಂಸೆಯ ಮಾತುಗಳನ್ನಾಡಿದ್ದರು. ತಮ್ಮ ಹಕ್ಕುಬಾಧ್ಯತೆಗಾಗಿ ಯಾರನ್ನಾದರೂ ಪ್ರತಿಭಟಿಸುವ ಧೈರ್ಯ ಅವರಿಗಿತ್ತು.

ವೆಂಕಟಪ್ಪನವರನ್ನು ಅವರ ಕೊನೆಗಾಲದಲ್ಲಿ ಸೋದರಳಿಯ ರಾಮರಾಜು ಸೇವಿಸಿದರು. ವೆಂಕಟಪ್ಪನವರು ದಿವಂಗತರಾದ ಮೇಲೆ ರಾಮರಾಜು ಅವರು ವೆಂಕಟಪ್ಪನವರ ಸಮಸ್ತ ಕಲಾಕೃತಿಗಳನ್ನೂ ಅವರು ಬಳಸುತ್ತಿದ್ದ ವಸ್ತುಗಳನ್ನೂ ಮೈಸೂರು ಸರ್ಕಾರ ಬೆಂಗಳೂರಿನಲ್ಲಿ ವೆಂಕಟಪ್ಪನವರ ಹೆಸರಿನಲ್ಲಿ ರೂಪಿಸುತ್ತಿರುವ

ಕಲಾಸಂಗ್ರಹಾಲಯಕ್ಕೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಾಂಸ್ಕೃತಿಕ ವಸ್ತುಸಂಗ್ರಹಾಲಯಕ್ಕೂ ನೀಡಿದರು. ಕೇಂದ್ರ ಲಲಿತ ಕಲಾ ಅಕೆಡಮಿಯವರು ವೆಂಕಟಪ್ಪನವರ ಅಪೂರ್ವ ಸುಂದರ ಕೃತಿಗಳೊಡನೆ ಪರಿಚಯಾತ್ಮಕ ಕೈಹೊತ್ತಿಗೆಯೊಂದನ್ನು ಪ್ರಕಟಿಸಿದ್ದಾರೆ.

ಭಾರತೀಯ ಕಲಾವಿದರ ಶ್ರೇಣಿಯಲ್ಲಿ ವೆಂಕಟಪ್ಪನವರ ಸ್ಥಾನ ಅಗ್ರಗಣ್ಯವಾದುದು. ಭಾರತೀಯ ಕಲಾಪರಂಪರೆಗೆ ಅವರು ಅರ್ಪಿಸಿದ ಕೃತಿಗಳೂ ಅನರ್ಘ್ಯವಾದಂಥವು. ವೆಂಕಟಪ್ಪನವರ ಪರಿಶುದ್ಧ ನಿಷ್ಕಪಟ ಜೀವನ ಇತರ ಕಲಾವಿದರಿಗೆ ಆದರ್ಶವಾದದ್ದು. ಕರ್ಣಾಟಕದ ಕಲೆಗೆ, ಕಲಾವಿದರಿಗೆ ಒಂದು ಘನತೆಯನ್ನು, ಒಂದು ಗೌರವವನ್ನು ಅವರು ತಂದುಕೊಟ್ಟರು. ಕೆ.ವಿ.ಯವರ ಖ್ಯಾತಿ ಭಾರತ ವ್ಯಾಪಿಯದಲ್ಲ; ಅದು ವಿಶ್ವವ್ಯಾಪಿ. ಇವರು ಕನ್ನಡಿಗರು—ಎಂಬುದು ನಾಡಿಗೇ ಹೆಮ್ಮೆಯ ಸಂಗತಿ.[1]

---

[1] ಲೇಖನದೊಂದಿಗೆ ಪ್ರಕಟವಾಗಿರುವ ಚಿತ್ರಗಳು ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯಿಕ ವಸ್ತುಸಂಗ್ರಹಾಲಯದ ಮತ್ತು ಪಿ. ಆರ್. ತಿಪ್ಪೇಸ್ವಾಮಿ ಅವರ ಸಂಗ್ರಹಗಳಿಂದ.

ಕೆ. ಎಸ್. ನಾರಾಯಣಸ್ವಾಮಿ

ಗಾಂಧೀ ದೃಷ್ಟಿಯಲ್ಲಿ ದೇವರು

ದೇವರಿದ್ದಾನೆಯೆ ?

ಈ ಪ್ರಶ್ನೆ ಗಾಂಧೀಜಿಯನ್ನೆಂದೂ ಕಾಡಲಿಲ್ಲ. 'ಇದ್ದಾನೆ' ಅನ್ನುವುದನ್ನೇ ಅವರು 'ಸತ್ಯ' ಎಂದು ಸಂಬೋಧಿಸಿದರು. ಆದರೆ ಅದೆಂದೂ ಬೌದ್ಧಿಕ ವಿವರಣೆ ಎಂದು ಅವರಿಗನಿಸಲಿಲ್ಲ. ಈಶ್ವರೀ ನಿಯಮದ ಅರಿವು ಪ್ರಧಾನವಾಗಿ ಹೃದಯ ಗಮ್ಯ. ಬೌದ್ಧಿಕ ತರ್ಕ ಅದನ್ನನುಸರಿಸಿ ಬರುವ ಬಡಪ್ರಯತ್ನ. "He is no God who merely satisfies the intellect if He ever does.... God to be God must rule the heart and transform it. He must express himself in every smallest act of his votary."[1]

"ಕೇವಲ ಬುದ್ಧಿಗ್ರಾಹ್ಯವಾದದ್ದು ಎಂದಿಗೂ 'ದೇವರು' ಎನ್ನಲಾಗದು.... ದೇವರು ದೇವರೆನಿಸಬೇಕಾದರೆ ಅವನು ಮಾನವಹೃದಯವನ್ನಾಳಿ ಅದನ್ನು ಪರಿಷ್ಕರಿಸಬೇಕು. ನಂಬಿಕೆಯುಳ್ಳವನ ಅತಿ ಚಿಕ್ಕ ಕ್ರಿಯೆಯಲ್ಲೂ ಅವನು ಪ್ರಕಟ ವಾಗಬೇಕು."—ಇದು ಅವರ ಕಲ್ಪನೆ.

ಉಪನಿಷತ್ತು ಹೀಗೆ ಘೋಷಿಸುತ್ತದೆ: "ಯತೋ ವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾ ಸಹ." ಯಾವ ತಾಣವನ್ನು ನಿಲುಕಲಾರದೆ ಮಾತು ಹಿಂತಿರುಗಿ ಬರುತ್ತದೆಯೋ, ಯಾವುದನ್ನು ಮನಸ್ಸೂ ಸಹ ನಿಲುಕಲಾರದೋ, ಅದು ಆ ಪರವಸ್ತು. ಆದ ರಿಂದ ವಿಶ್ವಪ್ರಯತ್ನ ಮಾಡಿದರೂ ಬುದ್ಧಿಯ ತರ್ಕಕೌಶಲ ದಿಂದ ದೇವರ ಇರುವಿಕೆಯನ್ನು ಸಿದ್ಧಾಂತ ಮಾಡಲಾರೆವು.

ಆದರೂ ಅನಾದಿಕಾಲದಿಂದ ಮನುಷ್ಯನ ದೈವಾನ್ವೇಷಣೆ ಸಂತತವಾಗಿ ಸಾಗುತ್ತಲೇ ಇದೆ. ಹುಟ್ಟಿಬಂದ ಪ್ರತಿಯೊಂದು ಜೀವಿಗೂ ಇಂದ್ರಿಯಾತೀತವಾದ ಅನೇಕ ಅನುಭವಗಳು ಆಗುತ್ತಲೇ ಇರುವುದರಿಂದ ಅವನ ಬುದ್ಧಿ ಅಂಥ ಅನುಭವ ಗಳ ಮೂಲವನ್ನು ಶೋಧಿಸಹೊರಡುತ್ತದೆ. ಈ ಅನುಭವಗಳೆಲ್ಲ ಪ್ರಧಾನವಾಗಿ ಮಾನವನ ಭಾವನಾಲೋಕಕ್ಕೆ ಸೇರಿದುದು. ಭಾವನೆಯ ಶಕ್ತಿಯೇ ಇತರ ಪ್ರಾಣಿ

---

[1] Speech recorded in 1931

ಗಳಿಂದ ಮಾನವನನ್ನು ಪ್ರತ್ಯೇಕಗೊಳಿಸುವ ಶಕ್ತಿ. ತನ್ನ ಬಾಹ್ಯ ವಿಶ್ವದ ಅನಂತ ಗೂಢ ವಿಸ್ತಾರವನ್ನೂ ಅಂತರಂಗದ ಅತಿಗಹನವಾದ ತಲರಹಿತ ಆಳವನ್ನೂ ತನ್ನ ಸಾಮರ್ಥ್ಯಕ್ಕನುಗುಣವಾಗಿ ಹೊಕ್ಕು ಪರಿಸರದೊಡನೆ ಸಾಮರಸ್ಯದ ಆನಂದಾನುಭವ ಪಡೆಯುವುದು ಭಾವನೆಯಿಂದಲೇ. ಭಾವನೆಗೆ ನಿಲುಕುವ ವಸ್ತು ಒಂದಲ್ಲ ಒಂದು ದಿನ ಭೌತಿಕ ಇಂದ್ರಿಯಾನುಭವದ ಕ್ಷಿತಿಜದೊಳಗೆ ಬರಲು ಸಾಧ್ಯ ಎಂಬ ಸಾಪೇಕ್ಷ ಸತ್ಯ ನಮ್ಮ ಅನ್ವೇಷಕಶಕ್ತಿಯನ್ನೆಲ್ಲ ಆ ಕಡೆಗೆ ಹರಿಸಿದೆ. ಅದನ್ನಾಧರಿಸಿ ವಿಜ್ಞಾನಪ್ರಪಂಚ ಬೆಳೆಯುತ್ತಿದೆ. "ಯಾವುದು ಬುದ್ಧಿಗ್ರಾಹ್ಯವೋ ಅದು ಮಾತ್ರ ಸತ್ಯ" ಎಂದು ವಿಜ್ಞಾನವೂ ಈಗ ಸಿದ್ಧಾಂತ ಮಾಡುವುದಿಲ್ಲ. ಇಂದ್ರಿಯಾನುಭವಕ್ಕೆ ಅತೀತವಾದ ಅರಿವು ಉಂಟು ಎನ್ನುವುದಷ್ಟೇ ಅಲ್ಲ, ಅದನ್ನೇ ಬೌದ್ಧಿಕ ತರ್ಕಕ್ಕೂ ಉಪಯೋಗಿಸಿಕೊಂಡು ಗಣಿತಶಾಸ್ತ್ರದಂತಹ ವಿಜ್ಞಾನ ಬೆಳೆಯುತ್ತಿದೆ. ಬಿಂದುಗಳಿಗೆ ಆಯಾಮಗಳಿಲ್ಲ ಎನ್ನುವ ಅಂಗೀಕೃತ ಭಾವನೆಯಿಂದ ಯೂಕ್ಲಿಡನ ಜ್ಯಾಮಿತಿಯ ಆಯಾಮಸಹಿತ ಆಕೃತಿಗಳು ರೂಪುಗೊಂಡಿವೆ. ಅಗಮ್ಯವಾದ ಅನಂತವನ್ನು ಒಂದು ಸಂಕೇತದಿಂದ ರೂಪಿಸಿ ವಿಶ್ಲೇಷಣಗಣಿತದ ವಿಕಾಸವಾಗಿದೆ. ಇವೆಲ್ಲವೂ ಭಾವನಾಲೋಕಕ್ಕೆ ಬುದ್ಧಿ ಹಾಕಿಕೊಂಡ ಸೇತುವೆಗಳು. ಆಧುನಿಕ ಮನಶ್ಶಾಸ್ತ್ರ ಅಂತರಂಗದ ಗೂಢರಹಸ್ಯಗಳನ್ನರಸಿ ಬಹು ದೂರ ಸಾಗಿದೆ. ಗೊತ್ತಿರುವುದಕ್ಕಿಂತ ಗೊತ್ತಿಲ್ಲದ ಅತ್ಯಗಾಧ ಅಂತಃಶಕ್ತಿಗಳುಂಟು ಎಂಬುದನ್ನು ವೈಜ್ಞಾನಿಕವಾಗಿ ನಿಶ್ಚಯಿಸಿ ಸಾರುತ್ತದೆ. ಬಾಹ್ಯಾಕಾಶಶಾಸ್ತ್ರದ ಮುನ್ನಡೆಯ ಫಲವಾಗಿ ಭೌತಶಾಸ್ತ್ರವೂ ಮೇರೆಯನ್ನರಿಯದ ನಿಗೂಢ ವಿಸ್ತಾರಗಳ ರೋಮಾಂಚಕಾರಿ ಕಲ್ಪನೆಗಳೂ ಸತ್ಯವಾದವುಗಳೇ ಎನ್ನುವ ನಿಲವಿಗೆ ಬಂದು ನಿಂತಿದೆ. ವಿಶ್ವದ ಜಡವಸ್ತು ಶಕ್ತಿಪೂರ್ಣ ಬಿಂದುಗಳ ಸಮುಚ್ಚಯ, ಅದರ ಜಡತೆ ಸಾಪೇಕ್ಷವಾದುದು, ಎಂದು ನಾವೀಗ ನಂಬುತ್ತೇವೆ. ಪರಮಾಣುವಿನಂಥ ಅತ್ಯಗಾಧ ಶಕ್ತಿಬಿಂದುಗಳ ಸಾಂದ್ರತೆಯಿಂದ ಶಕ್ತಿ ಜಡವಾಗುವುದೂ, ನಿಸರ್ಗನಿಯಮದ ಚೌಕಟ್ಟುಗಳ ಕೃತಕ ಆಸ್ಫೋಟನತರಂಗಗಳಿಂದ ಜಡವಸ್ತು ಶಕ್ತಿಯಾಗಿ ಪರಿಣಮಿಸುವುದೂ ಭೌತವಿಜ್ಞಾನದ ಪರಿಶ್ರಮದಿಂದ ಸಾಧ್ಯವಾಗಿರುವ ಮಹಾ ಪವಾಡಗಳು. "ಅನಾದಿಯೂ ಅನಂತವೂ ಆದ ವಿಶ್ವವ್ಯಾಪಕ ಶಾಶ್ವತ ನಿಯಮವೊಂದು ಸರ್ವವನ್ನೂ ಆವರಿಸಿ ನಿಂತಿದೆ. ಆ ಮಹಾನಿಯಮದ ಉಗಮಸ್ಥಾನ ಎಂದಿಗೂ ಒಂದು 'ಕುರುಡುನಿಯಮ' ಆಗಿರಲಾರದು; ಏಕೆಂದರೆ ಜೀವಂತ ಶಕ್ತಿಯನ್ನೇ ಒಳಗೊಂಡಿರುವ ಈ ವಿಶ್ವವನ್ನು ನಿಯಮಬದ್ಧವನ್ನಾಗಿ ಮಾಡುವ ವಸ್ತು ಒಂದು ಮಹಾಶಕ್ತಿಯೇ ಆಗಿರಬೇಕು." ಇದು ಗಾಂಧೀಜಿಯ ನಂಬಿಕೆ. "ನಿಯಮವೂ ನಿಯಮಕರ್ತೃವೂ ಇಲ್ಲಿ ಅಭೇದ್ಯವಾದವು....ಆದರೆ ಆ ನಿಯಮ ನನ್ನನ್ನೂ ನನ್ನ ಬಾಳನ್ನೂ ಆವರಿಸಿ ನಿಲ್ಲುತ್ತದೆ. ಅದನ್ನು ನಿರಾಕರಿಸಿದ ಮಾತ್ರಕ್ಕೆ ಅದರ ಪ್ರಭುತ್ವದಿಂದ ನಾನೆಂದೂ ಮುಕ್ತನಾಗಲಾರೆ." ಈ ದೈವನಿಯಮವನ್ನು

ಸಾಕ್ಷೀಭೂತವಾಗಿ ಅಂಗೀಕರಿಸುವುದು ಹೇಗೆ? ಎಂಬ ತಾರ್ಕಿಕ ಬುದ್ಧಿಗೆ ಅವರ ಉತ್ತರ ಇಷ್ಟೆ: "ಸಾಕ್ಷಾತ್ಕರಿಸಿಕೊಂಡ ಸಾಧುಸಂತರ ನಿರಂತರ ಅಪರಿಮಿತ ಸರಣಿಯೇ ಅವರ ಅನುಭವಜನ್ಯ ವಿವರಣೆಯೇ ನಾನು ನಂಬುವ ಸತ್ಯಗಳಿಗಿಂತ ಸತ್ಯವಾದುದು. ಇದನ್ನು ನಿರಾಕರಿಸುವುದೆಂದರೆ ನನ್ನನ್ನೇ ನಾನು ನಿರಾಕರಿಸಿ ಕೊಂಡಂತೆ." ಇದು ಅವರ ಶ್ರದ್ಧೆ.

ಶ್ವೇತಾಶ್ವತರ ಉಪನಿಷತ್ತಿನ ಶ್ಲೋಕ:

"ಸ್ವಭಾವಮೇಕೋ ಕವಯೋ ವದಂತಿ
ಕಾಲಂ ತಥಾನ್ಯೋ ಪರಿಮುಹ್ಯಮಾನಾಃ।
ದೇವಸ್ಯೈಷ ಮಹಿಮಾ ತು ಲೋಕೇ
ಯೇನೇದಂ ಭ್ರಾಮ್ಯತೇ ಬ್ರಹ್ಮಚಕ್ರಂ॥"

[ಕೆಲವು ಪಂಡಿತರು ಭ್ರಮಾಧೀನರಾಗಿ ನಿಸರ್ಗ ಅಥವಾ ಸ್ವಭಾವವೇ ಮೂಲವೆಂದೂ ಅಂತೆಯೇ ಕೆಲವರು ಕಾಲವೇ ಕಾರಣ ಎಂದೂ ಅನ್ನುತ್ತಾರೆ. ಆದರೆ ಈ ಬ್ರಹ್ಮಚಕ್ರ ದೈವಶಕ್ತಿಯ ಮಹಿಮೆಯಿಂದ ಮಾತ್ರವೇ ಭ್ರಮಿಸುತ್ತದೆ.]
ಹಾಗೆಯೇ ಗೀತೆಯ ವಿಶ್ವರೂಪದರ್ಶನಯೋಗದ ಶ್ಲೋಕ:

"ಮಯ್ಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್।
ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ॥"

[ಪ್ರಕೃತಿಯ ಚರಾಚರ ವಸ್ತುಗಳೆಲ್ಲವೂ ನನ್ನ ನಿಯಂತ್ರಣದಿಂದಲೇ ಉದ್ಭವಿಸುತ್ತವೆ. ಈ ಹೇತುವಿನಿಂದಲೇ ಓ ಅರ್ಜುನ! ಜಗತ್ತು ಉರುಳುತ್ತದೆ.]
ಇವು ಗಾಂಧೀಜಿಯ ಶ್ರದ್ಧೆಗೆ ಇಂಬುಗೊಟ್ಟ ಆಗರಗಳು.

ದೈವನಿಯಮದ ಅರಿವು ಸ್ವಾಭಾವಿಕವಾಗಬೇಕು

"ಈ ನಶ್ವರ ದೇಹದ ಮೂಲಕ ಸಂಪೂರ್ಣ ಸತ್ಯದರ್ಶನ ಸಾಧ್ಯವಿಲ್ಲ ಎಂಬುದೇ ಪುರಾತನ ಜಿಜ್ಞಾಸುವಿಗೆ ಅಹಿಂಸೆಯನ್ನು ತೋರಿಸಿಕೊಟ್ಟಿರಬೇಕು"[2] ಎನ್ನುತ್ತಾರೆ ಗಾಂಧೀಜಿ. ನಮ್ಮ ಸಾಧನೆಯ ಹಾದಿಯಲ್ಲಿ ಅಡ್ಡಬರುವುದನ್ನೆಲ್ಲ ಹಿಂಸೆಯಿಂದ ನಾಶಮಾಡಹೊರಟರೆ ನಾವು ಮುಂಬರಿಯುವ ಬದಲು ಹಿಂದೆ ಸರಿಯುತ್ತಿದ್ದೇವೆ ಎಂಬ ಅನುಭವ ಆಗುತ್ತದೆ. ಹೊರಗಿನ ಕಾಲ್ಪನಿಕ ಶತ್ರುವನ್ನು ಇದಿರಿಸಹೊರಟು ಒಳಗಿನ ಶತ್ರುವನ್ನು ಮರೆಯುತ್ತೇವೆ. ನಮ್ಮ ಮನಸ್ಸಿನ ಸಂಸ್ಕಾರ ದೇಹಕ್ಕೂ ಆತ್ಮಕ್ಕೂ ಒಂದು ಸ್ವಾಭಾವಿಕ ಸಮತೋಲವನ್ನು ತಂದುಕೊಟ್ಟಾಗ ಮಾತ್ರವೇ

---
[2] ಮಂಗಳಪ್ರಭಾತ

ಜೀವನ ಸಮರಸವಾದೀತು. ಉಪನಿಷತ್ತಿನ ಭಾಷೆಯಲ್ಲಿ ಹೇಳುವುದಾದರೆ ಮನೋಮಯಕೋಶ ದೇಹಸಂಬಂಧವಾದ ಅನ್ನಮಯ-ಪ್ರಾಣಮಯಕೋಶಗಳಿಗೂ ಆತ್ಮಸಂಬಂಧವಾದ ವಿಜ್ಞಾನಮಯ ಆನಂದಮಯಕೋಶಗಳಿಗೂ ಒಂದು ಸುಭದ್ರ ಸೇತುವೆಯನ್ನು ನಿರ್ಮಿಸಬೇಕು. ಈ ಮನಸ್ಸಿನ ಸಂಸ್ಕಾರ ಹೇಗೆ ಆಗುತ್ತದೆ? ಮಾನವನ ಸಾಂಸ್ಕೃತಿಕ ಇತಿಹಾಸವೇ ಈ ಸಂಸ್ಕಾರಮಾರ್ಗದ ಶೋಧನೆಗಾಗಿ ಅವನು ಮಾಡಿದ ಪ್ರಯೋಗಗಳು. ಪಶುವೃತ್ತಿಯಿಂದ ಮಾನವೀಯತೆಗಭಿಮುಖವಾಗಿ ನಡೆದ ದಾರಿಯನ್ನು ಇದರಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಹೆಚ್ಚು ಹಿಂಸೆ ಮಾಡಿದಂತೆಲ್ಲ ಸತ್ಯದಿಂದ ಹೆಚ್ಚು ಹೆಚ್ಚು ಹಿಂದೆ ಬಿದ್ದೆ ಎಂಬ ತಿಳಿವಳಿಕೆ ಆ ಪ್ರಾಚೀನ ಜಿಜ್ಞಾಸುವಿಗೆ ಉಂಟಾದಾಗ ತಾನು ಅರಸುತ್ತಿರುವ ಸತ್ಯ ಹೊರಗಿಲ್ಲ, ತನ್ನೊಳಗೇ ಇದೆ ಎಂಬುದನ್ನರಿತ. ಸಾಧನೆಯ ಮಾರ್ಗ ಶುದ್ಧವಾದಂತೆಲ್ಲ, ಅಹಿಂಸಾತ್ಮಕವಾದಂತೆಲ್ಲ ಅವನ ಆಂತರ್ಯದ ಸಹಜಪ್ರವೃತ್ತಿಗಳಿಗೂ ಬಾಹ್ಯ ನೈಸರ್ಗಿಕ ನಿಯಮಬದ್ಧ ಪ್ರಪಂಚಕ್ಕೂ ಒಂದು ಸಾಮರಸ್ಯ ಗೋಚರವಾಗ ತೊಡಗಿತು. ಸರ್ವವ್ಯಾಪಕ ಈಶ್ವರೀನಿಯಮದ ಅನುಭೂತಿ ಉಪಕ್ರಮವಾಯಿತು.

ಗಾಂಧೀಜಿಯ ನುಡಿಗಳಲ್ಲಿ:

"........ಹೀಗೆ ಹೆಜ್ಜೆಹೆಜ್ಜೆಯಾಗಿ ಲೋಕವೈತ್ರಿ ಕಲಿಯುತ್ತೇವೆ; ಸತ್ಯ ಪರಮೇಶ್ವರನ ಮಹಿಮೆಯನ್ನರಿಯುತ್ತೇವೆ; ನಾವು ಕಷ್ಟದಲ್ಲಿದ್ದರೂ ನಮ್ಮ ಮನಶ್ಶಾಂತಿ ವೃದ್ಧಿಯಾಗುತ್ತದೆ; ಧೀರರೂ ಸಾಹಸಿಗಳೂ ಆಗುತ್ತೇವೆ. ಶಾಶ್ವತ–ಅಶಾಶ್ವತಗಳ, ಕರ್ತವ್ಯ–ಅಕರ್ತವ್ಯಗಳ ವಿವೇಕ ಮೂಡುತ್ತದೆ. ನಮ್ಮ ಗರ್ವ ಕರಗಿ ಹೆಚ್ಚು ನಮ್ರರಾಗುತ್ತೇವೆ; ನಮ್ಮ ಐಹಿಕ ಆಸಕ್ತಿ ಕಡಮೆಯಾಗುತ್ತದೆ; ನಮ್ಮೊಳಗಿನ ಕೊಳೆ–ಕೆಡುಕು ದಿನೇ ದಿನೇ ಕಡಮೆಯಾಗುತ್ತದೆ.

ಈ ಮೋಹವಿಮೋಚನೆಯೆ ಸತ್ಯನಾರಾಯಣನ ಸಾಕ್ಷಾತ್ಕಾರ....[3]

ನಂಬಿಕೆ

ನೆಲೆಯಿಲ್ಲದೆ ಅಲೆಯುವ ಮನಸ್ಸಿನ ಪರಿಭ್ರಮಣೆಗೆ ನಿಲ್ದಾಣವೇ ದೊರಕದಿದ್ದರೆ ಬಾಳು ನಿರರ್ಥಕವೆನಿಸುತ್ತದೆ, ನೀರಸವೆನಿಸುತ್ತದೆ. ಎಲ್ಲವನ್ನೂ ಪ್ರಶ್ನಿಸುತ್ತಾ ಹೊರಟಾಗ ಯಾವುದೋ ಒಂದು ಘಟ್ಟದಲ್ಲಿ ತರ್ಕವೂ ಸೋತು ನಿಲ್ಲುತ್ತದೆ. ಆದರೆ ನಮಗೆ ಸಿಲುಕದ ಸತ್ಯವಸ್ತು ಉಂಟು ಎಂಬ ಭಾವನೆ ಅಳಿಯದು. ಯಾವುದೋ ಶಾಶ್ವತ ಶಿವವಸ್ತು ಅಡಿಗಲ್ಲಿನಂತೆ ನಮ್ಮ ಆಂತರ್ಯದ ಅಂತರಾಳದಲ್ಲಿ ಅನುಭವ ವೇದ್ಯವಾಗುತ್ತದೆ. ಅದನ್ನು ತರ್ಕಮಾರ್ಗದಿಂದ ಪ್ರತಿಪಾದಿಸಿ ಸಿದ್ಧಾಂತ ಮಾಡುವುದು ಅಸಾಧ್ಯ ಎನಿಸಿದಾಗ ನಂಬಿಕೆ ಅಥವಾ faith ನಮ್ಮ ಆಂತರ್ಯಕ್ಕೆ

---

[3] ಮಂಗಳಪ್ರಭಾತ, ಗಾಂಧೀ ಗ್ರಂಥಮಾಲೆ; ಸಂ. ೪, ಪುಟ ೧೬

ಇಂಬುಗೊಟ್ಟು ಸಾಂತ್ವನಗೊಳಿಸುತ್ತದೆ. ಗಾಂಧೀಜಿ ಈ ಮಾತನ್ನು ಸ್ಪಷ್ಟಗೊಳಿಸುತ್ತ, Faith transcends reason (ನಂಬಿಕೆ ತರ್ಕಾತೀತವಾದುದು) ಎಂದಿದ್ದಾರೆ. ಯಾರ ಸದ್ಗುಣ ಸದಾಚಾರಗಳಿಂದ ವ್ಯಕ್ತಿನಿಷ್ಠವಾದ ನಂಬಿಕೆ ನಮಗೆ ಉಂಟಾಗುತ್ತದೆಯೋ ಅಂಥ ಮಹನೀಯರ ಅನುಭಾವದ ಸಾಕ್ಷಿ ನಮ್ಮಲ್ಲಿ ತರ್ಕಾತೀತ ಶ್ರದ್ಧೆಯನ್ನು ಸ್ಫುರಣಗೊಳಿಸಬಲ್ಲುದು. ಗಾಂಧಿಯವರ ನುಡಿಗಳಲ್ಲಿ:

"ಪರಮಾತ್ಮನಲ್ಲಿಯ ಈ ನಂಬಿಕೆಯು ಬುದ್ಧಿಯ ಆಚೆಗಿರುವ ಶ್ರದ್ಧೆಯನ್ನು ಆಧರಿಸಬೇಕಾಗುತ್ತದೆ. ನಿಜವಾಗಿ ಸಾಕ್ಷಾತ್ಕಾರವೆಂದು ಕರೆಯಲಾದ ಅನುಭವಕ್ಕೂ ಶ್ರದ್ಧೆಯ ಒಂದಂಶದ ನೆಲೆ ಇದ್ದೇ ಇರುತ್ತದೆ. ಅದರ ಹೊರತು ಆ ಅನುಭವ ನಿಲ್ಲಲರಿಯದು. ಹಾಗಿರುವುದೇ ಅದರ ಸ್ವಭಾವ . . ."[4]

ಸತ್ಯಸಾಕ್ಷಾತ್ಕಾರಕ್ಕೆ ಬೆಲೆ ಕೊಟ್ಟು ಸಾಹಸಮಯ ಅನ್ವೇಷಣೆಗೆ ತೊಡಗುವ ಮಾನವಚೇತನ ಎಲ್ಲ ಕಾಲಕ್ಕೂ ತನ್ನ ತಿಳಿವಿನ ಕ್ಷಿತಿಜದಾಚೆಗೆ ಇರುವ ಬ್ರಹ್ಮಾಂಡದ ಸತ್ಯತೆಯಲ್ಲಿ ನಂಬಿಕೆಯನ್ನಿಟ್ಟೇ ಮುಂದುವರಿಯುತ್ತದೆ. ಭಗವದ್ಗೀತೆಯ ಪಾರಿಭಾಷಿಕ ಪದಗಳಲ್ಲಿ:

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ |
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ || (ಅಧ್ಯಾಯ ೯–೪)

[ನನ್ನ ಅವ್ಯಕ್ತಸ್ವರೂಪದಿಂದ ನಾನು ಸರ್ವವ್ಯಾಪಕನಾಗಿ ಇದ್ದೇನೆ. ಸಮಸ್ತ ಭೂತವಿಶೇಷವೂ ನನ್ನಲ್ಲಿ ಅಂತರ್ಗತ. ನಾನು ಅವುಗಳಲ್ಲಿ ಸೀಮಿತನಲ್ಲ (ಸರ್ವಾಧಾರವಾದ ಸತ್ಯ ಬೇರಾವ ಆಧಾರವನ್ನೂ ಅವಲಂಬಿಸುವುದಿಲ್ಲ).]

ರಾಜಾಜಿ ಈ ಮಾತನ್ನು ಬೇರೊಂದು ಸಂದರ್ಭದಲ್ಲಿ What is unkown is not unreal (ಅವ್ಯಕ್ತವಾದುದು ಅಸತ್ಯವಾಗಿರಬೇಕಾಗಿಲ್ಲ) ಎಂಬ ಸೂತ್ರವನ್ನೇ ಹಿಡಿದು ಪ್ರಾಚೀನ ಸತ್ಯಾನ್ವೇಷಕರು ಉಪನಿಷತ್ತುಗಳಂತಹ ಸಾರ್ವಕಾಲಿಕ ಸರ್ವವ್ಯಾಪಕ ಮೂಲತತ್ತ್ವಗಳ ನಿರೂಪಣೆಯ ಸಾಹಸಕ್ಕೆ ತೊಡಗಿ ಅಪೂರ್ವ ಯಶಸ್ಸನ್ನು ಪಡೆದರು—ಎಂದಿದ್ದಾರೆ. ಅವರ ಸುಂದರವಾದ ಮಾತುಗಳಲ್ಲಿ:

"The spacious imagination, the majestic sweep of thought and the almost reckless spirit of exploration with which, urged by the compelling thirst for Truth, the Upanishad teachers and pupils dig into the open secret of the Universe, make this most ancient among the world's holy books still the most modern and most satisfying."

---

4 ಧರ್ಮ–ನೀತಿ, ಪು. ೨೦೮

[ಆ ಭೂಮಸದೃಶ ಊಹಾಶಕ್ತಿ, ಆ ವಿಚಾರಪ್ರವಾಹದ ಭವ್ಯತೆ, ಸತ್ಯದರ್ಶನದ ತೀವ್ರತೃಷ್ಣೆಯಿಂದ ಯಾವ ಅಪಾಯವನ್ನೂ ಲೆಕ್ಕಿಸದ ಆ ನಿರ್ಭಯ ಅನ್ವೇಷಣಾಸ್ಫೂರ್ತಿ ಇವುಗಳಿಂದ ಅಂದಿನ ಉಪನಿಷತ್ತುಗಳ ಗುರುಶಿಷ್ಯರು, ತೆರೆದ ವಿಸ್ತಾರದಂತಿರುವ ಈ ವಿಶ್ವದ ನಿಗೂಢತೆಯನ್ನು ಭೇದಿಸಿ, ಜಗತ್ತಿನ ಅತ್ಯಂತ ಪ್ರಾಚೀನವಾದ ಈ ಪವಿತ್ರಗ್ರಂಥ ನಿತ್ಯನೂತನವೂ ಅತ್ಯಂತ ಸಮಾಧಾನಕರವೂ ಆಗಿರುವಂತೆ ನಿರ್ಮಿಸಿದ್ದಾರೆ.]

“ಮಾನವನ ಮಾನವೀಯತೆ, ಅವನ ಕರ್ತೃತ್ವಶಕ್ತಿ, ಪ್ರೇಮಸ್ಫುರಿತ ಸೇವಾಕಾಂಕ್ಷೆ, ಆನಂದಾನುಭೂತಿ, ಸತ್ಯನಿಷ್ಠೆ ಎಲ್ಲವೂ ಆಧಿಭೌತಿಕವಾದ ನಿಸರ್ಗಶಕ್ತಿಯಿಂದಲೇ ಉಗಮಗೊಳ್ಳುತ್ತವೆ—ಅದಕ್ಕೆ ಈಶ್ವರೀಶಕ್ತಿಯ ಅವಲಂಬನೆ ಅನಗತ್ಯ” ಎಂಬ ವಾದ ವೈಜ್ಞಾನಿಕ ಸಂಶೋಧನಬುದ್ಧಿಗೆ ಸಮಂಜಸವೆನಿಸುತ್ತದೆ. ಆದರೆ ಸ್ವಪ್ರಯತ್ನದಿಂದ ಸಾಧಿಸಬೇಕಾದ ಸಿದ್ಧಿಗಳಿಗೆ ದೈವೀಬಲದ ಸಹಾಯಬೇಡ ಎನ್ನುವ ನಿರೀಶ್ವರವಾದಿಗಳು ಕೂಡ ಕೊನೆಗೆ ಮನುಷ್ಯನ ಮನುಷ್ಯತ್ವದಲ್ಲಿ ಒಂದು ತರ್ಕಾತೀತ ನಂಬುಗೆಯನ್ನಿಟ್ಟು ಸಾಗುವುದು ಅನಿವಾರ್ಯವಾಗುತ್ತದೆ. ಅನೇಕ ಸಲ ಇದು ಅನುಭವವೇದ್ಯವಾದರೂ ಅಂಗೀಕರಿಸದೆ ತಳ್ಳಿಹಾಕಿಬಿಡುತ್ತೇವೆ. ಗಾಂಧೀಜಿ ಎಂದೂ ಕುರುಡುನಂಬಿಕೆಗಳನ್ನಾಧರಿಸಿ ದೈವಸಾಕ್ಷಾತ್ಕಾರಕ್ಕೆ ಪ್ರಯತ್ನಪಟ್ಟವರೇ ಅಲ್ಲ. ಬಾಳಿಗೊಂದು ನಂಬಿಕೆ ಅಗತ್ಯ ಎಂದು ಆತ್ಮಸಾಕ್ಷಿಯಾಗಿ ಪ್ರತಿಪಾದಿಸಿದ ವಿವೇಕಮತಿಗಳನ್ನಾಧರಿಸಿ ಅವರು ತಮ್ಮ ಜೀವನಾದರ್ಶಗಳನ್ನು ರೂಪಿಸಿಕೊಂಡವರು. “ಕೇವಲ ಶ್ರದ್ಧೆಯಿಂದ ಒಂದು ಕೆಲಸವನ್ನೂ ಮಾಡದ, ಹಾಗೂ ಪ್ರತಿಯೊಂದನ್ನೂ ಬುದ್ಧಿಯ ನೆರವಿನಿಂದಲೇ ನೆರವೇರಿಸಿದ ಒಬ್ಬ ಬುದ್ಧಿವಾದಿಯನ್ನೂ ನಾನು ಕಂಡಿಲ್ಲ. ಬುದ್ಧಿಶಕ್ತಿಯನ್ನು ತಳ್ಳಿಹಾಕಬೇಕೆಂದು ನಾನು ವಾದಿಸುವುದಿಲ್ಲ. ಆದರೆ, ಬುದ್ಧಿಗೆ ಪಾವಿತ್ರ್ಯವನ್ನು ನೀಡುವ ಇನ್ನೊಂದು ಶಕ್ತಿಯನ್ನು ಸರಿಯಾಗಿ ಗೌರವಿಸಬೇಕೆಂದು ಮಾತ್ರ ಹೇಳುತ್ತಿದ್ದೇನೆ”[5] ಎಂದಿದ್ದಾರೆ. ನಮ್ಮ ಸುತ್ತಲಿನ ಸೃಷ್ಟಿಯ ಪೂರ್ಣಸ್ವರೂಪದರ್ಶನ ಅದರಲ್ಲೇ ಸಮಾವೇಶಗೊಂಡಿರುವ ಅಪೂರ್ಣಮಾನವನ ಅತಿಪ್ರಬಲ ಮೇಧಾಶಕ್ತಿಗೂ ಮೀರಿದುದು. ‘ನಾನು ಆ ಪೂರ್ಣತೆಯ ಒಂದು ಅಂಶ ಮಾತ್ರ’ ಎಂಬ ಅರಿವೇ ಆ ಅಗೋಚರ ಪೂರ್ಣತೆಯಲ್ಲಿ ನಮ್ಮ ಶ್ರದ್ಧೆಯನ್ನೂ ನಂಬಿಕೆಯನ್ನೂ ನೆಲೆಗೊಳಿಸುತ್ತದೆ. ಅದರ ಸಂಕೇತವನ್ನು ಹೇಗೆ ಬೇಕಾದರೂ ಇಟ್ಟುಕೊಳ್ಳಬಹುದು.

“ನಂಬಿಕೆಯೇ ನಮ್ಮ ಅಂತಃಶಕ್ತಿಗಳ ಆಧಾರ. ಅಪರಿಮಿತ ಶಕ್ತಿಸಂಚಯನದ ಸಾಗರೋಪಮವಾದ ಪರಮಾತ್ಮತತ್ತ್ವದ ಒಂದು ಬಿಂದುವೇ ಇಲ್ಲಿ ನಮ್ಮೊಳಗೆ ನಮ್ಮ ಚೇತನವಾಗಿ ಪರಿಣಮಿಸಿದೆ ಎನ್ನುವ ನಂಬಿಕೆಯಿಂದ ನಮ್ಮ ಸಾಮರ್ಥ್ಯ

---

[5] ಧರ್ಮ-ನೀತಿ, ಗಾಂಧೀ ಗ್ರಂಥಮಾಲೆ-೫, ಪು. ೨೦೩

ನಮಗರಿವಿಲ್ಲದೆಯೇ ನೂರ್ಮಡಿ ಹೆಚ್ಚುತ್ತದೆ" ಎಂದು ಗಾಂಧೀಜಿ ಪ್ರತಿಪಾದಿಸಿದರು. "If we could solve all the mysteries of the universe, we would be co-equals with God. Every drop of the ocean shares its glory but is not the ocean. Realising our littleness during this tiny span of life, we close every morning prayer with the recitation of a verse which means: "Misery so called is no misery nor riches so called riches. Forgetting (or denying) God is the true misery, remembering (or faith in) God is true riches." (*Harijan* 13-6-36).[6] [ಈ ವಿಶ್ವನಿಗೂಢತೆಯ ಸಮಸ್ಯೆಗಳೆಲ್ಲವನ್ನೂ ಪರಿಹರಿಸಲು ನಮಗೆ ಸಾಧ್ಯವಾಗುವುದಾದರೆ 'ನಾವೇ ದೇವರಿಗೆ ಸಮ' ಎನಿಸಿಕೊಳ್ಳುತ್ತೇವೆ. ಆದರೆ ಮಹಾಸಾಗರದ ಬಿಂದುವೊಂದು ಸಾಗರದ ವೈಭವದಲ್ಲಿ ಪಾಲ್ಗೊಳ್ಳುತ್ತದಾದರೂ ಅದೇ ಸಾಗರವಲ್ಲ. ಈ ಅಲ್ಪಬಾಳಿನ ಪರಿಮಿತಿಯಲ್ಲಿ ನಮ್ಮ ಸಂಕುಚಿತತೆಯನ್ನು ಅರಿತುಕೊಂಡೇ ಪ್ರತಿ ಮುಂಜಾನೆಯ ಪ್ರಾರ್ಥನೆಯನ್ನೂ ಈ ಶ್ಲೋಕದಿಂದ ಮುಗಿಸುತ್ತೇವೆ: ವಿಪದೋ ನೈವ ವಿಪದಃ ಸಂಪದೋ ನೈವ ಸಂಪದಃ। ವಿಪದ್ವಿಸ್ಮರಣಂ ವಿಷ್ಣೋಃಸಂಪನ್ನಾರಾಯಣಸ್ಮೃತಿಃ ॥' ಮನುಷ್ಯ ಪ್ರಯತ್ನ ಅನೇಕ ಸಲ ವಿಫಲಗೊಳ್ಳುತ್ತದೆ. ಇದರಿಂದ ನಮ್ಮ ಆದರ್ಶಸಾಧನೆಯಲ್ಲಿ ನಿರಾಶರಾಗದೆ ಉಳಿಯಬೇಕಾದರೆ ಭಗವಂತನಲ್ಲಿ ನಂಬಿಕೆಯೊಂದೇ ಆಸರೆ. ಇದು ಸತ್ಯದ ಸಾಕ್ಷಾತ್ಕಾರಕ್ಕೆ ಊರುಗೋಲು. ಗಾಂಧೀಜಿಯಲ್ಲಿ ಈ ದೃಢವಿಶ್ವಾಸ ಬೇರೂರಿತ್ತು.

ರಾಮನಾಮ

ರಾಮನಾಮಸ್ಮರಣೆಗೆ ಗಾಂಧೀಜಿ ಕೊಟ್ಟಿದ್ದ ಪರಮಮೌಲ್ಯವನ್ನು ಕುರಿತು ವಿಪುಲ ಚರ್ಚೆ ನಡೆಯುತ್ತಿದೆ. ಅವರಿದ್ದಾಗಲೂ ಅವರೊಡನೆ ಮನಬಿಚ್ಚಿ ಚರ್ಚಿಸಿ ಅವರ ಅಪಾರಶ್ರದ್ಧೆಯಲ್ಲಿ ಪಾಲ್ಗೊಳ್ಳಲಾರದೆ ರಾಮನಾಮ ಭಜನೆಯ ಕಾರ್ಯಕ್ರಮದಿಂದ ದೂರವಾಗಿಯೇ ಉಳಿದ ರಾಷ್ಟ್ರನಾಯಕರೂ ಇದ್ದರು. "ರಾಮಭಜನೆಯ ಅರ್ಥವನ್ನು ಸಂಪ್ರದಾಯಬದ್ಧವಾದ ರೂಢಮೂಲ ಅಂಧಶ್ರದ್ಧೆಯ ರೀತಿಯಲ್ಲೇ ಸಾಮಾನ್ಯರು ಗ್ರಹಿಸುತ್ತಾರೆ. ಗಾಂಧೀಜಿಯ ವಿಶೇಷ ವಿವರಣೆಗಳೆಲ್ಲ ಅವರನ್ನು ಜಾಗೃತಗೊಳಿಸಲು ಅಸಮರ್ಥವಾಗಿವೆ" ಎನ್ನುವುದೇ ಬಹುಮಟ್ಟಿಗೆ ಆ ರಾಷ್ಟ್ರನಾಯಕರ ವಿರೋಧ. ಗಾಂಧೀಜಿಗೂ ಅದು ತಪ್ಪೆಂದು ಅನಿಸಲಿಲ್ಲ. ಆದರೆ ಅವರ ಸತ್ಯಶ್ರದ್ಧೆ ಯಾವತ್ತೂ ಅಪಾರ್ಥಗಳ ಅಂಚಿನಲ್ಲೇ ನಡೆದುಬಂದ ಅಸಿಧಾರಾವ್ರತ. "ಇತರರ ನಂಬಿಕೆಯನ್ನು ಸ್ಫುರಣಗೊಳಿಸಲು ನಾನು ಅಸಮರ್ಥ

---

[6] Gandhi : *In Search of the Supreme*, Vol. I, p. 35

ನಾದರೆ ಅದು ನನ್ನ ದೌರ್ಬಲ್ಯವೇ ಹೊರತು ನನ್ನ ಆದರ್ಶದ ಶಿಥಿಲತೆ ಅಲ್ಲ" ಎಂದರು. ಸತ್ಯದ ಸಿದ್ಧಿಗಾಗಿ, ನಿರಂತರ ಪ್ರಯತ್ನದ ಆಧಾರವಾಗಿ ರಾಮನಾಮವನ್ನೇ ಆಶ್ರಯಿಸಿ ನಡೆದರು. ಕಾರಣ ಇಷ್ಟು: ಮಾನವನ ಆದರ್ಶಸಾಧನೆಗೆ ಪ್ರಬಲ ವಿರೋಧೀ ಶಕ್ತಿಗಳು ಹುಟ್ಟುವುದು ಅವನ ಅಂತರ್ಯದಲ್ಲೇ. ಪ್ರತಿನಿಮಿಷದಲ್ಲೂ ತನ್ನೊಳಗೆ ನಡೆಯುವ ಈ ಅದೃಶ್ಯಹೋರಾಟದಲ್ಲಿ ನಮ್ಮ ವಿವೇಕ ಸತ್ ಶಕ್ತಿಗಳ ಕಡೆ ವಾಲಿದರೂ ಅದರ ಸಾಮರ್ಥ್ಯವನ್ನು ವೃದ್ಧಿಸಲು ಭಗವಂತನ ಪ್ರೇರಕಶಕ್ತಿ ಇಲ್ಲದೆ ಸಾಧ್ಯವಾಗದು. "ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವ ಬಲ"[7] ಎಂದು ಅರಿತ ಗಾಂಧೀಜಿ ಈ ದುರ್ಬಲತೆಯನ್ನು ಜಯಿಸಲು ಶ್ವಾಸಕೋಶಕ್ಕೆ ಹೊರಗಿನ ಗಾಳಿ ನೆರವಾಗುವಂತೆ ದೇಹಬದ್ಧ ಆತ್ಮಕ್ಕೆ ದೇಹಮುಕ್ತಪರಮಾತ್ಮನ ಸಹಾಯ ದೊರಕಿಸಿಕೊಳ್ಳಲು ಶುದ್ಧಹೃದಯದ ಪ್ರಾರ್ಥನಾಕ್ರಮವೇ ಶಾಸ್ತ್ರೀಯ ಮಾರ್ಗವೆಂದು ಅಂಗೀಕರಿಸಿದರು. "ನನ್ನ ಭಾವನೆಯ ರಾಮನಾಮಕ್ಕೂ ಯಂತ್ರಮಂತ್ರಗಳಿಗೂ ಯಾವ ಬಗೆಯ ಸಂಬಂಧವೂ ಇಲ್ಲ. ರಾಮನಾಮ ಜಪನೆಯೆಂದರೆ ಭಗವಂತನ ಅಸದೃಶ ಶಕ್ತಿಯಿಂದ ನೆರವನ್ನು ಪಡೆಯುಕೊಳ್ಳುವುದು ಎಂದು ಸ್ಪಷ್ಟಪಡಿಸಿದ್ದೇನೆ. ಅದರೊಡನೆ ಹೋಲಿಸಿದರೆ ಅಣುಶಕ್ತಿ ಶೂನ್ಯ. ಆ ನೆರವು ಎಲ್ಲ ಬಾಧೆಗಳನ್ನೂ ಹರಿಸಬಲ್ಲುದು. ಹೃದಯಪೂರ್ಣವಾಗಿ ರಾಮಸ್ಮರಣೆ ಮಾಡಬೇಕೆಂದು ಹೇಳುವುದು ಸುಲಭವಾದರೂ ಅದನ್ನು ವಸ್ತುತಃ ಆಚರಿಸುವುದು ಮಹಾ ಕಷ್ಟ. ಹೀಗಿದ್ದರೂ ಮಾನವನಿಗೆ ಅದನ್ನು ಬಿಟ್ಟರೆ ಅದಕ್ಕಿಂತ ಹಿರಿದಿಲ್ಲ."[8] (ಹರಿಜನ, ೧೩–೧೦–೪೬)

ಆಚಾರ್ಯ ವಿನೋಬಾ ಅವರು ಗಾಂಧೀಜಿಯ 'ರಾಮನಾಮ' ಎಂಬ ಸಣ್ಣ ಪುಸ್ತಕದ ಬಗ್ಗೆ ಒಂದು ಸುಂದರ ವ್ಯಾಖ್ಯಾನವನ್ನು ಬರೆದಿದ್ದಾರೆ.[9] ಗಾಂಧೀಜಿಗೆ ರಾಮನಾಮ ತ್ರಿವಿಧ ಮುಕ್ತಿಗಳಿಗೆ ಸಾಧನವಾಯಿತು ಎಂದು ವಿವರಿಸುತ್ತಾ, "ಭಯಮುಕ್ತಿ, ವಿಕಾರಮುಕ್ತಿ, ರೋಗಮುಕ್ತಿ ಈ ಮೂರು ಬಗೆಯ ಮುಕ್ತಿಗಳ ದರ್ಶನ ಈ ಪುಸ್ತಕದಲ್ಲಿ ಆಗುತ್ತದೆ" ಎಂದಿದ್ದಾರೆ. "ಈಶ್ವರಭಕ್ತಿಯೇ ಆತ್ಮಪ್ರಯತ್ನದ ಪರಾಕಾಷ್ಠೆ. ರಾಮನಾಮದ ಶ್ರದ್ಧೆಯನ್ನು ನಮ್ಮೆದುರಿಗೆ ಇಟ್ಟಾಗ ಗಾಂಧೀಜಿಯ ದೃಷ್ಟಿ ಇದೇ.... ಈಶ್ವರಭಕ್ತಿ ಹಾಗೂ ಆತ್ಮಪ್ರಯತ್ನ–ಹೃದಯಶುದ್ಧಿಗಳು ಬೇರೆ ಬೇರೆ ಅಲ್ಲ. ಪರಸ್ಪರ ಪೂರಕ. ಗಾಂಧೀಜಿ ಹೀಗೆ ಬರೆದರು: "ಹೃದಯ ಶುದ್ಧವಾಗಿದ್ದರೆ ರಾಮನಾಮ ಜಪಿಸದಿದ್ದರೂ ಆರೋಗ್ಯ ಖಂಡಿತ. ಪಾವಿತ್ರ್ಯಸಾಧನೆಗೆ ರಾಮನಾಮವಲ್ಲದೆ ನನಗೆ ಬೇರಾವ ದಾರಿಯೂ ಗೊತ್ತಿಲ್ಲ"....

---

7 ಗಾಂಧೀ ಗ್ರಂಥಮಾಲೆ: ನಿವೇದನ

8 ಧರ್ಮ–ನೀತಿ, ಪು. ೨೫೨

9 ದೀಕ್ಷಾ: ರಾಮನಾಮ, ಪು. ೪೩–೮೫ (ಸರ್ವಸೇವಾ ಸಂಘ ಪ್ರಕಾಶನ)

ಮೂಢ ವಿಶ್ವಾಸದಿಂದ ಕಾಲ್ಪನಿಕ ದೇವತೆಗಳನ್ನಾಗಲಿ, ಆತ್ಮದಿಂದ ಭಿನ್ನವಾದ ಯಾರೋ ಸರ್ವಾಧಿಕಾರಿ ಪರಮೇಶ್ವರನನ್ನಾಗಲಿ ಸ್ವಾರ್ಥಲಾಭಕ್ಕಾಗಿ ಪುಸಲಾಯಿಸುವುದಿಲ್ಲ, ರಾಮನಾಮಸ್ಮರಣೆ; ಅದು ಆತ್ಮಶೋಧನೆಯ ಕ್ರಿಯೆ.... ಈಶ್ವರನ ಹೆಸರು ಹೇಳಲು ಮನುಷ್ಯ ಈಶ್ವರಮಯ ಜೀವನ ನಡೆಸಬೇಕು." ಆಚಾರ್ಯ ವಿನೋಬಾರವರ ಚಿಂತನದ ರೀತಿ ಇದು.

ನಮ್ಮ ವ್ಯಕ್ತಿತ್ವದ ಶಿಲ್ಪ ಬಾಲ್ಯದಲ್ಲಿನ ಹೃದ್ಗತ ಶ್ರದ್ಧೆಗಳ ಮೂಲಕವೇ ಪುಷ್ಟಿಪಡೆಯುತ್ತ ಸೂಕ್ಷ್ಮಾತಿಸೂಕ್ಷ್ಮ ಸ್ಪಂದನಗಳಿಂದ ರೂಪಿತವಾಗುತ್ತದೆ, ಎಂದು ವಿಜ್ಞಾನ ಸಂಶೋಧಿಸಿದೆ. ಬಾಲ್ಯದ ಆವರಣ ಪ್ರೇಮಮಯ, ಮೈತ್ರಿಪೂರ್ಣ. ಮಾನವೀಯ ಬಾಂಧವ್ಯಗಳು ಅಲ್ಲಿ ನಿರ್ಮಲ ಸರಳ. ಪ್ರೇಮದಿಂದ ಧಾರೆಯೆರೆದ ಮಾರ್ಗದರ್ಶನ ಬಾಲ್ಯದ ಅಮೂಲ್ಯ ನಿಧಿಯಾಗುತ್ತದೆ. ವಿಶ್ವಾಸಪೂರ್ಣ ಮಾನವ ಹೃದಯ ಧವಳಗಂಗೆಯಂತೆ ಹರಿದುಬಂದು ಬಾಲ್ಯದಲ್ಲಿ ಬಾಳಿನ ದಿಕ್ಕನ್ನು ಖಚಿತಗೊಳಿಸುವ ಅಪೂರ್ವ ಘಟನೆಗಳೇ ಈಶ್ವರಪ್ರಣಿಧಾನದ ಪ್ರಥಮ ಪ್ರೇರಕಗಳು. ಬಾಲಕ ಗಾಂಧಿಯ ಅಂತರ್ಯದಲ್ಲಿ ದಾದಿ ರಂಭಾ ಬಿತ್ತಿದ ಪ್ರೇಮಮಯ ರಾಮನಾಮ ಸಂದೇಶ ಬಾಳಿನುದ್ದಕ್ಕೂ ಅವರಿಗೊಂದು ಅಭಯದಾಯಕ ಚೂಡಾಮಣಿಯಾಯಿತು. ಆತ್ಮಕಥೆಯಲ್ಲಿ ಅವರು ಅದನ್ನು ಸ್ಮರಿಸಿಕೊಂಡ ರೀತಿ ಹೃದಯಸ್ಪರ್ಶಿಯಾಗಿದೆ. ಆ ವೇಳೆಗೆ ಪ್ರಬುದ್ಧವಾಗಿ ಬೆಳೆದುನಿಂತ ಅವರ ದೈವಪ್ರಜ್ಞೆ ಆ ದಾದಿಯಿತ್ತ ರಕ್ಷೆಯನ್ನು ಅಲ್ಲಗಳೆಯಲಿಲ್ಲ. ಅವರ ಮಾತುಗಳಿವು: "....ಯಾವುದರಿಂದಲೂ ನಾನು ಪಡೆಯಲಾರದುದನ್ನು ನಮ್ಮ ಕುಟುಂಬದ ವೃದ್ಧಸೇವಕಿಯೂ ದಾದಿಯೂ ಆಗಿದ್ದ ರಂಭಾ ಎಂಬಾಕೆಯ ಪ್ರೇಮದಿಂದ ಪಡೆದೆ. ನನಗೆ ದೆವ್ವಪಿಶಾಚಿಗಳ ಭೀತಿಯಿತ್ತು. ಈ ಭೀತಿ ಪರಿಹಾರವಾಗಲು ರಾಮನಾಮ–ಪುನಶ್ಚರಣೆ ಮದ್ದೆಂದು ರಂಭಾ ಸೂಚಿಸಿದಳು. ರಂಭಾವಿಷಯದಲ್ಲಿ ನನಗೆ ತುಂಬ ನಂಬಿಕೆ ಇತ್ತು. ಅವಳ ಸೂಚನೆಯಂತೆ ರಾಮನಾಮ-ಪುನಶ್ಚರಣೆಗೆ ಆರಂಭಿಸಿದೆ. ಇದು ಕೆಲವು ಕಾಲ ನಡೆದು ನಿಂತುಹೋದರೂ ಬಿತ್ತಿದ ಒಳ್ಳೆಯ ಬೀಜ ನಿಷ್ಫಲವಾಗಲಿಲ್ಲ. ಆ ಸಾಧ್ವಿ ರಂಭಾ ಬಿತ್ತಿದ ಬೀಜದ ಫಲವಾಗಿಯೇ ರಾಮನಾಮ ಇಂದು ನನಗೆ ತಾರಕಮಂತ್ರವಾಗಿದೆ ಎಂದು ಭಾವಿಸುತ್ತೇನೆ...."[10]

ಅಂತರ್ವಾಣಿಯ ಕರೆ

ಮಾನವನ ಮನಸ್ಸು ಎರಡು ಗುರುತ್ವಾಕರ್ಷಣ ಶಕ್ತಿಗಳ ಹೆಚ್ಚುಕಡಮೆ ಸಮಾನಾಂತರ ಸ್ಪಂದನಗಳಿಂದ ಬಂಧಿತವಾಗಿದೆ. ಒಂದು ನೈಸರ್ಗಿಕ ಅಥವಾ ಬಾಹ್ಯದ ಇಂದ್ರಿಯಾನುಭವ, ಮತ್ತೊಂದು ಅಂತರ್ಯದ ಸೂಕ್ಷ್ಮ ವಿವೇಕ. ಈ

[10] ಆತ್ಮಕಥೆ

ಎರಡು ಕಾಲ್ಪನಿಕ ಬಿಂದುಗಳಿಗೆ ಬಲಿಯನ್ನು ಕಟ್ಟಬಿಗಿದ ಜೇಡನಂತೆ ಮನಸ್ಸು ನೆಮ್ಮದಿಯನ್ನು ಬಯಸುತ್ತದೆ. ಆದರೆ ಎರಡೂ ಕಡೆ ಈ ಬಿಂದುಗಳು ಸ್ಥಾಯಿಯಾಗಿ ನಿಲ್ಲವು. ಕಾರಣ ಎರಡೂ ಸಾಪೇಕ್ಷ ತಾಣಗಳೇ. ಆದ್ದರಿಂದಲೇ ಮನಸ್ಸು ಸ್ವಯಂ ನಿರ್ಣಯಕಾರಿ ಸಾಧನವಲ್ಲ ಎಂದು ಸೃಷ್ಟಿನಿಷ್ಠ ತತ್ತ್ವವಾದಿಗಳೂ (ಮೆಟೀರಿಯಲಿಸ್ಟ್ಸ) ಹೇಳುತ್ತಾರೆ, ಅಧ್ಯಾತ್ಮನಿಷ್ಠ ತತ್ತ್ವವಾದಿಗಳೂ ವಾದಿಸುತ್ತಾರೆ. ಸೃಷ್ಟಿಯ ಆಧಾರದಿಂದಲೇ ನಿರ್ಣಯ ಮಾಡಬೇಕು, ಮಿಕ್ಕೆಲ್ಲವೂ ಭಾವಪೂರಿತ ಎಂದೊಬ್ಬರು ತರ್ಕಮಾಡಿದರೆ, ಶಾಶ್ವತ ಶುದ್ಧವಸ್ತು ಎಂದಿಗೂ ಪರಿವರ್ತನಶೀಲ ಭೌತವಸ್ತು ಆಗಲಾರದು, ಆದ್ದರಿಂದ ಆತ್ಮದ ಆಧಾರವೇ ಸರಿ ಎನ್ನುತ್ತಾರೆ ಇನ್ನೊಬ್ಬರು. ಆತ್ಮದ್ದೋ ಸೃಷ್ಟಿಯದೋ ಶುದ್ಧದರ್ಶನವಾದವನಿಗೇ ನಿರ್ಣಯಶಕ್ತಿ; ಚಂಚಲಮನಸ್ಸಿನ ಆಧಾರದ ಮೇಲೆ ಕೆಲಸಮಾಡಿದರೆ ವಿಕಾಸಮಾರ್ಗದಲ್ಲಿ ಕರ್ತೃತ್ವಶಕ್ತಿ ಮೂಡಿಬರಲಾರದು ಎನ್ನುವುದು ಸ್ಪಷ್ಟ. ಗಾಂಧೀಜಿಯವರ ದೃಷ್ಟಿಯಲ್ಲಿ ಕಟ್ಟಕಡೆಗೆ ನಿರ್ಣಯಕಾರಿಯಾಗಿ ಪರಿಣಮಿಸುವುದು ಶುದ್ಧಜೀವನದೊಳಗಿನಿಂದ ಸ್ಪಷ್ಟವಾಗಿ ಕೇಳಿಬರುವ ಅಂತರ್ವಾಣಿಯೇ. ಅದು ಒಂದು ಶುದ್ಧ, ಶಾಶ್ವತ ನಿಯಾಮಕ ಶಕ್ತಿಯ ಕ್ಷೀಣವಾದರೂ ಸ್ಪಷ್ಟ ಪ್ರತಿಧ್ವನಿ: ನಮ್ಮ ವಿವೇಕದೊಳಗಿನ ವಿವೇಕ. ಅನೇಕ ಸಾರಿ ನಮ್ಮ ದುರ್ಬಲ ತರ್ಕಬುದ್ಧಿಗೆ ನಿಲುಕದೆಯೇ ಖಚಿತ ಪರಿಣಾಮಗಳಿಗೆ ಕಾರಣವಾಗುವ ಈ ಶಕ್ತಿ ಭೌತಿಕವಲ್ಲ, ಆಧ್ಯಾತ್ಮಿಕ ಮೂಲದಿಂದಲೇ ಬರುವಂತಹುದು ಎಂಬ ವಿಶ್ವಾಸ ಸ್ವಾನುಭವದಿಂದ ಅವರಿಗೆ ಪ್ರಾಪ್ತವಾಯಿತು. ಅವರ ಮಹಾವ್ಯಕ್ತಿತ್ವದ ಈ ಮುಖ ಸತ್ಯಾನ್ವೇಷಣೆಯ ನಿಸ್ಸೀಮ ವಿಕಾಸಪಥದಲ್ಲಿ ಮಥಿಸಿ ಬಂದ ದಿವ್ಯಾನುಭೂತಿ. ವಿಚಾರ ಮಾಡಿದಷ್ಟೂ ಅದು ಗಹನ, ಗಂಭೀರ. "ನನ್ನ ಮಟ್ಟಿಗೆ ದೇವವಾಣಿ, ವಿವೇಕವಾಣಿ, ಸತ್ಯವಾಣಿ, ಅಂತರ್ವಾಣಿ, ಶಾಂತವಾದ ಅಂತರ್ವಾಣಿ—ಇವೆಲ್ಲ ಒಂದೇ ಅರ್ಥದ ಶಬ್ದಗಳು ....ನನಗೆ ಯಾವ ರೂಪವೂ ಸಾಕ್ಷಾತ್ಕಾರವಾಗಿಲ್ಲ. ಅದಕ್ಕಾಗಿ ನಾನು ಎಂದೂ ಪ್ರಯತ್ನ ಮಾಡಿಲ್ಲ. ಭಗವಂತ ನಿರಾಕಾರಶಕ್ತಿ ಎಂದೇ ನನ್ನ ಸಜೀವ ನಂಬಿಕೆ...."[11]

"....ಪರಮಾತ್ಮನಿಂದ ನಿರ್ದಿಷ್ಟವಾದ ಮಾರ್ಗದರ್ಶನ ಲಭಿಸಬೇಕಾದರೆ ಮಾನವನ ಅಂತಃಕರಣ ಪೂರ್ತಿಯಾಗಿ ಪಾಪರಹಿತವಾಗಬೇಕು. ದುಷ್ಟಭಾವನೆಗಳನ್ನೆಲ್ಲ ತೊಡೆಯುವ ಶಕ್ತಿ ಇರಬೇಕು. ನನ್ನದು ಅಂಥ ಅಧಿಕಾರಕ್ಕಾಗಿ ಹೋರಾಡುವ, ಹೆಣಗುವ, ತಪ್ಪುವ, ಅಪೂರ್ಣ ಜೀವ."

"ಆತ್ಮಶುದ್ಧಿಯನ್ನು ಪಡೆಯಲು ಎಡೆಬಿಡದೆ ಯತ್ನಿಸಿ, ನಾನು ಅಂತರಂಗದಲ್ಲಿ ಮೆಲುದನಿಯನ್ನು ಸ್ಪಷ್ಟವಾಗಿಯೂ, ಯಥಾರ್ಥವಾಗಿಯೂ ಕೇಳುವ ಸಾಮರ್ಥ್ಯವನ್ನು ಕೆಲಮಟ್ಟಿಗೆ ಬೆಳೆಸಿಕೊಂಡಿದ್ದೇನೆ."[12]

---

11 ಧರ್ಮ–ನೀತಿ, ಪು. ೨೩೩

12 ಅದೇ, ಪು. ೨೩೬

"ಒಂದು ಅನುಭವ ನನ್ನ ಸ್ಮೃತಿಪಟಲದಲ್ಲಿ ಸ್ಪಷ್ಟವಾಗಿ ನೆಲೆಸಿದೆ. ಅದು ಅಸ್ಪೃಶ್ಯತಾನಿವಾರಣೆಗಾಗಿ ನಾನು ಕೈಕೊಂಡ ಇಪ್ಪತ್ತೊಂದು ದಿನಗಳ ಉಪವಾಸಕ್ಕೆ ಸಂಬಂಧಿಸಿದುದು. ಮರುದಿನ ಬೆಳಗ್ಗೆ ಉಪವಾಸವನ್ನು ಘೋಷಿಸುವೆನೆಂಬ ಯಾವ ಆಲೋಚನೆಯೂ ಇಲ್ಲದೆ ಹಿಂದಿನ ರಾತ್ರಿ ನಿದ್ರೆ ಮಾಡಿದೆ. ನಡುರಾತ್ರಿಯಲ್ಲಿ ನನ್ನನ್ನು ಯಾರೋ ಎಚ್ಚರಿಸಿದರು. ಒಂದು ಧ್ವನಿ, ಒಳಗಿನದೋ ಹೊರಗಿನದೋ ನಾನರಿಯೆ, "ನೀನು ಉಪವಾಸವನ್ನು ಕೈಕೊಳ್ಳಲೇಬೇಕು" ಎಂದು ಮೆಲ್ಲಗೆ ನುಡಿಯಿತು. "ಎಷ್ಟು ದಿನ?" ಎಂದೆ, "ಇಪ್ಪತ್ತೊಂದು ದಿನ" ಎಂದು ಉತ್ತರ ಬಂತು. "ಎಂದು ಪ್ರಾರಂಭಿಸಲಿ?" ಇದು ನನ್ನ ಪ್ರಶ್ನೆ. "ನಾಳೆ ಪ್ರಾರಂಭಿಸು" ಎಂದಿತು. ನಾನು ಆ ಕ್ಷಣವೇ ನಿರ್ಣಯಿಸಿ ಶಾಂತನಾಗಿ ನಿದ್ರೆಮಾಡಿದೆ. ಬೆಳಗಿನ ಪ್ರಾರ್ಥನೆ ಮುಗಿದೊಡನೆ ಸಂಗಡಿಗರಿಗೆ ನನ್ನ ನಿರ್ಣಯವನ್ನು ಒಂದು ಚೀಟಿಯಲ್ಲಿ ಬರೆದುಕೊಟ್ಟೆ. 'ನನ್ನ ನಿರ್ಣಯವು ಅಚಲವಾದುದು. ಅದನ್ನು ಕುರಿತು ಯಾರೂ ಯುಕ್ತಿತರ್ಕವನ್ನೆತ್ತಕೂಡದು' ಎಂದು ನಾನದರಲ್ಲಿ ತಿಳಿಸಿದ್ದೆ. ಈ ಉಪವಾಸದಲ್ಲಿ ನಾನು ಬದುಕಲಾರೆ ಎಂದು ಡಾಕ್ಟರು ಭಾವಿಸಿದರು. ಆದರೆ ನನ್ನ ಅಂತರಂಗದಲ್ಲಿ ಯಾವುದೋ ಒಂದು ಶಕ್ತಿ 'ನಾನು ಬದುಕಬಹುದು, ನಾನು ಮುಂದುವರಿಯಲೇಬೇಕು' ಎಂದು ಹೇಳಿತು. ನನ್ನ ಜೀವನದಲ್ಲಿ ಅಂಥ ಅನುಭವ ಹಿಂದೆಯಾಗಲೀ ಮುಂದೆಯಾಗಲೀ ಎಂದೂ ಒದಗಲಿಲ್ಲ."[13]

ವಿಜ್ಞಾನವಾಗಲಿ ಆತ್ಮಜ್ಞಾನವಾಗಲಿ ಅರಸುವ ಪರಮಮೌಲ್ಯ ಸತ್ಯ. 'ಸತ್ಯವೇ ದೇವರು' ಎಂದಾಗ ಗಾಂಧೀಜಿ ಈ ವಿಚಾರವನ್ನೇ ದೃಢೀಕರಿಸಿದರು. ನಾಸ್ತಿಕನಾದವನು ಕೂಡ ಸತ್ಯವನ್ನು ನಿರಾಕರಿಸದಿರುವುದರಿಂದಲೇ ಒಂದು ಪರಮಮೌಲ್ಯದ ಭಕ್ತ ಎನಿಸಿಕೊಳ್ಳುತ್ತಾನೆ—ಎಂದು ಗಾಂಧೀಜಿ ತರ್ಕಿಸಿದರು. ಮನುಷ್ಯಪ್ರಯತ್ನಕ್ಕೆ ಮಿಗಿಲಾದ ದೈವೀಶಕ್ತಿಯ ನೆರವು ಅನಗತ್ಯ ಎಂದು ನಾಸ್ತಿಕನಾದವನಿಗೆ ಅನಿಸಿದರೂ ಮಾನವೀಯತೆಯ ಆಧಾರಚಿಲುಮೆಗಳಾದ ಪ್ರೇಮ, ಕರುಣೆ, ಮೈತ್ರಿ ಮತ್ತು ಅಹಿಂಸೆಗಳನ್ನು ಆತನು ಎಂದಿಗೂ ನಿರಾಕರಿಸಲಾರ. ಆದರ್ಶಮಾನವನ ಆದರ್ಶಸಮಾಜದ ಕಟ್ಟಕಡೆಯ ಚಿತ್ರವೊಂದು ಮನಸ್ಸಿನಲ್ಲಿ ಮೂಡಿದಾಗಲೇ, ಅದನ್ನು ಕೈಗೂಡಿಸಿಕೊಳ್ಳುವುದು ಸಾಧ್ಯ ಎಂಬ ಆತ್ಮವಿಶ್ವಾಸ ಸ್ಫುರಣವಾದಾಗಲೇ ಬಾಹ್ಯಕ್ರಿಯೆ ಸಾಧ್ಯ. ಆದ್ದರಿಂದಲೇ ಕೇವಲ ಭ್ರಮಾಧೀನ ಆವೇಶವಾಗಲಿ ಅತಿಮಾನುಷ ಶಕ್ತಿವಿಶೇಷಗಳಾಗಲಿ, ವಾಮಪಂಥದ ದಿಗ್ಭ್ರಮೆಗೊಳಿಸುವ ಸಾಧನೆಗಳಾಗಲಿ ನಮ್ಮ ಆತ್ಮಶಕ್ತಿಯ ನಿರಂತರ ಅಂತರ್ವಾಣಿಯನ್ನು ಕೇಳುವ ಸಾಧನಗಳಲ್ಲ. "ಆ ಧ್ವನಿಯನ್ನು ಕೇಳಬಯಸುವ ಪ್ರತಿಯೊಬ್ಬನೂ ಅದನ್ನು ಕೇಳಬಲ್ಲ. ಆದರೆ ಉಳಿದೆಲ್ಲ ವಿಷಯಗಳಂತೆ ಅದೂ ನಿಶ್ಚಿತವಾದ ಪೂರ್ವ

13 ಅದೇ, ಪು. ೨೩೬-೭

ಸಿದ್ಧತೆಯನ್ನು ಅಪೇಕ್ಷಿಸುತ್ತದೆ....ಆ ಧ್ವನಿಯನ್ನು ಕೇಳುವ ಸಾಮರ್ಥ್ಯ ಬರುವ ಪೂರ್ವದಲ್ಲಿ ಪ್ರತಿಯೊಬ್ಬನೂ ಸುದೀರ್ಘವಾದ, ತಕ್ಕಮಟ್ಟಿಗೆ ಕಠಿಣವಾದ ಅಭ್ಯಾಸ ಕ್ರಮವನ್ನು ಮುಗಿಸಬೇಕು. ಒಮ್ಮೆ ಅಂತರ್ವಾಣಿ ನುಡಿಯಿತೆಂದರೆ ಅಲ್ಲಿ ಸಂದೇಹಕ್ಕೆ ಅವಕಾಶವೇ ಇರುವುದಿಲ್ಲ”[14]—ಇದು ಗಾಂಧೀಜಿಯ ಅನುಭವವಾಣಿ.

ಗಾಂಧೀಜಿ ಈ ಆತ್ಮವಿಚಾರಪ್ರತಿಪಾದನೆಯಲ್ಲಿ ವಾದಮಾಡಿ ಜಯಿಸುವ ಸಾಹಸಕ್ಕೆ ಕೈಹಾಕಿದವರಲ್ಲ. ಪ್ರಾಮಾಣಿಕ ಅನುಭವದ ಸತ್ಯವೇ ಅವರಿಗೆ ಸಾಕ್ಷಿ. ಆತ್ಮಭೂಯಿಷ್ಠವಾದ ನಿತ್ಯಜೀವನದಿಂದ ಸತ್ಯಸಾಕ್ಷಾತ್ಕಾರ ಮಾಡಿಕೊಂಡ ಮಹಾ ತಪಸ್ವಿಗಳೂ ದ್ರಷ್ಟಾರರೂ ವರ್ಣಿಸಿರುವಂತೆ :

> ಪ್ರಾಣೋ ಹ್ಯೇಷ ಯಃ ಸರ್ವಭೂತೈರ್ವಿಭಾತಿ
> ವಿಜಾನನ್ ವಿದ್ವಾನ್ ಭವತೇ ನಾತಿವಾದೀ ।
> ಆತ್ಮಕ್ರೀಡಃ ಆತ್ಮರತಿಃ ಕ್ರಿಯಾವಾನ್
> ಏಷ ಬ್ರಹ್ಮವಿದಾಂ ವರಿಷ್ಠಃ ॥

[ಪ್ರಾಣನೇ ಆದ ಈಶ್ವರ ಸರ್ವಭೂತಗಳಲ್ಲಿ ಪ್ರಕಾಶಿಸುತ್ತಿದ್ದಾನೆ. ಹೀಗೆ ಅರಿತ ವಿದ್ವಾಂಸ ಅತಿವಾದಿಯಾಗುವುದಿಲ್ಲ. ಆತ್ಮಕ್ರೀಡನೂ ಆತ್ಮದಲ್ಲಿಯೇ ರಮಿಸುವವನೂ ಪ್ರಿಯವಂತನೂ ಆದ ಈತನೇ ಬ್ರಹ್ಮವಿದರಲ್ಲಿ ವರಿಷ್ಠ.]

> ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ
> ಸಮ್ಯಗ್‌ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್ ।
> ಅಂತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ
> ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ ॥

[ಈ ಆತ್ಮ ಸತ್ಯನಿಷ್ಠೆ, ತಪಸ್ಸು, ಸಮ್ಯಗ್‌ಜ್ಞಾನ ಮತ್ತು ಬ್ರಹ್ಮಚರ್ಯೆಗಳ ನಿತ್ಯಾನುಷ್ಠಾನದಿಂದ ಲಭ್ಯ. ದೋಷಗಳನ್ನು ದಮನಮಾಡಿಕೊಂಡ ಯತಿಗಳು ಅಂತರ್ಯದಲ್ಲಿ ಈ ಜ್ಯೋತಿರ್ಮಯಿಯಾದ ಶುಭ್ರವಾದ ಆತ್ಮನನ್ನು ನೋಡುವರು.][15]

ಗಾಂಧೀಜಿಗೆ ಅತಿಪ್ರಿಯವಾಗಿದ್ದ ಗೀತೆಯ ಸ್ಥಿತಪ್ರಜ್ಞದರ್ಶನದ ಶ್ಲೋಕಗಳಲ್ಲಿ

ನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ”

ಕಾಸ ಕ್ರಮದಲ್ಲಿ ಸಂಶೋಧನೆ ಮಾಡುತ್ತ

ತಿ ಪುಟ ೨೩೪–೨೩೫

ಡಕ ೩, ಖಂಡ ೧, ಶ್ಲೋಕ ೪–೫

ಮಾಡುತ್ತ ಪ್ರಾಚೀನ ಮಹಾಕಾವ್ಯಗಳಿಗೆ ಚಿರನೂತನ ತೇಜಸ್ಸನ್ನು ತಂದುಕೊಟ್ಟ ಗಾಂಧೀಜಿಯ ಸತ್ಯಶೋಧನೆಯ ಜೀವನಕ್ಕೆ ಅವರ ಅಂತರ್ವಾಣಿಯ ಕರೆಯೇ ದಾರಿದೀಪವಾಯಿತು.

" ಸತ್ಯೇನ ಪಂಥಾ ವಿತತೋ ದೇವಯಾನಃ "

ಅಂಧಶ್ರದ್ಧೆಯೇ ನಾಸಿಕ್ತತೆ

ಮಾನವ ವ್ಯಕ್ತಿತ್ವದ ನೈಸರ್ಗಿಕ ವಿಕಾಸವನ್ನು ಕುಂಠಿತಗೊಳಿಸುವ ಯಾವ ಧರ್ಮಾವಲಂಬನೆಯೂ ಆಧ್ಯಾತ್ಮಿಕ ಸಾಧನೆಯ ಕ್ರಮ ಎನಿಸಿಕೊಳ್ಳಲಾರದು. ಚಿತ್ತಶುದ್ಧಿ, ವ್ಯವಹಾರಸ್ವಚ್ಛತೆ, ಸ್ವಾರ್ಥದಮನ, ಸಾರ್ವತ್ರಿಕ ಮಾನವೀಯತೆ ಇವೇ ಧಾರ್ಮಿಕ ವ್ಯಕ್ತಿಯ ಪ್ರಧಾನ ಲಕ್ಷಣಗಳು. ಇವು ಒಂದು ವಿಶಿಷ್ಟ ಜಾತಿ ಪಂಥದ ಸರ್ವಮಾನ್ಯ ಲಕ್ಷಣಗಳು ಎನ್ನುವುದು ದುರಭಿಮಾನದ ಮಾತು. ಪರಂಪರಾನುಗತ ಸಾಮಾಜಿಕ ವ್ಯವಸ್ಥಾಚೌಕಟ್ಟುಗಳು ಕಾಲಪ್ರವಾಹದಲ್ಲಿ ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡಾಗ ಪ್ರತಿಗಾಮಿ ಶಕ್ತಿಗಳು ಸಾಂಪ್ರದಾಯಿಕತೆಯ ರಕ್ಷಣೆಯ ಹಂಬಲದಿಂದ ಸಾಮಾನ್ಯ ಮಾನವನ ಮುಕ್ತಚಿಂತನವನ್ನು ದಮನಮಾಡಿ ಸಮಾಜವನ್ನು ಅಂಧಶ್ರದ್ಧೆಯ ದಾಸ್ಯಕ್ಕೆ ಗುರಿಮಾಡಿ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತವೆ. ಒಬ್ಬ ವ್ಯಕ್ತಿಯೋ ಒಂದು ವರ್ಗವೋ ಒಂದು ಸಂಸ್ಥೆಯೋ ಕೆಲವು ಸಾರಿ ಒಂದು ರಾಷ್ಟ್ರವೋ ಇಡೀ ಮಾನವಸಮಾಜ ತನ್ನ ಸಾರ್ವಭೌಮ ಅಧಿಕಾರದಡಿಯಲ್ಲಿ ಕುರಿಗಳಂತೆ ಶರಣುಬಂದು ನಡೆದುಕೊಂಡರೆ ಮಾತ್ರ ಅವರ ಉದ್ಧಾರ ಸಾಧ್ಯ ಎಂಬ ನಂಬಕೆಯ ಜಾಲವನ್ನು ಹರಡಿ ನಿಲ್ಲುತ್ತದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ—ಈ ಎಲ್ಲ ಕ್ಷೇತ್ರಗಳಲ್ಲೂ ವಿವಿಧ ಸ್ವರೂಪಗಳಲ್ಲಿ ಹುಟ್ಟಿ ಬೆಳೆದು ಇಂಥ ಶಕ್ತಿಗಳು ಸಮಾಜದ ಪ್ರಗತಿಗಾಮಿ ವಿಕಾಸಮಾರ್ಗವನ್ನು ಕಾಲಕಾಲಕ್ಕೆ ಕಲುಷಿತಗೊಳಿಸುತ್ತಲೇ ಸಾಗಿವೆ. ಧಾರ್ಮಿಕ ಕ್ಷೇತ್ರದಲ್ಲಿ ಭಗವಂತನ ಹೆಸರಿನಲ್ಲಿ ನಡೆಯುತ್ತಿರುವ ಮಾನವ ಶೋಷಣೆ ಇಂಥದೊಂದು ಪಿಡುಗು. ಇಲ್ಲಿ ಶೋಷಕರು ಶೋಷಿತರು ಇಬ್ಬರೂ ಈಶ್ವರಾಭಿಮುಖದಲ್ಲಿ ಸ್ವಾರ್ಥಾಭಿಮುಖಿಗಳು. ಬಾಹ್ಯ ಹಾಗೂ ಆಂತರಿಕ ಭಯೋತ್ಪಾದನೆ, ಅದರೊಡನೆ ಭಯನಿವಾರಣೆಯ ಸುಳ್ಳು ಆಶ್ವಾಸನೆಗಳು; ಮಾನವಾತೀತ ಮಹಾಶಕ್ತಿಗಳು ತಮ್ಮ ಆಜ್ಞಾಧೀನ ಸೇವಕರಂತೆ ತಮ್ಮ ವಿಶಿಷ್ಟ ಭಕ್ತವೃಂದವನ್ನು ಮಾತ್ರ ಲೌಕಿಕ ನೆಮ್ಮದಿಯಲ್ಲಿಟ್ಟು ಕಾಪಾಡುತ್ತವೆ ಎನ್ನುವ ವ್ಯಾಪಾರೀ ಧಾರ್ಮಿಕತೆ—ಇವು ಅಂಧಶ್ರದ್ಧೆಯ ಮೂಲಕಾರಣಗಳು. ಇಲ್ಲಿ ದೇವರ ದಳ್ಳಾಳಿಗಳೇ ಅಧಿಕಾರ ನಡೆಸುವವರು. ಯಾವ ಸಂಯಮ ಜೀವನವನ್ನೂ ಇಚ್ಛಿಸದ ಪಶುಜೀವನದ ಪರಿಣಾಮವಾಗಿ ದೈಹಿಕ ಮತ್ತು ಮಾನಸಿಕ ನೋವುಗಳನ್ನನುಭವಿಸುವ ಬಹುಸಂಖ್ಯಾತ ಮಾನವರು ಬಹುಸುಲಭವಾದ ಪರಿಹಾರ

ವೆಂದು ಮರೆಹೊಗುವ ಕುರುಡುಪಂಥಗಳಿಂದ ಅನೇಕ ಧಾರ್ಮಿಕ ಸಂಸ್ಥೆಗಳು ಅವನತಿಯ ದಾರಿ ಹಿಡಿದಿವೆ. ಗಾಂಧೀಜಿಯ ದೃಷ್ಟಿಯಲ್ಲಿ ಇದು ಭಗವಂತನನ್ನು ನಿರಾಕರಿಸಿ ಸಾಮಾನ್ಯ ಮಾನವನ ಸರಳ ನಂಬಿಕೆಗಳ ದುರ್ಲಾಭ ಪಡೆಯುವ ಪ್ರಯತ್ನ. ಆದ್ದರಿಂದಲೇ ಅದನ್ನು ನಾಸ್ತಿಕತೆ ಎಂದರು. ನಾಮಸ್ಮರಣೆಗೆ ಮಂತ್ರ ತಂತ್ರಗಳ ಮುಸುಕು ಹಾಕಿ ಜನರನ್ನು ಹಳ್ಳಕ್ಕೆ ತಳ್ಳುವುದನ್ನು ಹೆಜ್ಜೆ ಹೆಜ್ಜೆಗೂ ಅವರು ವಿರೋಧಿಸಿದ್ದಾರೆ.

"ದೇವರು ಮನುಷ್ಯನಿಗಾಗಿ ಪ್ರಕೃತಿನಿಯಮಗಳನ್ನು ಮಾಡಿದ್ದಾನೆ. ಅದನ್ನು ತಿಳಿದು ಅದರಂತೆ ನಡೆಯುವುದು ದೇವರನ್ನು ಮನಸಾರೆ ನೆನೆಯುವ ಮನುಷ್ಯನ ಕರ್ತವ್ಯ.

ತನ್ನ ಮನಸ್ಸನ್ನು ಬಿಗಿಹಿಡಿಯಲಾರದವನು, ಪಶುವೃತ್ತಿಗಳನ್ನು ದಮನ ಮಾಡಿ ಸಂಯಮಜೀವನವನ್ನು ನಡೆಸಲಾಗದವನು ರಾಮನಾಮವನ್ನು ಎಷ್ಟು ಉಚ್ಚರಿಸಿದರೂ ವ್ಯರ್ಥ!"[16]

ರೋಗಚಿಕಿತ್ಸೆಗೆ ರಾಮನಾಮ ದಿವ್ಯೌಷಧಿ ಎಂದು ಪ್ರತಿಪಾದಿಸುವಾಗ ಗಾಂಧೀಜಿ ಯಾವ ಅಂಧಶ್ರದ್ಧೆಯನ್ನೂ ನಂಬಿ ನಡೆಯಲಿಲ್ಲ. ಜೀವಂತ ದೇಹ ಕೇವಲ ಅವಯವಗಳ ಸಂಕಲನ ಅಲ್ಲ. ಅದರೊಳಗಿನ ಚೇತನದ ಪೂರ್ಣ ಸಹಕಾರವಿಲ್ಲದೆ ಬಾಹ್ಯಚಿಕಿತ್ಸೆ ಏನೂ ಪ್ರಯೋಜನವಾಗದು. ಶುದ್ಧ ಆಧ್ಯಾತ್ಮಿಕ ಸಾಧನೆಯಿಂದ ನೋವನ್ನು ನಿವಾರಣೆ ಮಾಡಿಕೊಳ್ಳುವ ಆಂತರಿಕ ಧೃತಿಶಕ್ತಿ ನೂರ್ಮಡಿ ಹೆಚ್ಚುತ್ತದೆ. ರಾಮನಾಮಸ್ಮರಣೆ ಇಂಥ ಸಾಧನಕ್ರಿಯೆ. ಈ ಜ್ವಲಂತ ಶ್ರದ್ಧೆಯೇ ಬೇರೆ, ಅಂಧಶ್ರದ್ಧೆಯೇ ಬೇರೆ. ಆಧುನಿಕ ವೈದ್ಯವಿಜ್ಞಾನ ಈಚೆಗೆ ಮನಶ್ಶಾಸ್ತ್ರವನ್ನವಲಂಬಿಸಿ ಚಿಕಿತ್ಸಾಕ್ರಮ ರೂಪಿಸುತ್ತಿರುವುದೂ ಒಂದು ಸಾಕ್ಷಿ. ತಮ್ಮ 'ಮತಧರ್ಮದ ಪುನರುಜ್ಜೀವನ' (ರಿಕವರಿ ಆಫ್ ಫೇತ್) ಗ್ರಂಥದಲ್ಲಿ ಡಾ. ಎಸ್. ರಾಧಾಕೃಷ್ಣನ್ ಆಧುನಿಕ ಸಮಾಜದ ನೈತಿಕ ದುರ್ಬಲತೆಯ ಕಾರಣಗಳನ್ನು ವಿವೇಚನೆ ಮಾಡುತ್ತಾ ಹೀಗೆಂದಿದ್ದಾರೆ:

"ಅಧಿಕಾರವಾಣಿಯ ಮತಧರ್ಮಗಳು ಒಂದು ಕೊನೆ, ನಾಸ್ತಿಕ್ಯ ಮತ್ತೊಂದು ಕೊನೆ. ಇವು ಪರಸ್ಪರ ವಿರೋಧವಾದವುಗಳಾದರೂ ಒಂದೇ ರೀತಿಯ ಅಂಧಶ್ರದ್ಧೆಗೆ ಬಲಿಯಾಗಿವೆ. ಮಾನವನ ಇಚ್ಛಾಸ್ವಾತಂತ್ರ್ಯವನ್ನಾಗಲಿ ಅವನ ಕರ್ತೃತ್ವವನ್ನಾಗಲೀ ಇವು ಒಪ್ಪುವುದಿಲ್ಲ. ಮಾನವನ ಅಭಿಕ್ರಮಕ್ರಿಯೆಯನ್ನು ಕಡೆಗಣಿಸುವುದಲ್ಲದೆ ಮನುಷ್ಯತ್ವವನ್ನೇ ನಿರಾಕರಿಸುವ ಅಂಚಿಗೆ ಒಯ್ಯುತ್ತವೆ. ಅತಿಯಾಗಿ ಹೋಗುವ ಸರ್ವಾಧಿಕಾರವಾದಗಳಲ್ಲಿ, ಅದು ಧಾರ್ಮಿಕವಾಗಲಿ ರಾಜಕೀಯವಾಗಲಿ, ಮನುಷ್ಯನನ್ನು ಪ್ರಚೋದನೆಗಳಿಗೆ ಒಳಗಾಗುವ ಯಂತ್ರಗಳಂತೆ

---

16 ರಾಮನಾಮ, ಪು. ೭೩.

ಪರಿವರ್ತಿಸುವ ಪ್ರಯತ್ನವಿದೆ. ಮನುಷ್ಯರು ಮುಖಂಡರ ಕಟ್ಟಪ್ಪಣೆಗಳಿಗೆ ಬಲಿಯಾಗುವ ಕೀಲುಗೊಂಬೆಗಳಾಗುತ್ತಾರೆ."

ಜೀವನವೇ ಪರಮಮೌಲ್ಯ

ಗಾಂಧೀದರ್ಶನದ ಪ್ರಕಾರ ಜೀವನದ ಜೀವಶ್ರುತಿ ಸತ್ಯಕ್ಕಾಗಿ ಆಗ್ರಹ. ಸತ್ಯಾಗ್ರಹ ಜೀವನವೇ ಸಾರ್ಥಕ ಜೀವನ. ಸತ್ಯಾಗ್ರಹಿಯಾದವನು ಮೊದಲು ಸತ್ಯಗ್ರಾಹಿ (ಸತ್ಯವನ್ನು ಕಂಡುಕೊಳ್ಳುವವನು) ಆಗಬೇಕು. ಬಾಳಿನಲ್ಲಿ ಅಹಿಂಸೆಯನ್ನು ಪರಮ ಧರ್ಮವನ್ನಾಗಿ ಅಂಗೀಕರಿಸಿದಾಗ ಸತ್ಯದರ್ಶನ ಸುಲಭವಾದೀತು. ಅವರವರ ಪರಿಸರದಲ್ಲಿ ಅವರವರ ಆದರ್ಶಸಾಧನೆಯ ತೀವ್ರತೆಯನ್ನನುಸರಿಸಿ ಒಂದು ಸಾಪೇಕ್ಷ ಸತ್ಯ ದೃಢವಾಗಿ ಬೇರೂರಿ ನಿಲ್ಲುತ್ತವೆ. ಅದರ ಸಾಕ್ಷಾತ್ಕಾರದ ಸಾಧನೆ ಜೀವನದ ಸರ್ವಕ್ಷೇತ್ರಗಳನ್ನೂ ಆವರಿಸಿ ನಿಲ್ಲುತ್ತದೆ. ವ್ಯಕ್ತಿ ತನ್ನ ಪೂರ್ಣತೆಯ ಅರಿವನ್ನುಂಟು ಮಾಡಿಕೊಳ್ಳಲು ಇರುವ ಸಾಧನೆ ಒಂದೇ: ಸಮಷ್ಟಿಯಲ್ಲಿ ಸಂಪೂರ್ಣ ಸಾಮರಸ್ಯ ಸಾಧನೆ. ಬಾಳಿನಿಂದ ವಿಮುಖನಾದಾಗ ಸತ್ಯಸಾಕ್ಷಾತ್ಕಾರ ಹೆಚ್ಚು ಸುಲಭವಾದೀತು ಎಂದು ಗಾಂಧೀಜಿ ಒಪ್ಪಲಿಲ್ಲ. ಇಡೀ ಜೀವನವೇ ಕ್ರಿಯಾತ್ಮಕ ಸತ್ಯ ಶೋಧನೆಯ ಕ್ಷೇತ್ರ. ದೇಹದ ಮೂಲಕವೇ ಆತ್ಮವಿಕಾಸ! ಆದರೂ ಆತ್ಮಶ್ರೀಯ ಪರಮಸಾನ್ನಿಧ್ಯದಲ್ಲಿ ದೇಹ ಜಡ, ನಶ್ವರ, ಮಿಥ್ಯ. ವ್ಯಕ್ತಿಗೂ ಸಮಾಜಕ್ಕೂ ಇರುವ ಬಾಂಧವ್ಯವೂ ಇದೇ ರೀತಿಯದು. ಸಮಾಜಸೇವೆಯ ಮೂಲಕವೇ, ವ್ಯಕ್ತಿಸೇವೆಯ ಮೂಲಕವೇ ವ್ಯಕ್ತಿವಿಕಾಸ. ಆಧ್ಯಾತ್ಮಿಕಸಾಧನೆಗೆ ನಮಗಿರುವ ಮಾರ್ಗ ನಿಷ್ಕಾಮ ಸೇವೆ. ಬದುಕಿರುವ ಒಂದೊಂದು ಕ್ಷಣವೂ ನೈತಿಕ ನಿರ್ಮಲತೆಯ ಸಂತತ ಸ್ರೋತದಂತೆ ಹರಿದಾಗ ಜೀವನವೇ ಆತ್ಮೋದ್ಧಾರಕ ಮಹಾವ್ರತವಾಗುತ್ತದೆ. ಭಗವಂತನ ನಿರಂತರ ನೆನಪು ನಮ್ಮ ದೌರ್ಬಲ್ಯಗಳನ್ನು ಮೀರಿ ನಿಲ್ಲುವ ಶಕ್ತಿ ಚಿಲುಮೆಯಾಗಿ ಪರಿಣಮಿಸಿದರೆ ಮಾತ್ರ ಅದು ನಿಜವಾದ ಭಕ್ತಿ ಎನಿಸಿಕೊಳ್ಳುತ್ತದೆ. ಭಗವಂತ ಅಂದರೆ ಗಾಂಧೀಜಿಗೆ ಪರಿಪೂರ್ಣ ಪ್ರೇಮ, ಪರಿಪೂರ್ಣ ಅಹಿಂಸೆ, ಪರಿಪೂರ್ಣ ಸತ್ಯ. ದಿನದಿನವೂ ಪರಿಪೂರ್ಣದೆಡೆಗೆ ನಡೆಯಲು ಹಂಬಲಿಸಿ ಹಾತೊರೆವ ಜೀವಕ್ಕೆ "ಸರ್ವವ್ಯಾಪಕವಾದ, ಶರ್ವಶಕ್ತವಾದ ಮಹಾಶಕ್ತಿಯನ್ನು ಹೃದಯ ಭೂಯಿಷ್ಠವನ್ನಾಗಿ ಮಾಡಿಕೊಂಡಾಗ ಸ್ಫುರಿಸಿಬರುವ ತೇಜಸ್ಸೂ ಕಾರ್ಯಶಕ್ತಿಯೂ ಭೌತಿಕಶಕ್ತಿಗಳಾದ ವಿದ್ಯುಚ್ಛಕ್ತಿ ಅಥವಾ ಆವಿಯ ಶಕ್ತಿಗಳಂತೆಯೇ. ಆದರೆ ಅದು ಸೂಕ್ಷ್ಮತಮ ಸ್ಪಂದನತರಂಗಗಳಂತೆ ವ್ಯಾಪಿಸಿ ನಿಂತು ಅಜೇಯಶಕ್ತಿಯ ಅನುಭವವನ್ನು ತಂದುಕೊಡುತ್ತದೆ."[17]

ಗಾಂಧೀಜಿಯ ದೈವಶ್ರದ್ಧೆ ಜೀವನನಿರಾಕರಣೆಯ ಶುಷ್ಕಪಥವಲ್ಲ, ಸಾರ್ಥಕ ಬಾಳಿನ ಸಚೇತನ ಶ್ರದ್ಧೆ. ಇಲ್ಲಿ ಬಾಳಿ ಅಲ್ಲಿ ಸಲ್ಲುವುದೇ ದೈವನಿಯಮ ಎಂದು ಬಾಳಿ ತೋರಿಸಿದ ಆಧುನಿಕ ಮಹಾಪ್ರವಾದಿ ಮಹಾತ್ಮಾಗಾಂಧೀ.

---

[17] *In Search of the Suprme*, M. K. Gandhi, Pp. 144

ಗಾಂಧಿ ಕಂಡ ದೇವರು

ಪ್ರತಿಯೊಂದನ್ನೂ ವ್ಯಾಪಿಸಿರುವ ಒಂದು ವಿವರಣಾತೀತ ರಹಸ್ಯಸತ್ತ್ವವುಂಟು. ನನ್ನ ಭಾವಕ್ಕೆ ಅದು ಬರುತ್ತದೆ, ಅದನ್ನು ನಾನು ಈಕ್ಷಿಸದಿದ್ದರೂ. ಈ ಅಗೋಚರ ಸತ್ತ್ವ ಭಾವಗ್ರಹಿಕೆಗೆ ಸಿಕ್ಕಿದರೂ ಸಮರ್ಥನೆಯನ್ನೆಲ್ಲ ಮೂದಲಿಸುತ್ತದೆ ಅದು; ಏತಕ್ಕೆಂದರೆ, ನನ್ನ ಜ್ಞಾನೇಂದ್ರಿಯಗಳ ಮೂಲಕ ನಾನು ಅವಲೋಕಿಸುವುದೆಲ್ಲಕ್ಕಿಂತಲೂ ಅದು ತೀರ ವಿಭಿನ್ನ. ಅದು ಇಂದ್ರಿಯಾತೀತ.

ಯಥಾರ್ಥ ಸಂಗತಿಯೇನೆಂದರೆ, ದೇವರೇ ಆ ಶಕ್ತಿ. ಅವನು ಜೀವನದ ತಿರುಳು. ಅವನು ಕಳಂಕರಹಿತವಾದ ಪರಿಶುದ್ಧ ಪ್ರಜ್ಞೆ. ಅವನೆಂದಿಗೂ ಇರುವ. ಆದರೂ ಎಂಥ ಸೋಜಿಗ, ಆ ಸರ್ವವ್ಯಾಪಿಯಾದ ಜೀವಂತ ಸನ್ನಿಧಿಯಿಂದ ಹಿತವನ್ನಾಗಲೀ, ಆ ಸನ್ನಿಧಿಯೊಳಗೆ ಆಶ್ರಯವನ್ನಾಗಲೀ, ಎಲ್ಲರೂ ಪಡೆಯಲು ಶಕ್ಯರಲ್ಲ. ವಿದ್ಯುತ್ತು ಒಂದು ಸಮರ್ಥ ಶಕ್ತಿ. ಎಲ್ಲರೂ ಅದರಿಂದ ಪ್ರಯೋಜನ ಹೊಂದಲಾರರು. ನಿಯಮಗಳನ್ನು ಅನುಸರಿಸಿದರೆ ಮಾತ್ರ ಉತ್ಪತ್ತಿ ಮಾಡಬಹುದು ಅದನ್ನು. ಅದೊಂದು ನಿರ್ಜೀವ ಶಕ್ತಿ. ಅದರ ನಿಯಮಗಳ ತಿಳಿವಳಿಕೆಯನ್ನು ಗಳಿಸುವುದಕ್ಕೆ ಎಷ್ಟು ಬೇಕೋ ಅಷ್ಟು ಶ್ರದ್ಧೆಯಿಂದ ಶ್ರಮಿಸಿದಲ್ಲಿ ಅದನ್ನು ಉಪಯೋಗಿಸಿಕೊಳ್ಳಬಲ್ಲ ಮನುಷ್ಯ. ಅದೇ ಮೇರೆಗೆ ನಾವು ದೇವರೆಂದು ಅಂಕಿತ ಮಾಡುವ ಜೀವಂತ ಶಕ್ತಿಯಿಂದ ಉಪಯೋಗ ಪಡೆಯಬಹುದು; ಎಂದರೆ, ಆತನನ್ನು ನಮ್ಮೊಳಗೆ ಅರಸಿ ಕಾಣುವುದಕ್ಕೆ ನಮ್ಮನ್ನು ಕೊಂಡೊಯ್ಯುವ ಆತನ ಶಾಸನವನ್ನು ಅರಿತು ಹಿಂಬಾಲಿಸಬೇಕು.[1]

---

1 ಧರ್ಮ-ನೀತಿ, ಗಾಂಧೀ ಗ್ರಂಥಮಾಲೆ–೫, ಪು. ೧೭೪–೬

ಅ. ಪು. ಶ್ರೀನಿವಾಸಮೂರ್ತಿ

ದೀರ್ಘಾವಧಿ ಕೃಷಿಸಾಲ : ಭೂ ಅಭಿವೃದ್ಧಿ ಬ್ಯಾಂಕುಗಳ ಪಾತ್ರ[1]

ಪುರಾತನ ಮಾದರಿ ಕೃಷಿ ವ್ಯವಸ್ಥೆ ಆಧುನಿಕ ವ್ಯವಸ್ಥೆಯಾಗಿ ಪರಿವರ್ತನೆಯಾಗುವುದರಲ್ಲಿ ದೀರ್ಘ ಕಾಲಾವಧಿ ಸಾಲದ ಪಾತ್ರ ಮಹತ್ತ್ವವಾದುದು. ತುಂಡು ಜಮೀನುಗಳನ್ನು ಕೂಡಿಸಿ ಆರ್ಥಿಕ ಹಿಡುವಳಿಯಾಗಿ ಮಾಡಿ, ಈ ಜಮೀನಿನಲ್ಲಿ ಆಧುನಿಕ ರೀತ್ಯಾ ವ್ಯವಸಾಯ ಕ್ರಮಗಳನ್ನು ಅನುಸರಿಸಬೇಕಾದರೆ ಬಹುಮಟ್ಟಿಗೆ ಬಂಡವಾಳ ಕಾರ್ಯಗಳು ನೆರವೇರಬೇಕಾಗುತ್ತದೆ. ಸುತ್ತು ಬೇಲಿ, ಕಟ್ಟಡಗಳು, ಯಂತ್ರೋಪಕರಣಗಳು, ವಾಹನಗಳು, ನೀರಾವರಿ ನಾಲೆಗಳು, ಹೊಸದಾಗಿ ಭೂಮಿ ಸಾಗುವಳಿಗೆ ತರುವುದು—ಇತ್ಯಾದಿ ಅನೇಕ ಕಾರ್ಯಾಚರಣೆಗಳಿಗೆ ಹೆಚ್ಚು ಹಣ ಬೇಕು. ಇದನ್ನು ಒದಗಿಸುವುದರಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳ ಪಾತ್ರ ಮುಖ್ಯವಾದದ್ದು. ಇವು ಒದಗಿಸುವ ಸಾಲದ ಅವಧಿ ಸಾಮಾನ್ಯವಾಗಿ ೧೦ ವರ್ಷಗಳಿಗೂ ಮೀರುವುದರಿಂದ ಇದನ್ನು ದೀರ್ಘಕಾಲಾವಧಿ ಸಾಲವೆಂದು ಹೇಳಲಾಗಿದೆ.

ಪ್ರಥಮತಃ ಗಮನಾರ್ಹವಾದ ವಿಷಯ ಒಂದುಂಟು : ಭಾರತದಲ್ಲಿ ರೈತರ ಋಣ ಬಹುಕಾಲದಿಂದ ನಡೆದುಬಂದ ಸಮಸ್ಯೆಯಾಗಿದೆ. ಮುಖ್ಯವಾಗಿ ಈ ಸಮಸ್ಯೆಯ ಪರಿಹಾರಕ್ಕೆಂದೇ ಭೂ ಅಡಮಾನ ಬ್ಯಾಂಕುಗಳು ಸ್ಥಾಪಿತವಾದುವು. ಇತ್ತೀಚಿನ ವರ್ಷಗಳಲ್ಲಿ ಪರಂಪರೆಯಾಗಿ ಬಂದ ಋಣದ ವಿಮೋಚನೆ ಮಾತ್ರವೇ ಅಲ್ಲದೆ ಆಧುನಿಕ ವ್ಯವಸಾಯಕ್ಕೆ ಅನುವುಮಾಡುವಂತೆ ಭೂ ಅಭಿವೃದ್ಧಿಗೊಳಿಸುವುದು ಮುಖ್ಯೋದ್ದೇಶವಾದುದರಿಂದ ಹಿಂದೆ ಭೂ ಅಡಮಾನ ಬ್ಯಾಂಕುಗಳೆಂದು ಕರೆಯಲಾಗುತ್ತಿದ್ದ ಸಂಸ್ಥೆಗಳನ್ನು ಭೂ ಅಭಿವೃದ್ಧಿ ಬ್ಯಾಂಕುಗಳೆಂದು ಸಂಬೋಧಿಸಿರುವುದು ಉಚಿತವೇ ಆಗಿದೆ.

---

[1] ಈ ಲೇಖನದಲ್ಲಿ ಕೊಟ್ಟಿರುವ ಸಂಖ್ಯಾವಿವರಗಳಿಗೆ ಭಾರತದ ರಿಸರ್ವ್ ಬ್ಯಾಂಕಿನ ಪ್ರಕಟಣೆಗಳಾದ '*Statistical Tables Relating to Co-operative Banks in India, 1967–68*' ಮತ್ತು '*Report of the All-India Rural Credit Reveiw Committee*'—ಇವು ಆಧಾರವಾಗಿವೆ.

ರಚನೆ

ಭಾರತದಲ್ಲಿ ೧೯೬೭–೬೮ರಲ್ಲಿ ೪೨೮ ಶಾಖೆಗಳು ಅಥವಾ ಕಚೇರಿಗಳನ್ನುಳ್ಳ ೧೯ ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳೂ, ೨೧೩ ಶಾಖೆಗಳನ್ನುಳ್ಳ ೭೧೯ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೂ ಇದ್ದುವು.[2] ಬಿಹಾರ, ಗುಜರಾತ್, ಜಮ್ಮು-ಕಾಶ್ಮೀರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಮತ್ತು ಹಿಮಾಚಲ ಪ್ರದೇಶ, ಪಾಂಡಿಚೆರಿ ಮತ್ತು ತ್ರಿಪುರ ಕೇಂದ್ರಾಡಳಿತ ಪ್ರದೇಶಗಳಲ್ಲಿ ಏಕೀಯ (ಯೂನಿಟರಿ) ರಚನೆಯೂ, ಉಳಿದ ಸಂಸ್ಥಾನಗಳಲ್ಲಿ ಸಂಯುಕ್ತ (ಫೆಡರಲ್) ಮಾದರಿಯ ರಚನೆಯೂ ಇವೆ. ಏಕೀಯ ರಚನೆಯಲ್ಲಿ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕಿಗೆ ವಿವಿಧ ಕೇಂದ್ರಗಳಲ್ಲಿ ಶಾಖೆಗಳಿರುತ್ತವೆ. ಆಂದಮೇಲೆ ಈ ಶಾಖೆಗಳು ಆಡಳಿತ ಘಟಕಗಳು ಮಾತ್ರವಾಗಿದ್ದು ಎಲ್ಲ ವಿಷಯಗಳಲ್ಲಿ ಮಾತೃಸಂಸ್ಥೆಗೆ ಅಧೀನ. ಸಂಯುಕ್ತ ವ್ಯವಸ್ಥೆಯಲ್ಲಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಕಾನೂನು ರೀತ್ಯಾ ಒಂದೊಂದೂ ಒಂದೊಂದು ಪ್ರತ್ಯೇಕ ಸಂಸ್ಥೆ. ಆದರೆ ಇವು ಆಯಾ ಸಂಸ್ಥಾನದ ಕೇಂದ್ರ ಅಭಿವೃದ್ಧಿ ಬ್ಯಾಂಕುಗಳ ಸದಸ್ಯಘಟಕಗಳಾಗಿರುತ್ತವೆ. ಸಂಯುಕ್ತ ವ್ಯವಸ್ಥೆಯಲ್ಲಿ ಏಕೀಯ ರಚನೆಗಿಂತಲೂ ಹೆಚ್ಚಿನ ವಿಕೇಂದ್ರೀಕರಣಕ್ಕೆ ಅವಕಾಶವಿರುವುದರಿಂದ ಆ ವ್ಯವಸ್ಥೆಯೇ ಉತ್ತಮವೆಂದು ಹೇಳಲಾಗಿದೆ. ಒಟ್ಟಿನಲ್ಲಿ ಅದೇ ಹೆಚ್ಚು ಪ್ರಯೋಜನಕಾರಿ ಎಂಬುದು ಸಮೀಕ್ಷಾ ಸಮಿತಿಯ[3] ಅಭಿಪ್ರಾಯ.

ಷೇರು ಬಂಡವಾಳ

ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳ ಹಣಬಲ ಷೇರು ಬಂಡವಾಳ, ಸಾಲ ತೀರುವೆ ನಿಧಿ, ಡಿಬೆಂಚರ್ ಮೂಲಕ ಎತ್ತುವ ಸಾಲ, ರಿಸರ್ವ್ ಬ್ಯಾಂಕಿನಿಂದ ಪಡೆಯುವ ಸಾಲ ಮತ್ತು ಸರ್ಕಾರದಿಂದ ಪಡೆಯುವ ಮುಂಗಡ ಅಥವಾ ಪ್ರೋತ್ಸಾಹಧನ ಇವುಗಳಿಂದ ಕೂಡಿರುವುದಾಗಿದೆ. ಪ್ರಾಥಮಿಕ ಬ್ಯಾಂಕುಗಳ ಹಣಬಲವೆಂದರೆ ಷೇರು ಹಣ, ಮೀಸಲು (ರಿಸರ್ವ್) ಹಣ ಮತ್ತು ಕೇಂದ್ರೀಯ ಬ್ಯಾಂಕುಗಳಿಂದ ಪಡೆಯಲಾಗುವ ಸಾಲ ಇವು.

೧೯೬೮ರ ಜೂನ್ ೩೦ರಂದು ದೇಶದ ೧೯ ಕೇಂದ್ರೀಯ ಬ್ಯಾಂಕುಗಳ ಷೇರು

---

[2] ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳನ್ನು 'ಕೇಂದ್ರೀಯ ಬ್ಯಾಂಕುಗಳು' ಎಂದೂ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳನ್ನು 'ಪ್ರಾಥಮಿಕ ಬ್ಯಾಂಕುಗಳು' ಎಂದೂ. ಸಂಬೋಧಿಸಲಾಗುವುದು.

[3] Reserve Bank of India, *Report of the All-India Rural Credit Review Committee*, 1969

ಹಣ ಒಟ್ಟು ರೂ. ೨೪.೪೮ ಕೋಟಿ ಆಗಿದ್ದಿತು; ಇದರಲ್ಲಿ ರೂ. ೬೭ ಕೋಟಿ ಅಂದರೆ ಸೇಕಡ ೨೭.೩ರಷ್ಟು ಹಣ ಸರ್ಕಾರ ಹಾಕಿದ್ದ ಷೇರು ಹಣವಾಗಿದ್ದಿತು. ಇದೇ ದಿನಾಂಕದಂದು ದೇಶದಲ್ಲಿದ್ದ ೭೩೧ ಪ್ರಾಥಮಿಕ ಬ್ಯಾಂಕುಗಳ ಷೇರು ಹಣ ರೂ. ೧೮.೬೯ ಕೋಟಿ ಆಗಿದ್ದಿತು.

ಸದಸ್ಯರ ಷೇರು ಹಣ, ಅವರು ಪಡೆಯಬಹುದಾದ ಸಾಲದ ಮೊತ್ತ ಇವುಗಳೊಳಗೆ ನಿರ್ದಿಷ್ಟ ಪ್ರಮಾಣವಿರಬೇಕೆಂಬ ನಿಯಮವಿರುವುದರಿಂದ ಷೇರು ಹಣ ಜಮಾವಣೆ ಅನುಕೂಲವಾಗಿದೆ ಪ್ರಾಥಮಿಕ ಮಟ್ಟದಲ್ಲಿ ಈ ಪ್ರಮಾಣ ಸಾಮಾನ್ಯವಾಗಿ ೧: ೨೦ ಆಗಿದೆ; ಅಂದರೆ ಸದಸ್ಯರ ಷೇರಿನ ಮೊತ್ತ ಅವರ ಸಾಲದ ಸೇಕಡ ೫ರಷ್ಟಾದರೂ ಆಗಿರಬೇಕು. ಕೆಲವು ರಾಜ್ಯಗಳಲ್ಲಿ ಹೆಚ್ಚು ಪ್ರಮಾಣವಿದೆ: ಉದಾ: ಮಹಾರಾಷ್ಟ್ರದಲ್ಲಿ ಸೇ. ೧೦ರಷ್ಟಿದೆ. ಕೆಲವೆಡೆಗಳಲ್ಲಿ ಸಾಲದ ಮೊತ್ತ ಹೆಚ್ಚಿದಂತೆ ಸಾಲಗಾರರು ಹೊಂದಿರಬೇಕಾದ ಷೇರು ಹಣದ ಪ್ರಮಾಣವೂ ಹೆಚ್ಚಾಗಿರಬೇಕೆಂಬ ವಿಧಿಯುಂಟು. ಉದಾ: ಗುಜರಾತಿನಲ್ಲಿ ೫,೦೦೦ ರೂ.ಗಳ ವರೆಗಿನ ಸಾಲ ಪಡೆಯುವವರು ಅದರ ಸೇ. ೫ರಷ್ಟು ಷೇರು ಹಣವನ್ನೂ ರೂ. ೫,೦೦೦ಕ್ಕೆ ಮೇಲ್ಪಟ್ಟ ಮೊಬಲಗಿನ ಸಾಲ ಪಡೆದವರು ಅದರ ಸೇ. ೭½ ಗೆ ಸಮನಾದ ಷೇರು ಹಣವನ್ನೂ ಹಾಕಿರಬೇಕೆಂಬ ನಿಯಮವಿದೆ. ಇದು ಅಪೇಕ್ಷಣೀಯ ಪದ್ಧತಿ ಎಂದು ಸಮೀಕ್ಷಾ ಸಮಿತಿ ಅಭಿಪ್ರಾಯಪಟ್ಟಿದೆ.

ಕೇಂದ್ರೀಯ ಬ್ಯಾಂಕುಗಳ ಷೇರು ಹಣದ ಪ್ರಮಾಣ ಪ್ರಾಥಮಿಕ ಬ್ಯಾಂಕು ಪಡೆಯುವ ಸಾಲ ಹಣದ ಸೇ. ೪ರಷ್ಟು ಇರಬೇಕೆಂದು ಸಿಗದಿಮಾಡಲಾಗಿದೆ.

ಸಾಲ-ಷೇರುಗಳ ಪ್ರಮಾಣ ಗೊತ್ತುಮಾಡುವ ಈ ಮೇಲಿನ ಅಭ್ಯಾಸ ಷೇರು ಹಣ ಜಮಾವಣೆ ಮಾಡಲು ಸಹಾಯಕವಾಗಿದೆ. ಒಟ್ಟಿನಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳ ಷೇರು ಬಂಡವಾಳ ೧೯೬೦-೬೧ರಲ್ಲಿ ಸುಮಾರು ೮½ ಕೋಟಿ ಇದ್ದುದು ೧೯೬೭-೬೮ರಲ್ಲಿ ರೂ. ೪೨ ಕೋಟಿ ಆಯಿತು. ಅಲ್ಪಾವಧಿ ಸಾಲ ಕೃಷಿ ಸಹಕಾರಿ ಸಂಸ್ಥೆಗಳ ಷೇರು ಬಂಡವಾಳದ ಹೆಚ್ಚುವರಿಯಷ್ಟು ಗಮನಾರ್ಹ ಪ್ರಮಾಣದಲ್ಲಿ ಈ ಹೆಚ್ಚುವರಿ ಇಲ್ಲ. ಸಾಲದ ಇನ್ನೂ ಹೆಚ್ಚು ಪ್ರಮಾಣವನ್ನು ಸಾಲಗಾರರು ಷೇರು ರೂಪದಲ್ಲಿ ಹೊಂದಿರಬೇಕೆಂದು ವಿಧಿಸುವುದರ ಮೂಲಕ ಷೇರು ಬಂಡವಾಳ ಹೆಚ್ಚಿಸಬಹುದೆಂದು ತೋರಬಹುದು. ಆದರೆ ಹೀಗೆ ಮಾಡುವುದರಿಂದ ಈ ಸಂಸ್ಥೆಗಳ ಬೆಳವಣಿಗೆಯೇ ನಿಧಾನವಾಗುವ ಸಂಭವ ಹೆಚ್ಚು. ಆದುದರಿಂದ ಸದಸ್ಯರು ಹಾಕುವ ಷೇರು ಬಂಡವಾಳ ಈಗಿನಂತೆಯೇ ಬೆಳೆಯಲು ಬಿಡುವುದು ಒಳ್ಳೆಯದೆಂದು ಹೇಳಬಹುದು.

ಸರ್ಕಾರ ಹಾಕುತ್ತಿರುವ ಷೇರು ಬಂಡವಾಳದ ಪಾಲನ್ನು ಹೆಚ್ಚಿಸುವ ಮೂಲಕ ಭೂ ಅಭಿವೃದ್ಧಿ ಬ್ಯಾಂಕುಗಳ ಬಂಡವಾಳ ಬಲ ಹೆಚ್ಚಬಲ್ಲುದು. ಸರ್ಕಾರದ ಷೇರು ಬಂಡವಾಳದ ಪಾಲು ಸೇ. ೫೧ಕ್ಕೂ ಮೀರಿರಬೇಕೆಂದು

ಪರಿಶೀಲನಸಮಿತಿ[4] ಸಲಹೆ ಮಾಡಿದ್ದಿತು. ಆದರೆ ಐದು ಕೇಂದ್ರೀಯ ಬ್ಯಾಂಕುಗಳ ಷೇರು ಬಂಡವಾಳದಲ್ಲಿ ಮಾತ್ರ ಈ ಪ್ರಮಾಣಕ್ಕೂ ಹೆಚ್ಚು ಪಾಲನ್ನು ಸರ್ಕಾರ ಹಾಕಿದೆ. ಮಿಕ್ಕ ಕೇಂದ್ರೀಯ ಬ್ಯಾಂಕುಗಳ ಷೇರು ಬಂಡವಾಳಕ್ಕೆ ಸರ್ಕಾರ ಹಾಕಿರುವ ಪಾಲು ಕಡಿಮೆಯಾಗಿದೆ. ಪ್ರಾಥಮಿಕ ಬ್ಯಾಂಕುಗಳ ಷೇರು ಬಂಡವಾಳದಲ್ಲಿಯೂ ಸರ್ಕಾರ ಪಾಲು ವಹಿಸುವ ಘಟ್ಟ ಈಗ ಪ್ರಾಪ್ತವಾಗಿದೆ ಎಂಬುದು ಪುನರ್ವಿಮರ್ಶನ ಸಮಿತಿಯ ಅಭಿಪ್ರಾಯವಾಗಿದೆ.

ವಾಸ್ತವವಾಗಿ ಸಹಕಾರ ತತ್ತ್ವದ ದೃಷ್ಟಿಯಿಂದ ಹೇಳುವುದಾದರೆ ಸರ್ಕಾರದ ಹಣದ ಮೂಲಕ ಷೇರು ಬಂಡವಾಳ ಹೆಚ್ಚಿಸುವ ಮಾರ್ಗ ಪ್ರಶಸ್ತವಲ್ಲ. ದುರ್ಬಲ ಸ್ಥಿತಿಯಲ್ಲಿರುವ ಭೂ ಅಭಿವೃದ್ಧಿ ಬ್ಯಾಂಕುಗಳನ್ನು ಪುಷ್ಟಿಗೊಳಿಸುವ ದೃಷ್ಟಿಯಿಂದ ಮಾತ್ರ ಸರ್ಕಾರ ಸ್ವಲ್ಪ ಕಾಲದವರೆಗೆ ಈ ಸಂಸ್ಥೆಗಳ ಷೇರುಗಳಲ್ಲಿ ಭಾಗಿಯಾಗಬೇಕಾಗಿದೆ. ಅಲ್ಲದೆ, ಭೂ ಅಭಿವೃದ್ಧಿ ಬ್ಯಾಂಕುಗಳ ಹಣಬಲದಲ್ಲಿ ಅತಿ ಮುಖ್ಯವಾದ ಭಾಗ ಡಿಬೆಂಚರ್ ಮೂಲಕ ಎತ್ತಲಾಗುವ ಸಾಲದ ಹಣವಾಗಿದೆ.

ಡಿಬೆಂಚರುಗಳು

ಡಿಬೆಂಚರುಗಳನ್ನು ಕೇಂದ್ರೀಯ ಬ್ಯಾಂಕುಗಳು ಹೊರಡಿಸುತ್ತವೆ. ತಮ್ಮಲ್ಲಿ ಸಾಲಗಾರರು ಅಡವು ಮಾಡಿರುವ ಆಸ್ತಿಗಳನ್ನು ಪ್ರಾಥಮಿಕ ಬ್ಯಾಂಕುಗಳು ಕೇಂದ್ರೀಯ ಬ್ಯಾಂಕುಗಳಿಗೆ ವಹಿಸುವುವು: ಹೀಗೆ ಇವು ಪಡೆಯುವ ಆಸ್ತಿಗಳ ಆಧಾರದ ಮೇಲೆ ಕೇಂದ್ರೀಯ ಬ್ಯಾಂಕುಗಳು ಡಿಬೆಂಚರುಗಳನ್ನು ಹೊರಡಿಸುತ್ತವೆ. ಈ ಸಂಸ್ಥೆಗಳ ಡಿಬೆಂಚರುಗಳಲ್ಲಿ ಮೂರು ವಿಧಗಳಿವೆ: ೧ ಸಾಧಾರಣ ಡಿಬೆಂಚರು, ೨ ಗ್ರಾಮೀಣ ಡಿಬೆಂಚರು ಮತ್ತು ೩ ಅಭಿವೃದ್ಧಿಯ ವಿಶೇಷ ಡಿಬೆಂಚರು.

ಕೇಂದ್ರೀಯ ಬ್ಯಾಂಕುಗಳು ಹೊರಡಿಸಿರುವ ಸಾಧಾರಣ ಡಿಬೆಂಚರುಗಳ ಮೊತ್ತ ವರ್ಷೇ ವರ್ಷೇ ಹೇಗೆ ಹೆಚ್ಚಾಗುತ್ತ ಬಂದಿದೆ ಎಂಬುದನ್ನು ಕೆಳಗಿನ ಸಂಖ್ಯೆಗಳು ತೋರಿಸುವುವು:

ವರ್ಷ	ಹೊರಡಿಸಿದ ಡಿಬೆಂಚರು ಮೊತ್ತ (ಕೋಟಿ ರೂಪಾಯಿಗಳಲ್ಲಿ)
೧೯೬೦–೬೧	೧೦.೦೦
೧೯೬೩–೬೪	೨೦.೬೦
೧೯೬೪–೬೫	೨೫.೩೯

[4] Reserve Bank of India, *All-India Rural Credit Survey Committee*, 1954. ಈ ಸಮಿತಿಯನ್ನು ಪ್ರಕೃತ ಲೇಖನದಲ್ಲಿ 'ಪರಿಶೀಲನ ಸಮಿತಿ' ಎಂದು ಸಂಬೋಧಿಸಲಾಗಿದೆ.

ವರ್ಷ	ಹೊರಡಿಸಿದ ಡಿಬೆಂಚರು ಮೊತ್ತ (ಕೋಟಿ ರೂಪಾಯಿಗಳಲ್ಲಿ)
೧೯೬೫–೬೬	೪೦.೯೩
೧೯೬೬–೬೭	೫೭.೩೦
೧೯೬೭–೬೮	೭೨.೬೩
೧೯೬೮–೬೯	೧೦೦.೬೩

ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಕೇಂದ್ರೀಯ ಬ್ಯಾಂಕುಗಳು ೬೩೫ ಕೋಟಿ ರೂಪಾಯಿಗಳ ಸಾಧಾರಣ ಡಿಬೆಂಚರುಗಳನ್ನು—ಅಂದರೆ ವರ್ಷಕ್ಕೆ ಸರಾಸರಿ ರೂ. ೧೨೭ ಕೋಟಿಯಷ್ಟು—ಹೊರಡಿಸುವುವೆಂದು ಅಂದಾಜು ಮಾಡ ಲಾಗಿದೆ. ಹೀಗೆ ಬೆಳೆಯುತ್ತಿರುವ ಡಿಬೆಂಚರುಗಳ ಮೊತ್ತ ೧೯೬೦–೬೧ರಲ್ಲಿ ರೂ. ೩೭ ಕೋಟಿ ಇದ್ದುದು ೧೯೬೭–೬೮ರಲ್ಲಿ ರೂ. ೨೯೯.೫೫ ಕೋಟಿಯಾಗಿದ್ದಿತು. ಅಂದಮೇಲೆ ಡಿಬೆಂಚರುಗಳ ಮೊತ್ತ ಷೇರು ಹಣದ ೧೨ರಷ್ಟು ಆಗಿದ್ದಿತು.

ಈಚಿನ ವರ್ಷಗಳಲ್ಲಿ ಕೇಂದ್ರೀಯ ಬ್ಯಾಂಕುಗಳು ಮೇಲೆ ಕಾಣಿಸಿರುವಂತೆ ಡಿಬೆಂಚರುಗಳ ಮೂಲಕ ಗಣನೀಯವಾಗಿ ಹಣ ಎತ್ತಲು ಸಾಧ್ಯವಾಗುವುದಕ್ಕೆ ವಿವಿಧ ಸಂಸ್ಥೆಗಳ ಬೆಂಬಲವೇ ಮುಖ್ಯ ಕಾರಣವಾಗಿದೆ. ಕೇಂದ್ರೀಯ ಬ್ಯಾಂಕು ಗಳು ನೀಡುವ ಡಿಬೆಂಚರುಗಳ ಮೊತ್ತದ ಸೇ. ೩೦ರಷ್ಟರ ವರೆಗೆ, ಆದರೆ ವರ್ಷಕ್ಕೆ ರೂ. ೬ ಕೋಟಿಗೆ ಮೀರದಂತೆ, ಈ ಡಿಬೆಂಚರುಗಳಲ್ಲಿ ಹಣಹಾಕುವ ನಿರ್ಧಾರವನ್ನು ೧೯೬೩ರಲ್ಲಿ ಭಾರತದ ಜೀವವಿಮಾ ಕಾರ್ಪೊರೇಷನ್ ಕೈಗೊಂಡಿತು. ೧೯೬೫–೬೬ ರಿಂದ ೧೯೬೮-೬೯ರ ವರೆವಿಗೆ ವರ್ಷವೊಂದಕ್ಕೆ ರೂ. ೧೦.೫೦ ಕೋಟಿಯ ವರೆಗೂ ೧೯೬೯-೭೦ರಲ್ಲಿ ರೂ. ೧೨ ಕೋಟಿಯ ವರೆಗೂ ಈ ರೀತಿಯ ಬೆಂಬಲ ನೀಡುವ ಏರ್ಪಾಡನ್ನು ಆ ಸಂಸ್ಥೆ ಮಾಡಿತು.

ಕೇಂದ್ರೀಯ ಬ್ಯಾಂಕುಗಳು ಹೊರಡಿಸುವ ಡಿಬೆಂಚರು ಮೊಬಲಗಿನ ಸುಮಾರು ಸೇ. ೧೦ರಷ್ಟು ಪಾಲನ್ನು ೧೯೬೪–೬೫ರ ವರೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ವಹಿಸಿಕೊಂಡಿದ್ದಿತು. ಅಲ್ಲಿಂದ ಮುಂದೆ ಅದು ಈ ಬೆಂಬಲವನ್ನು ೧೯೬೫–೬೬ಕ್ಕೆ ರೂ. ೩.೫ ಕೋಟಿಗೂ ತರುವಾಯದ ವರ್ಷಗಳಲ್ಲಿ ಕ್ರಮವಾಗಿ ೪.೦, ೪.೫, ೪.೫ ಮತ್ತು ೫.೫ ಕೋಟಿ ರೂಪಾಯಿಗಳಿಗೂ ಮಿತಿಗೊಳಿಸಿತು.

ಭಾರತದ ರಿಸರ್ವ್ ಬ್ಯಾಂಕು ೧೯೬೪-೬೫ರ ವರೆವಿಗೆ ಡಿಬೆಂಚರು ಮೊತ್ತದ ಸೇ. ೨೦ರ ವರೆಗೂ ಕೇಂದ್ರೀಯ ಬ್ಯಾಂಕುಗಳು ಹೊರಡಿಸುವ ಡಿಬೆಂಚರು ಗಳನ್ನು ಕೊಂಡು, ಇತರ ಮೂಲಗಳಿಂದ ಭರ್ತಿಯಾಗದ ಡಿಬೆಂಚರ್ ಭಾಗವನ್ನು ಭರ್ತಿ ಮಾಡಿಕೊಡುವ ಉದ್ದೇಶ ಹೊಂದಿದ್ದಿತು. ೧೯೬೬-೬೭ರಿಂದ ೧೯೬೮-೬೯ರ ವರೆಗಿನ ಅವಧಿಯಲ್ಲಿ ಸರಾಸರಿ ಸುಮಾರು ರೂ. ೪.೫ ಕೋಟಿ ಮತ್ತು ೧೯೬೯-೭೦

ರಲ್ಲಿ ರೂ. ೬ ಕೋಟಿಯಷ್ಟು ಮೊತ್ತದ ಡಿಬೆಂಚರುಗಳನ್ನು ಕೊಳ್ಳುವ ಮಿತಿಯನ್ನು ನಿಗದಿಮಾಡಲಾಯಿತು.

ಭಾರತ ಸರ್ಕಾರ ಕೊಳ್ಳುವ ಕೇಂದ್ರೀಯ ಬ್ಯಾಂಕುಗಳ ಡಿಬೆಂಚರ್ ಮೊತ್ತ ೧೯೬೬-೬೭ರಲ್ಲಿ ರೂ. ೯.೮ ಕೋಟಿಯೂ ತರುವಾಯ ಎರಡು ವರ್ಷಗಳೂ ವರ್ಷವೊಂದಕ್ಕೆ ರೂ. ೧೫ ಕೋಟಿಯೂ ಇರತಕ್ಕದ್ದೆಂದು ಗೊತ್ತುಮಾಡಲಾಯಿತು. ಭಾರತ ಸರ್ಕಾರ ಹೀಗೆ ನೀಡುವ ಬೆಂಬಲ ಆಯಾ ರಾಜ್ಯ ಸರ್ಕಾರವೂ ಒಂದು ಸಿಯಮಿತ ಪ್ರಮಾಣದ—ಬಹುಮಟ್ಟಿಗೆ ಕೇಂದ್ರ ಸರ್ಕಾರದ ಪಾಲಿನಷ್ಟೆ ಪ್ರಮಾಣದ—ಬೆಂಬಲ ನೀಡುವ ಏರ್ಪಾಡನ್ನು ಅವಲಂಬಿಸಿದ್ದಿತು. ಅಂದಮೇಲೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸೇರಿ ಕೇಂದ್ರೀಯ ಬ್ಯಾಂಕುಗಳ ಡಿಬೆಂಚರ್ ಕಾರ್ಯಕ್ರಮಕ್ಕೆ ಗಣನೀಯವಾದ ಬೆಂಬಲ ನೀಡಿದಂತೆಯೇ ಆಯಿತು.

ವಾಣಿಜ್ಯ ಬ್ಯಾಂಕುಗಳ ಸಾಮಾಜಿಕ ಹತೋಟಿ ಕ್ರಮ ಕೈಕೊಂಡ ತರುವಾಯ ಈ ಸಂಸ್ಥೆಗಳೂ ಕೇಂದ್ರೀಯ ಬ್ಯಾಂಕುಗಳ ಡಿಬೆಂಚರುಗಳಿಗೆ ಹಣ ಹಾಕುತ್ತಿವೆ. ೧೯೬೫-೬೬ರ ಅವಧಿಯಲ್ಲಿ ಈ ಸಂಸ್ಥೆಗಳು ಹೀಗೆ ಹಾಕುತ್ತಿದ್ದ ಹಣ ರೂ. ೧ ಕೋಟಿಗೂ ಕಡಿಮೆ ಇದ್ದುದು ೧೯೬೭-೬೮ರಲ್ಲಿ ರೂ. ೧೮ ಕೋಟಿಯೂ, ಮುಂದಿನ ಎರಡು ವರ್ಷಗಳಲ್ಲಿ ಕ್ರಮವಾಗಿ ರೂ. ೨೩ ಮತ್ತು ೨೫ ಕೋಟಿಯೂ ಆಗಿದ್ದಿತು.

ಕೇಂದ್ರೀಯ ಬ್ಯಾಂಕುಗಳ ಸಾಲ ತೀರುವೆ ನಿಧಿಗಳು ಡಿಬೆಂಚರುಗಳಿಗೆ ಹಣ ದೊರಕಿಸುವ ಇನ್ನೊಂದು ಮೂಲ. ಪ್ರತಿ ಕೇಂದ್ರೀಯ ಬ್ಯಾಂಕೂ ಸ್ಥಾಪಿಸಿರುವ ಈ ನಿಧಿಯ ಮೊಬಲಗಿನ ನೇಕಡ ೬೦ರಷ್ಟು ಹಣವನ್ನು ಅವು ಇತರ ಕೇಂದ್ರೀಯ ಬ್ಯಾಂಕುಗಳು ಹೊರಡಿಸುವ ಸಾಧಾರಣ ಡಿಬೆಂಚರುಗಳಲ್ಲಿ ಹಾಕಬೇಕೆಂಬ ನಿಯಮವಿದೆ.

ಕೇಂದ್ರೀಯ ಬ್ಯಾಂಕುಗಳು ಡಿಬೆಂಚರುಗಳ ಮೂಲಕ ಹಣಬಲ ಹೆಚ್ಚಿಸಿಕೊಳ್ಳುವ ಕಾರ್ಯಕ್ರಮಕ್ಕೆ ಅನೇಕ ಸಂಸ್ಥೆಗಳ ಬೆಂಬಲವಿರುವುದು ಮೇಲಿನ ವಿವರಣೆಯಿಂದ ವ್ಯಕ್ತವಾಗುತ್ತದೆ. ಈ ಮೂಲದಿಂದ ಇತ್ತೀಚಿನ ವರ್ಷಗಳಲ್ಲಿ ವರ್ಷವರ್ಷವೂ ಹೆಚ್ಚು ಹೆಚ್ಚು ಹಣ ಸಂಗ್ರಹಿಸುವುದು ಈ ರೀತಿಯ ಸಂಸ್ಥಾ ಸಹಾಯದಿಂದ ಸಾಧ್ಯವಾಗಿದೆ. ವಿವಿಧ ಸಂಸ್ಥೆಗಳ ಬೆಂಬಲದ ಪ್ರಮಾಣ ಮತ್ತು ನೀತಿಗಳ ಬಗ್ಗೆ ಚರ್ಚೆ ನಡೆಸಲು ಈಚೆಗೆ ಈ ಸಂಸ್ಥೆಗಳ ಪ್ರತಿನಿಧಿಗಳ ಸಭೆಯನ್ನು ರಿಸರ್ವ್ ಬ್ಯಾಂಕು ಸೇರಿಸುತ್ತಿದೆ. ಡಿಬೆಂಚರುಗಳಿಗೆ ಬೆಂಬಲ ಪಡೆಯಲು ಭೂ ಅಭಿವೃದ್ಧಿ ಬ್ಯಾಂಕುಗಳು ಈ ಡಿಬೆಂಚರುಗಳಿಗೆ ಆಧಾರವೆಂದು ತೋರಿಸಲಾಗುವ ಸಾಲಗಳಲ್ಲಿ ಸೇ. ೯೦ರಷ್ಟನ್ನು ಉತ್ಪಾದಕ ಉದ್ದೇಶಗಳಿಗಾಗಿ ನೀಡಿರಬೇಕೆಂದೂ ಸುಸ್ತಿ ಸಾಲ ಬಾಕಿಯ ಹಣ, ವಸೂಲಾಗಬೇಕಾಗಿರುವುದರ ಸೇ. ೧೦–೧೫ಕ್ಕೂ ಮೀರಿರಬಾರದೆಂದೂ ಷರತ್ತುಗಳನ್ನು ಈಚೆಗೆ ಹಾಕಲಾಗಿದೆ. ಡಿಬೆಂಚರುಗಳಿಗೆ ಬೆಂಬಲ ನೀಡುವ ಸಂಸ್ಥೆಗಳ ಈ ಹೊಸ ನೀತಿ ಇನ್ನೂ ಬಲಗೊಳ್ಳುವ ಸಂಭವವಿದೆ.

ಈ ವಿವಿಧ ಸಂಸ್ಥೆಗಳು ಒಟ್ಟುಗೂಡಿ, ಕ್ರಮ ಕೈಕೊಳ್ಳುವ 'ಕನ್‌ಸಾರ್ಟಿಯಂ' ಪದ್ಧತಿಯನ್ನು ಪರಿಪೂರ್ಣಗೊಳಿಸಬೇಕೆಂದು ಸಮೀಕ್ಷಾ ಸಮಿತಿ ಸಲಹೆ ಮಾಡಿದೆ. ಈ ವಿವಿಧ ಸಂಸ್ಥೆಗಳ ಪ್ರತಿನಿಧಿಗಳೂ ಕೇಂದ್ರೀಯ ಬ್ಯಾಂಕುಗಳ ಪ್ರತಿನಿಧಿಗಳೂ ಸಹಕಾರ ಸಂಘಗಳ ಮುಖ್ಯಾಧಿಕಾರಿ, ವ್ಯವಸಾಯ ಶಾಖೆಯ ಮುಖ್ಯಾಧಿಕಾರಿ ಮುಂತಾದವರ ಸಭೆಗಳನ್ನು ಆಗಿಂದಾಗ್ಗೆ ಸೇರಿಸಬೇಕೆಂಬುದೂ, ಈ ಸಭೆಗಳಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯಕ್ರಮಗಳು ಮತ್ತು ರೀತಿನೀತಿಗಳನ್ನು ಪರಿಶೀಲಿಸಿ ಅವು ನೀಡುವ ಡಿಬೆಂಚರ್ ಬೆಂಬಲದ ಬಗ್ಗೆ ಸೂಕ್ತ ನಿರ್ಣಯ ಕೈಕೊಳ್ಳಬೇಕೆಂಬುದೂ ಸಮಿತಿಯ ಸಲಹೆಯಾಗಿದೆ. ಅಂತರ ರಾಷ್ಟ್ರೀಯ ಹಣ ಸಂಸ್ಥೆಗಳಿಂದಲೂ ಕೇಂದ್ರೀಯ ಬ್ಯಾಂಕುಗಳ ಡಿಬೆಂಚರುಗಳಿಗೆ ಹಣ ದೊರಕಿಸುವ ಪ್ರಯತ್ನವನ್ನು ಭಾರತ ಸರ್ಕಾರ ಮಾಡಬೇಕೆಂದು ಆ ಸಮಿತಿ ಸೂಚಿಸಿದೆ. ಸಮೀಕ್ಷಾ ಸಮಿತಿಯ ಈ ಸಲಹೆಗಳನ್ನು ಅನುಸರಿಸುವುದರಿಂದ ಭೂ ಅಭಿವೃದ್ಧಿ ಬ್ಯಾಂಕುಗಳ ಹಣಬಲ ಈಗ ಇರುವುದಕ್ಕಿಂತ ಹೆಚ್ಚು ವ್ಯವಸ್ಥಿತ ಮಾರ್ಗದಲ್ಲಿ ಬೆಳೆಯುವುದೆಂದು ಹೇಳಬಹುದು.

ಗ್ರಾಮೀಣ ಡಿಬೆಂಚರು

ಭೂ ಅಭಿವೃದ್ಧಿ ಬ್ಯಾಂಕುಗಳು ವಿಶೇಷ ಗ್ರಾಮೀಣ ಡಿಬೆಂಚರುಗಳನ್ನು ಹೊರಡಿಸಬೇಕೆಂಬ ಸಲಹೆಯನ್ನು ಪರಿಶೀಲನಾ ಸಮಿತಿ ಮಾಡಿದ್ದಿತು. ಗ್ರಾಮೀಣ ಉಳಿತಾಯ ಜಮಾವಣೆಯೇ ಈ ಡಿಬೆಂಚರುಗಳ ಮುಖ್ಯೋದ್ದೇಶ. ಗ್ರಾಮೀಣ ಜನತೆಗೆ ಆಕರ್ಷಕವಾಗಿಯೂ ಗ್ರಾಮಸ್ಥರಿಗೆ ನೇರ ಪ್ರಯೋಜನ ತರುವಂಥದಾಗಿಯೂ ಅವರಿಗೆ ಆಸಕ್ತಿ ಇರುವ ನಿರ್ದಿಷ್ಟ ಅಭಿವೃದ್ಧಿಯೋಜನೆಗಳಿಗಾಗಿಯೂ ಡಿಬೆಂಚರುಗಳನ್ನು ಹೊರಡಿಸತಕ್ಕದ್ದು. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾರತದ ರಿಸರ್ವ್ ಬ್ಯಾಂಕು ೧೯೫೮ರಲ್ಲಿ ಕೇಂದ್ರೀಯ ಬ್ಯಾಂಕುಗಳ ಗ್ರಾಮೀಣ ಡಿಬೆಂಚರುಗಳ ಬಗ್ಗೆ ಯೋಜನೆಯೊಂದನ್ನು ಹಾಕಿಕೊಟ್ಟಿತು. ಕೇಂದ್ರೀಯ ಬ್ಯಾಂಕುಗಳು ೧೫ ವರ್ಷಗಳ ಅವಧಿಯ ಸಾಲಗಳನ್ನು ನೀಡಿ ಇವುಗಳ ಮೂಲಕ ಪಡೆಯುವ ಆಸ್ತಿಗಳ ಆಧಾರದ ಮೇಲೆ ಗ್ರಾಮೀಣ ಡಿಬೆಂಚರುಗಳನ್ನು ಹೊರಡಿಸಬಹುದು; ಹೀಗೆ ಹೊರಡಿಸುವ ಡಿಬೆಂಚರು ಮೊತ್ತದ ೧/೫ರಷ್ಟು ಭಾಗ ೭ ವರ್ಷಗಳ ಅವಧಿಯದಾಗಿದ್ದು ವ್ಯಕ್ತಿಗಳಿಗೆ ಮಾತ್ರ ಇದನ್ನು ಕೊಳ್ಳುವ ಅವಕಾಶವಿರತಕ್ಕದ್ದು; ಉಳಿದ ೪/೫ರಷ್ಟು ಭಾಗ ೧೫ ವರ್ಷಗಳ ಅವಧಿಯದಾಗಿದ್ದು ಈ ಭಾಗವೆಲ್ಲವನ್ನೂ ರಿಸರ್ವ್ ಬ್ಯಾಂಕು ಕೊಳ್ಳತಕ್ಕದ್ದು; ರಿಸರ್ವ್ ಬ್ಯಾಂಕು ಕೊಳ್ಳುವ ಡಿಬೆಂಚರುಗಳ ಮೇಲೆ ನೀಡುವ ಬಡ್ಡಿದರಕ್ಕಿಂತ ವ್ಯಕ್ತಿಗಳು ಕೊಳ್ಳುವ ಡಿಬೆಂಚರುಗಳ ಮೇಲೆ ಸೇ. ೧ರಷ್ಟು ಹೆಚ್ಚು ಬಡ್ಡಿ ಇರತಕ್ಕದ್ದು—ಇವು ಯೋಜನೆಯ ಮುಖ್ಯಾಂಶಗಳು.

ಈ ಗ್ರಾಮೀಣ ಡಿಬೆಂಚರು ಯೋಜನೆ ಹೆಚ್ಚು ಫಲಕಾರಿಯಾಗಿರುವುದಿಲ್ಲ. ೧೯೬೮-೬೯ರ ವರೆವಿಗೆ ಎಂಟು ರಾಜ್ಯಗಳಲ್ಲಿ ಈ ಡಿಬೆಂಚರುಗಳನ್ನು ಹೊರಡಿಸಿಯೇ ಇರಲಿಲ್ಲ. ಅಲ್ಲಿಯ ವರೆಗೆ ೫ ವರ್ಷಗಳಲ್ಲಿ ಉಳಿದ ರಾಜ್ಯಗಳಲ್ಲಿ ಗ್ರಾಮೀಣ ಡಿಬೆಂಚರುಗಳ ಮೂಲಕ ಎತ್ತಲಾಗಿರುವ ಒಟ್ಟು ಮೊಬಲಗು ಕೇವಲ ರೂ. ೧೦.೪ ಕೋಟಿ, ಅಂದರೆ ವರ್ಷಕ್ಕೆ ಸರಾಸರಿ ರೂ. ೨.೧ ಕೋಟಿ ಮಾತ್ರವಾಗಿದ್ದಿತು. ಅಂದ ಮೇಲೆ ಗ್ರಾಮೀಣ ಡಿಬೆಂಚರುಗಳ ಮೂಲಕ ಹಣ ಎತ್ತುವ ಕಾರ್ಯವನ್ನು ಕೇಂದ್ರೀಯ ಬ್ಯಾಂಕುಗಳು ಹೆಚ್ಚು ಆಸಕ್ತಿಯಿಂದ ವಹಿಸಬೇಕಾಗಿದೆ. ಹೆಚ್ಚುತ್ತಿರುವ ಗ್ರಾಮೀಣ ವರಮಾನಗಳ ಉಳಿತಾಯ ಭಾಗವನ್ನು ಈ ಮೂಲಕ ಅಭಿವೃದ್ಧಿಗಾಗಿ ಶೇಖರಿಸುವುದರಿಂದ ಹಣಬಾಹುಳ್ಯ ಸಮಸ್ಯೆಯ ನಿವಾರಣೆಗೂ ಇದು ಉಪಯೋಗವಾದಂತಾಗುವುದು.

ಅಭಿವೃದ್ಧಿಯ ವಿಶೇಷ ಡಿಬೆಂಚರು

ವಿಶೇಷವಾಗಿ ದೀರ್ಘಕಾಲಾವಧಿ ಸಾಲಕ್ಕೆ ಹಣಬಲ ಹೆಚ್ಚಿಸುವ ಉದ್ದೇಶದಿಂದಲೇ ೧೯೬೩ರಲ್ಲಿ ಸ್ಥಾಪನೆಯಾದ ಕೃಷಿ ರಿಫೈನಾನ್ಸ್ ಕಾರ್ಪೊರೇಷನ್ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಅತ್ಯಂತ ಪ್ರಯೋಜನಕಾರಿಯಾದ ಹಣ ಒದಗಣೆ ಸಂಸ್ಥೆಯಾಗುತ್ತದೆ. ಭೂ ಅಭಿವೃದ್ಧಿ ಬ್ಯಾಂಕುಗಳೂ ಅಪೆಕ್ಸ್ ಬ್ಯಾಂಕುಗಳೂ ಈ ಸಂಸ್ಥೆಯ ಬಂಡವಾಳಕ್ಕೆ ಒಟ್ಟು ರೂ. ೧.೨೬ ಕೋಟಿ ಹಾಕಿರುವುದಲ್ಲದೆ ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನ ಹೊಂದಿವೆ. ೧೯೬೮-೬೯ರ ವರೆವಿಗೆ ಕೃಷಿ ರಿಫೈನಾನ್ಸ್ ಕಾರ್ಪೊರೇಷನ್ ೨೩೩ ಭೂ ಅಭಿವೃದ್ಧಿ ಯೋಜನೆಗಳಿಗೆ ಹಣ ಮಂಜೂರು ಮಾಡಿದೆ; ಇವುಗಳಲ್ಲಿ ೧೭೮ ಯೋಜನೆಗಳಿಗೆ ೧೭೦ ಕೋಟಿ ರೂಪಾಯಿಗಳನ್ನು ಭೂ ಅಭಿವೃದ್ಧಿ ಬ್ಯಾಂಕುಗಳ ಮುಖಾಂತರ ಒದಗಿಸುತ್ತಿದೆ. ಅಂದಮೇಲೆ ಈ ಸಂಸ್ಥೆ ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯಾಚರಣೆಗಳನ್ನು ಗಣನೀಯ ಪ್ರಮಾಣದಲ್ಲಿ ಪುಷ್ಟಿಗೊಳಿಸುತ್ತದೆ ಎಂದು ಹೇಳಬಹುದು. ಕೃಷಿ ರಿಫೈನಾನ್ಸ್ ಕಾರ್ಪೊರೇಷನಿನ ಹಾಗೂ ರಾಜ್ಯ ಸರ್ಕಾರಗಳ ಸಹಾಯದಿಂದ ಕೇಂದ್ರೀಯ ಬ್ಯಾಂಕುಗಳು ಅಭಿವೃದ್ಧಿಯ ವಿಶೇಷ ಡಿಬೆಂಚರುಗಳನ್ನು ಹೊರಡಿಸಬಹುದಾಗಿದೆ. ನಾಲ್ಕನೆಯ ಯೋಜನೆಯ ಅವಧಿಯಲ್ಲಿ ರೂ. ೨೦೦ ಕೋಟಿಯಷ್ಟು ವಿಶೇಷ ಡಿಬೆಂಚರುಗಳನ್ನು ಇದು ಹೊರಡಿಸುವ ನಿರೀಕ್ಷೆಯಿದೆ.

ಒಟ್ಟಿನಲ್ಲಿ ಕೃಷಿ ಉದ್ಯಮಕ್ಕೆ ದೀರ್ಘಕಾಲಾವಧಿ ಸಾಲ ಒದಗಿಸುವ ಭೂ ಅಭಿವೃದ್ಧಿ ಬ್ಯಾಂಕುಗಳು ಈಚಿನ ದಶಕದಲ್ಲಿ ಬಹುಮಟ್ಟಿಗೆ ಡಿಬೆಂಚರುಗಳ ಮೂಲಕ ತಮ್ಮ ಹೆಚ್ಚು ಹಣಬಲವನ್ನು ಬೆಳೆಸಿಕೊಂಡಿವೆ. ಠೇವಣಿಗಳ ಮೂಲಕ ಪಡೆದಿರುವ ಹಣ ಅತ್ಯಲ್ಪ. ೧೯೬೮ರ ಜೂನ್ ೩೦ರಂದು ಇದ್ದಂತೆ ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಕೇವಲ ರೂ. ೩.೨೨ ಕೋಟಿ; ಪ್ರೈಮರಿ

ಬ್ಯಾಂಕುಗಳಲ್ಲಿ ರೂ. ೪-೫೬ ಕೋಟಿ. ಈ ಎರಡು ಬಗೆಯ ಬ್ಯಾಂಕುಗಳ ಒಟ್ಟು ಮೀಸಲು ನಿಧಿಯೂ ಕೇವಲ ರೂ. ೬.೭೧ ಕೋಟಿ ಮಾತ್ರವಾಗಿತ್ತು. ಹೆಚ್ಚು ಠೇವಣಿಗಳನ್ನು ಪಡೆಯುವ ಮತ್ತು ಮೀಸಲು ನಿಧಿಯನ್ನು ಹೆಚ್ಚಿಸುವ ಪ್ರಯತ್ನ ನಡೆಯಬೇಕಾಗಿದೆ.

ಸಾಲದ ಮೊತ್ತ ಹಾಗೂ ಉದ್ದೇಶ

ಭೂ ಅಭಿವೃದ್ಧಿ ಬ್ಯಾಂಕುಗಳ ಸಾಲ ನೀಡಿಕೆ ಮೊತ್ತದಲ್ಲಿ ಈಚಿನ ವರ್ಷಗಳಲ್ಲಿ ಹೆಚ್ಚುವರಿ ಆಗುತ್ತಿರುವುದರ ಜೊತೆಗೆ ಸಾಲದ ಉದ್ದೇಶದಲ್ಲಿ ಮುಖ್ಯ ಬದಲಾವಣೆ ಆಗುತ್ತಿದೆ. ಕೇಂದ್ರೀಯ ಬ್ಯಾಂಕುಗಳು ನೀಡಿದ ಸಾಲ ೧೯೫೧–೫೨ರಲ್ಲಿ ಕೇವಲ ರೂ. ೩ ಕೋಟಿ ಇದ್ದುದು ೧೯೬೦–೬೧ ರಲ್ಲಿ ರೂ. ೧೨ ಕೋಟಿಗೂ ೧೯೬೭–೬೮ ರಲ್ಲಿ ರೂ. ೭೬ ಕೋಟಿಯಷ್ಟಕ್ಕೂ ಹೆಚ್ಚಿತು. ೧೯೬೮ರ ಜೂನ್ ೩೦ರಂದು ಇದ್ದಂತೆ ಸಾಲದ ಮೊಬಲಗು ರೂ. ೨೭೮.೩ ಕೋಟಿ. ಪ್ರಾಥಮಿಕ ಬ್ಯಾಂಕುಗಳು ನೀಡಿದ್ದ ಸಾಲದ ಒಟ್ಟು ಮೊಬಲಗು ಇದೇ ದಿನಾಂಕದಂದು ರೂ. ೨೦೩ ಕೋಟಿ ಆಗಿತ್ತು.

೧೯೬೭–೬೮ರಲ್ಲಿ ನೀಡಲಾಗಿದ್ದ ಸಾಲದ ಸೇ. ೨೦ರಷ್ಟು ಮಾತ್ರ ಹಳೆ ಸಾಲದ ತೀರುವೆ, ಭೂಮಿ ಕೊಳ್ಳುವಿಕೆ ಇಂತಹ ಅನುತ್ಪಾದಕ ಬಾಬುಗಳಿಗಾಗಿ ಪಡೆದ ಸಾಲ ಭಾಗವಾಗಿತ್ತು. ಬಾವಿ, ಪಂಪು ಸೆಟ್ಟುಗಳು, ಟ್ರ್ಯಾಕ್ಟರುಗಳು, ಕೃಷಿ ಯಂತ್ರಗಳು, ಭೂ ಅಭಿವೃದ್ಧಿ ಕಾಮಗಾರಿಗಳು—ಇವೇ ಸಾಲ ಪಡೆಯಲು ಮುಖ್ಯ ಉದ್ದೇಶಗಳಾಗಿದ್ದುವು. ಹೀಗೆ ಉತ್ಪಾದನ ಸಾಲಗಳೇ ಅತಿ ಮುಖ್ಯ ಎಂದು ಕಾಣುವುದಾದರೂ ವಾಸ್ತವವಾಗಿಯೂ ಸಾಲಹಣ ಆಯಾ ಉತ್ಪಾದನಕಾರ್ಯ ಗಳ ನಿರ್ವಹಣೆಗೆಯೇ ಉಪಯೋಗವಾಗುತ್ತದೆಯೇ ಎಂಬುದು ಸಂದೇಹಾಸ್ಪದ. ಯಾವ ಉದ್ದೇಶಕ್ಕೆಂದು ಸಾಲ ನೀಡಲಾಗುವುದೋ ಆ ಕಾರ್ಯ ನೆರವೇರುವು ದೆಂಬುದನ್ನು ಖಚಿತಗೊಳಿಸುವ ಸಲುವಾಗಿ ಅಭಿವೃದ್ಧಿಗಾಗಿ ಸಾಲ ನೀಡಿದ ಅನಂತರ ಕೆಲವು ಕ್ರಮಗಳನ್ನು ಕೈಕೊಳ್ಳಬೇಕಾಗಿದೆಯೆಂದು ಸಮೀಕ್ಷಾ ಸಮಿತಿ ಹೇಳಿದೆ.

ಸುಸ್ತಿಸಾಲ ಬಾಕಿ

ಸಾಲ ವಸೂಲಿ ಪರಿಸ್ಥಿತಿ ಅತೃಪ್ತಿಕರವಾಗಿರುವುದೂ ಸಾಲನೀಡಿಕೆಯ ರೀತಿನೀತಿ ಗಳ ಲೋಪದೋಷಗಳಿರುವುದೂ ಗಮನಿಸಬೇಕಾದ ಮುಖ್ಯ ಅಂಶಗಳು. ಅತಿ ಹೆಚ್ಚಿನ ಸುಸ್ತಿ ಬಾಕಿ ಇರುವುದು ಭೂ ಅಭಿವೃದ್ಧಿ ಬ್ಯಾಂಕುಗಳ ದೌರ್ಬಲ್ಯವನ್ನು ಸೂಚಿಸುತ್ತದೆ. ೧೯೬೭–೬೮ರ ಕೊನೆಯಲ್ಲಿ ವಸೂಲಾಗಿರಬೇಕಾಗಿದ್ದ ಸಾಲದಲ್ಲಿ ಸುಸ್ತಿಯಾಗಿದ್ದ ಬಾಕಿ ಅಗಾಧ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಬರಬೇಕಾಗಿದ್ದ ಸುಸ್ತಿಬಾಕಿ ಮೈಸೂರಿನಲ್ಲಿ ಅವುಗಳ ಒಟ್ಟು ಬಾಕಿಯ ಸೇ. ೫೮,

ಮಧ್ಯಪ್ರದೇಶದಲ್ಲಿ ಸೇ. ೪೭, ಪಶ್ಚಿಮ ಬಂಗಾಳದಲ್ಲಿ ಸೇ. ೩೯, ಮಹಾರಾಷ್ಟ್ರ, ಒರಿಸ್ಸ, ಕೇರಳ ಮತ್ತು ರಾಜಸ್ಥಾನಗಳಲ್ಲಿ ಸೇ. ೨೫–೩೫. ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳ ಮಟ್ಟದಲ್ಲೂ ಇದು ಗಮನಾರ್ಹವಾಗಿತ್ತು. ತ್ರಿಪುರ, ಹಿಮಾಚಲ ಪ್ರದೇಶಗಳಲ್ಲಿ ಸುಮಾರು ಸೇ. ೫೦, ಮಧ್ಯ ಪ್ರದೇಶ, ಮೈಸೂರು, ರಾಜಸ್ಥಾನ, ಪಶ್ಚಿಮ ಬಂಗಾಳಗಳಲ್ಲಿ ಸೇ. ೨೦–೩೫, ಇತರ ರಾಜ್ಯಗಳಲ್ಲಿ ಸೇ. ೨೦ ಕ್ಕಿಂತ ಕಡಿಮೆ. ಅಧಿಕ ಸುಸ್ತಿಬಾಕಿಯಿಂದಾಗಿ ಬ್ಯಾಂಕುಗಳ ಕಲಾಪಗಳನ್ನು ಮುಂದುವರಿಸುವುದಕ್ಕೆ ಅಡ್ಡಿಯಾಗುವುದಷ್ಟೇ ಅಲ್ಲದೆ, ಈ ಸಂಸ್ಥೆಗಳ ಭವಿಷ್ಯವೇ ಅನಿಶ್ಚಿತವಾಗಿ ಪರಿಣಮಿಸಬಹುದಾಗಿದೆ.

ಸುಸ್ತಿ ಬಾಕಿ ಬೆಳೆಯಲು ಅನೇಕ ಕಾರಣಗಳಿವೆ. ಈಚಿನ ೨–೩ ವರ್ಷಗಳಲ್ಲಿ ಫಸಲು ಚೆನ್ನಾಗಿಲ್ಲದುದು, ಸಾಲ ತೀರುವೆ ಬಗ್ಗೆ ಸಾಲಗಾರರಲ್ಲಿ ಉದಾಸೀನ ಮನೋಭಾವ, ಸಾಲ ಬಾಕಿ ವಸೂಲಿಯಲ್ಲಿ ನೌಕರವರ್ಗದ ಅದಕ್ಷತೆ, ಸಾಲದ ಹಣ ಫಲದಾಯಕವಾಗಿ ವಿನಿಯೋಗವಾಗದೆ ಸಾಲಗಾರನ ಸಾಲವಾಪಸಾತಿ ಶಕ್ತಿ ಬೆಳೆಯದಿರುವಿಕೆ, ಸಾಲಗಾರರು ಸಾಲ ವಾಪಸು ಕೊಡುವಾಗ ತಮ್ಮ ಇತರ ಸಾಲಿಗರಿಗೆ ಆದ್ಯತೆ ನೀಡುವಿಕೆ ಇತ್ಯಾದಿ ಕಾರಣಗಳಿಂದ ಭೂ ಅಭಿವೃದ್ಧಿ ಬ್ಯಾಂಕುಗಳ ಸುಸ್ತಿಬಾಕಿ ಬೆಳೆದಿದೆ. ಇದು ಆತಂಕಕಾರಿ ವಿಷಯ. ಪರಿಸ್ಥಿತಿ ಉತ್ತಮವಾಗಬೇಕಾದರೆ ಅನೇಕ ಸುಧಾರಣೆಗಳು ಅತ್ಯಗತ್ಯ.

ಸಾಲ ನೀಡಿಕೆ ಕ್ರಮ

ದೀರ್ಘಕಾಲಾವಧಿ ಅಭಿವೃದ್ಧಿ ಸಾಲ ಫಲಪ್ರದವಾಗಬೇಕಾದರೆ ಸಾಲ ನೀಡಿಕೆ ನೀತಿಯ ಹಾಗೂ ಕ್ರಮಗಳ ಬಗ್ಗೆ ಕೆಲವು ಸುಧಾರಣೆಗಳು ಆವಶ್ಯಕ. ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಸಾಲದ ಹಣದ ಮೊತ್ತವನ್ನು ವಿವರ ಪರಿಶೀಲನೆಯ ಆಧಾರದ ಮೇಲೆ ಅಂದಾಜು ಹಾಕಬೇಕು. ಅಭಿವೃದ್ಧಿ ಕಾರ್ಯಾಚರಣೆಯ ತಾಂತ್ರಿಕ ಸಾಧ್ಯತೆಗಳನ್ನು ನಿರ್ಣಯಿಸಬೇಕು. ಈ ಕಾರ್ಯಕ್ಕೆ ತಗಲುವ ವೆಚ್ಚ, ಅದರಿಂದ ಲಭಿಸುವ ಪ್ರತಿಫಲ—ಇವುಗಳ ಲೆಕ್ಕಾಚಾರ ಮಾಡಬೇಕು. ಸಾಲಗಾರನ ಸಾಲ ಪಾವತಿ ಸಾಮರ್ಥ್ಯ ಎಷ್ಟುಮಟ್ಟಿಗೆ ಈ ಕಾರ್ಯದಿಂದ ಹೆಚ್ಚೀತು, ಎಷ್ಟು ಕಾಲಾವಧಿಯಲ್ಲಿ ಹೀಗೆ ಹೆಚ್ಚೀತು—ಎಂಬ ಅಂಶಗಳ ಅಧ್ಯಯನವೂ ಆವಶ್ಯಕ. ಸಾಲಹಣದ ಮೊತ್ತ, ಪಾವತಿ ಕಂತು, ಕಾಲಾವಧಿ—ಇವುಗಳನ್ನು ಶಾಸ್ತ್ರೀಯ ರೀತಿಯಲ್ಲಿ ನಿರ್ಣಯಿಸಲು ಇವೆಲ್ಲವೂ ಆವಶ್ಯಕ. ಈ ಕಾರ್ಯಾಚರಣೆಗಳನ್ನು ವಿಧ್ಯುಕ್ತವಾಗಿ ನಡೆಸಲು ಅನೇಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಆಗುತ್ತಿಲ್ಲ. 'ಬೆಳೆ ಸಾಲ ಕೈಪಿಡಿ'ಯಂತೆಯೇ ದೀರ್ಘಕಾಲಾವಧಿ ಸಾಲ ಕುರಿತ ಒಂದು ಕೈಪಿಡಿಯನ್ನು ರಿಸರ್ವ್ ಬ್ಯಾಂಕು ತಯಾರಿಸಬೇಕೆಂಬುದು ಸಮೀಕ್ಷಾ ಸಮಿತಿಯ ಒಂದು ಸಲಹೆ. ಕೃಷಿ ಅರ್ಥವಿಜ್ಞಾನ ಸಂಶೋಧನ ಕೇಂದ್ರಗಳ,

ಕೃಷಿ ವಿಶ್ವವಿದ್ಯಾನಿಲಯಗಳ, ಕೃಷಿ ರಿಫೈನಾನ್ಸ್ ಕಾರ್ಪೊರೇಷನಿನ ಮತ್ತು ಸರ್ಕಾರದ ಕೃಷಿ ಇಲಾಖೆಯ ಪ್ರತಿನಿಧಿಗಳನ್ನುಳ್ಳ ಒಂದು ಸಲಹಾ ತಂಡ ನಿರ್ಮಿತವಾದರೆ ಮೇಲೆ ಹೇಳಿರುವ ಕಾರ್ಯಾಚರಣೆಗಳನ್ನು ನಡೆಸಲು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಈ ತಂಡದಿಂದ ಸಹಾಯವಾಗುವುದೆಂಬುದು ಸಮೀಕ್ಷಾ ಸಮಿತಿಯ ಅಭಿಪ್ರಾಯ.

ಸಾಲದ ಅರ್ಜಿಗಳನ್ನೂ ಜಾಮೀನು ಮಾಡಲು ನೀಡಿರುವ ಜಮೀನಿನ ವಾರಸುಗಳನ್ನೂ ಪರಿಶೀಲಿಸಲು ತುಂಬ ಕಾಲ ತೆಗೆದುಕೊಳ್ಳಲಾಗುತ್ತಿದೆ ಎಂಬ ಅಪವಾದಕ್ಕೆ ಭೂ ಅಭಿವೃದ್ಧಿ ಬ್ಯಾಂಕುಗಳು ಒಳಗಾಗಿವೆ. ಮಂಜೂರಾದ ಸಾಲದ ವಿತರಣೆಯೂ ಸಕಾಲದಲ್ಲಿ ಆಗುತ್ತಿಲ್ಲವೆಂಬ ಆಕ್ಷೇಪಣೆಯೂ ಉಂಟು. ಕ್ರಿಯಾ ವಿಧಾನಗಳಲ್ಲಿ ಸುಧಾರಣೆಗಳನ್ನು ಮಾಡುವುದರಿಂದಲೂ ಸಿಬ್ಬಂದಿಯ ದಕ್ಷತೆ ಹೆಚ್ಚಿಸುವುದರಿಂದಲೂ ಸಾಲದ ಅರ್ಜಿಗಳನ್ನು ಬೇಗ ವಿಲೆಮಾಡುವುದು ಸಾಧ್ಯವಾದೀತು. ಈಗ ಸಾಲ ವಿತರಣೆಗೆ ಹಿಡಿಸುವ ಕಾಲ ೩ರಿಂದ ೬ ತಿಂಗಳು. ಇದನ್ನು ೨ ತಿಂಗಳಿಗಾದರೂ ಇಳಿಸಬೇಕು.

ಯಾವ ಉದ್ದೇಶಕ್ಕಾಗಿ ಸಾಲ ನೀಡಲಾಗಿದೆಯೋ ಅದಕ್ಕೇ ಅದನ್ನು ಬಳಸಲಾಗುತ್ತಿದೆಯೇ, ಸಾಲಗಾರ ಕೃಷಿಉತ್ಪನ್ನ ಕಾರ್ಯವನ್ನು ಕೈಕೊಳ್ಳುತ್ತಿದ್ದಾನೆಯೇ—ಎಂಬುದರ ಮೇಲ್ವಿಚಾರಣೆಗೆ ಅವಶ್ಯವಾದ ಸಿಬ್ಬಂದಿಯನ್ನು ಭೂ ಅಭಿವೃದ್ಧಿ ಬ್ಯಾಂಕುಗಳು ಪಡೆದಿರಬೇಕು. ಅಭಿವೃದ್ಧಿ ಹಣವಿತರಣೆ ವ್ಯವಸ್ಥೆಯಲ್ಲಿ ಇಂಥ ಏರ್ಪಾಡು ಆವಶ್ಯಕ.

ಸಾಲಕ್ಕೆ ಆಧಾರ

ಆಧಾರ ಮಾಡಬೇಕಾಗಿರುವ ಭೂ ಆಸ್ತಿಯೂ ಭೂ ಅಭಿವೃದ್ಧಿ ಬ್ಯಾಂಕುಗಳ ಸಾಲ ವಿಸ್ತರಣೆಗೆ ಒಂದು ಮಿತಿ ಕಲ್ಪಿಸಿದೆ. ಆದರೆ ಜಮೀನನ್ನು ಆಧಾರವಾಗಿ ತೆಗೆದುಕೊಳ್ಳುವಾಗ ಇದರ ಮೌಲ್ಯ ನಿರ್ಣಯಿಸುವ ಕ್ರಮಗಳಲ್ಲಿ ಏಕರೂಪತೆ ಇರುವುದಿಲ್ಲ; ಭೂಮಿಯ ಮಾರಾಟದ ಬೆಲೆ, ಭೂ ಕಂದಾಯ, ಭೂ ಹುಟ್ಟುವಳಿ ಇವುಗಳಲ್ಲಿ ಒಂದೊಂದನ್ನು ಒಂದೊಂದು ರಾಜ್ಯದಲ್ಲಿ ಆಧಾರವಾಗಿಟ್ಟುಕೊಂಡು ವಿವಿಧ ಲೆಕ್ಕಾಚಾರ ವಿಧಾನಗಳ ಮೂಲಕ ಆಧಾರದ ಜಮೀನಿನ ಮೌಲ್ಯವನ್ನು ನಿರ್ಣಯಿಸಲಾಗುತ್ತಿದೆ. ಸಾಮಾನ್ಯವಾಗಿ ಈ ಮೌಲ್ಯದ ಸೇ. ೫೦ರಷ್ಟರ ವರೆಗೆ ಸಾಲವನ್ನು ಅಭಿವೃದ್ಧಿ ಬ್ಯಾಂಕುಗಳು ನೀಡುವುವು. ಕೃಷಿ ಯಂತ್ರಗಳ ಆಧಾರದ ಮೇಲೆಯೂ ಸಾಲ ಕೊಡಬಹುದೆಂದೂ ಕೆಲವರು ಸಲಹೆ ನೀಡಿದ್ದಾರೆ. ಅನೇಕ ಕಾರಣಗಳಿಂದ ಸಮೀಕ್ಷಾ ಸಮಿತಿ ಈ ಸಲಹೆಯನ್ನು ತಳ್ಳಿಹಾಕಿದೆ. ಭೂಮಿಯ ಮೌಲ್ಯನಿರ್ಣಯ ಕ್ರಮವನ್ನು ಸರಿಗೊಳಿಸಬೇಕಾದುದು ಒಂದು ಮುಖ್ಯ ಕಾರ್ಯವಾಗಿದೆ.

ಅತಿ ಚಿಕ್ಕ ಹಿಡುವಳಿಗಳನ್ನು ಹೊಂದಿರುವ ಸಣ್ಣ ವ್ಯವಸಾಯಗಾರರು ಭೂ

ಅಭಿವೃದ್ಧಿ ಸಾಲ ಪಡೆಯುವುದು ಕಷ್ಟ. ಈ ವರ್ಗದವರಿಗೆ ಈಗ ಸಲ್ಲುತ್ತಿರುವ ಸಾಲದ ಭಾಗವೂ ಕಡಿಮೆ. ಅಭಿವೃದ್ಧಿ ಸಾಲದ ಇವರ ಆವಶ್ಯಕತೆಗಳ ಪೂರೈಕೆಗೆ ಹೆಚ್ಚಾಗಿ ಗಮನ ನೀಡಬೇಕೆಂಬುದು ಈಗ ಮಾನ್ಯವಾಗಿರುವ ಅಂಶ. ಸಾಂದ್ರ ಬೇಸಾಯದಿಂದಲೂ, ೨-೩ ಸಣ್ಣ ವ್ಯವಸಾಯಗಾರರು ಒಂದಾಗಿ ಸೇರುವುದ ರಿಂದಲೂ ಸಣ್ಣ ಬೇಸಾಯಗಾರರ ಸಾಲ ಪಡೆಯುವ ಸಾಮರ್ಥ್ಯವನ್ನು ಹೆಚ್ಚಿಸ ಬಹುದು.

ಹೊಂದಾಣಿಕೆಯ ಆವಶ್ಯಕತೆ

ಭೂ ಅಭಿವೃದ್ಧಿ ಸಾಲ ಸಾರ್ಥಕವಾಗಿ ಉಪಯೋಗವಾಗಬೇಕಾದರೆ ಕೃಷಿ, ನೀರಾ ವರಿ, ವಿದ್ಯುಚ್ಛಕ್ತಿ, ಲೋಕೋಪಯೋಗಿ ಮತ್ತು ಸಹಕಾರ ಇಲಾಖೆಗಳ ಸಂಘಟಿತ ನೆರವು ಆವಶ್ಯಕ. ಸಾಲಗಾರರು ತಾವು ಪಡೆಯುವ ಸಾಲವನ್ನು ನೀರಾವರಿ, ಪಂಪುಸೆಟ್ಟು ಸ್ಥಾಪನೆ ಇತ್ಯಾದಿ ಕಾರ್ಯಗಳಿಗೆ ವೆಚ್ಚಮಾಡುವಾಗ ಈ ವಿವಿಧ ಇಲಾಖೆಗಳ ಸೇವೆಗಳನ್ನು ಕೋರಬೇಕಾಗುತ್ತದೆ. ಈ ವಿವಿಧ ಇಲಾಖೆಗಳು ಯೋಜನೆಗಳ ಕಾರ್ಯಕ್ರಮಗಳಿಗೆ ಅನುಸಾರವಾಗಿ ನಡೆಯುವುದರಿಂದ ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯಾಚರಣೆಗಳು ಇವುಗಳೊಡನೆ ಸಮ್ಮಿಳಿತವಾಗ ಬೇಕು. ಆರ್ಥಿಕ ಯೋಜನಾ ಪದ್ಧತಿಯಲ್ಲಿ ವಿವಿಧ ಸಂಸ್ಥೆಗಳು ಹೇಗೆ ಕೂಡಿ ನಡೆಯಬೇಕಾಗುವುದೆಂಬುದಕ್ಕೆ ಇದೊಂದು ನಿದರ್ಶನ.

ಸರ್ಕಾರದ ವಿವಿಧ ಶಾಖೆಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯಾಚರಣೆಗಳೊಳಗೆ ಸರಿಯಾದ ಹೊಂದಾಣಿಕೆ ಏರ್ಪಡಿಸಲು ಅನುಕೂಲ ವಾಗುವಂತೆ ರಾಜ್ಯಮಟ್ಟದಲ್ಲಿ ಹೊಸ ಸಮಿತಿಯೊಂದರ ಸ್ಥಾಪನೆಯಾಗಬೇಕೆಂದು ಸಮೀಕ್ಷಾ ಸಮಿತಿ ಶಿಫಾರಸು ಮಾಡಿದೆ. ರಾಜ್ಯದ ಅಪೆಕ್ಸ್ ಬ್ಯಾಂಕು, ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕು, ರಾಜ್ಯ ಮಾರುಕಟ್ಟೆ ಸಹಕಾರ ಸಂಘ, ರಿಸರ್ವ್ ಬ್ಯಾಂಕು, ಸ್ಟೇಟ್ ಬ್ಯಾಂಕು, ಕೃಷಿ ರಿಫೈನಾನ್ಸ್ ಕಾರ್ಪೋರೇಷನ್ ಮತ್ತು ಕೃಷಿ, ನೀರಾವರಿ ಮತ್ತು ಸಹಕಾರ ಇಲಾಖೆಗಳು—ಇವುಗಳ ಒಬ್ಬೊಬ್ಬ ಪ್ರತಿನಿಧಿಗಳನ್ನು ಒಳಗೊಂಡ ಈ ರಾಜ್ಯಮಟ್ಟದ ಹೊಂದಾಣಿಕೆ ಸಮಿತಿಯ ಮುಖ್ಯಾಧಿಕಾರಿಯಾಗಿ ಉನ್ನತ ದರ್ಜೆಯ ಕೃಷಿ ಉತ್ಪನ್ನ ಕಮಿಷನರ್ ಇರತಕ್ಕದ್ದು. ಅಭಿವೃದ್ಧಿ ಸಾಲ, ಉತ್ಪನ್ನ ಸಾಲ, ಇವು ಒಳಗೊಳ್ಳುವ ಸರಕು ಸೇವೆಗಳ ಸರಬರಾಯಿ—ಇವೆಲ್ಲವುಗಳ ಸಮಗ್ರ ಅವಲೋಕನವೂ ಕಾಲಕಾಲದ ಪ್ರಗತಿಯ ಸಮೀಕ್ಷೆಯೂ ಈ ಸಮಿತಿಯ ಮುಖ್ಯ ಕರ್ತವ್ಯಗಳಾಗಿರತಕ್ಕದ್ದು. ವ್ಯವಸಾಯಾಭಿವೃದ್ಧಿಯ ಬಗ್ಗೆ ಅನೇಕ ಸಂಸ್ಥೆಗಳು ಕೈಗೊಳ್ಳುವ ನಿರ್ಣಯಗಳೊಳಗೆ ಪರಸ್ಪರ ಸಂಬಂಧ ಏರ್ಪಡಿಸಲೂ ಸಕಾಲಿಕ ಕ್ರಿಯೆಗಳನ್ನು ಕೈಗೊಳ್ಳಲೂ ಇಂಥ ಹೊಂದಾಣಿಕೆ ವ್ಯವಸ್ಥೆ ಸಹಾಯಕ ವಾಗುವುದೆಂಬುದು ಸಮೀಕ್ಷಾ ಸಮಿತಿಯ ಆಕಾಂಕ್ಷೆಯಾಗಿದೆ. ಇಂಥ ಹೊಂದಾಣಿಕೆ

ಸಮಿತಿಗಳು ಜಿಲ್ಲಾಮಟ್ಟಗಳಲ್ಲೂ ವ್ಯವಸ್ಥಿತವಾಗಬೇಕೆಂಬುದೂ ಈ ಸಮೀಕ್ಷಾ ಸಮಿತಿಯ ಸಲಹೆ. ಈ ಸಲಹೆಗಳು ಅತ್ಯಂತ ಉಪಯುಕ್ತವಾದವು; ಯೋಜನಾ ತಂತ್ರದ ಬೆಳವಣಿಗೆಗೆ ಸಹಾಯಕವಾಗುವ ಜೊತೆಗೇ ಭೂ ಅಭಿವೃದ್ಧಿ ಬ್ಯಾಂಕುಗಳ ಕ್ರಿಯಾಸಾಫಲ್ಯವನ್ನೂ ಹೆಚ್ಚಿಸಿದಂತೆ ಆಗುತ್ತದೆ.

ವ್ಯವಸಾಯಗಾರರಿಗೆ ವಿವಿಧ ಸೇವೆಗಳು ಸುಸಂಘಟಿತವಾಗಿ ದೊರಕುವಂತೆ ಆಗಬೇಕಾದರೆ ಭೂ ಅಭಿವೃದ್ಧಿ ಬ್ಯಾಂಕುಗಳು ಮತ್ತು ಇತರ ಸಹಕಾರಿ ಸಂಸ್ಥೆಗಳೊಳಗೆ ಪರಸ್ಪರ ಹೊಂದಾಣಿಕೆ ಆವಶ್ಯಕ. ಅಪೆಕ್ಸ್ ಬ್ಯಾಂಕುಗಳ ಮತ್ತು ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯಕಾರಿ ಮಂಡಳಿಗಳಲ್ಲಿ ಈ ಎರಡರಲ್ಲೂ ಕೆಲವು ವ್ಯಕ್ತಿಗಳು ಇರಲು ಅವಕಾಶ ಕಲ್ಪಿಸಬೇಕೆಂಬ ಸಲಹೆಯನ್ನು ಪರಿಶೀಲನಾ ಸಮಿತಿ ಮಾಡಿತ್ತು; ಸಮೀಕ್ಷಾ ಸಮಿತಿಯೂ ಪುನಃ ಇದನ್ನು ಶಿಫಾರಸು ಮಾಡಿದೆ. ಹಣ ಮತ್ತು ಆಡಳಿತ ಕ್ರಿಯೆಗಳಲ್ಲಿ ಈ ಎರಡು ಗುಂಪಿನ ಸಂಸ್ಥೆಗಳೊಳಗೆ ನಿಕಟಬಾಂಧವ್ಯ ಏರ್ಪಡಿಸುವ ಅನೇಕ ಕ್ರಮಗಳನ್ನು ಸಮೀಕ್ಷಾ ಸಮಿತಿ ಸೂಚಿಸಿದೆ. ಪ್ರಾಥಮಿಕ ಕೃಷಿ ಸಾಲ ಸಂಘಗಳು ಭೂ ಅಭಿವೃದ್ಧಿ ಬ್ಯಾಂಕುಗಳ ಪ್ರತಿನಿಧಿಗಳಾಗಿ ಕಾರ್ಯನಿರ್ವಹಣೆ ಮಾಡುವುದು, ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳು ತಮ್ಮ ಸಾಲ ತೀರುವೆ ನಿಧಿಯ ಸ್ವಲ್ಪ ಭಾಗವನ್ನು ಅಪೆಕ್ಸ್ ಬ್ಯಾಂಕುಗಳಲ್ಲಿ ಕಾಲಾವಧಿ ಠೇವಣಿಗಳಾಗಿ ಹೂಡುವುದು, ಅಪೆಕ್ಸ್ ಬ್ಯಾಂಕುಗಳು ಭೂ ಅಭಿವೃದ್ಧಿ ಬ್ಯಾಂಕುಗಳ ಸಾಧಾರಣ ಡಿಬೆಂಚರುಗಳನ್ನು ಕೊಳ್ಳುವುದು, ಅಪೆಕ್ಸ್ ಹಾಗೂ ಕೇಂದ್ರೀಯ ಸಹಕಾರ ಬ್ಯಾಂಕುಗಳ ನೌಕರರ ಸೇವೆ ಭೂ ಅಭಿವೃದ್ಧಿ ಬ್ಯಾಂಕುಗಳಿಗೂ ದೊರಕುವ ಅವಕಾಶ ಮಾಡಿಕೊಡುವುದು —ಇತ್ಯಾದಿ ಅನೇಕ ಕ್ರಮಗಳ ಮೂಲಕ ಗ್ರಾಮೀಣ ಸಾಲ ಸಹಕಾರಿ ಸಂಸ್ಥೆಗಳೊಳಗೆ ಹೆಚ್ಚು ನಿಕಟಬಾಂಧವ್ಯ ಬೆಳೆಸಬಹುದಾಗಿದೆ.

ರಾಷ್ಟ್ರದ ಭೂ ಅಭಿವೃದ್ಧಿ ಬ್ಯಾಂಕುಗಳ ರಾಷ್ಟ್ರೀಯ ಫೆಡರೇಷನ್ ಆಗಿ ೧೯೬೦ರಲ್ಲಿ ಸ್ಥಾಪನೆಯಾದ ಭೂ ಅಭಿವೃದ್ಧಿ ಬ್ಯಾಂಕುಗಳ ಕೇಂದ್ರೀಯ ಸಂಘ (ಸೆಂಟ್ರಲ್ ಲ್ಯಾಂಡ್ ಡೆವೆಲಪ್‌ಮೆಂಟ್ ಬ್ಯಾಂಕ್ಸ್ ಯೂನಿಯನ್) ಇವುಗಳ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸುತ್ತಿದೆ. ಅಧ್ಯಯನ ತಂಡಗಳು, ಚರ್ಚಾ ಗೋಷ್ಠಿಗಳು, ಪ್ರಚಾರ ಹಾಗೂ ಸಂಪರ್ಕ ಕ್ರಿಯೆಗಳು—ಇತ್ಯಾದಿಗಳ ಮೂಲಕ ಈ ರಾಷ್ಟ್ರೀಯ ಮಟ್ಟದ ಸಂಸ್ಥೆ ಭೂ ಅಭಿವೃದ್ಧಿ ಬ್ಯಾಂಕುಗಳ ಮುಖ್ಯ ವೇದಿಕೆಯಾಗಿದೆ.

ಒಟ್ಟಿನಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದ ತೀವ್ರವಾಗಿ ಬೆಳೆಯಲಾರಂಭಿಸಿರುವ ಭೂ ಅಭಿವೃದ್ಧಿ ಬ್ಯಾಂಕುಗಳು ಅನೇಕ ಲೋಪದೋಷಗಳನ್ನು ನಿವಾರಿಸಿಕೊಂಡು ಮುನ್ನಡೆಯಬೇಕಾಗಿದೆ. ಈಗ ನಡೆಯುತ್ತಿರುವ ನಾಲ್ಕನೆಯ ಯೋಜನೆಯಿಂದ ಆರಂಭವಾಗಿರುವ ಶೀಘ್ರ ವ್ಯವಸಾಯ ಕ್ರಾಂತಿಯ

ಪ್ರಯತ್ನದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು ವಿಶೇಷ ಪಾತ್ರ ವಹಿಸಬೇಕಾಗಿದೆ. ೧೯೬೯–೭೦ರಿಂದ ೧೯೭೩–೭೪ರ ವರೆಗಿನ ಅವಧಿಯಲ್ಲಿ ಈ ಬ್ಯಾಂಕುಗಳು ಒಟ್ಟು ರೂ. ೭೦೦–೬೯೦ ಕೋಟಿಯಷ್ಟು ಸಾಲ ಒದಗಿಸುವುವೆಂಬ ನಿರೀಕ್ಷೆ ಇದೆ. ಷೇರು ಹಾಗೂ ಡಿಬೆಂಚರುಗಳ ಮೂಲಕ ಇವು ತಮ್ಮ ಹಣಬಲ ಹೆಚ್ಚಿಸಿಕೊಳ್ಳುವುದರ ಜೊತೆಗೆ ಮೇಲೆ ಸೂಚಿಸಲಾಗಿರುವ ಅನೇಕ ಕ್ರಮಗಳ ಮೂಲಕ ತಮ್ಮ ಕ್ರಿಯಾ ಶಕ್ತಿಯನ್ನು ಹೆಚ್ಚಿಸಿಕೊಂಡು 'ಹಸಿರು ಕ್ರಾಂತಿ'ಯಲ್ಲಿ ತಮ್ಮ ಮಹತ್ತ್ವದ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುವುವೆಂದು ಆಶಿಸಬಹುದಾಗಿದೆ.

ಕೆ. ಎಸ್. ಶಿವಣ್ಣ

ಆಗ್ನೇಯ ಏಷ್ಯದಲ್ಲಿ ರಾಷ್ಟ್ರಪ್ರಜ್ಞೆಯ ಉಗಮ, ಬೆಳೆವಣಿಗೆ

ಎರಡನೆಯ ಮಹಾಯುದ್ಧದಿಂದೀಚಿನ ಕಾಲಾವಧಿಯ ಅತ್ಯಂತ ಪ್ರಮುಖ ಐತಿಹಾಸಿಕ ಘಟನೆಗಳಲ್ಲಿ ಆಗ್ನೇಯ ಏಷ್ಯದ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಗಳಿಸಿದುದೂ ಒಂದು. ರಾಷ್ಟ್ರೀಯತೆಯ ಮನೋಭಾವ ಬೆಳೆಯಲು ಮುಖ್ಯವಾದ ಕಾರಣವೆಂದರೆ, ಆಗ್ನೇಯ ಏಷ್ಯ ಪಶ್ಚಿಮ ಯೂರೋಪಿನ ಮತ್ತು ಅಮೆರಿಕದ ಸಾಮ್ರಾಜ್ಯಶಾಹಿ ಧೋರಣೆಗಳಿಗೆ ಒಳಗಾಗಿ, ಆ ಮೂಲಕ ಸಂಭವಿಸಿದ ಬದಲಾವಣೆಗಳೆನ್ನಬಹುದು. ೧೬ನೆಯ ಶತಮಾನದಲ್ಲಿ ಆಗ್ನೇಯ ಏಷ್ಯಕ್ಕೂ ಯುರೋಪಿಗೂ ಸಂಪರ್ಕ ಉಂಟಾಯಿತು. ಶತಮಾನಗಳುರುಳಿದಂತೆ ಇದು ಹೆಚ್ಚುಹೆಚ್ಚಾಗಿ ಬೆಳೆಯುತ್ತ, ಹೆಚ್ಚುಕಡಿಮೆ ಇಡೀ ಆಗ್ನೇಯ ಏಷ್ಯದಲ್ಲಿ ಪಶ್ಚಿಮ ಯೂರೋಪಿನ ರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್, ಹಾಲೆಂಡ್, ಸ್ಪೇನ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ ವಸಾಹತುಗಳಾಗಿ ಏರ್ಪಟ್ಟುವು. ಈ ಶತಮಾನದ ಮೊದಲ ಭಾಗದಲ್ಲಿ ಈ ಪ್ರದೇಶದ ಜನಾಂಗಗಳಲ್ಲಿ ರಾಷ್ಟ್ರೀಯತೆಯ ಮನೋಭಾವ ಬೆಳೆದು ಪರಕೀಯರ ಆಡಳಿತಗಳನ್ನು ಉರುಳಿಸಿ ಸ್ವದೇಶಿ ಆಡಳಿತಗಳನ್ನು ನಿರ್ಮಿಸಲು, ತಮ್ಮತಮ್ಮ ಸಂಸ್ಕೃತಿಪರಂಪರೆಗಳನ್ನು ಕಾಪಾಡಿಕೊಳ್ಳಲು, ಸಾಧ್ಯವಾದಲ್ಲಿ ಹೊಸ ಯುಗಕ್ಕೆ ತಕ್ಕಂತೆ ಪರಿವರ್ತನೆ ಮಾಡಿಕೊಳ್ಳಲು ಚಳವಳಿಗಳು ಪ್ರಾರಂಭವಾದುವು. ಹೀಗೆ ಪ್ರಾರಂಭವಾದ ಸ್ವಾತಂತ್ರ್ಯ ಸಂಗ್ರಾಮಗಳು ಪೂರ್ಣಫಲ ಕೊಟ್ಟದ್ದು, ಎರಡನೆಯ ಮಹಾಯುದ್ಧಾನಂತರದ ವರ್ಷಗಳಲ್ಲಿ. ಆಗ್ನೇಯ ಏಷ್ಯದಲ್ಲಿ ರಾಷ್ಟ್ರೀಯ ಮನೋಭಾವದ ಉದಯ, ಅದಕ್ಕೆ ಕಾರಣ ಮತ್ತು ಸ್ವಾತಂತ್ರ್ಯ ಸಂಗ್ರಾಮ—ಇವುಗಳ ಹಿಂದೆ ಅಡಗಿದ್ದ ಶಕ್ತಿಸ್ವರೂಪಗಳನ್ನು ಸಂಗ್ರಹವಾಗಿ ನಿರೂಪಿಸುವುದೇ ಈ ಲೇಖನದ ಉದ್ದೇಶ.

ಆಗ್ನೇಯ ಏಷ್ಯದ ರಾಷ್ಟ್ರಗಳು ಭಾರತೀಯ ಮತ್ತು ಚೀನೀ ನಾಗರಿಕತೆಗಳ ಸರಹದ್ದಿನಲ್ಲಿವೆ. ಏಷ್ಯದ ಖಂಡಪ್ರದೇಶದಲ್ಲಿರುವ ಬರ್ಮ, ಥೈಲೆಂಡ್, ಅನ್ನಾಂ (ವಿಯೆಟ್ನಾಂ), ಕಾಂಬೋಡಿಯ, ಲಾವೋಸ್ ಮತ್ತು ಮಲೇಷಿಯ, ಇಂಡೊನೇಷ್ಯ

ಮತ್ತು ಫಿಲಿಪೀನ್ಸ್—ಇವು ಆಗ್ನೇಯ ಏಷ್ಯದ ರಾಷ್ಟ್ರಗಳು. ಜನಾಂಗದ ವಲಸೆಯಿಂದಲೂ ವಿವಿಧ ರೀತಿಯ ರಾಜಕೀಯ ನಿಯಂತ್ರಣಗಳಿಂದಲೂ ಇಂಡೋಚೀನ, ಬರ್ಮ ಮತ್ತು ಥೈಲೆಂಡ್‌ಗಳಲ್ಲಿ ಚೀನದ ಪ್ರಭಾವ ಹೆಚ್ಚಾಗಿ ಉಂಟಾಯಿತು. ಚೀನೀ ಚಕ್ರಾಧಿಪತ್ಯದ ಪ್ರಭಾವದಿಂದ ದೂರವಿದ್ದ ಪ್ರದೇಶಗಳಲ್ಲಿ ಚೀನೀ ವ್ಯಾಪಾರಿಗಳು ವಲಸೆಹೋಗಿ ನೆಲಸಿದರು. ಹೀಗಾಗಿ ಆ ಪ್ರದೇಶಗಳಲ್ಲಿ ಚೀನೀಯರು ಒಂದು ಪ್ರಬಲವಾದ ಅಲ್ಪಸಂಖ್ಯಾತ ಗುಂಪಾದರು. ವಿಯೆಟ್ನಾಂ ದೇಶವೊಂದೇ ಕಾನ್‌ಫ್ಯೂಷಿಯಸ್ ಬೋಧಿಸಿದ ತತ್ತ್ವಗಳನ್ನು, ಆತ ರಚಿಸಿದ ಸಂಘಸಂಸ್ಥೆಗಳನ್ನು ಮಾದರಿಯಾಗಿ ಪಡೆಯಿತು. ಭೂ ಮತ್ತು ಸಮುದ್ರ ಮಾರ್ಗಗಳಿಂದ ವಿಯೆಟ್ನಾಂ ಚೀನಕ್ಕೆ ಹತ್ತಿರವಾಗಿದೆ. ಆಗ್ನೇಯ ಏಷ್ಯದ ಉಳಿದ ರಾಷ್ಟ್ರಗಳು ಪ್ರಮುಖವಾಗಿ ಭಾರತದಿಂದ ತಮ್ಮ ಮತೀಯ ಭಾವನೆಗಳನ್ನು ಮತ್ತು ಸಾಮಾಜಿಕ ವ್ಯವಸ್ಥೆಯ ಪದ್ಧತಿಗಳನ್ನು ಪಡೆದುವು.[1] ವರ್ತಕರೂ ಪುರೋಹಿತ ವರ್ಗದವರೂ ಭಿಕ್ಷುಗಳೂ ಭಾರತದಿಂದ ಸತತವಾಗಿ ಹಿಂದೂ ಮತ ಮತ್ತು ಬೌದ್ಧ ಮತಗಳನ್ನು ತಂದು ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಪ್ರಸಾರಮಾಡಿದರು. ಇವತ್ತಿಗೂ ಥೈಲೆಂಡ್, ಕಾಂಬೋಡಿಯ ಮತ್ತು ಲಾವೋಸ್‌ಗಳಲ್ಲಿ ಈ ಮತಗಳ ಪ್ರಭಾವವನ್ನು ಗುರುತಿಸಬಹುದಾಗಿದೆ.[2] ಅನಂತರ ಭಾರತೀಯರು ಇಂಡೊನೇಷ್ಯದ ಸುಮಾತ್ರ ದ್ವೀಪದಲ್ಲಿ ಇಸ್ಲಾಂ ಧರ್ಮವನ್ನು ಪ್ರಸಾರ ಮಾಡಿದರು. ಇಸ್ಲಾಂ ಧರ್ಮ ಸುಮಾತ್ರ ದ್ವೀಪದಿಂದ ಮಲಯ ಮತ್ತು ಫಿಲಿಪೀನ್ಸಿನ ದಕ್ಷಿಣ ಭಾಗದ ಕೆಲವು ದ್ವೀಪಗಳಿಗೆ ಹಬ್ಬಿತು. ೧೬ನೆಯ ಶತಮಾನದಲ್ಲಿ ಪೋರ್ಚುಗೀಸರು ಮತ್ತು ಸ್ಪಾನಿಷರು ಇಸ್ಲಾಂ ಮತದ ಪ್ರಚಾರವನ್ನು ತಡೆಯದೆ ಇದ್ದಿದ್ದರೆ ಬಹುಶಃ ಇಸ್ಲಾಂ ತನ್ನದೇ ಆದ ಮುಸ್ಲಿಂ ಸಾಮ್ರಾಜ್ಯವನ್ನು ಈ ಪ್ರದೇಶದಲ್ಲೆಲ್ಲ ಸ್ಥಾಪಿಸುತ್ತಿತ್ತೆಂದು ಊಹಿಸಬಹುದು. ಹೇಗಿದ್ದರೂ, ಈ ದೇಶಗಳಲ್ಲೆಲ್ಲ ಇಸ್ಲಾಂ ಧರ್ಮ ಇಂದಿಗೂ ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದಲ್ಲಿ ವಿಶಿಷ್ಟ ಪ್ರಭಾವ ಬೀರುತ್ತಿದೆ. ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಬಲಗೊಳ್ಳುತ್ತಿರುವ ಈ ಕಾಲದಲ್ಲೂ ಭಾರತೀಯ ಮತ್ತು ಚೀನೀ ಸಂಸ್ಕೃತಿಗಳ ಪ್ರಭಾವ ಇಂದಿಗೂ ಅಚ್ಚಳಿಯದೆ ನಿಂತಿರುವುದನ್ನು ಕಾಣಬಹುದಾಗಿದೆ. ಭಾರತ ಮತ್ತು ಚೀನಗಳ ಈ ಸಂಪರ್ಕದಿಂದ ಉಂಟಾದ ಆಗ್ನೇಯ ಏಷ್ಯದ ವಿಶಿಷ್ಟ ನಾಗರಿಕತೆ ಮುಂದೆ ರಾಷ್ಟ್ರೀಯತೆಯ ಭಾವನೆಗಳನ್ನು ಮೂಡಿಸುವುದರಲ್ಲಿ ಹೆಚ್ಚಿನ ಪಾತ್ರ ವಹಿಸಿತು.[3]

---

[1] Claude A. Buss: *Southeast Asia and the World Today*, New York, 1958, pp. 19–22

[2] John F. Cady: *Thailand, Burma, Laos, Cambodia*, New Jersy, 1966, pp. 3–4

[3] Vera Micheles Dean: *The Nature of the Non-Western World*, New York, 1963, pp. 134-135

ಆಗ್ನೇಯ ಏಷ್ಯ ವಿವಿಧ ಜನಾಂಗಗಳ ವಾಸಸ್ಥಾನ. ಈ ಜನಾಂಗಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಖಂಡಪ್ರದೇಶಗಳಾದ ಬರ್ಮ, ಥೈಲೆಂಡ್ ಮತ್ತು ಇಂಡೋಚೀನಗಳಲ್ಲಿ ವಾಸಿಸುವವರು ಮುಖ್ಯವಾಗಿ ಚೀನೀ–ಟಿಬೆಟನ್ ಜನಾಂಗದವರು. ಮಲಯ ಪರ್ಯಾಯದ್ವೀಪ, ಇಂಡೊನೇಷ್ಯ ಮತ್ತು ಫಿಲಿಪೀನ್ಸ್‌ಗಳಲ್ಲಿ ವಾಸಮಾಡುವ ಜನ ಮುಖ್ಯವಾಗಿ ಮಲೆ ಜನಾಂಗಕ್ಕೆ ಸೇರಿದವರು. ಇವರು ಇತಿಹಾಸಪೂರ್ವಕಾಲದಲ್ಲಿ ಖಂಡಪ್ರದೇಶಗಳಿಂದ ವಲಸೆ ಬಂದು ಇಲ್ಲಿ ನೆಲೆಸಿದವರು.

ಆಧುನಿಕ ಕಾಲದಲ್ಲಿ ಸಂಪೂರ್ಣ ಆಗ್ನೇಯ ಏಷ್ಯ ಪಾಶ್ಚಾತ್ಯರ ವಸಾಹತು ನೀತಿಗೆ ತುತ್ತಾಯಿತು. ಪೋರ್ಚುಗೀಸರು, ಸ್ಪಾನಿಷರು, ಡಚ್ಚರು, ಬ್ರಿಟಿಷರು ಮತ್ತು ಫ್ರೆಂಚರು ರಾಜ್ಯಗಳನ್ನು ಕಟ್ಟುವುದಕ್ಕಾಗಿಯೋ ವ್ಯಾಪಾರ ಮಾಡುವುದಕ್ಕಾಗಿಯೋ ಕ್ರೈಸ್ತಮತವನ್ನು ಹರಡುವ ಸಲುವಾಗಿಯೋ ಆಗ್ನೇಯ ಏಷ್ಯಕ್ಕೆ ಬಂದರು. ಈ ಭಾಗದಲ್ಲಿ ದೊರೆಯುವ ಮೆಣಸು, ಏಲಕ್ಕಿ, ಲವಂಗ ಮೊದಲಾದ ವಸ್ತುಗಳು ಪಾಶ್ಚಾತ್ಯರನ್ನು ಆಕರ್ಷಿಸಿದುವು, ಹಾಗೆ ಬಂದ ಪಾಶ್ಚಾತ್ಯರು ಇಲ್ಲಿಯ ನೈಸರ್ಗಿಕ ಸಂಪತ್ತನ್ನು ವೃದ್ಧಿಪಡಿಸಿದರು. ಆಗ್ನೇಯ ಏಷ್ಯ ಯುರೋಪಿನ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿ ಒದಗಿಸುವ ಕೇಂದ್ರವಾಯಿತು. ಇಂದಿಗೂ ಪ್ರಪಂಚದಲ್ಲಿ ಅತ್ಯಂತ ಉಪಯುಕ್ತವಾದ ಸಾಮಗ್ರಿಯನ್ನು ಉತ್ಪಾದಿಸುವುದರಲ್ಲಿ ಆಗ್ನೇಯ ಏಷ್ಯ ಮುಂದಿದೆ. ರಬ್ಬರ್, ಪೆಟ್ರೋಲಿಯಂ, ಟಿನ್, ಕೊಬ್ಬರಿ ಎಣ್ಣೆ, ಕಾಫಿ ಮತ್ತು ಸಂಬಾರ ಪದಾರ್ಥಗಳು ಆಗ್ನೇಯ ಏಷ್ಯದ ಮುಖ್ಯ ವಸ್ತುಗಳು. ಐರೋಪ್ಯ ರಾಷ್ಟ್ರಗಳ ಭೌತ ಸಂಪತ್ತು ಬೆಳೆಯಲು ಆಗ್ನೇಯ ಏಷ್ಯ ಹೆಚ್ಚಿನ ಕಾಣಿಕೆ ಸಲ್ಲಿಸಿತೆನ್ನಬಹುದು. ಹಾಲೆಂಡ್ ದೇಶವಂತೂ ಡಚ್-ಈಸ್ಟ್ ಇಂಡೀಸ್ ಅಥವಾ ಈಗಿನ ಇಂಡೊನೇಷ್ಯದಿಂದ ತನ್ನ ಹೆಚ್ಚಿನ ಸಂಪತ್ತನ್ನು ಗಳಿಸಿತು.

ಪಾಶ್ಚಾತ್ಯರ ವಸಾಹತುನೀತಿಯಿಂದಾಗಿ ಇಲ್ಲಿ ದ್ವಂದ್ವ ರೀತಿಯ ಅರ್ಥ ವ್ಯವಸ್ಥೆ ಪ್ರಗತಿಹೊಂದಿತು. ಉದಾಹರಣೆಗೆ, ಕಾಫಿ ಮತ್ತು ರಬ್ಬರ್ ತೋಟಗಳು ಪಾಶ್ಚಾತ್ಯರ ಅರ್ಥವ್ಯವಸ್ಥೆಯ ಒಂದು ಭಾಗವಾಗಿ ದೇಶೀ ಆರ್ಥಿಕ ವ್ಯವಸ್ಥೆಗಿಂತ ಭಿನ್ನವಾಗಿತ್ತು. ದೇಶೀಯರು ಹಿಂದಿನಿಂದ ನಡೆಸಿಕೊಂಡು ಬಂದಿದ್ದ ಅರ್ಥವ್ಯವಸ್ಥೆಯ ಪಕ್ಕದಲ್ಲೇ ಈ ರೀತಿಯ ಶೋಷಣೆ ನಡೆಯಿತು.[4] ದೇಶೀ ಅರ್ಥವ್ಯವಸ್ಥೆಗೂ ಪಾಶ್ಚಾತ್ಯರು ತಂದು ಬಿತ್ತಿದ ವಾಣಿಜ್ಯ ರೀತಿಯ ವ್ಯವಸಾಯೋತ್ಪನ್ನಕ್ಕೂ ಯಾವ ನಿಕಟವಾದ ಸಂಬಂಧವೂ ಇರಲಿಲ್ಲ. ಪಾಶ್ಚಾತ್ಯರಿಂದ ಸ್ಥಾಪಿತವಾದ ಆರ್ಥಿಕ ಯೋಜನೆಗಳಿಗೆ ದೇಶೀಯರು ಕಚ್ಚಾಸಾಮಗ್ರಿಗಳನ್ನು ಮತ್ತು ಶ್ರಮವನ್ನು ನೀಡಿದರು. ಅವರ ಶೋಷಣೆಯ ನೀತಿಯಿಂದಾಗಿ ದೇಶೀಯರಲ್ಲಿ

---

[4] *Ibid* : p. 133 ; John F, Cady, op. cit., pp. 96–117

ಸ್ವಾತಂತ್ರ್ಯಕ್ಕಾಗಿ ಚಳವಳಿಗಳು ನಡೆದವು. ಈ ಚಳವಳಿಗಳು ಪಾಶ್ಚಾತ್ಯ ದೇಶಗಳಿಂದ ಬಂದ ವಿಚಾರ ಮತ್ತು ವಿದ್ಯಾಭ್ಯಾಸಪದ್ಧತಿಗಳಿಂದ ಪ್ರೇರಿತವಾದವು. ಇವಕ್ಕೆ ದೇಶೀ ಸಂಸ್ಕೃತಿ–ಇತಿಹಾಸಗಳೂ ಸ್ಫೂರ್ತಿ ನೀಡಿದುವು.

ವಸಾಹತುಗಳಲ್ಲಿ ಆಡಳಿತವನ್ನು ಸಮರ್ಪಕವಾಗಿ ನಡೆಸಲು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ದುಡಿಯಲು ದೇಶೀಯರ ನೆರವು ಆಗತ್ಯವಾಯಿತು. ದೇಶೀಯರಿಗೆ ತರಬೇತಿ ಕೊಡಲು ಪಾಶ್ಚಾತ್ಯ ರೀತಿಯ ವಿದ್ಯಾಭ್ಯಾಸವನ್ನು ಜಾರಿಗೆ ತಂದರು. ಇದರಿಂದ ದೇಶೀಯರ ಸಮಾಜವ್ಯವಸ್ಥೆಯಲ್ಲಿ ಒಂದು ಕ್ರಾಂತಿಯೇ ಉಂಟಾಯಿತೆನ್ನಬಹುದು.[5] ಸಮಾಜದಲ್ಲಿ ಹೊಸದಾದ ಗುಂಪೊಂದು ಬೆಳೆಯಿತು. ಸಂಖ್ಯೆಯಲ್ಲಿ ಹೆಚ್ಚಿಲ್ಲವಾದರೂ ಆಧುನಿಕ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿದ ದೇಶೀಯರು ನವಆಗ್ನೇಯ ಏಷ್ಯದ ನಾಯಕರಾದರು. ವಸಾಹತುನೀತಿಯನ್ನು ಖಂಡಿಸುವುದರಲ್ಲಿ, ರಾಷ್ಟ್ರೀಯ ಪ್ರಜ್ಞೆಯನ್ನು ತಮ್ಮ ಜನಾಂಗಗಳಲ್ಲಿ ಬಿತ್ತರಿಸುವುದರಲ್ಲಿ, ಈ ನವಸಮಾಜದ ಗುಂಪು ಹಿರಿಯ ಪಾತ್ರ ವಹಿಸಿತು.

ಪಾಶ್ಚಾತ್ಯ ರೀತಿಯ ವಿದ್ಯಾಭ್ಯಾಸದಿಂದಾಗಿ ಐರೋಪ್ಯ ಸಂಸ್ಕೃತಿ, ಸಾಹಿತ್ಯ, ರಾಜಕೀಯ ಭಾವನೆಗಳ ಪರಿಚಯವಾಗಲು ಸಹಾಯವಾಯಿತು. ಯೂರೋಪಿನ ಮತ್ತು ಅಮೆರಿಕದ ಚರಿತ್ರೆಯನ್ನು ಓದಿದ ಆಗ್ನೇಯ ಏಷ್ಯನ್ ರಾಷ್ಟ್ರಗಳ ಯುವಕರು ಆ ದೇಶಗಳಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗೆ ನಡೆದ ಹೋರಾಟವನ್ನು ನೆನೆದು, ತಮ್ಮ ತಮ್ಮ ದೇಶಗಳಲ್ಲೂ ಸ್ವಯಂ ಆಡಳಿತ ಮತ್ತು ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದು ವಾದಿಸಿದರು. ಅಮೆರಿಕ, ಐರ್ಲೆಂಡ್, ಇಟಲಿ ದೇಶಗಳ ಸ್ವಾತಂತ್ರ್ಯ ಹೋರಾಟವನ್ನೂ ಆಗ್ನೇಯ ಏಷ್ಯದ ತರುಣರು ಚರಿತ್ರೆಯಲ್ಲಿ ಓದಿ ತಿಳಿದರು. ಅಲ್ಲಿ ನಡೆದ ಹೋರಾಟದಂತೆ ತಮ್ಮ ಹೋರಾಟವನ್ನು ರೂಪಿಸಿಕೊಳ್ಳಲು ಅವರು ಮುಂದಾದರು. ಐರೋಪ್ಯ ಸಾಹಿತ್ಯದಲ್ಲಿಯ ಸ್ವಾತಂತ್ರ್ಯದ ಕೂಗನ್ನು ಆಗ್ನೇಯ ಏಷ್ಯದ ತರುಣರು ರಕ್ತಗತ ಮಾಡಿಕೊಂಡರು. ದೇಶೀಯ ಭಾಷೆಗಳಲ್ಲೂ ಐರೋಪ್ಯ ಭಾಷೆಗಳಲ್ಲೂ ವರ್ತಮಾನ ಪತ್ರಿಕೆಗಳು ಸ್ವಾತಂತ್ರ್ಯ ಚಳವಳಿಯ ಸಂಗತಿಗಳನ್ನು, ನಾಯಕರ ಭಾಷಣಗಳನ್ನು ಎಲ್ಲರಿಗೂ ತಿಳಿಸುತ್ತಿದ್ದುವು. ಇದರಿಂದ ಜನರಲ್ಲಿ ಜಾಗೃತಿ ಉಂಟಾಯಿತು. ಆಗ್ನೇಯ ಏಷ್ಯದ ತರುಣ ನಾಯಕರು ದೇಶವಿದೇಶಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಪ್ರಚಾರ ನಡೆಸಿದರು. ಪಾಶ್ಚಾತ್ಯ ಮಾದರಿಯಲ್ಲಿ ರಾಜಕೀಯ ಪಕ್ಷಗಳನ್ನು, ಚಿಹ್ನೆಗಳನ್ನು ಮತ್ತು ರೀತಿನೀತಿಗಳನ್ನು ತಮ್ಮ ತಮ್ಮ ದೇಶಗಳಿಗೆ ಅನುಗುಣವಾಗಿ ಹೊಂದಿಸಿಕೊಂಡು ಜನಜಾಗೃತಿಗೆ ಹೋರಾಡಲು ಸಿದ್ಧರಾದರು[6]

---

[5] Benda and Larkin: *The World of Southeast Asia*, New York, 1967, pp. 145–147

[6] *Ibid*: p. 216

ಹೀಗೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ದೇಶೀಯರಲ್ಲಿ ಒಂದು ಕ್ರಾಂತಿಯೇ ಉಂಟಾಯಿತು. ಇದರಿಂದ ಐರೋಪ್ಯ ಮತ್ತು ಅಮೆರಿಕನ್ ದೇಶಗಳ ಸಂಸ್ಕೃತಿ, ಇತಿಹಾಸ, ತತ್ತ್ವ, ದರ್ಶನಗಳ ಪರಿಚಯವಾಗಲು ಸಾಧ್ಯವಾಯಿತು. ಆಗ್ನೇಯ ಏಷ್ಯದ ನವೋದಯದ ನಾಯಕರು ಪಾಶ್ಚಾತ್ಯ ವಿದ್ಯಾಭ್ಯಾಸದ ಜೊತೆಜೊತೆಯಾಗಿ ಬಂದ ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮತಾವಾದ ಮತ್ತು ಮಾರ್ಕ್ಸ್ ಸಿದ್ಧಾಂತಗಳನ್ನು ಓದಿ ಅರಗಿಸಿಕೊಂಡರು. ಇವೆಲ್ಲದರ ಪರಿಣಾಮವೆಂದರೆ ಇಪ್ಪತ್ತನೆಯ ಶತಮಾನದ ಆದಿಭಾಗದ ವೇಳೆಗೆ ಈ ದೇಶಗಳಲ್ಲಿ ಆಧುನಿಕ ರೀತಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಸುಸಂಘಟಿತವಾದ ಹೋರಾಟದ ಪ್ರಾರಂಭ.

೧೯೧೭ರಲ್ಲಿ ರಷ್ಯದಲ್ಲಿ ನಡೆದ ಕ್ರಾಂತಿ ಆಗ್ನೇಯ ಏಷ್ಯದ ನವನಾಯಕರ ಮೇಲೆ ತನ್ನದೇ ಆದ ಪರಿಣಾಮ ಬೀರಿತು. ೧೯೨೦ರ ತರುವಾಯ ಅನೇಕರು ರಷ್ಯನ್ ಕಮ್ಯೂನಿಸ್ಟ್ ತತ್ತ್ವಗಳಿಗೆ ಮಾರುಹೋದರು. ಐರೋಪ್ಯ ರಾಷ್ಟ್ರಗಳ ಬಂಡವಾಳ ಪದ್ಧತಿಯೇ ತಮ್ಮ ರಾಷ್ಟ್ರಗಳ ಆರ್ಥಿಕ ಶೋಷಣೆಗೆ ಕಾರಣ; ಆದ್ದರಿಂದ ಬಂಡವಾಳ ಪದ್ಧತಿಯೇ ವಸಾಹತುಷಾಹಿ ರಾಷ್ಟ್ರಗಳ ತತ್ತ್ವ; ಆ ಪದ್ಧತಿಯನ್ನು ಎದುರಿಸಿದರೆ ವಸಾಹತು ನೀತಿಯನ್ನು ಎದುರಿಸಿದಂತೆ—ಎಂಬದಾಗಿ ಈ ಜನ ವಾದಿಸಿದರು. ಕಮ್ಯೂನಿಸ್ಟ್ ತತ್ತ್ವಗಳನ್ನು ತಮ್ಮ ಹೋರಾಟದಲ್ಲಿ ಅಸ್ತ್ರಗಳನ್ನಾಗಿ ಉಪಯೋಗಿಸಿಕೊಂಡರು. ಆಗ್ನೇಯ ಏಷ್ಯದ ಸಂಕೀರ್ಣ ಸಮಾಜ ರಚನೆಯಲ್ಲಿ ಮಧ್ಯಮ ವರ್ಗವಿಲ್ಲದೆ ಇದ್ದಕಾರಣ ಬಂಡವಾಳ ಪದ್ಧತಿಯಲ್ಲಿ ನಂಬಿಕೆ, ಶ್ರದ್ಧೆ ಇದ್ದವರು ಕೆಲವೇ ಜನರೆನ್ನಬಹುದು. ಬಂಡವಾಳ ಪದ್ಧತಿಯ ವಿರುದ್ಧ ಹೋರಾಡಲು ಇನ್ನೂ ಹೆಚ್ಚಿನ ಸಹಾಯವಾಯಿತು. ಸ್ವಾತಂತ್ರ್ಯ ಸಂಗ್ರಾಮ, ರಾಷ್ಟ್ರೀಯತೆಯ ಹೋರಾಟ—ಎಲ್ಲವನ್ನೂ ಇವರು ನಡೆಸಿದ್ದು ಪಶ್ಚಿಮದ ಬಂಡವಾಳ ಪದ್ಧತಿಗೆ ವಿರುದ್ಧವಾಗಿ.[7]

ಇದರ ಜೊತೆಗೆ ಆಗ್ನೇಯ ಏಷ್ಯದ ಧಾರ್ಮಿಕ ಮತ್ತು ಸಾಮಾಜಿಕ ಸಂಪ್ರದಾಯಗಳು ಈ ದಿಸೆಯಲ್ಲಿ ಸಹಾಯ ಮಾಡಿದುವು. ಧಾರ್ಮಿಕ ಭಾವನೆಗಳು, ಅಧ್ಯಾತ್ಮ, ಆತ್ಮದ ಪರಮೋತ್ಕೃಷ್ಟತೆ, ಮೇಲಾಗಿ ಐಶ್ವರ್ಯ ಮತ್ತು ಭೋಗ ಜೀವನದ ವಿರುದ್ಧವಾದ ಧಾರ್ಮಿಕ ಮೌಲ್ಯಗಳು—ಇವು ಅವರ ಜೀವನದಲ್ಲಿ ಹೆಚ್ಚಿನ ನೂತನ ಪ್ರಭಾವ ಬೀರುವಂತೆ ಮಾಡಿದ್ದುವು. ಇದಕ್ಕಿಂತ ಹಿಂದೆ ಸಮಾಜ ವ್ಯವಸ್ಥೆಯಲ್ಲಿ ಆಳುವವರು ಮತ್ತು ಆಳಿಸಿಕೊಳ್ಳುವವರು ಎಂಬ ಎರಡೇ ಗುಂಪುಗಳಿದ್ದುವು. ರಾಜ, ರಾಜಮನೆತನದವರು, ಆಡಳಿತ ವರ್ಗದವರು ಮತ್ತು ಪುರೋಹಿತ ವರ್ಗದವರು ಆಳರಸರ ಗುಂಪಿಗೆ ಸೇರಿದ್ದರು. ವ್ಯವಸಾಯ ವ್ಯಾಪಾರ

---

[7] Vera Micheles Dean, *The Nature of Non-western World*, New York, 1963, p. 139

ಗಳೇ ಮೊದಲಾದ ಕೆಲಸಕಾರ್ಯಗಳಲ್ಲಿ ನಿರತರಾದ ಅತಿ ಹೆಚ್ಚಿನ ಜನದ್ದು ಆಳಿಸಿಕೊಳ್ಳುವವರ ಗುಂಪಾಗಿತ್ತು. ಇದರಿಂದಾಗಿ ಸಮತಾವಾದದ ಸಿದ್ಧಾಂತಗಳನ್ನು ಹಿಂದಿನಿಂದ ನಡೆದುಬಂದಿದ್ದ ಧಾರ್ಮಿಕ ಮತ್ತು ಸಾಮಾಜಿಕ ಸಂಪ್ರದಾಯಗಳ ಚೌಕಟ್ಟಿನೊಳಗೆ ಅಳವಡಿಸಿಕೊಳ್ಳುವುದು ಸುಲಭವಾಯಿತು. ಈ ವಾತಾವರಣದಲ್ಲಿ ಪಾಶ್ಚಾತ್ಯರ ನಿರಂಕುಶ ವ್ಯಕ್ತಿನಿಷ್ಠ ಆರ್ಥಿಕ ಸಂಸ್ಥೆಯ ಬೆಳೆವಣಿಗೆಗೆ ಅವಕಾಶ ವಿರಲಿಲ್ಲ.[8]

ಸರ್ವೋದಯದ ನಾಯಕರು ವಸಾಹತುನೀತಿಯನ್ನು ಎದುರಿಸುವಾಗ ಪಾಶ್ಚಾತ್ಯ ಬಂಡವಾಳ ಪದ್ಧತಿಯನ್ನು ಎದುರಿಸುವುದು ಅನಿವಾರ್ಯವಾಯಿತು. ಏಕೆಂದರೆ ವಸಾಹತುನೀತಿ ಬಂಡವಾಳ ಪದ್ಧತಿಯ ಒಂದು ಅಂಗ ಎಂಬುದು ಇಂತಹ ನಾಯಕರ ಅಭಿಪ್ರಾಯವಾಗಿತ್ತು. ಬಂಡವಾಳ ಪದ್ಧತಿಯ ವಿರುದ್ಧವಾಗಿ ಸಮತಾವಾದದ ಸಿದ್ಧಾಂತಗಳ ಮೇಲೆ ರೂಪಿತವಾದ ಆರ್ಥಿಕ ರಚನೆ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯವೇ ಮೊದಲಾದ ಭಾವನೆಗಳನ್ನು ಇವರು ಹರಡಿದರು. ಈ ರೀತಿ ಪಾಶ್ಚಾತ್ಯ ಸಂಪ್ರದಾಯದಿಂದ ಕಮ್ಯೂನಿಸ್ಟ್ ತತ್ತ್ವಗಳಿಗೆ ಮಾರುಹೋದವರ ಗುಂಪಿನ ಜೊತೆಗೆ ಪಾಶ್ಚಾತ್ಯರ ಸಂಪ್ರದಾಯ ಮತ್ತು ಸಿದ್ಧಾಂತಗಳನ್ನು ತಮ್ಮ ಹೋರಾಟದಲ್ಲಿ ಅನುಸರಿಸಿದ ಜನರೂ ಇದ್ದರು. ಇವರು ತಮ್ಮ ರಾಷ್ಟ್ರೀಯತೆಯ ಭಾವನೆ ಮತ್ತು ಕಮ್ಯೂನಿಸ್ಟ್ ಸಿದ್ಧಾಂತಗಳನ್ನು ಪರಸ್ಪರ ಹೊಂದಿಸಿಕೊಂಡು ತಮ್ಮ ಸಮಾನ ಶತ್ರುವಾದ ಪಶ್ಚಿಮದ ಬಂಡವಾಳಶಾಹಿಯ ವಿರುದ್ಧವಾಗಿ ಹೋರಾಡಿದರು. ಕಮ್ಯೂನಿಸ್ಟ್ ತತ್ತ್ವಗಳೂ ರಾಷ್ಟ್ರೀಯತೆಯ ಭಾವನೆಗಳೂ ವಸಾಹತುನೀತಿಯ ವಿರುದ್ಧ ಸಂಗ್ರಾಮ ನಡೆಸುವಲ್ಲಿ ಪರಸ್ಪರವಾಗಿ ಪಡೆದಿದ್ದ ನಿಕಟಸಂಬಂಧದ ಅರಿವು ಇತ್ತೀಚಿನ ವರ್ಷಗಳಲ್ಲಿ ಆಗ್ನೇಯ ಏಷ್ಯದಲ್ಲಿ ನಡೆಯುತ್ತಿರುವ ಬೆಳೆವಣಿಗೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.[9]

ಕಮ್ಯೂನಿಸ್ಟ್ ಸಿದ್ಧಾಂತ, ರಾಷ್ಟ್ರೀಯತೆಯ ಭಾವನೆ, ಸಮತಾವಾದ, ಪ್ರಜಾಪ್ರಭುತ್ವ ಮೊದಲಾದ, ಪಶ್ಚಿಮದಿಂದ ಆಗ್ನೇಯ ಏಷ್ಯಕ್ಕೆ ಬಂದಿದ್ದ, ಆಧುನಿಕ ಭಾವನೆಗಳು ಹೆಚ್ಚಿನ ಜನರಿಗೆ ಅರ್ಥವಾಗುವಂತಿರಲಿಲ್ಲ. ಏಕೆಂದರೆ ಬಹು ಹೆಚ್ಚಿನ ಪಾಲು ಜನ ಅವಿದ್ಯಾವಂತರು, ಅನಕ್ಷರಸ್ಥರು, ರೈತ ಜನಾಂಗದವರು. ಪಾಶ್ಚಾತ್ಯ ರೀತಿಯ ವಿದ್ಯಾಭ್ಯಾಸವನ್ನು ಕೈಗೊಂಡವರಿಗೆ ಮಾತ್ರ ಈ ಭಾವನೆಗಳು ಹಿಡಿಸಬಹುದಾಗಿದ್ದುವು. ಅಂಥವರ ಸಂಖ್ಯೆ ಬಹು ಕಡಿಮೆ. ಆದ್ದರಿಂದ ಮೊದ

---

[8] *Ibid.*: pp. 139–140

[9] Claude A. Buss: *Southeast Asia and the World Today*, New York, 1958, pp. 28–29

ಮೊದಲು ಸಾಮಾನ್ಯ ವರ್ಗಕ್ಕೆ ಈ ನಾಯಕರುಗಳ ಸಂದೇಶ ಮುಟ್ಟಿ ಅರ್ಥವಾಗುವುದು ಕಷ್ಟದ ಕೆಲಸವೇ ಆಗಿತ್ತು. ಇದನ್ನು ಸಾಧ್ಯಮಾಡಿದ ಕೀರ್ತಿ ಧಾರ್ಮಿಕ ನಾಯಕರಿಗೆ ಸೇರಬೇಕು. ಆಗ್ನೇಯ ಏಷ್ಯದ ಬೌದ್ಧನಾಯಕರೂ ಇಸ್ಲಾಂ ಧರ್ಮದ ಶ್ರೇಷ್ಠರೂ ಸ್ವಾತಂತ್ರ್ಯಸಂಗ್ರಾಮದಲ್ಲಿ ತಮ್ಮದೇ ಆದ ಪಾತ್ರವಹಿಸಿದರು.

ಐರೋಪ್ಯ ರಾಷ್ಟ್ರಗಳ ವಸಾಹತುನೀತಿಗೆ, ಸಾಮ್ರಾಜ್ಯಷಾಹಿ ತತ್ತ್ವಗಳಿಗೆ ಬಲಿಯಾಗಿ ದೇಶೀಯ ರಾಜರು ತಮ್ಮ ತಮ್ಮ ದೇಶಗಳಲ್ಲಿ ರಾಜಕೀಯ ಮುಖಂಡತ್ವವನ್ನು ಕಳೆದುಕೊಂಡಿದ್ದರು. ಆ ವರ್ಗದ ಅವನತಿಯ ಫಲವಾಗಿ, ಅನೇಕ ದಶಕಗಳ ವರೆಗೆ ನಾಡಿನ ಹಳ್ಳಿಗಳಲ್ಲಿ, ಮೂಲೆಮೂಲೆಗಳಲ್ಲಿ, ಮತಗಳ ಮುಖಂಡರೇ ಆಯಾ ದೇಶಗಳ ವಕ್ತಾರರಾಗಿದ್ದರು. ವಸಾಹತು ಸರ್ಕಾರಗಳು ಕ್ರೈಸ್ತಧರ್ಮವನ್ನು ಆಗ್ನೇಯ ಏಷ್ಯದಲ್ಲಿ ಹರಡಲು ಬಂದಿದ್ದ ಪಾದ್ರಿಗಳಿಗೆ ಉತ್ತೇಜನ ನೀಡಿದ್ದುವು. ಕ್ರೈಸ್ತಮತ ಹರಡುವುದರ ವಿರುದ್ಧ ಧಾರ್ಮಿಕ ನಾಯಕರು ಸಂಘಟನಕಾರ್ಯವನ್ನು ಕೈಗೊಂಡರು. ಸ್ವಧರ್ಮವನ್ನು ಕಾಪಾಡಿಕೊಳ್ಳುವಂತೆ ಜನತೆಗೆ ಕರೆ ಇತ್ತರು. ಮತೀಯ ನಾಯಕರ ಆಚಾರವಿಚಾರಗಳು ಹಳ್ಳಿಯ ರೈತವರ್ಗಕ್ಕೆ ಹೆಚ್ಚಾಗಿ ಅರ್ಥವಾಗುತ್ತಿದ್ದುವು. ಆಧುನಿಕ ರಾಷ್ಟ್ರೀಯತೆಯ ಭಾವನೆ ಮತ್ತು ಕಮ್ಯೂನಿಸಂ ತತ್ತ್ವಗಳು ಅಷ್ಟಾಗಿ ಅರ್ಥವಾಗುತ್ತಿರಲಿಲ್ಲ. ಗ್ರಾಮಗಳಲ್ಲಿ ಮತೀಯ ನಾಯಕರ ವಿಚಾರಧೋರಣೆಗೆ ಹೆಚ್ಚಿನ ಬೆಂಬಲ ದೊರೆಯಿತು. ಹೀಗಾಗಿ ರಾಷ್ಟ್ರೀಯ ಭಾವನೆಗಳು, ಸಮತಾವಾದದ ವಿಚಾರಗಳು, ಧಾರ್ಮಿಕ ಚಟುವಟಿಕೆಗಳು, ಈ ಮೂರೂ ಪಾಶ್ಚಾತ್ಯರ ವಿರುದ್ಧ ಹೂಡಿದ ಅಸ್ತ್ರಗಳು.[10] ಈ ಒಂದೊಂದು ಶಕ್ತಿಯೂ ಆಗ್ನೇಯ ಏಷ್ಯದ ದೇಶಗಳ ಸ್ವಾತಂತ್ರ್ಯಸಂಗ್ರಾಮದಲ್ಲಿ, ರಾಷ್ಟ್ರೀಯತೆಯ ಪ್ರಜ್ಞೆಯನ್ನು ಮೂಡಿಸುವುದರಲ್ಲಿ ತನ್ನದೇ ಆದ ಪಾತ್ರವಹಿಸಿತು. ರಾಷ್ಟ್ರೀಯತಾಭಾವನೆ ಮತ್ತು ಕಮ್ಯೂನಿಸಂ ಸಿದ್ಧಾಂತಗಳು ಶಕ್ತಿಯುತವಾದ, ಆಧುನಿಕ ರೀತಿಯ ಸಂಘಟನ ರೀತಿನೀತಿಗಳನ್ನು ಸ್ವಾತಂತ್ರ್ಯಸಂಗ್ರಾಮಕ್ಕೆ ಒದಗಿಸಿಕೊಟ್ಟರೆ, ಬೌದ್ಧ ಮತ್ತು ಇಸ್ಲಾಂ ಧರ್ಮಗಳ ನಾಯಕರು ಗ್ರಾಮಗಳಲ್ಲಿ ವಾಸಿಸುತ್ತಿದ್ದ ಲಕ್ಷಾಂತರ ಜನರ ಬೆಂಬಲವನ್ನು ಗಳಿಸಿಕೊಡುವುದರಲ್ಲಿ ಸಹಾಯಮಾಡಿದರು. ತೀರ ವಿದ್ಯಾವಂತರು, ಸುತರಾಂ ಅನಕ್ಷರಸ್ಥರು—ಈ ಎರಡು ವರ್ಗಗಳ ಮಧ್ಯೆ ಮತ್ತೊಂದು ವರ್ಗವಿತ್ತು. ಈ ವರ್ಗದ ಹೆಚ್ಚಿನ ಜನ ಪ್ರಾಥಮಿಕ ಮತ್ತು ಪ್ರೌಢ ಮಟ್ಟದ ಶಿಕ್ಷಣ ಪಡೆದಿದ್ದರು. ಪಾಶ್ಚಾತ್ಯರು ಈ ದೇಶಗಳಲ್ಲಿ ವಾಣಿಜ್ಯ–ವ್ಯಾಪಾರ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಈ ಸಂಸ್ಥೆಗಳಲ್ಲಿ ಗುಮಾಸ್ತರೇ ಮೊದಲಾದ ಕೆಳದರ್ಜೆಯ ನೌಕರಿಗಳನ್ನು ಈ

---

[10] Benda and Larkin, *The world of South east Asia*, New York, 1967, chap. 46, 'Filipino critique of Spanish colonization', pp. 173–181

ವರ್ಗದ ದೇಶೀಯರು ಮಾಡುತ್ತಿದ್ದರು. ಈ ಜನಕ್ಕೇ ಆಧುನಿಕ ರಾಷ್ಟ್ರೀಯತೆಯ ಭಾವನೆ ಮತ್ತು ಕಮ್ಯುನಿಸಂ ಸಿದ್ಧಾಂತಗಳು ಹೆಚ್ಚಾಗಿ ಹಿಡಿಸಿದುವು. ಈ ವರ್ಗಕ್ಕೆ ಸೇರಿದವರಲ್ಲಿ ಕೆಲವರು ಸಣ್ಣಪುಟ್ಟ ವ್ಯಾಪಾರಿಗಳೂ ಇದ್ದರು. ಮೇಲೆ ಹೇಳಿದ ಚಳವಳಿಗೆ ಧನಸಹಾಯ ಮಾಡಿದ್ದು ಈ ವರ್ಗ.[11]

ಆಗ್ನೇಯ ಏಷ್ಯದ ಹೆಚ್ಚಿನ ಜನ ರೈತರು. ಪಾಶ್ಚಾತ್ಯ ವಸಾಹತು ನೀತಿಯ ಬಿಸಿ ಅವರಿಗೂ ತಟ್ಟದೆ ಇರಲಿಲ್ಲ. ಪಾಶ್ಚಾತ್ಯರ ಪ್ರಭಾವ ಅವರ ಗ್ರಾಮಜೀವನದ ಮೇಲೆ ಅನೇಕ ರೀತಿಯ ಪರಿಣಾಮಗಳನ್ನುಂಟುಮಾಡಿತ್ತು. ಪಟ್ಟಣಗಳಲ್ಲಿ ತಲೆ ಎತ್ತಿದ ಪಾಶ್ಚಾತ್ಯರ ವಾಣಿಜ್ಯೋದ್ಯಮ ಸಂಸ್ಥೆಗಳೂ ಕೈಗಾರಿಕೆಗಳೂ ಹಳ್ಳಿಯವರನ್ನು ಕೂಲಿಗಾಗಿ ದುಡಿಯಲು ಆಕರ್ಷಿಸಿದುವು. ಕಾಫಿ, ರಬ್ಬರ್ ತೋಟಗಳಲ್ಲೂ ಗಣಿಗಳಲ್ಲೂ ಕೆಲಸಮಾಡಲು ಕೂಲಿ ಜನ ಬೇಕಾಗಿದ್ದರು. ಇದರಿಂದಾಗಿ ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಪ್ರಾರಂಭವಾಯಿತು. ಹೀಗಾಗಿ ಕೂಲಿಗಾರರ ಗುಂಪು ಬೆಳೆಯಿತು.

ದೇಶದ ಜನಸಂಖ್ಯೆ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳು ಬೆಳೆದಂತೆ, ಆಹಾರಪದಾರ್ಥಗಳಿಗೆ ಬೇಡಿಕೆಗಳು ಹೆಚ್ಚಿದ್ದರಿಂದ ಉಳಿದ ರೈತರು ಅದಕ್ಕನುಗುಣವಾಗಿ ವ್ಯವಸಾಯ ಕ್ಷೇತ್ರವನ್ನು ವಿಸ್ತರಿಸಿ, ರಫ್ತುಮಾಡಿ ಹಣ ಗಳಿಸುವ ವ್ಯವಸಾಯೋತ್ಪನ್ನ ವಿಧಾನಗಳನ್ನು ಅಳವಡಿಸಿಕೊಂಡರು. ಇದರಿಂದಾಗಿ ಹಿಂದಿನಿಂದಲೂ ನಡೆದುಕೊಂಡುಬಂದಿದ್ದ ಸಾಂಪ್ರದಾಯಿಕ ವ್ಯವಸಾಯಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳುಂಟಾದುವು. ಇವು ಆದದ್ದು ಮುಖ್ಯವಾಗಿ ದಕ್ಷಿಣ ಬರ್ಮ, ಥೈಲೆಂಡ್ ಮತ್ತು ಇಂಡೋಚೀನಗಳಲ್ಲಿ. ಈ ದೇಶಗಳು ಪ್ರಧಾನವಾಗಿ ಅಕ್ಕಿಯನ್ನು ರಫ್ತುಮಾಡುವ ಕೇಂದ್ರಗಳಾದುವು. ಮಲಯ ಮತ್ತು ಇಂಡೊನೇಷ್ಯಗಳು ರಬ್ಬರ್ ಬೆಳೆಯುವ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಿದುವು. ಹೆಚ್ಚಿನ ಲಾಭಗಳಿಕೆ ಸಾಧ್ಯವಿದ್ದುದರಿಂದ ಈ ವ್ಯವಸಾಯ ಜನರನ್ನು ಆಕರ್ಷಿಸಿತು. ಆದರೆ ಗಳಿಸುವ ಲಾಭ ಅವಲಂಬಿಸಿದ್ದದ್ದು ಪ್ರಪಂಚದ ಮಾರುಕಟ್ಟೆಯಲ್ಲಿ ವ್ಯತ್ಯಾಸವಾಗುತ್ತ ಇದ್ದ ಬೆಲೆಗಳನ್ನೇ. ಬೆಲೆ ಕುಸಿದಾಗ ರೈತರು ಕಂಗೆಟ್ಟರು. ದಿಕ್ಕು ಕಾಣದ ರೈತಜನ ತಮ್ಮ ಅಸಹಾಯಕತೆಗೆ ಐರೋಪ್ಯ ಆಡಳಿತ ಪದ್ಧತಿಯೇ ಕಾರಣವೆಂಬುದನ್ನು ಅರಿತು ಆಂದೋಳನಕ್ಕೆ ಬೆಂಬಲಕೊಡಲು ಪ್ರಾರಂಭಿಸಿದರು.[12]

ಐರೋಪ್ಯ ರಾಷ್ಟ್ರಗಳ ವಸಾಹತುನೀತಿ ದೇಶೀಯರನ್ನು ಶೋಷಿಸುವುದನ್ನೇ

[11] Vera Micheles Dean, *The Nature of the Non-Western World*, New York 1963, P. 140

[12] *Ibid*, pp. 140–141 ; D.G.E. Hall, *A History of Southeast Asia*, London, 198, pp. 667-671

ಪ್ರಧಾನವಾದ ಧ್ಯೇಯವನ್ನಾಗಿಟ್ಟುಕೊಂಡಿತ್ತು. ಡಚ್ಚರಿಂದ ಇಂಡೊನೇಷ್ಯದ ಆಳ್ವಿಕೆ ಇದಕ್ಕೊಂದು ಉದಾಹರಣೆ. ಡಚ್ಚರಿಗೆ ಇಂಡೊನೇಷ್ಯ ಒಂದು ವರಪ್ರಸಾದವಾಗಿತ್ತು. ವಿಶ್ವ ಉತ್ಪಾದಿಸುತ್ತಿದ್ದ ಮೆಣಸಿನಲ್ಲಿ ಸೇ. ೯೨ನ್ನೂ ಕ್ವಿನೀನಿನಲ್ಲಿ ೯೧ನ್ನೂ ಹೊಗೆಸೊಪ್ಪಿನಲ್ಲಿ ೫೦ನ್ನೂ ಸತುವಿನಲ್ಲಿ ೨೦ನ್ನೂ ಸಕ್ಕರೆಯಲ್ಲಿ ೨೦ನ್ನೂ ಪೆಟ್ರೋಲಿಯಂನಲ್ಲಿ ೧೦ನ್ನೂ ಕೊಬ್ಬರಿಯಲ್ಲಿ ೩೧ನ್ನೂ ಉತ್ಪಾದಿಸುತ್ತಿದ್ದದ್ದು ಇಲ್ಲಿ. ಜಗತ್ತಿನಲ್ಲಿ ಇಂಡೊನೇಷ್ಯ ಕುಬೇರ ರಾಷ್ಟ್ರವಾಗಿತ್ತು. ಆದರೆ ದೇಶೀಯರಿಗೆ ಮಾತ್ರ ಈ ಉತ್ಪತ್ತಿಯಲ್ಲಾಗಲಿ, ಲಾಭಗಳಿಕೆಯಲ್ಲಾಗಲಿ ಭಾಗವಿರಲಿಲ್ಲ.

ಡಚ್ಚರು ಇಂಡೋನೇಷ್ಯದ ತಮ್ಮ ಈ ಆಸ್ತಿಯಲ್ಲಿ ೧೯ ಕೋಟಿ ಪೌಂಡುಗಳ ಬಂಡವಾಳವನ್ನು ಎರಡನೆಯ ಮಹಾಯುದ್ಧದ ಮೊದಲನೆಯ ವರ್ಷಗಳಲ್ಲಿ ಸುರಿದಿದ್ದರು. ಅವರ ಮಿತ್ರರಾಗಿದ್ದ ಬ್ರಿಟಿಷರು ಸುರಿದ ಬಂಡವಾಳ ೧೫ ಕೋಟಿ ಪೌಂ. ಹೆಚ್ಚಿನ ರಬ್ಬರ್ ತೋಟಗಳು, ಹೊಲಗಳು, ಸಕ್ಕರೆ ಕಾರ್ಖಾನೆಗಳು ಮತ್ತು ಚಹ ಮತ್ತು ಕಾಫಿ ತೋಟಗಳು ಡಚ್ಚರ, ಬ್ರಿಟಿಷರ ಮತ್ತು ಅಮೆರಿಕನರ ಅಧೀನವಾಗಿದ್ದುವು. ಬ್ರಿಟಿಷ್ ಮತ್ತು ಷೆಲ್ ಕಂಪನಿಗಳು ಪರಸ್ಪರ ಸಹಕಾರದಿಂದಲೇ ಭೂಗರ್ಭದಿಂದ ಎಣ್ಣೆಯನ್ನು ಮೇಲೆ ಹೀರುತ್ತಿದ್ದವು. ೧೯೨೯ರ ವರೆಗೆ ಹಾಲೆಂಡ್ ಪ್ರತಿವರ್ಷ ೧೫ ಕೋಟಿ ಪೌಂಡುಗಳ ಲಾಭಗಳಿಸುತ್ತಿತ್ತು. ೧೯೩೬ ರಿಂದ ೧೯೪೨ರ ಮಧ್ಯಕಾಲದಲ್ಲಿ ಪ್ರತಿವರ್ಷ ಮೂರೂಕಾಲು ಕೋಟಿ ಪೌಂಡುಗಳ ಲಾಭಮಾಡಿತು. ಇಲ್ಲಿ ಹೂಡಿದ ಬಂಡವಾಳಕ್ಕೆ ಪ್ರತಿವರ್ಷ ನಾಲ್ಕುಕೋಟಿ ಪೌಂಡುಗಳಷ್ಟು ಬಡ್ಡಿಯೇ ಸಲ್ಲುತಿತ್ತು. ೧೯೪೦ರಲ್ಲಿ ಇಂಡೊನೇಷ್ಯದ ಆಮದು ಮೌಲ್ಯ ೪೩ ಕೋಟಿ ಗಿಲ್ಡರ್‌ಗಳಾಗಿದ್ದರೆ ಅದರ ರಫ್ತಿನ ಮೌಲ್ಯ ೮೮ ಕೋಟಿ ಗಿಲ್ಡರ್. ಪ್ರಜಾಸಂಖ್ಯೆಯಲ್ಲಿ ಡಚ್ ಹಾಗೂ ಇನ್ನಿತರ ಐರೋಪ್ಯರ ಪ್ರಮಾಣ ಸೇ. ೫. ಆದರೆ, ದೇಶದ ಸಂಪತ್ತಿನಲ್ಲಿ ಸೇ. ೬೫ರಷ್ಟು ಡಚ್ಚರ ಪಾಲಾಗುತ್ತಿತ್ತು. ಇಂಡೊನೇಷ್ಯನರ ಸಂಖ್ಯೆ ಸೇ. ೮೫. ಆದರೆ ರಾಷ್ಟ್ರದ ಐಶ್ವರ್ಯದಲ್ಲಿ ಅವರ ಪಾಲು ಸೇ. ೧೨ರಷ್ಟು ಮಾತ್ರ. ದೇಶೀ ಜನ ಪಾಶ್ಚಾತ್ಯರಿಗಾಗಿ ರಬ್ಬರ್, ಚಹ, ಕಾಫಿ, ಹೊಗೆಸೊಪ್ಪು ಮತ್ತು ತೆಂಗು ತೋಟಗಳಲ್ಲಿ ದುಡಿಯುವ ಕೂಲಿಗಳಾಗಿದ್ದರು. ಹೆಚ್ಚುಕಡಿಮೆ ನಾಲ್ಕು ರೀತಿಯ ಶೋಷಣೆಯ ಪರಿಸ್ಥಿತಿ ಆಗ್ನೇಯ ಏಷ್ಯದ ವಸಾಹತು ಪ್ರದೇಶಗಳಲ್ಲೆಲ್ಲ ನೆಲೆಸಿತ್ತೆನ್ನಬಹುದು. ಪಾಶ್ಚಾತ್ಯ ಪದ್ಧತಿಯ ವಿದ್ಯಾಭ್ಯಾಸ ನಡೆಸಿದ ದೇಶೀ ಜನ ಎರಡನೆಯ ಮಹಾಯುದ್ಧ ಪ್ರಾರಂಭವಾಗುವುದಕ್ಕೆ ಮೊದಲು ಈ ಪರಿಸ್ಥಿತಿಯ ವಿರುದ್ಧ ದಂಗೆ ಎದ್ದಿದ್ದರು. ಆಡಳಿತಗಾರರು ದಂಗೆಯನ್ನು ಹತ್ತಿಕ್ಕಿ ಮುಖಂಡರನ್ನು ಸೆರೆಯಲ್ಲಿಟ್ಟರು. ಇದರಿಂದ ರಾಷ್ಟ್ರೀಯತೆಯ ಭಾವನೆ ಅಳಿಸಿಹೋಗುವ ಬದಲು ಇನ್ನೂ ಹೆಚ್ಚಿನ ಬೆಂಬಲ ಪಡೆಯಿತು, ತೀವ್ರವಾಯಿತು.[13]

---

[13] Furnivall, J. S. : *Netherlands India: A study of Plural Economy*, Cambidge and Now York, 1944, pp. 60-62

ಎರಡನೆಯ ಮಹಾಯುದ್ಧದ (೧೯೩೯–೪೫) ಕಾಲ ಆಗ್ನೇಯ ಏಷ್ಯದ ರಾಷ್ಟ್ರಗಳ ಸ್ವಾತಂತ್ರ್ಯಸಂಗ್ರಾಮದ ಇತಿಹಾಸದಲ್ಲಿ ಒಂದು ಅತ್ಯಂತ ಪ್ರಮುಖ ಘಟ್ಟವೆನ್ನಬಹುದು. ೧೯೪೧ರಲ್ಲಿ ಜಪಾನ್ ಮಹಾಯುದ್ಧದಲ್ಲಿ ಧುಮುಕಿ ಇಂಡೋಚೀನ, ಥೈಲೆಂಡ್, ಮಲಯ, ಇಂಡೊನೇಷ್ಯ, ಬರ್ಮ ಮೊದಲಾದ ಒಂದೊಂದೇ ದೇಶಗಳನ್ನು ಆಕ್ರಮಿಸಿತು. ೧೯೪೧ರ ಆದಿಭಾಗದಿಂದ ೧೯೪೫ರ ವರೆಗೆ ಸುಮಾರು ೪೦ ತಿಂಗಳುಗಳ ಕಾಲ ಜಪಾನೀಯರು ಆಗ್ನೇಯ ಏಷ್ಯವನ್ನು ಆಳಿ ಅನೇಕ ಮೂಲಭೂತವಾದ ಬದಲಾವಣೆಗಳನ್ನು ಜಾರಿಗೆ ತಂದು ಒಂದು ಪಲ್ಲಟವನ್ನುಂಟುಮಾಡಿದರು. ಜಪಾನೀಯರು ಸ್ವಾತಂತ್ರ್ಯನಾಯಕರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಇಂಡೊನೇಷ್ಯದ ಮುಖಂಡರಾದ ಸುಕಾರ್ನೊ, ಹಟ್ಟಾ ಮೊದಲಾದವರು ವಿಮೋಚನೆಹೊಂದಿ ಮೊದಮೊದಲು ಜಪಾನೀಯರಿಗೆ ಬೆಂಬಲ ಕೊಟ್ಟರು. "ಏಷ್ಯ ಏಷ್ಯನರಿಗೆ" ಎಂಬ ಜಪಾನರ ಸೊಲ್ಲಿಗೆ ಆಗ್ನೇಯ ಏಷ್ಯದ ನಾಯಕರು ಮರುಳಾದದ್ದುಂಟು. ಜಪಾನೀಯರು ಸ್ವಾತಂತ್ರ್ಯ ನೀಡಬಹುದೆಂಬ ಲವಲವಿಕೆಯಿಂದ ಅನೇಕರು ಅವರಿಗೆ ಸಹಕಾರ ನೀಡಿದರು. ದೇಶೀಯರ ಸಹಕಾರ ಪಡೆಯಬೇಕಾಗಿದ್ದರೆ ರಾಷ್ಟ್ರೀಯ ಚಳವಳಿಗೆ ಪ್ರೋತ್ಸಾಹ ಕೊಡುವುದವಶ್ಯವೆಂಬುದು ಜಪಾನರಿಗೂ ಗೊತ್ತಿತ್ತು. ಆದರೆ ರಾಷ್ಟ್ರೀಯ ಚಳವಳಿ ಪ್ರಬಲವಾದರೆ ತಮ್ಮ ಸ್ಥಾನಮಾನಕ್ಕೆ ಗಂಡಾಂತರ ಬರುವುದೆಂಬುದನ್ನೂ ಅವರು ಮನಗಂಡಿದ್ದರು. ಆದ್ದರಿಂದ ಅವರು ಮಂದಮಾರ್ಗ ಹಿಡಿದರು. ರಾಷ್ಟ್ರಾಭಿಮಾನಿ ದೇಶೀ ನಾಯಕರಿಗೆ ಇದರಿಂದ ನಿರಾಶೆಯಾಯಿತು. ಏಷ್ಯ ಏಷ್ಯನರಿಗೆ ಎಂಬ ಸೊಲ್ಲಿನ ಅರ್ಥವೆಂದರೆ ಏಷ್ಯ ಜಪಾನರಿಗೆ ಎನ್ನುವಂತೆ ಭಾಸವಾಯಿತು. ಜಪಾನೀ ನೊಗವನ್ನು ಕಳಚಲು ಅವರು ಯತ್ನಿಸತೊಡಗಿದರು. ಆಗ್ನೇಯ ಏಷ್ಯದ ರಾಷ್ಟ್ರೀಯ ಮುಖಂಡರುಗಳಾದ ಸುಕಾರ್ನೊ, ಹಟ್ಟಾ, ಷರಿಫುದ್ದೀನ್, ಹೋ ಚಿ-ಮಿನ್ ಮುಂತಾದವರು ದೇಶಪ್ರೇಮಿಗಳನ್ನು ಒಳಗೊಳಗೇ ಜಪಾನರ ವಿರುದ್ಧ ಸಂಘಟಿಸುತ್ತಿದ್ದರು. ಹೊರಗಡೆ ಅವರು ಸಹಕಾರದ ಸೋಗು ಹಾಕುವುದು ಅನಿವಾರ್ಯವಾಗಿತ್ತು. ಇಲ್ಲದಿದ್ದರೆ ರಾಷ್ಟ್ರೀಯ ಶಿಸ್ತು, ಸಂಘಟನೆ ಆಗ ಶಕ್ಯವಾಗುತ್ತಿರಲಿಲ್ಲ.[14] ೧೯೪೩ರಲ್ಲಿ ಇಂಡೊನೇಷ್ಯದ ಸುಕಾರ್ನೊ ಬಹಿರಂಗವಾಗಿ ಗೆರಿಲಾ ದಳವನ್ನು ರಚಿಸತೊಡಗಿದರು.

ಜಪಾನೀ ಆಳ್ವಿಕೆಯಲ್ಲಿ ಆಗ್ನೇಯ ಏಷ್ಯದಲ್ಲಿ ರಾಷ್ಟ್ರೀಯ ಚಳವಳಿ ವಿರಾಟ್ ಸ್ವರೂಪ ತಾಳಿದುದೇನೋ ನಿಜ. ಅದರ ಸದುಪಯೋಗ ಮಾಡಿಕೊಳ್ಳುವ ಜಪಾನರ ಆಸೆ ಈಡೇರಲಿಲ್ಲ, ಅಷ್ಟೆ. ಜಪಾನರಿಗೆ ಇದರಿಂದ ಪ್ರಾಣಸಂಕಟ ಬಂತು. ಸಾಮ್ರಾಜ್ಯವಾದಕ್ಕೆ ರಾಷ್ಟ್ರೀಯ ಮುಖಂಡರು ಕಡುಹಗೆಗಳು. ಅದಕ್ಕೆ ಜಪಾನೀ

[14] Vera Micheles Dean, *op. cit.*, pp. 142–143

ಸಾಮ್ರಾಜ್ಯವಾದರೂ ಒಂದೇ, ಐರೋಪ್ಯ ಸಾಮ್ರಾಜ್ಯವಾದರೂ ಒಂದೇ. ಸಾಮ್ರಾಜ್ಯವಾದ ಮತ್ತು ರಾಷ್ಟ್ರೀಯವಾದದೊಳಗೆ ಸ್ನೇಹಭಾವನೆ ಎಂದಿಗೂ ಸಾಧ್ಯವಿರಲಿಲ್ಲ. ಐರೋಪ್ಯರಂತೆ ಜಪಾನರೂ ಸಾಮ್ರಾಜ್ಯವಾದಿಗಳಾಗಿದ್ದರು. ಕಳೆದ ಅರ್ಧ ಶತಮಾನದ ಜಪಾನೀ ಇತಿಹಾಸವೇ ಅದಕ್ಕೆ ಸಾಕ್ಷಿ. ಸಾಮ್ರಾಜ್ಯಾಭಿಲಾಷೆಯಲ್ಲದೆ ಇರುತ್ತಿದ್ದರೆ ಕೊರಿಯ, ಚೀನ ಮೊದಲಾದ ದೇಶಗಳಿಗೆ ಜಪಾನ್ ದಂಡೆತ್ತಿಹೋಗುತ್ತಿದ್ದಿಲ್ಲ.

ಜಪಾನೀ ಆಳ್ವಿಕೆಯಲ್ಲಿ ಆಗ್ನೇಯ ಏಷ್ಯದಲ್ಲಿ ರಾಷ್ಟ್ರೀಯತಾಭಾವನೆ ಹೆಚ್ಚಿನ ಪ್ರೋತ್ಸಾಹ ಪಡೆಯಿತೆಂದು ಹೇಳಬಹುದು. ಜಪಾನೀಯರ ಕೈಯಲ್ಲಿ ಸೋತ ಪಾಶ್ಚಾತ್ಯರು ದೇಶೀಯರ ದೃಷ್ಟಿಯಲ್ಲಿದ್ದ ಸ್ಥಾನಮಾನಗಳನ್ನು ಕಳೆದುಕೊಂಡರು. ಜಪಾನೀಯರು ಸರ್ಕಾರದ ಮತ್ತು ವಾಣಿಜ್ಯ ಉದ್ಯಮದ ವಿಭಾಗಗಳಲ್ಲಿ ಉನ್ನತ ಸ್ಥಾನಗಳಲ್ಲಿದ್ದ ಪಾಶ್ಚಾತ್ಯರನ್ನು ತೆಗೆದುಹಾಕಿ, ದೇಶೀಯರಿಗೆ ಗೌರವದ ಹುದ್ದೆಗಳನ್ನು ಮೊತ್ತಮೊದಲಿಗೆ ಕೊಟ್ಟರು. ಪಾಶ್ಚಾತ್ಯರ ಸೋಲಿನಿಂದಾಗಿ ಅವರು ಅಜೇಯರೆಂಬ ನಂಬಿಕೆ ಸುಳ್ಳಾಯಿತು. ಅನೇಕ ಅಮೆರಿಕನ್ ಮತ್ತು ಐರೋಪ್ಯರನ್ನು ಜಪಾನೀಯರು ಸಾರ್ವಜನಿಕ ಕ್ಷೇತ್ರಗಳಿಂದ ತಳ್ಳಿಹಾಕಿದ್ದಲ್ಲದೆ, ಅವರನ್ನು ಜೈಲಿನಲ್ಲಿ ಕೂಡಿಹಾಕಿ, ಅವರಿಂದ ಕಡ್ಡಾಯ ಶ್ರಮವನ್ನೂ ಪಡೆದರು. ಪಾಶ್ಚಾತ್ಯರಿಗೆ ಮಿಂಚಿನಂತೆ ಸಂಭವಿಸಿ ಇಂತಹ ಅವನತಿ ಅವರ ಬಗ್ಗೆ ಇದ್ದ ಶ್ರೇಷ್ಠ ಭಾವನೆಗಳನ್ನು ನಿರ್ಮೂಲ ಮಾಡಿತು. ಅವರ ಸೋಲು ದೇಶೀ ಜನಾಂಗಗಳ ಮೇಲೆ ತನ್ನದೇ ಆದ ಪ್ರಭಾವಮುದ್ರೆಯನ್ನು ಒತ್ತಿದ್ದಲ್ಲದೆ, ಏಷ್ಯನರು ಪಾಶ್ಚಾತ್ಯ ಜನಾಂಗದವರಿಗಿಂತ ಏನೂ ಕೀಳಲ್ಲ ಎಂಬುದನ್ನೂ ತೋರಿಸಿಕೊಟ್ಟಿತು.[15] ಜಪಾನೀಯರ ವಿಜಯ ಏಷ್ಯನ್ ಜನಾಂಗದವರ ವಿಜಯ ಎನ್ನುವ ಮನೋಭಾವ ಹಲವರಲ್ಲಿತ್ತು. ಇಂಥ ಭಾವನೆಗೆ ಜಪಾನೀಯರ "ಏಷ್ಯ ಏಷ್ಯನರಿಗೆ" ಎಂಬ ಕೂಗು ಪುಟಕೊಟ್ಟಿತು. ಜಪಾನೀಯರು ರಾಷ್ಟ್ರೀಯತೆಯ ಭಾವನೆಗಳನ್ನು ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಪ್ರಚೋದಿಸಿದ್ದಲ್ಲದೆ, ರೇಡಿಯೊ ಮತ್ತು ವೃತ್ತಪತ್ರಿಕೆಗಳ ಮೂಲಕ ಪಾಶ್ಚಾತ್ಯರ ವಸಾಹತುನೀತಿಯ ವಿರುದ್ಧ ಘೋಷಣೆಗಳನ್ನು ಯಥಾವತ್ತಾಗಿ ಪ್ರಸಾರಮಾಡಿದರು. ಹಳ್ಳಿಹಳ್ಳಿಗಳಿಗೂ ಜಪಾನೀಯರ ಈ ಸಂದೇಶ ತಲಪುವಂತಾಯಿತು.

ಪಾಶ್ಚಾತ್ಯರ ವಸಾಹತು ಸರ್ಕಾರಗಳಲ್ಲಿ, ಉನ್ನತ ಹುದ್ದೆಯನ್ನೇರುವುದು ಕನಸಿನ ಮಾತಾಗಿದ್ದು ಜಪಾನೀಯರ ಆಳ್ವಿಕೆಯಲ್ಲಿ ದೇಶೀಯರು ಉನ್ನತ ಸ್ಥಾನ, ಮಾನ, ಗೌರವಗಳನ್ನು ಪಡೆಯುವಂತಾಯಿತು. ಗೌರವದ ಜೊತೆಗೆ ಇಂಥ

---

[15] Claude A. Buss, *Southeast Asia and the world Today*, New York 1958, pp. 36–38

ಬಡ್ತಿಗಳಿಂದ ಆಡಳಿತದ ಅನುಭವ ಬೆಳೆಯಿತು. ಪಾಶ್ಚಾತ್ಯ ರಾಷ್ಟ್ರಗಳ ವಿರುದ್ಧ ಕಟ್ಟಕಡೆಯ ಹೋರಾಟ ನಡೆಸಲು ಜಪಾನೀಯರು ಭಾಗಶಃ ಮಿಲಿಟರಿ ಸಂಸ್ಥೆಗಳನ್ನು ಸಂಘಟಿಸಿದ್ದಲ್ಲದೆ, ದೇಶೀಯರ ಸೈನ್ಯಗಳನ್ನು ರಚಿಸಿದರು. ದೇಶೀಯರನ್ನು ಸೈನ್ಯದಲ್ಲಿ ಉನ್ನತ ಹುದ್ದೆಗಳಿಗೆ ನೇಮಕ ಮಾಡಿದರು. ಇದರ ಉದ್ದೇಶ "ಪಾಶ್ಚಾತ್ಯ ರಾಷ್ಟ್ರಗಳ ವಿರುದ್ಧ ಹೋರಾಟ". ಇದೊಂದು ಮುಖ್ಯವಾದ ಬದಲಾವಣೆ. ಏಕೆಂದರೆ, ಫಿಲಿಫೈನ್ಸ್ ವಿನಾ ಉಳಿದ ರಾಷ್ಟ್ರಗಳಲ್ಲಿ ಜಪಾನೀಯರಿಗೆ ಹಿಂದೆ ಇದ್ದ ವಸಾಹತು ಸರ್ಕಾರಗಳು ದೇಶೀಯರಿಗೆ ಹೆಚ್ಚಿನ ಮಿಲಿಟರಿ ಶಿಕ್ಷಣವನ್ನು ಕೊಡಲು ನಿರಾಕರಿಸಿದ್ದುವು. ಆದರೆ ಈಗ ಜಪಾನೀಯರ ನೀತಿಯಿಂದಾಗಿ ಆಗ್ನೇಯ ಏಷ್ಯದಲ್ಲಿ ನವೀನವಾದ ಮಿಲಿಟರಿ ಮುಖಂಡರುಗಳ ಗುಂಪೊಂದು ಸೃಷ್ಟಿಯಾಯಿತು. ಮಹಾಯುದ್ಧ ಮುಗಿದ ತರುವಾಯ ಪಾಶ್ಚಾತ್ಯರು ತಮ್ಮ ಮೊದಲ ಹತೋಟಿಯನ್ನು ಹೇರಲು ಬಂದಾಗ ಅವರ ವಿರುದ್ಧ ಶಸ್ತ್ರಾಸ್ತ್ರಸಜ್ಜಿತರಾಗಿ ಹೋರಾಡಲು ಈ ಮಿಲಿಟರಿ ಅನುಭವ ಬಹಳ ಮಹತ್ವದ್ದಾಗಿತ್ತು.[16]

ಬರ್ಮ ಮತ್ತು ಇಂಡೊನೇಷ್ಯಗಳಲ್ಲಿ ಬ್ರಿಟಿಷರ ಮತ್ತು ಡಚ್ಚರ ವಿರುದ್ಧ ಇಂಥ ಮುಖಂಡರು ಹೋರಾಡಿದರು. ಮಿಲಿಟರಿ ಶಿಕ್ಷಣ ಅನೇಕ ದೇಶೀ ಯುವಕರಿಗೆ ಹೊಸದೊಂದು ಕ್ಷೇತ್ರವನ್ನೇ ತೆರೆಯಿತು. ಇಂಥ ಮಿಲಿಟರಿ ವರ್ಗಕ್ಕೆ ಸೇರಿದ ಮುಖಂಡರು ಆಗ್ನೇಯ ಏಷ್ಯದ ನವೀನ ರಾಷ್ಟ್ರಗಳಲ್ಲಿ ಅಷ್ಟು ಕ್ರಿಯಾತ್ಮಕವಲ್ಲದಿದ್ದರೂ ಹೆಚ್ಚಿನ ಪ್ರಭಾವವನ್ನು ಇವತ್ತಿಗೂ ಬೀರುತ್ತಿದ್ದಾರೆ. ಒಟ್ಟಿನಲ್ಲಿ ಮಹಾಯುದ್ಧದ ವರ್ಷಗಳಲ್ಲಿ ಜಪಾನೀಯರ ಆಳ್ವಿಕೆಯಿಂದಾಗಿ ರಾಷ್ಟ್ರೀಯತೆಯ ಭಾವನೆಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತೆನ್ನಬಹುದು.

ಪಾಶ್ಚಾತ್ಯ ರಾಷ್ಟ್ರಗಳಿಂದ ತಮಗೆ ಸೋಲು ಖಂಡಿತವೆಂಬ ಸೂಚನೆಗಳು ಕಂಡುಬರುತ್ತಿದ್ದಂತೆ ಜಪಾನೀಯರು ೧೯೪೩ರ ವೇಳೆಗೆ ಬರ್ಮ ಮತ್ತು ಫಿಲಿಪೀನ್ಸ್‌ಗೆ ಸಂಪೂರ್ಣ "ಸ್ವಾತಂತ್ರ್ಯ"ವನ್ನು ಕೊಟ್ಟರು. ಆಗಸ್ಟ್ ೧೯೪೫ರಲ್ಲಿ ಜಪಾನ್ ಶರಣಾಗತವಾಯಿತು. ಈ ಕಾಲಕ್ಕೆ ಸ್ವಲ್ಪ ಮುಂಚೆ ಇಂಡೊನೇಷ್ಯಕ್ಕೂ ಅವರು ಸಂಪೂರ್ಣ "ಸ್ವಾತಂತ್ರ್ಯ" ಕೊಟ್ಟರು. ಇಂಡೊನೇಷ್ಯದಲ್ಲಿ ಸುಕಾರ್ನೊ ನೇತೃತ್ವದಲ್ಲಿ ಗಣರಾಜ್ಯದ ಸ್ಥಾಪನೆಯಾಯಿತು. ಯುದ್ಧ ಮುಗಿದ ಅನಂತರ ಬ್ರಿಟನ್, ಫ್ರಾನ್ಸ್, ನೆದರ್‌ಲೆಂಡ್ಸ್ ದೇಶಗಳು ತಮ್ಮ ತಮ್ಮ ವಸಾಹತುಗಳಿಗೆ ವಾಪಸಾಗಲು ಪ್ರಯತ್ನ ನಡೆಸಿದವು. ಆ ವೇಳೆಗೆ ರಾಷ್ಟ್ರಪ್ರಜ್ಞೆ ಪ್ರಬಲವಾಗಿ ಬೆಳೆದಿದ್ದು, ದೇಶೀಯರು ದಾಸ್ಯದ ನೊಗವನ್ನು ಮತ್ತೆ ಹೊರಲು ಸಿದ್ಧರಿರಲಿಲ್ಲ. ಅನೇಕ ದೇಶಗಳಲ್ಲಿ ಹಿಂಸಾತ್ಮಕ ಹೋರಾಟ ನಡೆಸಿ ಸ್ವಾತಂತ್ರ್ಯವನ್ನು ಪಡೆಯಬೇಕಾಯಿತು. ಉಳಿದೆಡೆಗಳಲ್ಲಿ ಕಾಲೋಚಿತ ಬುದ್ಧಿ ಇದ್ದ ಸಾಮ್ರಾಜ್ಯಶಾಹಿ

---

[16] Vera Micheles Dean, *op. cit* p. 143

ರಾಷ್ಟ್ರಗಳು ತಾವೇ ಮುಂದಾಗಿ ಸ್ವಾತಂತ್ರ್ಯ ಘೋಷಿಸಿ ದೇಶೀಯರ ಸ್ನೇಹವನ್ನು ಉಳಿಸಿಕೊಂಡುವು. ಇಂಡೊನೇಷ್ಯ ಮತ್ತು ವಿಯಟ್ನಾಂಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಡಚ್ಚರ ಮತ್ತು ಫ್ರೆಂಚರ ವಿರುದ್ಧ ಹಿಂಸಾತ್ಮಕ ಹೋರಾಟಗಳಾದುವು. ಇಂಡೊನೇಷ್ಯದಲ್ಲಿ ೧೯೪೫ರಿಂದ ೧೯೪೯ರ ವರೆಗೆ ಇಂಥ ಹೋರಾಟ ನಡೆದು ಕೊನೆಗೆ ಅನಿವಾರ್ಯವಾಗಿ ಡಚ್ಚರು ಸ್ವಾತಂತ್ರ್ಯ ಘೋಷಿಸಬೇಕಾಯಿತು. ವಿಯಟ್ನಾಂ ಹೊ ಚಿ-ಮಿನ್ಹರ ನಾಯಕತ್ವದಲ್ಲಿ ಫ್ರೆಂಚರ ವಿರುದ್ಧ ೧೯೪೬ರಿಂದ ೧೯೫೪ರ ವರೆಗೆ ಇಂಥ ಹಿಂಸಾತ್ಮಕ ಹೋರಾಟ ನಡೆಸಿ ಸ್ವಾತಂತ್ರ್ಯ ಪಡೆಯಿತು. ಫಿಲಿಪೀನ್ಸ್‌ನಲ್ಲಿ ಮಾತ್ರ ಇಂಥ ಹೋರಾಟದ ಆವಶ್ಯಕತೆ ಕಾಣಲಿಲ್ಲ. ಅಮೆರಿಕನರು ಮಹಾಯುದ್ಧಕ್ಕೆ ಮುಂಚೆಯೇ ಫಿಲಿಪೀನ್ಸ್‌ಗೆ ೧೯೪೬ರಲ್ಲಿ ಸ್ವಾತಂತ್ರ್ಯ ಕೊಡುವುದಾಗಿ ಘೋಷಿಸಿದ್ದರು. ಬ್ರಿಟಿಷರು ಬರ್ಮದಲ್ಲಿ ಯಾವ ಹೆಚ್ಚಿನ ಘಟನೆಗಳನ್ನೂ ಎದುರಿಸದೆ ೧೯೪೮ರಲ್ಲಿ ಸ್ವಾತಂತ್ರ್ಯ ಘೋಷಿಸಿದರು. ೧೯೫೭ರಲ್ಲಿ ಮಲಯ ಬ್ರಿಟಿಷರಿಂದ ಸ್ವಾತಂತ್ರ್ಯ ಗಳಿಸಿತು. ಅನೇಕ ಶತಮಾನಗಳ ಪರಕೀಯ ದಾಸ್ಯದಿಂದ ಹೀಗೆ ಮುಕ್ತಿಗೊಂಡ ಆಗ್ನೇಯ ಏಷ್ಯನ್ ರಾಷ್ಟ್ರಗಳು ತಮ್ಮ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಭವಿಷ್ಯವನ್ನು ರೂಪಿಸಿಕೊಳ್ಳುವ ಕಾಲವಿನ್ನೂ ಬರಬೇಕಾಗಿದೆ. ಎರಡು ವಿಭಿನ್ನ ಆಡಳಿತಗಳಿಗೆ ಒಳಪಟ್ಟಿರುವ ವಿಯಟ್ನಾಂ ದೇಶವನ್ನುಳಿದು, ಆಗ್ನೇಯ ಏಷ್ಯದ ಎಲ್ಲ ರಾಷ್ಟ್ರಗಳೂ ವಿಶ್ವಸಂಸ್ಥೆಯ ಸದಸ್ಯ-ರಾಷ್ಟ್ರಗಳಾಗಿವೆ. ರಾಷ್ಟ್ರೀಯತೆಯ ಭಾವನೆಗಳಿಗೆ ದೊರೆತ ಪ್ರಚಂಡ ವಿಜಯ ಈ ಜನಾಂಗಗಳ ಆಂತರಿಕ ಶಕ್ತಿಯನ್ನು ಹೊರಗೆಡಹಿ ಅವರನ್ನು ಉತ್ಸಾಹದಿಂದ ರಾಷ್ಟ್ರ ಕಟ್ಟುವ ಮಹತ್ಕಾರ್ಯದಲ್ಲಿ ಹುರಿದುಂಬಿಸಿದೆ. ರಾಷ್ಟ್ರಪ್ರಜ್ಞೆ ಅವರನ್ನು ಪರಕೀಯ ದಾಸ್ಯದ ಎಲ್ಲ ಕುರುಹುಗಳನ್ನೂ ತೊಡೆದುಹಾಕಿ, ಆಧುನಿಕ ರೀತಿಯನ್ನು ಅನುಷ್ಠಾನಕ್ಕೆ ತರಲು ಪ್ರೇರೇಪಿಸಿದೆ. ಈ ದೇಶಗಳ ನಾಯಕರ ಪ್ರಬಲ ಹಂಬಲವಾದ ಸ್ವಾತಂತ್ರ್ಯಸಂಪಾದನೆಯ ಆಕಾಂಕ್ಷೆ ರಾಜಕೀಯವಾಗಿ ಸಫಲವಾಗಿದೆಯಾದರೂ, ಅವರ ಮುಂದೆ ರಾಷ್ಟ್ರ ಕಟ್ಟುವ ಮಹತ್ ಕಾರ್ಯದ ಅರಿವು, ಎದುರಿಸಬೇಕಾದ ಸಮಸ್ಯೆಗಳು, ಕಷ್ಟನಷ್ಟಗಳು ಎಲ್ಲವೂ ಇವೆ. ಅವನ್ನು ಎದುರಿಸಿ, ತಮ್ಮ ಸಂಸ್ಕೃತಿ ಮತ್ತು ಇತಿಹಾಸಪರಂಪರೆಗಳ ಭದ್ರಬುನಾದಿಯ ಮೇಲೆ ಆಧುನಿಕ ರಾಷ್ಟ್ರಗಳನ್ನು ಕಟ್ಟುತ್ತಾರೆಂಬ ಶುಭಸೂಚನೆ ಕಾಣಬರುತ್ತಿದೆ.

ಆಗ್ನೇಯ ಏಷ್ಯದ ವೈಶಿಷ್ಟ್ಯ

ರಾಷ್ಟ್ರೀಯ ಸಂಘಟನೆಯ ದೃಷ್ಟಿಯಿಂದ ಆಗ್ನೇಯ ಏಷ್ಯದ ದೇಶಗಳಲ್ಲಿ ಕಂಡುಬರುವ ಪರಿಸ್ಥಿತಿಗಳೂ ಸಮಸ್ಯೆಗಳೂ ಬಹಳ ವೈವಿಧ್ಯಮಯ. ಆದರೂ ಅವುಗಳ ಪಶ್ಚಿಮಕ್ಕಿರುವ ನೆರೆ ರಾಜ್ಯಗಳಿಂದ ಭಿನ್ನವೆನಿಸುವ ಕೆಲವು ಲಕ್ಷಣಗಳು ಅವಕೆಲ್ಲ ಸಾಮಾನ್ಯವಾಗಿವೆ. ಇಂಡೊನೇಷ್ಯವನ್ನು ಬಿಟ್ಟು ಉಳಿದೆಲ್ಲ ದೇಶಗಳ ಜನ ಸಂಖ್ಯೆಗಳು ಭಾರತ ಅಥವಾ ಪಾಕಿಸ್ತಾನದ ಜನಸಂಖ್ಯೆಗಿಂತ ಕಡಿಮೆ. ಇಂಡೊನೇಷ್ಯದ ಜನಸಂಖ್ಯೆ ಮಾತ್ರ ಪಾಕಿಸ್ತಾನದ್ದಕ್ಕಿಂತ ಬಹುಶಃ ಸ್ವಲ್ಪ ಹೆಚ್ಚು. ಅವುಗಳ ಭೂಪ್ರದೇಶಗಳು ಭಾರತದ ಭೂಪ್ರದೇಶದಂತೆ ಸಾಮಾನ್ಯವಾಗಿ ಅಡಕವಾಗಿವೆ. ಆದರೆ ಇಂಡೊನೇಷ್ಯ ಮತ್ತು ಫಿಲಿಪೀನ್ಸ್ ಇವು ಮಾತ್ರ ವಿವಿಧ ವಿಸ್ತೀರ್ಣಗಳ ಅನೇಕ ದ್ವೀಪಗಳಾಗಿ ಛಿದ್ರವಾಗಿವೆ. ಈ ಪ್ರದೇಶದಲ್ಲೂ ಗಡಿ ಸಮಸ್ಯೆಗಳು ಇಲ್ಲದಿಲ್ಲ. ಆದರೆ ಭಾರತ ಪಾಕಿಸ್ತಾನಗಳ ವಿಚಾರದಲ್ಲಿರುವಂತೆ ಅತ್ಯಂತ ಆತಂಕಕಾರಿಗಳಾಗಿ ಇಲ್ಲಿ ಇನ್ನೂ ಪರಿಣಮಿಸಿಲ್ಲ. ವಿಯೆಟ್ನಾಂ ವಿಭಜನೆಯ ಫಲವಾದ ಎಲ್ಲೆಯೇನೋ ಯುದ್ಧಕಾರಕವಾದದ್ದಾಗಿದೆ. ಆಗ್ನೇಯ ಏಷ್ಯದ ಬಹುತೇಕ ರಾಷ್ಟ್ರಗಳಲ್ಲಿ ಪಾಕಿಸ್ತಾನ ಮತ್ತು ಭಾರತಗಳಲ್ಲಿರುವಷ್ಟು ಬಡತನವಿಲ್ಲ. ಅಕ್ಷರತೆಯ ಮಟ್ಟಗಳೂ ಸಾಮಾನ್ಯವಾಗಿ ಹೆಚ್ಚು ಎತ್ತರವಾಗಿವೆ. ಪೌಷ್ಟಿಕಾಹಾರಾಭಾವ ಭಾರತ ಪಾಕಿಸ್ತಾನಗಳಲ್ಲಿಯಷ್ಟು ತೀವ್ರವಾಗಿಲ್ಲ. ಆಗ್ನೇಯ ಏಷ್ಯ ಪ್ರದೇಶದಲ್ಲಿ ನಿಸರ್ಗಸಂಪತ್ತು ಹೆಚ್ಚು ಸಮೃದ್ಧವಾದದ್ದು. ಜನಕ್ಕೆ ಅಲ್ಲಿ ಹೆಚ್ಚು ಸ್ಥಳವುಂಟು. ಜಾವ ಜನ ಸಮ್ಮರ್ದ ದ್ವೀಪ. ಆದರೆ ಇಂಡೊನೇಷ್ಯದ ಇತರ ದ್ವೀಪಗಳಲ್ಲಿ ತೆರವಾದ ಪ್ರದೇಶ ಧಾರಾಳವಾಗುಂಟು. ಜಾವದ ಜನಕ್ಕೆ ಈ ದ್ವೀಪಗಳಲ್ಲಿ ಪುನರ್ವಸತಿ ಕಲ್ಪಿಸಲು ತಗಲುವ ವೆಚ್ಚ ಹೆಚ್ಚಾದ್ದರಿಂದ ಈ ಕೆಲಸ ನಿಧಾನವಾಗಿ ಸಾಗಬೇಕು. ಆಗ್ನೇಯ ಏಷ್ಯದ ಜನಸಂಖ್ಯೆ ಭಾರತ—ಪಾಕಿಸ್ತಾನಗಳದ್ದಕ್ಕಿಂತಲೂ ಹೆಚ್ಚು ವೇಗವಾಗಿ ವರ್ಧಿಸುತ್ತಿದೆ.[1]

—ಗುನ್ನಾರ್ ಮಿರ್ಡಾಲ್

---

[1] Myrdal, Gunnar: *Asian Drama, An Inquiry into the Poverty of Nations*, Vol. I, Penguin Books, pp. 360-1

ದೇ. ನಾ. ಶ್ರೀನಿವಾಸಮೂರ್ತಿ

ಲೆಕ್ಕಬರಹ ಮತ್ತು ಲೇಖಾಪಾಲನೆ:
ಒಂದು ಚಾರಿತ್ರಿಕ ನೋಟ

ಲೆಕ್ಕಬರಹದ (ಬುಕ್–ಕೀಪಿಂಗ್) ಮೂಲ ಸ್ಪಷ್ಟವಿಲ್ಲ. ಅದನ್ನು ಯಾವಾಗ ಎಲ್ಲಿ ಮತ್ತು ಯಾರು ಆರಂಭಿಸಿದರು ಎಂಬ ವಿಷಯ ಖಚಿತವಾಗಿ ತಿಳಿದುಬಂದಿಲ್ಲ. ಲೆಕ್ಕಬರೆಯುವ ಒಂದು ಪದ್ಧತಿ ಅತ್ಯಂತ ಪೂರ್ವಕಾಲದಲ್ಲೂ ರೂಢಿಯಲ್ಲಿತ್ತೆಂದು ತಿಳಿದುಬಂದಿದೆ. ಕ್ರಿ.ಪೂ. ಸುಮಾರು ೨೬೦೦ರ, ಬ್ಯಾಬಿಲೋನಿಯಕ್ಕೆ ಸಂಬಂಧಿಸಿದ ಕೆಲವು ಅವಶೇಷಗಳೇ ನಮಗೆ ತಿಳಿದುಬಂದಿರುವ ಲೆಕ್ಕಬರಹದ ಅತಿ ಹಳೆಯ ಸಾಕ್ಷಿಗಳಾಗಿವೆ. ಆ ಕಾಲದಲ್ಲಿ ಜೇಡಿಮಣ್ಣಿನ ಸಣ್ಣ ಹಲಗೆಗಳ ಮೇಲೆ ಕಂಠ ಲೇಖನಿಯಿಂದ ಬರೆದ ದಾಖಲೆಗಳು ಈ ಅವಶೇಷಗಳಲ್ಲಿ ದೊರೆತಿವೆ. ಹೆಚ್ಚಿನ ಆಸಕ್ತಿ ಕೆರಳಿಸುವ ಸಂಗತಿಯೆಂದರೆ ಈ ಮಣ್ಣಿನ ಹಲಗೆಗಳ ಮೇಲೆ ವರ್ತುಲ ನಾಳ (ಸಿಲಿಂಡರ್) ಮತ್ತು ಉಗುರುಗಳ ಒತ್ತುಗುರುತುಗಳೂ ಸಾಮಾನ್ಯವಾಗಿ ಕಂಡುಬಂದಿವೆ. ಮಾನವ ತನ್ನ ಬೆರಳ ಗುರುತನ್ನು ಮೊಹರನ್ನಾಗಿ ಬಳಸುತ್ತಿದ್ದನೆಂದು ನಂಬಲು ಅವು ಎಡೆಮಾಡಿಕೊಡುತ್ತವೆ. ಆಧುನಿಕ ಅಪರಾಧಶಾಸ್ತ್ರ ಅಪರಾಧಿಗಳ ಶೋಧನೆಗೆ ಬಳಸುವ ಬೆರಳ ಗುರುತಿನ ಅಧ್ಯಯನದ ಹಿಂದಿರುವ ನಿಯಮ ಈಗ್ಗೆ ಸುಮಾರು ೪,೫೦೦ ವರ್ಷಗಳ ಹಿಂದೆ ಬ್ಯಾಬಿಲೋನಿಯನರಿಗೆ ತಿಳಿದಿತ್ತೆಂದು ಹೇಳಬಹುದಾಗಿದೆ.

ಪ್ರಾಚೀನ ಈಜಿಪ್ಟಿನಲ್ಲಿ ದಾಖಲೆಗಳನ್ನು 'ಪಪೈರಸ್' ಎಂಬ ಜೊಂಡು ಹುಲ್ಲಿನ ಮೇಲೆ ಬರೆಯುತ್ತಿದ್ದರು. ಆ ಕಾಲಕ್ಕೆ (ಕ್ರಿ. ಪೂ. ಸುಮಾರು ೨೦೦೦) ಸಂಬಂಧಿಸಿದ ಚಿತ್ರಗಳಲ್ಲಿ ಕರಣಿಕನೊಬ್ಬ ಸರ್ಕಾರದ ಉಗ್ರಾಣಕ್ಕೆ ಬರುತ್ತಿದ್ದ ಮತ್ತು ಅಲ್ಲಿಂದ ಹೋಗುತ್ತಿದ್ದ ಧಾನ್ಯದ ಲೆಕ್ಕ ಬರೆಯುತ್ತಿರುವ ಚಿತ್ರವೂ ಇದೆ.

ಇವುಗಳಿಂದ ನಮಗೆ ತಿಳಿದುಬರುವುದೆಂದರೆ, ಪುಸ್ತಕದ ಉಗಮವಾಗುವುದಕ್ಕೆ ಬಹಳ ಮೊದಲೇ ಬುಕ್–ಕೀಪಿಂಗ್ ಎನಿಸಿಕೊಳ್ಳುವ ಲೆಕ್ಕಬರಹದ ಕಾಯಕ ವಿತ್ತು ಎಂಬುದು. ಈಚಿನ ವರ್ಷಗಳಲ್ಲಿ ಲೆಕ್ಕ ಬರೆಯಲು ಪುಸ್ತಕಗಳ ಉಪಯೋಗ

ಕಡಿಮೆಯಾಗುತ್ತಿದೆ. ಬಿಡಿಹಾಳೆ ಮತ್ತು ಕಾರ್ಡುಗಳ ಬಳಕೆ ಹೆಚ್ಚುತ್ತಿದೆ. ಆದರೆ ಅದಕ್ಕೆ ಬುಕ್-ಕೀಪಿಂಗ್ ಎಂದೇ ಹೆಸರಿದೆಯೆಂಬುದು ಸ್ವಾರಸ್ಯಕರ ಸಂಗತಿಯೇ.

ಲೆಕ್ಕಬರಹ ಪದ್ಧತಿಗಳಲ್ಲಿ ಅತ್ಯಂತ ವ್ಯಾಪಕವೂ ವೈಜ್ಞಾನಿಕವೂ ಆದ ಜೋಡಿದಾಖಲೆ ಪದ್ಧತಿಯನ್ನು (ಡಬಲ್-ಎಂಟ್ರಿ ಸಿಸ್ಟಂ) ಯಾವಾಗ ಕಂಡು ಹಿಡಿಯಲಾಯಿತೆಂಬ ಬಗ್ಗೆ ಒಮ್ಮತವಿಲ್ಲ. ಒಂದು ಅಭಿಪ್ರಾಯದಂತೆ ಅದನ್ನು ಕ್ರಿ.ಶ. ೧೪೯೪ರಲ್ಲಿ ಅಥವಾ ಆ ಸುಮಾರಿಗೆ ಲೂಕಾಸ್ ಡಿ ಬರ್ಗೊ ಕಂಡುಹಿಡಿದ. ಆದರೆ ಇದು ನಿಜವಲ್ಲ.[1] ಆ ವರ್ಷದಲ್ಲಿ ಲೂಕಾಸ್ ಪ್ಯಾಸಿಯೋಲಿ ರಚಿಸಿದ ‘ಎವ್ವೆರಿಥಿಂಗ್ ಅಬೌಟ್ ಅರಿತ್‌ಮೆಟಿಕ್, ಜಿಯಾಮೆಟ್ರಿ ಅಂಡ್ ಪ್ರಪೋರ್ಷನ್’ ಎಂಬ ಮುದ್ರಿತ ಹೊತ್ತಗೆಯ ಮೊದಲ ಸಂಚಿಕೆ ಹೊರಬಿದ್ದುದಂತೂ ನಿಜ. ಇದರಲ್ಲಿ ಇತರ ಅನೇಕ ವಿಷಯಗಳ ನಡುವೆ ಲೆಕ್ಕಬರಹದ ವಿವರಣೆಯನ್ನು ಆ ಕಾಲದಲ್ಲಿ ಭಾವಿಸಲಾಗಿದ್ದಂತೆ ಕೊಡಲಾಗಿದೆ. ಆದರೆ ಆ ಕಾಲಕ್ಕಾಗಲೇ ಈ ಪದ್ಧತಿ ಬಳಕೆಗೆ ಬಂದು ಸುಮಾರು ೨೦೦ ವರ್ಷಗಳಾದರೂ ಆಗಿದ್ದಿರಬಹುದೆಂದು ಊಹಿಸಬಹುದಾಗಿದೆ.[2]

ಗ್ರೀಸ್ ಮತ್ತು ರೋಂಗಳಲ್ಲಿ ಖಾಸಗಿ ಹಾಗೂ ಸಾರ್ವಜನಿಕ ಲೆಕ್ಕಬರಹ ಚೆನ್ನಾಗಿ ಅಭಿವೃದ್ಧಿಹೊಂದಿತ್ತು. ಆದರೆ ಜೋಡಿದಾಖಲೆ ಪದ್ಧತಿಯನ್ನು ಗ್ರೀಕರಾಗಲಿ ರೋಮನರಾಗಲಿ ಕಂಡುಹಿಡಿಯಲಿಲ್ಲ. ಇಟಲಿಯಲ್ಲಿ ಜೋಡಿದಾಖಲೆ ಪದ್ಧತಿ ಕ್ರಿ.ಶ. ೧೪ನೆಯ ಶತಮಾನದಲ್ಲಿಯೇ ಬಳಕೆಯಲ್ಲಿತ್ತು. ಆದರೆ ೧೪೯೪ರಲ್ಲಿ ಪ್ಯಾಸಿಲಿಯೋ ಈ ವಿಧಾನಕ್ಕೆ ಒಂದು ರೂಪ ಕೊಟ್ಟ.[3]

ಜೋಡಿದಾಖಲೆ ಪದ್ಧತಿ ೧೬ನೆಯ ಶತಮಾನದ ವರೆಗೆ ಇಟಲಿಯಲ್ಲಿಯೇ ಇತ್ತು. ಅನಂತರ ಅದು ಕ್ರಮೇಣ ಯೂರೋಪಿನಲ್ಲೆಲ್ಲ ಹರಡಿತು. ಒಂದೆರಡು ಶತಮಾನಗಳು ಕಳೆದರೂ ವಾಣಿಜ್ಯವ್ಯವಸ್ಥೆಯಲ್ಲಿ ಹೇಳಿಕೊಳ್ಳುವ ಬದಲಾವಣೆಯೇನೂ ಆಗಲಿಲ್ಲ. ಅಂತೆಯೇ ಲೆಕ್ಕಬರಹದಲ್ಲೂ ಮುಖ್ಯವಾದ ಯಾವ ಬದಲಾವಣೆಯೂ ಆಗಲಿಲ್ಲ. ತಂತ್ರದಲ್ಲಿ ಮಾತ್ರ ಕೆಲವು ಬದಲಾವಣೆಗಳಾದುವು.

ಜೋಡಿದಾಖಲೆ ಪದ್ಧತಿಯ ಅಡಿಪಾಯವೆನಿಸುವ ಜೋಡಿನಿಯಮಗಳೆಂದರೆ ಮೊದಲನೆಯದು ಖಾತೆಯ (ಲೆಜರ್ ಅಕೌಂಟ್) ರೂಪ; ಎರಡನೆಯದು ಎಲ್ಲ ಖಾತೆಗಳ ನಡುವಣ ಸಮತೋಲ. ಜೋಡಿದಾಖಲೆ ಪದ್ಧತಿಯಲ್ಲಿ ಮೊದಲು ಜನಿಸಿದ್ದು ಖಾತೆ. ಇದು ಋಣಿ (ಡೆಟರ್) ಮತ್ತು ಧನಿ (ಕ್ರೆಡಿಟರ್) ಸಂಬಂಧದ

---

[1] *Encyclopaedia Britannica*

[2] *Ibid.*

[3] Adolf J. H. Enthoven, *Finance & Development*, Nov. 1969, p. 16

ಸಹಪರಿಣಾಮವನ್ನು ಸ್ಪಷ್ಟವಾಗಿ ದಾಖಲಿಸಲನುವಾಗುತ್ತದೆ. ವರ್ಗಾವಣೆಗೆ ಮಾರ್ಗದರ್ಶಿಯಾದ ರೋಜು ಬಹಳ ತಡವಾಗಿ ಉಗಮಗೊಂಡಿತು.

ವಹಿವಾಟಿನ ಧನಿ (ಕ್ರೆಡಿಟ್) ಮತ್ತು ಋಣಿ (ಡೆಬಿಟ್) ಅಂಶಗಳ, ಉದ್ಯಮದ ಮತ್ತು ಮಾಲೀಕನ ಬಂಡವಾಳಗಳ ನಡುವಿನ ವ್ಯತ್ಯಾಸದ, ಸ್ವರೂಪವನ್ನು ಸ್ಪಷ್ಟವಾಗಿ ಗುರುತಿಸಿದವನು ನೆದರ್ಲೆಂಡ್ಸಿನ ಸ್ಟೀವಿನ್[4]. ಅವನು ಆ ದೇಶದ ರಾಜನ ಆಣತಿಯ ಮೇರೆಗೆ ಇಟಲಿಗೆ ಹೋಗಿ ಜೋಡಿದಾಖಲೆ ಪದ್ಧತಿಯನ್ನು ಅಭ್ಯಸಿಸಿದಾಗ ಅವನಿಗೆ ಅದು ತೃಪ್ತಿಕರವೆನಿಸಲಿಲ್ಲ. ಹೀಗಾಗಿ ಅವನು ವಹಿವಾಟುಗಳ ಋಣಿ ಧನಿ ಅಂಶಗಳ ದಾಖಲೆಗೆ ಸಾಮಾನ್ಯ ನಿಯಮಗಳನ್ನು ರೂಪಿಸಿದ. ಇದು ಲೆಕ್ಕಬರಹದ ಬಗ್ಗೆ ಪುಸ್ತಕ ಬರೆಯುವವರ ಮೇಲೆ ಬಹಳ ಪ್ರಭಾವ ಬೀರಿತು.[5]

ಲೆಕ್ಕಬರಹ ಬೆಳವಣಿಗೆ ಹೊಂದುತ್ತಿದ್ದಂತೆ ಲೆಕ್ಕಶಾಸ್ತ್ರವೂ ರೂಪುಗೊಂಡು ವೈಶಿಷ್ಟ್ಯ ಗಳಿಸಿತು. ಲೆಕ್ಕಶಾಸ್ತ್ರವೂ ಇಂದು ಬೃಹತ್ತಾಗಿ ಬೆಳೆದಿದೆ. ಅದರ ವಿಸ್ತಾರ ಬಲುಬೇಗನೆ ಹೆಚ್ಚುತ್ತಿದೆ. ಅದರ ಕಾರ್ಯಕ್ಷೇತ್ರದ ಬೆಳವಣಿಗೆಯನ್ನು ಗಮನಿಸಿದರೆ ವಿಸ್ಮಯವಾಗುತ್ತದೆ. ಇದರ ಮುಂದೆ ಲೆಕ್ಕಬರಹದ ಬೆಳವಣಿಗೆ, ಲೆಕ್ಕಬರಹಗಾರನ ಕಾರ್ಯವ್ಯಾಪ್ತಿಯ ಬೆಳವಣಿಗೆ ಏನೇನೂ ಇಲ್ಲವೆನಿಸುತ್ತದೆ.

ಮೊದಲಿಗೆ ಲೆಕ್ಕಬರಹಕ್ಕೂ ಲೆಕ್ಕಶಾಸ್ತ್ರಕ್ಕೂ ವ್ಯತ್ಯಾಸವಿರಲಿಲ್ಲ. ಲೇಖಾಪಾಲ ಮತ್ತು ಲೆಕ್ಕಬರಹಗಾರ ಎಂಬ ಬೇರೆಬೇರೆಯ ವ್ಯಕ್ತಿಗಳಿರಲಿಲ್ಲ. ಯಾವುದೇ ವಿಶೇಷ ಜ್ಞಾನಕ್ಷೇತ್ರದಲ್ಲಿ ಆಗುವಂತೆ ಇಲ್ಲಿಯೂ ಶ್ರಮವಿಭಜನೆ, ವಿಶೇಷ ಪರಿಣತಿಗಳು ಬೆಳೆದುಬಂದುವು. ಸ್ಥೂಲವಾಗಿ ಲೆಕ್ಕಬರಹಗಾರನೆಂದರೆ ಲೆಕ್ಕದ ಪುಸ್ತಕಗಳನ್ನೂ ಲೆಕ್ಕದ ದಾಖಲೆಗಳನ್ನೂ ಬರೆಯುವ ವ್ಯಕ್ತಿ ಎಂದೂ, ಆಂಕಿಕ ಅಥವಾ ಲೇಖಾಪಾಲನೆಂದರೆ ಅಂಥ ಪುಸ್ತಕದಾಖಲೆಗಳನ್ನು ಹೇಗೆ ಬರೆಯಬೇಕೆಂದು ತೀರ್ಮಾನಿಸುವ ವ್ಯಕ್ತಿಯೆಂದೂ ಹೇಳಬಹುದು. ಆದರೆ ಇಂದು ಲೇಖಾಪಾಲನ ಕೆಲಸ ಬಲು ವ್ಯಾಪಕವಾಗಿದೆ. ಈ ವ್ಯಾಪಕತೆ ಲೆಕ್ಕಪತ್ರಗಳ ಎಲ್ಲೆಯನ್ನು ಎಂದೋ ಮೀರಿದೆ.

ಲೇಖಾಪಾಲನೆಯ ಬೆಳವಣಿಗೆಗೆ ನೆರವಾದ ಅನೇಕ ಸಂಗತಿಗಳಲ್ಲಿ ಬ್ಯಾಂಕಿಂಗ್ ವ್ಯವಹಾರದ ಬೆಳವಣಿಗೆಯೂ ಒಂದು. ಮಧ್ಯಯುಗದಲ್ಲಿ ಬ್ಯಾಂಕಿಂಗ್ ಉದ್ಯಮಿಗಳ ವೃತ್ತಿಸಂಘ(ಗಿಲ್ಡ್)ಗಳಿದ್ದುವು. ಸದಸ್ಯರು ಲೆಕ್ಕಗಳನ್ನು ಬರೆದು ವೃತ್ತಿಸಂಘದ ನಿಯೋಗಿಯ ಅವಗಾಹನೆಗೆ ಇಡಬೇಕಾಗಿತ್ತು. ಸರ್ಕಾರಗಳೂ ಲೆಕ್ಕಬರಹವನ್ನು ಕಡ್ಡಾಯಮಾಡಿದ್ದುವು. ಇಟಲಿಯಲ್ಲಿ ಆಸ್ತಿಯ ಮೇಲೆ ತೆರಿಗೆಯಿದ್ದು,

[4] *Ibid.*, p. 18
[5] *Ibid.*, p. 18

ಇದಕ್ಕಾಗಿ ವಿವರಪಟ್ಟಿಗಳನ್ನು ತಯಾರಿಸಬೇಕಾಗುತ್ತಿತ್ತು. ಜರ್ಮನಿಯಲ್ಲಿ ತೆರಿಗೆದಾರರು ವಿವರಪಟ್ಟಿಯನ್ನು ತಯಾರಿಸಿ, ಅದು ಸತ್ಯವಾದುದೆಂದು ಪ್ರಮಾಣ ಮಾಡಿದ ಹೇಳಿಕೆಯೊಡನೆ ತೆರಿಗೆ ಅಧಿಕಾರಿಗಳಿಗೆ ಒಪ್ಪಿಸಬೇಕಾಗುತ್ತಿತ್ತು. ಈ ಬೆಳವಣಿಗೆಗಳು ಲೇಖಾಪಾಲನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದುವು.

ಮೊದಲಿಗೆ ನಿಯೋಗಿಗಳ, ಪಾಲುದಾರರ ಅವಗಾಹನೆಗಾಗಿಯೇ ಲೆಕ್ಕಬರಹ ಕಾರ್ಯ ನಡೆಯುತ್ತಿತ್ತು. ಕ್ರಮೇಣ ಒಡೆತನದ ಅಂಶಗಳೂ ಇದರಲ್ಲಿ ಸೇರಿಕೊಂಡುವು. 'ನಿಯೋಗಿ ಲೆಕ್ಕಬರಹ, ಒಡೆತನ ಲೆಕ್ಕಬರಹವಾಗಿ ಬೆಳೆಯಿತು'.[6] ಈ ಬೆಳವಣಿಗೆಯಿಂದ ಲೇಖಾಪಾಲನೆಯ ಅಂತಃಸತ್ವ ಬೆಳಗಿತೆನ್ನಬಹುದು.

೧೯ನೆಯ ಶತಮಾನದಲ್ಲಿ ವೆಚ್ಚನಿರ್ಣಯ ಲೆಕ್ಕದ (ಕಾಸ್ಟ್ ಅಕೌಂಟ್ಸ್) ಅವಶ್ಯಕತೆ ಕಂಡುಬಂತು. ಉತ್ಪಾದನೆಯಲ್ಲಿ ಕ್ಲಿಷ್ಟತೆ-ಸಂಕೀರ್ಣತೆಗಳು ಕಂಡುಬಂದದ್ದೇ ಇದಕ್ಕೆ ಮುಖ್ಯ ಕಾರಣವಾಯಿತು.

ಇದೇ ವೇಳೆಯಲ್ಲಿ ಲೆಕ್ಕಬರಹದ ಉದ್ದೇಶವೂ ವಿಶಾಲಗೊಂಡಿತು. ವಹಿವಾಟಿನ ವಿಶ್ಲೇಷಣೆ, ದಾಖಲಾತಿ—ಇವು ಮೊದಲು ಅದರ ಮುಖ್ಯ ಉದ್ದೇಶಗಳಾಗಿದ್ದುವು. ಸಂಪತ್ತಿನಲ್ಲಾಗುವ ಬದಲಾವಣೆಗಳ ಪರಿಣಾಮವನ್ನು ತೋರಿಸಲು ಹಣಕಾಸಿನ ದತ್ತಾಂಶವನ್ನು ವ್ಯವಸ್ಥಿತವಾಗಿ ವಿಶ್ಲೇಷಿಸಿ ದಾಖಲಿಸುವ ಉದ್ದೇಶ ಅದಕ್ಕೆ ಬಂತು. ವಹಿವಾಟಿನ ಮೊದಲು ಮತ್ತು ಅನಂತರ ಇರುವ ಶಿಲ್ಕುಗಳ ಹೋಲಿಕೆಯಿಂದ ಗೋಚರ ಲಾಭನಷ್ಟಗಳ ಸ್ಪಷ್ಟ ಚಿತ್ರಣವನ್ನು ಕೊಡುವ ಉದ್ದೇಶವನ್ನು ಅದು ಪಡೆಯಿತು. ಇಂದಿಗೂ ಈ ಉದ್ದೇಶಕ್ಕೆ ಹೆಚ್ಚಿನ ಪ್ರಾಮುಖ್ಯವಿದೆ. ೨೦ನೆಯ ಶತಮಾನದಲ್ಲಿ ಉದ್ದೇಶ ಸಾಧನೆಯ ಹಂಚಿಕೆಯಲ್ಲಿ ಬದಲಾವಣೆ ಕಂಡುಬಂತು. ಲಾಭ ಕಂಡುಹಿಡಿಯುವುದು ಒಂದು ಅಥವಾ ಅನೇಕ ವಹಿವಾಟುಗಳ ಮೊದಲ ಮತ್ತು ಅನಂತರದ ಶಿಲ್ಕುಗಳ ತುಲನೆಯಿಂದ ಮಾತ್ರವಲ್ಲ; ಕೊಟ್ಟ ಮತ್ತು ಪಡೆದ ಬೆಲೆಗಳ ಹೋಲಿಕೆಯಿಂದ ಮಾತ್ರವಲ್ಲ; ಇದರಲ್ಲಿ ಸಂಸ್ಥೆಗೆ ಸಂಬಂಧಿಸಿದ ಅನೇಕ ಸಂಕೀರ್ಣ ಹಂಚಿಕೆಗಳೂ ಬೆಲೆಕಟ್ಟುವಿಕೆಗಳೂ ಗಣನೀಯ ಪಾತ್ರವಹಿಸುತ್ತವೆ. ಸಂಸ್ಥೆಯ 'ನಿಜವಾದ ಬಂಡವಾಳ'ದ ಬಗ್ಗೆ ಹೆಚ್ಚಿನ ಗಮನ ಹರಿದಿದೆ.

ಜೋಡಿದಾಖಲೆ ಪದ್ಧತಿಯ ಬಳಕೆ ಆರಂಭವಾಗಿ ಕೆಲವು ಶತಮಾನಗಳಾಗಿದ್ದರೂ ಅದರ ಬಗ್ಗೆ ತತ್ತ್ವ (ತಿಯೊರಿ) ಬೆಳೆಯಲಿಲ್ಲ. ೧೯ನೆಯ ಶತಮಾನದಲ್ಲಿ ಈ ದಿಕ್ಕಿನಲ್ಲಿ ಪ್ರಯತ್ನ ಆರಂಭವಾಯಿತು. ಅನುಭವಗಳ ಆಧಾರದ ಮೇಲೆ ರೂಪಿತವಾದ ತತ್ತ್ವಗಳೇ ಪ್ರಮುಖವಾದುವೇ ಹೊರತು ಚಿಂತನೆಗಳ ಆಧಾರದ ಮೇಲೆ ಅವು ಬೆಳೆಯಲಿಲ್ಲ. ಇಂದಿಗೂ ಅನೇಕ ದೇಶಗಳಲ್ಲಿ ಜೋಡಿದಾಖಲೆ ಪದ್ಧತಿಯ ಅನುಸರಣೆಯಿದ್ದರೂ ಅದರ ಬಗ್ಗೆ ತತ್ತ್ವಗಳು ಬೆಳೆದುಬಂದಿಲ್ಲ.

---

[6] *Ibid.*, p. 18

ಪರಿಮಿತ ಹೊಣೆಯ (ಲಿಮಿಟೆಡ್ ಲೈಯಬಿಲಿಟಿ) ಉಗಮ, ಸಂಯುಕ್ತ ಬಂಡವಾಳ ಕಂಪನಿಗಳ ಜನಪ್ರಿಯತೆ—ಇವುಗಳಿಂದಾಗಿ ಕೆಲವು ಬೆಳೆವಣಿಗೆಗಳಾದುವು. ಬಂಡವಾಳದ ಸಂರಕ್ಷಣೆ, ಸಂವರ್ಧನೆ, ಷೇರುದಾರರಿಗೆ ಕಂಪನಿಯ ವಹಿವಾಟುಗಳ ಬಗ್ಗೆ ಸೂಕ್ಷ್ಮ ಮಾಹಿತಿಯ ಒದಗಣೆ—ಇವು ಅಗತ್ಯವಾದುವು. ಗೈರುಹಾಜರಿ ಒಡೆತನ (ಆಬ್ಸೆಂಟೀ ಓನರ್‌ಷಿಪ್), ಪ್ರತಿನಿಧಿಗಳಿಂದ ನಿರ್ವಹಣೆ—ಇವು ಸಹಜವಾಗಿಯೇ ಲೇಖಾಪಾಲನೆಯ ಮುಖ್ಯ ಅಂಗವಾದ ಲೆಕ್ಕಶೋಧನೆಗೆ (ಆಡಿಟಿಂಗ್) ಮಹತ್ತ್ವಕೊಟ್ಟುವು.

ಕಾನೂನಿನ ಕೂಸಾದ ಕಂಪನಿಯ—ಅಗೋಚರ ವ್ಯಕ್ತಿಯ—ಜನನ, ಕಾರ್ಯಚಟುವಟಿಕೆ ಮತ್ತು ನಡೆನುಡಿಗಳ ಮೇಲೆ ಕಾನೂನಿನ ನಿರ್ಬಂಧಗಳನ್ನು ವ್ಯಾಪಕವಾಗಿ ಹೇರಲಾಯಿತು. ಇವುಗಳ ಅನುಸರಣೆಗೆ ಲೇಖಾಪಾಲರ ಮರೆ ಹೊಗುವುದು ಅವಶ್ಯವಾಯಿತು.

ಲೇಖಾಪಾಲನೆಯ ಕ್ಷೇತ್ರವಿಸ್ತಾರದ ಬಗ್ಗೆ ಬರೆಯುವುದಕ್ಕೆ ಪ್ರತ್ಯೇಕ ಲೇಖನವೇ ಬೇಕಾಗುತ್ತದೆ. ಆದರೆ ಅದು ಬೆಳೆದ, ಬೆಳೆಯುತ್ತಿರುವ ಮುಖ್ಯ ದಿಸೆಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ಲೆಕ್ಕಶೋಧನೆ, ತೆರಿಗೆ ಸಲಹೆ; ವೆಚ್ಚನಿರ್ಣಯ ಲೆಕ್ಕ ಪದ್ಧತಿಯ ಅಳವಡಿಕೆ; ವ್ಯವಹಾರದ ಅಂಕಿಅಂಶ ತಯಾರಿಕೆ; ಪಾಲುದಾರಿಕೆಯಲ್ಲಿ ಬದಲಾವಣೆಯಾದಾಗ ಲೆಕ್ಕಗಳ ಹೊಂದಾಣಿಕೆ; ವ್ಯವಹಾರಗಳ ಸಂಯೋಜನೆಗಳಲ್ಲಿ ನೆರವು ನೀಡಿಕೆ; ಕಂಪನಿ ಪ್ರವರ್ತನೆ; ವ್ಯವಹಾರದ ಮಾರಾಟ ಕೊಳ್ಳಿಕೆಗಳಲ್ಲಿ ನೆರವು ನೀಡಿಕೆ; ಸಾರ್ವಜನಿಕ ಸಂಸ್ಥೆ, ಸರ್ಕಾರಗಳು ಕಡ್ಡಾಯವಾಗಿ ವ್ಯವಹಾರವನ್ನು (ಬಿಸನೆಸ್) ಕೊಳ್ಳುವಾಗ ನೀಡಬೇಕಾದ ಪರಿಹಾರದ ಲೆಕ್ಕಾಚಾರ; ಲೆಕ್ಕಗಳಿಗೆ ಸಂಬಂಧಿಸಿದಂತೆ ತಜ್ಞ ಅಭಿಪ್ರಾಯ, ಸಾಕ್ಷ್ಯ ನೀಡಿಕೆ; ಲೆಕ್ಕಪತ್ರ ಮತ್ತು ಹಣಕಾಸುಗಳ ಬಗ್ಗೆ ಮನಸ್ತಾಪ ಬಂದಾಗ ಪಂಚಾಯ್ತಿಯ ಏರ್ಪಾಡು; ಸಾಮಾಜಿಕ ಲೇಖಾಪಾಲನೆ.

ಮಧ್ಯಯುಗದಲ್ಲಿ ಲೇಖಾಪಾಲನ ವೃತ್ತಿಯಿದ್ದ ಬಗ್ಗೆ ಸೂಚನೆಗಳು ಕಂಡುಬಂದರೂ ಅದರ ಬಗ್ಗೆ ವಿವರಗಳು ತಿಳಿದುಬಂದಿಲ್ಲ. ಸಿಗುವ ವಿವರಗಳು ಲೇಖಾಪಾಲನ ವೃತ್ತಿಯ ಮೇಲೆ ಬೆಳಕು ಚೆಲ್ಲುವುದಿಲ್ಲ. ಬಹುಮಟ್ಟಿಗೆ ಆ ಕಾಲದ ಲೇಖಾಪಾಲರು ಒಬ್ಬ ವ್ಯಕ್ತಿ ಇಲ್ಲವೆ ಸಂಸ್ಥೆಯ ಊಳಿಗಕ್ಕೇ ಇದ್ದುಬಿಡುತ್ತಿದ್ದರು. 'ವೃತ್ತಿ' ಎಂದರೆ ವ್ಯಕ್ತಿ ತನ್ನ ಕಲಿಕೆ ಜಾಣ್ಮೆಗಳನ್ನು ಯಾರ ಸೇವೆಗಾದರೂ ತೆರಪಾಗಿರಿಸುವುದು ಎನ್ನಬಹುದು.

ದಾಖಲೆಗಳಲ್ಲಿ ಕಂಡುಬರುವ ಮೊಟ್ಟಮೊದಲ ಲೇಖಾಪಾಲರ ಸಂಘದ ಸುದ್ದಿ 'ಕೊಲಿಜಿಯೋ ಡೈ ರಾಕ್ಸೊನ್ಯಾಟಿ'ಯಲ್ಲಿ ಕಂಡುಬರುತ್ತದೆ.[7] ೧೫೮೧ರಲ್ಲಿ

---

[7] *Encyclopaedia Britānnicā*

ಲೇಖಾಪಾಲರ ಸಂಘವೊಂದು ವೆನಿಸಿನಲ್ಲಿ ಸ್ಥಾಪಿತವಾಯಿತು. ಆದರೆ ಈ ಸಂಘದ ಸದಸ್ಯರು ಲೇಖಾಪಾಲನೆಯನ್ನು ವೃತ್ತಿಯಾಗಿಟ್ಟುಕೊಂಡಿದ್ದರೆಂಬ ಬಗ್ಗೆ ಅಥವಾ ಅವರು ಇತರರಲ್ಲಿ ಕೆಲಸಕ್ಕೆ ಇರಲಿಲ್ಲವೆಂಬ ಬಗ್ಗೆ ಆಧಾರಗಳಿಲ್ಲ. ೧೭೪೩ರಲ್ಲಿ ಮಿಲಾನ್ ಸರ್ಕಾರ ಲೇಖಾಪಾಲರ ಸೇವೆಗಳಿಗೆ ದರಗಳನ್ನು ನಿಗದಿಗೊಳಿಸಿತೆಂದು ತಿಳಿದುಬರುತ್ತದೆ. ಇದರ ಮೇಲೆ ಕನಿಷ್ಠ ಆ ವರ್ಷಗಳಲ್ಲಾದರೂ ಮಿಲಾನ್‌ನಲ್ಲಿ ಲೇಖಾಪಾಲನೆಯನ್ನು ವೃತ್ತಿಯಾಗಿ ಕೈಗೊಂಡವರು ಇದ್ದರೆಂದು ಊಹಿಸಬಹುದಾಗಿದೆ. ಜಾರ್ಜ್ ವ್ಯಾಟ್‌ಸನ್ ಸ್ಕಾಟ್‌ಲೆಂಡಿನ ಮೊದಲ ಲೇಖಾಪಾಲ. ಆದರೆ ಅವನ ಬಗ್ಗೆ ತಿಳಿದಿರುವುದು ನಿಜವಾದರೆ ಅವನು ತನ್ನ ದೊಡ್ಡ ಬ್ಯಾಂಕಿಂಗ್ ವ್ಯವಹಾರದ ನಡುವೆ ಈ ವೃತ್ತಿಯನ್ನು ನಿಭಾಯಿಸುತ್ತಿದ್ದುದರ ಬಗ್ಗೆ ಸಂಶಯ ಬರುತ್ತದೆ.[8] ಹೋಲ್ಡನ್‌ನ ತ್ರೈವಾರ್ಷಿಕ ನಾಮಸ್ಥಾನ ನಿರ್ದೇಶಕ ಹೊತ್ತಿಗೆಯಲ್ಲಿ (ಡೈರೆಕ್ಟರಿಯಲ್ಲಿ) ೧೧ ಜನ ಲೇಖಾಪಾಲರ ಹೆಸರುಗಳಿವೆ. ಇದು ೧೭೯೯ರ ಮಾತು. ೧೭೯೦ರಲ್ಲಿ ಪ್ರಕಟವಾದ ಬ್ರಿಟಿಷ್ ಯೂನಿವರ್ಸಲ್ ಡೈರೆಕ್ಟರಿಯಲ್ಲಿ ೫ ಜನ ಲೇಖಾಪಾಲರ ಹೆಸರುಗಳಿವೆ. ಅಂತೂ ೧೯ನೆಯ ಶತಮಾನಕ್ಕೆ ಮುಂಚೆ ಲೇಖಾಪಾಲ ವೃತ್ತಿಯವರು ತೀರ ಕಡಿಮೆ ಸಂಖ್ಯೆಯಲ್ಲಿದ್ದರೆಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಹೋಲ್ಡನನ ೧೮೩೩ರ ಡೈರೆಕ್ಟರಿಯಲ್ಲಿ ೭೩ ವೃತ್ತಿನಿರತ ಲೇಖಾಪಾಲರ ಹೆಸರಿದೆ. ಇತರ ದೇಶಗಳಲ್ಲಿ ಇದಕ್ಕಿಂತ ಉತ್ತಮ ಸ್ಥಿತಿಯಂತೂ ಇರಲಿಲ್ಲ. ೧೯ನೆಯ ಶತಮಾನದ ಮಧ್ಯಭಾಗದ ಅನಂತರ ಈ ವೃತ್ತಿಗೆ ಸಾಕಷ್ಟು ಪ್ರಾಮುಖ್ಯ ಬಂತೆನಿಸುತ್ತದೆ. ಸಂಯುಕ್ತ ಬಂಡವಾಳ ಕಂಪನಿಗಳು ಇದಕ್ಕೆ ತುಂಬ ಉತ್ತೇಜನ ನೀಡಿದುವು.

ಕೊನೆಯದಾಗಿ, ಲೇಖಾಪಾಲರ ಸಂಘಗಳ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಗ್ರೇಟ್ ಬ್ರಿಟನಿನಲ್ಲಿ ಮೊದಲಿಗೆ ಆರಂಭವಾದ ಲೇಖಾಪಾಲರ ಸಂಘವೆಂದರೆ ೧೮೫೪ರಲ್ಲಿ ರಾಜಸನ್ನದು ಪಡೆದು ನಿಗಮನಗೊಂಡ (ಇನ್‌ಕಾರ್ಪೊರೇಟೆಡ್) 'ಸೊಸೈಟಿ ಆಫ್ ಅಕೌಂಟೆಂಟ್ಸ್ ಇನ್ ಎಡಿನ್‌ಬರೊ' ಎಂಬುದೇ ಆಗಿದೆ. ಇದೇ ಜಗತ್ತಿನ ಅತಿ ಹಳೆಯ ಲೇಖಾಪಾಲರ ಸಂಸ್ಥೆಯೆನ್ನಬಹುದು. ಇಂಥವೇ ಸಂಸ್ಥೆಗಳು ಗ್ಲಾಸ್ಗೋ, ಅಬರ್ಡೀನ್‌ಗಳಲ್ಲೂ ಕೆಲವೇ ವರ್ಷಗಳಲ್ಲಿ ನಿಗಮನಗೊಂಡುವು. ೧೮೭೦ರಲ್ಲಿ ಲಂಡನಿನಲ್ಲಿ 'ದಿ ಇನ್‌ಸ್ಟಿಟ್ಯೂಟ್ ಆಫ್ ಅಕೌಂಟೆಂಟ್ಸ್' ರಚಿತವಾಯಿತು. ಇದೇ ಮುಂದೆ ೧೮೮೦ರಲ್ಲಿ ರಾಜಸನ್ನದು ಪಡೆದು 'ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಇನ್ ಇಂಗ್ಲಂಡ್ ಅಂಡ್ ವೇಲ್ಸ್' ಎಂಬುದಾಗಿ ನಿಗಮನಗೊಂಡಿತು. ಇಂಗ್ಲಂಡ್ ಮತ್ತು ವೇಲ್ಸ್‌ನಲ್ಲಿ

[8] *Ibid.*

ಲೆಖಾಪಾಲನ ವೃತ್ತಿ ನಡೆಸುವವರೆಲ್ಲ ಇದರ ಸದಸ್ಯರಾಗುವಂತಾಯಿತು. ೧೮೮೫ ರಲ್ಲಿ 'ದಿ ಸೊಸೈಟಿ ಆಫ್ ಇನ್‌ಕಾರ್ಪೊರೇಟೆಡ್ ಅಕೌಂಟೆಂಟ್ಸ್ ಅಂಡ್ ಆಡಿಟರ್ಸ್ ಸಂಸ್ಥೆ ಸಂಯುಕ್ತ ಬಂಡವಾಳ ಕಂಪನಿಯಾಗಿ ರಚಿತವಾಯಿತು.

ಅಮೆರಿಕದಲ್ಲಿ ೧೮೮೭ರಲ್ಲಿ ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಸರ್ಟಿಫೈಡ್ ಪಬ್ಲಿಕ್ ಅಕೌಂಟೆಂಟ್ಸ್ ರಚಿತವಾಯಿತು.

ಭಾರತದಲ್ಲಿ ಎರಡು ಸಂಸ್ಥೆಗಳಿವೆ. ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಅಂಡ್ ವರ್ಕ್ಸ್ ಅಕೌಂಟೆಂಟ್ಸ್ ಇನ್ ಇಂಡಿಯ ಒಂದು, ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯ ಇನ್ನೊಂದು. ಎರಡನೆಯ ಸಂಸ್ಥೆ ೧೯೪೯ರಲ್ಲಿ ಅಸ್ತಿತ್ವಕ್ಕೆ ಬಂತು. ಆಗ ೧,೫೮೪ ರಷ್ಟಿದ್ದ ಸದಸ್ಯ ಸಂಖ್ಯೆ ೧೯೫೭ರಲ್ಲಿ ೩,೫೦೦ಕ್ಕೆ ಏರಿ ಇಂದು ಸುಮಾರು ೧೧,೦೦೦ ಆಗಿದೆ.

ಹಣದ ಮಹಿಮೆ

ಆತ್ಮಸಂಪತ್ತು ಹೇಗೆ ಯಮನಿಯಮ ಪತ್ಯಾಹಾರ ಪ್ರಾಣಾಯಾಮಾದಿಗಳಿಂದ ಬೆಳೆಯುತ್ತದೆಯೋ ಹಾಗೆಯೇ ಹಣದಿಂದಲೂ ಬೆಳೆಯುತ್ತದೆ. ಇದಕ್ಕೆ ಉದಾಹರಣೆಯಾಗಿ ರಾಮಕೃಷ್ಣಪರಮಹಂಸರು ಹೇಳಿದ ಈ ಕತೆ ತೆಗೆದುಕೊಳ್ಳಿ. ಒಬ್ಬ ಹಠಯೋಗಿ ತನ್ನ ಯೋಗಶಕ್ತಿಯನ್ನು ತೋರಿಸಬೇಕೆಂದು ನೀರಿನ ಮೇಲೆ ಇಲ್ಲಿಂದ ಅಲ್ಲಿಗೆ ನಡೆದುಕೊಂಡು ಬಂದನಂತೆ. ರಾಮಕೃಷ್ಣರು ಅಲ್ಲಿದ್ದ ಅಂಬಿಗನಿಗೆ ಮೂರು ಕಾಸು ಕೊಟ್ಟು ಆ ಯೋಗಿ ನಡೆದುಬಂದ ದೂರವನ್ನು ತೆಪ್ಪದಲ್ಲಿ ತೇಲಿಬಂದು "ನಿನ್ನ ಯೋಗದ ಬೆಲೆ ಇಷ್ಟು" ಎಂದರಂತೆ. ಈ ಕತೆಯನ್ನು ಓದಿದ ಮೇಲಂತೂ ನನಗೆ ನಿಜವಾಗಿ ಹಣದ ಮೇಲಿನ ಗೌರವ ಹೆಚ್ಚಿದೆ. ಮೂರು ಕಾಸಿಗೆ ಇಷ್ಟು ಯೋಗಶಕ್ತಿ ಇರಬೇಕಾದರೆ ನವರನ್‌ಗಳ ಯೋಗಬಲಮಾನವೆಷ್ಟಿರಬಹುದು? ಅಷ್ಟೇಕೆ, ಮಗುವಿನ ಕೈಯಲ್ಲಿ ಮೂರು ಕಾಸು ಕೊಡಿ. ಅದು ಅಳು ನಿಲ್ಲಿಸುತ್ತದೋ ಇಲ್ಲವೊ ನೋಡಿ....ಜಗತ್ತೆಂಬ ಹಲಸಿನ ಹಣ್ಣನ್ನು ಬಿಚ್ಚಿ, ಅದರ ಹೊಲೆ ಅಂಟು ನಮಗೆ ಅಂಟದಂತೆ ಅದರ ತೊಳೆಗಳನ್ನು ಬಿಡಿಸಿ ಸವಿಯಬೇಕೆಂಬ ನಮ್ಮಂಥವರಿಗೆಲ್ಲರಿಗೂ ಈ ಹಣದ ಜಿಡ್ಡು ಬೇಕೇಬೇಕು....ಇದರಲ್ಲಿನಮ್ಮಆತ್ಮವನ್ನು ತೊಳೆದು ಶುಭ್ರವಾಗಿ ಇಡಬಲ್ಲ ವಸ್ತು ಹಣ ಒಂದೇ. ದೇಶಪ್ರೇಮ, ಪುತ್ರವಾತ್ಸಲ್ಯ, ಪತ್ನೀಪ್ರಣಯ, ಧರ್ಮಾಭಿರುಚಿ, ಕರುಣಾ ಪ್ರೇರಣೆ—ಇಂಥ ಎಲ್ಲ ಆಧ್ಯಾತ್ಮಿಕ ಸದ್ಗುಣಗಳನ್ನೂ ಹತೋಟಿಯಲ್ಲಿಟ್ಟು ಕಾಲಾಕಾಲಗಳಲ್ಲಿ ಅವು ಪ್ರಸ್ಫುಟ ಹಾಗೂ ಪ್ರಚ್ಛನ್ನವಾಗುವಂತೆ ಮಾಡುವ ಆತ್ಮಸಾಧನ ಹಣ. ಈ ಹಣವೊಂದಿಲ್ಲದೇ ಹೋಗಿದ್ದರೆ, ಎಷ್ಟೊಂದು ಹೋಟೇಲು ಮಾಣಿಗಳಿಗೂ ದೋಭಿಗಳಿಗೂ ಕ್ಷೌರಿಕರಿಗೂ ವಿನೋದಿಗಳಿಗೂ ನಾವು ಕೃತಜ್ಞ ವಿನಮ್ರರಾಗಿರಬೇಕಾಗಿತ್ತು. ಅನಾಥಾಲಯಕ್ಕೂ ಮಾಡರನ್ ಹೊಟೇಲಿಗೂ ಇರುವ ವ್ಯತ್ಯಾಸವನ್ನು ಗಮನದಲ್ಲಿಟ್ಟುಕೊಂಡರೆ ಈ ಮಾತು ಅನುಭವಕ್ಕೆ ಬರುತ್ತದೆ. ಎರಡರಲ್ಲೂ ಸೇವೆ ಒಂದೇ; ಭಾವ ಬೇರೆ. ಲೋಕದ ಜನ ಪರಸ್ಪರವಾಗಿ ಮಾಡುವ ಕೈಂಕರ್ಯ ರೂಪವಾದ ಇಂಥ ನಿರ್ಮಾಲ್ಯಗಳನ್ನು ದಿನದಿನ ಹೊರತೆಗೆದು ಬಿಸುಟು ಇವುಗಳಿಂದ ನಮ್ಮಾತ್ಮ ಮಲಿನವಾಗದಂತೆ ಇಡುವ ಗುಡಿಯ ಭಟ್ಟರು ಹಣ: ನಮ್ಮ ಆತ್ಮದ ಪೂಜಾರಿ. ನಮ್ಮ ದೇವಸ್ಥಾನದಲ್ಲಿ ಅದಕ್ಕೆ ಹೀಗೆ ಪೂಜೆ ಸಲ್ಲಿಸುತ್ತಿರುವುದು ಬಹು ಉಚಿತವಾಗಿದೆ.[1]

—ಪು.ತಿ.ನ.

1 'ಈಚಲು ಮರದ ಕೆಳಗೆ'

ಸುಶೀಲಾ ಪದ್ಮನಾಭ ಉಪಾಧ್ಯಾಯ

ಭಾಷಾವಿಜ್ಞಾನ ಮತ್ತು ಅನ್ಯಭಾಷಾ ಶಿಕ್ಷಣ

ಮಾತಾಡುವುದು ಮನುಷ್ಯನಿಗೆ ಆನುವಂಶಿಕವಾಗಿ ಬಂದ ಶಕ್ತಿ. ಈ ಶಕ್ತಿಯಿಂದಾಗಿ ಒಂದು ಮಗು ತಾನು ಹುಟ್ಟಿದ ಕೆಲವು ತಿಂಗಳುಗಳಲ್ಲಿ ಯಾವ ವ್ಯವಸ್ಥಿತ ರೀತಿಯ ಶಿಕ್ಷಣವನ್ನೂ ಪಡೆಯದೆ ತನ್ನ ತಾಯಿ, ತಂದೆ ಮತ್ತು ಇತರ ಪರಿವಾರದವರೊಡನೆ ಬೆರೆತು ಅವರಾಡುವ ಭಾಷೆಯನ್ನು ಕಲಿಯುತ್ತದೆ. ಈ ಭಾಷೆಯನ್ನು ನಾವು ಅದರ ಮಾತೃಭಾಷೆ ಎನ್ನುತ್ತೇವೆ. ಮಗು ತನ್ನ ಪ್ರಾಥಮಿಕ ಶಾಲೆಯನ್ನು ಪ್ರವೇಶಿಸುವಾಗ ಮಾತೃಭಾಷೆಯ ಮೂಲಕ ತನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸುವ ಶಕ್ತಿ ಪಡೆದಿರುತ್ತದೆ. ದೈನಿಕ ಜೀವನದಲ್ಲಿ ಬಳಸುವ ಎಲ್ಲ ಶಬ್ದಗಳ ಪರಿಚಯವೂ ಮಗುವಿಗೆ ಇರುತ್ತದೆ. ಆ ಭಾಷೆಯಲ್ಲಿ ಸಹಜವಾಗಿ ಯೋಚಿಸುವ ಶಕ್ತಿಯೂ ಅದಕ್ಕಿರುತ್ತದೆ.

ಶಾಲೆಯಲ್ಲಿ ಮಾತೃಭಾಷೆಯನ್ನು ಕಲಿಸುವುದರಲ್ಲಿ ಭಾಷಾವಿಜ್ಞಾನದ ಪಾತ್ರ ಅಷ್ಟೊಂದು ಮಹತ್ತ್ವದ್ದಲ್ಲ. ಮಾತೃಭಾಷೆ ಕನ್ನಡವಾಗಿರುವ ಮಗುವಿಗೆ ಕನ್ನಡ ಕಲಿಸಬೇಕಾದರೆ ಅಧ್ಯಾಪಕನಿಗೆ ಹೆಚ್ಚು ತೊಂದರೆಗಳುಂಟಾಗುವುದಿಲ್ಲ. ಏಕೆಂದರೆ ವಿದ್ಯಾರ್ಥಿಗಳು ಆ ಭಾಷೆಯಲ್ಲಿ ಸರಿಯಾಗಿ ಮಾತಾಡಲು ಸಮರ್ಥ ರಾಗಿರುತ್ತಾರೆ. ಈ ಸಂದರ್ಭದಲ್ಲಿ ಅಧ್ಯಾಪಕ ಕಲಿಸಬೇಕಾಗಿರುವುದು ಆ ಭಾಷೆಯ ಲಿಖಿತ ರೂಪ, ಆಡುಭಾಷೆ ಮತ್ತು ಆದರ್ಶಭಾಷೆಗಳಲ್ಲಿನ ವ್ಯತ್ಯಾಸ ಮುಂತಾದ ವನ್ನು. ಮಾತೃಭಾಷೆ ಕಲಿಸುವ ಅಧ್ಯಾಪಕ ಹುಡುಗರಲ್ಲಿ ಓದುವ ಮತ್ತು ಬರೆಯುವ ಶಕ್ತಿಯನ್ನು ಮಾತ್ರವೇ ಮುಖ್ಯವಾಗಿ ಕಲಿಸಬೇಕಾಗಿದೆ. ಮಾತೃಭಾಷೆಯಾಗಿರದ ಇನ್ನೊಂದು ಭಾಷೆಯನ್ನು ಕಲಿಸುವಾಗ ಮಾತ್ರ ಅಧ್ಯಾಪಕ ನಿಜವಾದ ಭಾಷಾ ಬೋಧಕನಾಗುತ್ತಾನೆ. ಅವನು ಆ ಅನ್ಯಭಾಷೆಯನ್ನು ಅಥವಾ ದ್ವಿತೀಯ ಭಾಷೆ ಯನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಕಲಿಸಬೇಕಾಗುತ್ತದೆ.

ಈ ಸಂದರ್ಭದಲ್ಲಿ ನಾವು ಇನ್ನೊಂದು ವಿಷಯವನ್ನು ಗಮನಿಸಬೇಕು. ಕೆಲವೊಮ್ಮೆ ಒಂದು ಮಗುವಿನ ಮಾತೃಭಾಷೆ ಪ್ರಾದೇಶಿಕ ಭಾಷೆಯಿಂದ ಭಿನ್ನವಾಗಿರಬಹುದು. ಆಗ ಆ ಮಗು ಎರಡು ಭಾಷೆಗಳನ್ನೂ ಒಂದೇ ಸಮನಾಗಿ

ಬಳಸುವ ಸಾಮರ್ಥ್ಯ ಪಡೆಯಬಹುದು. ಉದಾಹರಣೆಗೆ, ತಮಿಳು ಮಾತಾಡುವ ಒಂದು ಕುಟುಂಬ ಬಹಳ ಕಾಲದಿಂದಲೂ ಮೈಸೂರಿನ ಒಂದು ಜಿಲ್ಲೆಯಲ್ಲಿದ್ದರೆ ಆ ಮನೆಯಲ್ಲಿ ಹುಟ್ಟುವ ಒಂದು ಮಗು ಯಾವ ವ್ಯವಸ್ಥಿತ ಶಿಕ್ಷಣವೂ ಇಲ್ಲದೆ ಕನ್ನಡ ಮತ್ತು ತಮಿಳು—ಈ ಎರಡು ಭಾಷೆಗಳನ್ನೂ ಮಾತೃಭಾಷೆಯಂತೆ ಮಾತಾಡಲು ಸಮರ್ಥವಾಗಬಹುದು. ಶಾಲೆಗೆ ಹೋಗುವಾಗ ಈ ಎರಡು ಭಾಷೆಗಳನ್ನೂ ಮಾತೃಭಾಷೆಯಂತೆ ಬಳಸಲಿಕ್ಕೆ ಆ ಮಗುವಿಗೆ ಸಾಧ್ಯವಾಗುತ್ತದೆ. ಇಂಥ ಮಕ್ಕಳನ್ನು ದ್ವಿಭಾಷಿಗಳು ಎನ್ನಬಹುದು. ಇದೇ ರೀತಿ ಮೂರು ಭಾಷೆಗಳನ್ನಾಡುವ ಪರಿಸರದಲ್ಲಿ ಬೆಳೆದ ಮಗು ಮೂರು ಭಾಷೆಗಳನ್ನೂ ಮಾತೃಭಾಷೆಯಂತೆ ಬಳಸುವ ಸಾಮರ್ಥ್ಯ ಪಡೆಯಬಹುದು. ದಕ್ಷಿಣ ಕನ್ನಡದ ಕೊಂಕಣಿ ಮಾತಾಡುವ ಮಗು ತುಳು ಮತ್ತು ಕನ್ನಡವನ್ನೂ ಮಾತೃಭಾಷೆಯ ಜೊತೆಗೆ ಕಲಿಯುತ್ತದೆ. ಇಂಥ ಮಕ್ಕಳನ್ನು ತ್ರಿಭಾಷಿಗಳು ಎನ್ನಬಹುದು. ಭಾರತದಂಥ ಬಹುಭಾಷಾ ಪ್ರದೇಶದಲ್ಲಿ ಮಾತೃಭಾಷೆ ಎನ್ನುವ ಪದಕ್ಕೆ ಸರಿಯಾದ ಪರಿಭಾಷೆ ಕೊಡುವುದು ತುಂಬ ಕಷ್ಟ. ಒಂದು ಮಗು ಬಾಲ್ಯದಲ್ಲಿ ಶಾಲೆಗೆ ಹೋಗುವುದಕ್ಕಿಂತ ಮೊದಲಿನ ಘಟ್ಟದಲ್ಲಿ ತನ್ನ ಮನೆ ಹಾಗೂ ಪರಿಸರದ ಜನರೊಡನೆ ಕಲೆತು ಯಾವ ವ್ಯವಸ್ಥಿತ ರೀತಿಯ ಶಿಕ್ಷಣವೂ ಇಲ್ಲದೆ ಕಲಿಯುವ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಭಾಷೆಗಳನ್ನು ಆ ಮಗುವಿನ ಮಾತೃಭಾಷೆ ಅಥವಾ ಮಾತೃಭಾಷೆಗಳು ಎಂದೂ, ಮಗು ದೊಡ್ಡದಾದಮೇಲೆ ವ್ಯವಸ್ಥಿತ ರೀತಿಯಲ್ಲಿ ಕಲಿಯುವ ಭಾಷೆ ಅಥವಾ ಭಾಷೆಗಳನ್ನು ದ್ವಿತೀಯ ಭಾಷೆ ಅಥವಾ ಅನ್ಯಭಾಷೆ ಅಥವಾ ಅನ್ಯಭಾಷೆಗಳು ಎಂದೂ ಸ್ಥೂಲವಾಗಿ ಹೇಳಬಹುದು.

ಮಗು ದೊಡ್ಡವನಾಗಿ ಕಲಿಯುವ ಅನ್ಯಭಾಷೆ ಮಾತೃಭಾಷೆಯ ರಚನೆ, ಅದರ ವ್ಯವಸ್ಥೆ ಇತ್ಯಾದಿಗಳಿಂದ ಭಿನ್ನವಾಗಿರುತ್ತದೆ. ಇದು ಮಗುವಿನ ಮಾತೃಭಾಷೆಯ ಪರಿವಾರಕ್ಕೆ ಸೇರಿದ ಭಾಷೆಯಾದರೆ ಈ ಭಿನ್ನತೆ ತುಂಬ ತೀವ್ರವಾಗಿರುವುದಿಲ್ಲ. ಉದಾಹರಣೆಗೆ, ಕನ್ನಡದ ಮಗು ಹಿಂದೀ ಭಾಷೆ ಕಲಿಯುವಾಗ ಎದುರು ಬರುವ ಸಮಸ್ಯೆಗಳು ತಮಿಳು ಅಥವಾ ಮಲಯಾಳ ಕಲಿಯುವಾಗ ಬರುವುದಿಲ್ಲ. ಅನ್ಯಭಾಷೆಯನ್ನು ಕಲಿಯುವಾಗ ನಮ್ಮಲ್ಲಿ ಬೇರೂರಿರುವ ಮಾತೃಭಾಷೆಯ ತತ್ತ್ವಗಳು ಅಡ್ಡಿ ಆತಂಕಗಳನ್ನುಂಟುಮಾಡಿ ನಮ್ಮ ಪ್ರಗತಿಯನ್ನು ಕುಂಠಿತಗೊಳಿಸುತ್ತವೆ. ಅನ್ಯಭಾಷೆಯ ಅಧ್ಯಯನವೆಂದರೆ ಜನ್ಮಗತವಾದ ಹಳೆಯ ಸ್ವಭಾವಗಳ ಜೊತೆಗೆ ಕೆಲವು ಹೊಸ ಸ್ವಭಾವಗಳನ್ನು ಕಲಿಯುವ ವಿಧಾನ.

ಭಾಷೆಯ ವೈಜ್ಞಾನಿಕ ವಿಶ್ಲೇಷಣೆಯೇ ಭಾಷಾವಿಜ್ಞಾನದ ಗುರಿ. ಅದು ಭಾಷಾ ಶಿಕ್ಷಣಕ್ಕೆ ಹೊಸ ಸಾಮಗ್ರಿಗಳನ್ನೂ ರೂಪರೇಖೆಗಳನ್ನೂ ತೋರಿಸಿ ಕೊಟ್ಟಿದೆ. ಭಾಷಾವಿಜ್ಞಾನದ ವಿಭಿನ್ನ ಶಾಖೆಗಳಾದ ಧ್ವನಿವಿಜ್ಞಾನ, ಆಕೃತಿ ವಿಜ್ಞಾನ, ವಾಕ್ಯವಿಜ್ಞಾನ, ಶೈಲಿವಿಜ್ಞಾನ, ತೌಲನಿಕ ವಿಶ್ಲೇಷಣೆ, ರೂಪಾಂತರ

ವ್ಯಾಕರಣ ಮುಂತಾದವೆಲ್ಲ ಭಾಷಾಶಿಕ್ಷಣಕ್ಕೆ ತಮ್ಮವೇ ಆದ ಕೊಡುಗೆಗಳನ್ನು ನೀಡಿವೆ. ಧ್ವನಿ, ಆಕೃತಿ, ವಾಕ್ಯ, ಶಬ್ದ—ಈ ಎಲ್ಲ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ಮಾತೃಭಾಷೆ ಹಾಗೂ ಕಲಿಯಬೇಕಾದ ಭಾಷೆ—ಇವುಗಳ ರಚನೆಯಲ್ಲಿರುವ ಸಾಮ್ಯ ಹಾಗೂ ವೈಷಮ್ಯಗಳ ಸಹಾಯದಿಂದ ಆಯಾ ವಿದ್ಯಾರ್ಥಿಗಳಿಗೆ ಎದುರಾಗ ಬಹುದಾದ ಕಷ್ಟಗಳನ್ನು ಅರಿತು ಅವನ್ನು ಹೋಗಲಾಡಿಸಲು ಬೇಕಾದ ವಿಧಾನ ಗಳನ್ನೂ ಶಿಕ್ಷಣ ಸಾಮಗ್ರಿಗಳನ್ನೂ ಒದಗಿಸಿಕೊಡುವುದರಲ್ಲಿ ಭಾಷಾವಿಜ್ಞಾನದ ಪಾತ್ರ ತುಂಬ ಮಹತ್ತ್ವಪೂರ್ಣವಾದದ್ದಾಗಿದೆ.

ನಮ್ಮ ಪರಂಪರಾಗತ ಭಾಷಾಶಿಕ್ಷಣ ಪದ್ಧತಿಯನ್ನು ನೋಡಿದರೆ, ಶಿಕ್ಷಣದ ಆರಂಭ ಭಾಷೆಯ ಲಿಖಿತ ರೂಪದ ಬೋಧನೆಯಿಂದ ಆಗುವುದು ಕಂಡುಬರುತ್ತದೆ. ಹೊಸ ಭಾಷೆಯನ್ನು ಲಿಪಿಸಂಕೇತ ಮತ್ತು ವ್ಯಾಕರಣ-ಭಾಷಾಂತರ ರೂಪದಿಂದ ಕಲಿಸುವ ಪ್ರಯತ್ನ ನಡೆಯುತ್ತದೆ. ಆದರೆ ಒಂದು ಭಾಷೆಯ ಯಥಾರ್ಥ ರೂಪದ ಪರಿಚಯು ಆ ಭಾಷೆಯ ಆಡುಭಾಷೆಯಿಂದಲೇ ಆಗಬೇಕು. ಆದರೆ ನಾವು ಬಳಸುವ ಯಾವ ಭಾಷೆಯ ಲಿಪಿಯಲ್ಲಿಯೂ ಆಡುಭಾಷೆಯ ಸಂಪೂರ್ಣ ಸಂಕೇತಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವಿರುವುದಿಲ್ಲ. ಇದಲ್ಲದೆ ಲಿಖಿತ ಭಾಷೆ ಲಿಪಿಬದ್ಧ ಮತ್ತು ಕಾಲಬದ್ಧವಾಗಿರುತ್ತದೆ.

ಪರಂಪರಾಗತ ಪದ್ಧತಿಯಲ್ಲಿ ಕಂಡುಬರುವ ಇನ್ನೊಂದು ದೋಷವೆಂದರೆ ಭಾಷೆಯನ್ನು ಹೇಳಿಕೊಡುವ ನೆಪದಲ್ಲಿ ನಿಜವಾಗಿ ನಡೆಯುವ ಸಾಹಿತ್ಯಪಾಠ. ಭಾಷೆಯನ್ನು ಕಲಿಯುವ ಅವಕಾಶ ಸಾಕಷ್ಟು ದೊರೆಯದಿದ್ದರೂ ಭಾಷೆಯ ಬಗ್ಗೆ ಕಲಿಯುವ ಹಾಗೂ ಭಾಷೆಯ ಸಾಹಿತ್ಯದ ಬಗ್ಗೆ ಕಲಿಯುವ ಅವಕಾಶ ಮಾತ್ರ ನಮ್ಮ ಹುಡುಗರಿಗೆ ದೊರೆಯುತ್ತದೆ. ಒಂದು ವೇಳೆ ಈ ಪದ್ಧತಿಯಲ್ಲಿ ಭಾಷೆಯನ್ನು ಕಲಿಯುವ ಅವಕಾಶ ಹುಡುಗರಿಗೆ ದೊರೆತರೂ ಅದನ್ನು ವ್ಯವಹಾರದಲ್ಲಿ ಬಳಸಲಿಕ್ಕೆ ಅವರು ಅಸಮರ್ಥರಾಗುತ್ತಾರೆ. ನಾಲ್ಕು ವಾಕ್ಯಗಳನ್ನು ಸರಿಯಾಗಿ ಉಚ್ಚರಿಸಲಿಕ್ಕೆ ಬಾರದ ವಿದ್ಯಾರ್ಥಿಗಳಿಗೆ ಸಾಹಿತ್ಯದ ಶಿಕ್ಷಣ ಕೊಟ್ಟರೆ ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಗುತ್ತದೆ. ಹೀಗೆಂದಮಾತ್ರಕ್ಕೆ ಲಿಖಿತ ಭಾಷೆ ಅಪ್ರ ಯೋಜನಕಾರಿ ಎಂದು ನಾವು ತಿಳಿಯಬೇಕಾಗಿಲ್ಲ. ಭಾಷಾಶಿಕ್ಷಣದಲ್ಲಿ ಅದಕ್ಕೂ ಸ್ಥಾನವಿದೆ. ಆದರೆ ಮೊದಲು ವ್ಯವಹಾರಕ್ಕೆ ಬೇಕಾದ ಆಡುಭಾಷೆಯಲ್ಲಿ ನೈಪುಣ್ಯ ಗಳಿಸಿ ಆಮೇಲೆ ನಮ್ಮ ಧ್ಯೇಯ, ಗುರಿ ಇತ್ಯಾದಿಗಳಿಗೆ ಅನುಸಾರವಾಗಿ ಲಿಖಿತ ರೂಪವನ್ನೂ ಅನಂತರ ಸಾಹಿತ್ಯರೂಪವನ್ನೂ ಅಭ್ಯಾಸ ಮಾಡುವುದು ಹೆಚ್ಚು ಸೂಕ್ತವೂ ಸಮಂಜಸವೂ ತರ್ಕಬದ್ಧವೂ ಆಗಿದೆ.

ನಮ್ಮ ಶಿಕ್ಷಣ ಪದ್ಧತಿಯ ಇನ್ನೊಂದು ದೋಷವೆಂದರೆ ಭಾಷಾಂತರದ ಮೂಲಕ ಭಾಷೆಯ ಅಭ್ಯಾಸ ಮಾಡುವುದು ಮತ್ತು ನೀರಸವಾದ ವ್ಯಾಕರಣ ನಿಯಮಗಳ ಹೊರೆಯನ್ನು ಹೊರಿಸುವುದು. ಭಾಷಾಂತರ ಪದ್ಧತಿಯ ಮೂಲಕ

ಕಲಿಯುವುದರಿಂದ ವಿದ್ಯಾರ್ಥಿ ತನ್ನ ಮಾತೃಭಾಷೆಯ ವಾಕ್ಯ ಹಾಗೂ ಶಬ್ದರಚನಾ ಪದ್ಧತಿಯನ್ನೇ ಅನ್ಯಭಾಷೆಯಲ್ಲಿಯೂ ಅನುಸರಿಸಿ ಹಾಸ್ಯಕ್ಕೀಡಾಗುತ್ತಾನೆ. ಭಾಷಾಂತರವೆಂಬುದು ಒಂದು ಪ್ರತ್ಯೇಕವಾದ ಕಲೆ. ಆದರೆ ಭಾಷೆಯ ಅಧ್ಯಯನ ದಲ್ಲಿ ಅದರ ಪಾತ್ರ ಬಹಳ ಅಲ್ಪ. ಹೀಗೆಯೇ ವ್ಯಾಕರಣ ನಿಯಮಗಳನ್ನೂ ರೂಪಾವಳಿಗಳನ್ನೂ ಕಂಠಪಾಠ ಮಾಡಿದ ಮಾತ್ರಕ್ಕೆ ವಿದ್ಯಾರ್ಥಿ ಅವನ್ನು ಸರಿಯಾದ ವಾಕ್ಯಗಳಲ್ಲಿ ಉಪಯೋಗಿಸಲಿಕ್ಕೆ ಸಮರ್ಥನಾಗುವುದಿಲ್ಲ. ಈ ನೀರಸವಾದ ವ್ಯಾಕರಣಪಾಠದಿಂದ ವಿದ್ಯಾರ್ಥಿಯ ಮನಸ್ಸು ಭಾಷಾಧ್ಯಯನದಿಂದ ವಿಮುಖ ವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ನಾವು ಮಾತೃಭಾಷೆ ಕಲಿಸುವಾಗಲೂ ಅನ್ಯಭಾಷೆಯನ್ನು ಕಲಿಸುವಾಗಲೂ ಒಂದೇ ರೀತಿಯ ಶಿಕ್ಷಣ ಸಾಮಗ್ರಿಗಳನ್ನೂ ಪಠ್ಯಪುಸ್ತಕಗಳನ್ನೂ ಉಪಯೋಗಿಸು ತ್ತೇವೆ. ಒಂದೇ ರೀತಿಯ ಬೋಧನ ಕ್ರಮವನ್ನೂ ಅನುಸರಿಸುತ್ತೇವೆ. ಮಾತೃ ಭಾಷೆ ಕಲಿಯುವ ವಿದ್ಯಾರ್ಥಿ ನಿಜವಾಗಿಯೂ ಭಾಷೆಯನ್ನು ಕಲಿಯುವುದಿಲ್ಲ ವಾದುದರಿಂದ ಅವನಿಗೆ ಬೇಕಾದ ಪಠ್ಯಸಾಮಗ್ರಿಗಳು ಅನ್ಯಭಾಷೆ ಕಲಿಯುವ ವಿದ್ಯಾರ್ಥಿಯ ಪಠ್ಯಸಾಮಗ್ರಿಗಳಿಗಿಂತ ಭಿನ್ನವಾಗಿರಬೇಕು. ಅನ್ಯಭಾಷಾಶಿಕ್ಷಣದ ಪಠ್ಯಸಾಮಗ್ರಿಗಳೂ ಆಯಾ ವಿದ್ಯಾರ್ಥಿಯ ಮಾತೃಭಾಷೆಗನುಸಾರವಾಗಿ ಬೇರೆ ಬೇರೆಯಾಗಿರಬೇಕು. ಹಿಂದೀ ಮಾತೃಭಾಷೆಯಾಗಿರುವ ವಿದ್ಯಾರ್ಥಿ ಕನ್ನಡ ಕಲಿಯು ವಾಗ ಕಂಡುಬರುವ ತೊಂದರೆಗಳು ಇಂಗ್ಲಿಷ್ ಮಾತೃಭಾಷೆಯಾಗಿರುವ ಅಥವಾ ತಮಿಳು ಮಾತೃಭಾಷೆಯಾಗಿರುವ ವಿದ್ಯಾರ್ಥಿಯ ತೊಂದರೆಗಳಿಗಿಂತ ಭಿನ್ನವಾಗಿರು ವುದರಿಂದ ಬೇರೆ ಬೇರೆ ರೀತಿಯ ಪಠ್ಯಸಾಮಗ್ರಿಗಳ ಆವಶ್ಯಕತೆಯಿದೆ ಎಂಬುದನ್ನು ನಾವು ಮರೆಯಬಾರದು.

ನಮ್ಮ ಶಿಕ್ಷಣ ಪದ್ಧತಿಯಲ್ಲಿ ಅಧ್ಯಾಪಕನ ಪಾತ್ರವೇ ಮುಖ್ಯವಾದುದು. ವಿದ್ಯಾರ್ಥಿಗಳಿಗೆ ಓದುವ, ಬರೆಯುವ ಮತ್ತು ಮಾತಾಡುವ ಅವಕಾಶ ತುಂಬ ಅಲ್ಪ. ಇದರಿಂದ ವಿದ್ಯಾರ್ಥಿಗಳು ನಿಷ್ಕ್ರಿಯರಾಗುತ್ತಾರೆ. ಪಾಠದ ಬಗ್ಗೆ ಅವರ ಪ್ರತಿಕ್ರಿಯೆಯನ್ನು ಅರಿಯಲು ನಮ್ಮ ಅಧ್ಯಾಪಕರು ಸಮರ್ಥರಾಗುವುದಿಲ್ಲ. ನಮ್ಮಲ್ಲಿ ಬಳಕೆಯಲ್ಲಿರುವ ಪರೀಕ್ಷಾ ಪದ್ಧತಿಯೂ ಸರಿಯಾದ ರೀತಿಯದಲ್ಲ.

ಮೇಲೆ ಹೇಳಿದ ಕುಂದುಕೊರತೆಗಳನ್ನು ಬಗೆಹರಿಸಲಿಕ್ಕಾಗಿ ಭಾಷಾವಿಜ್ಞಾನ ಕೊಟ್ಟಿರುವ ಕಾಣಿಕೆಗಳು ಹಲವಾರು. ಭಾಷಾವಿಜ್ಞಾನದ ಸಹಾಯದಿಂದ ಅನ್ಯಭಾಷೆಯನ್ನು ಕಡಿಮೆ ಸಮಯದಲ್ಲಿ ಬಹಳ ಪರಿಣಾಮಕಾರಿಯಾಗಿ ಕಲಿಯ ಬಹುದು. ಅನ್ಯಭಾಷೆಯನ್ನು ಕಲಿಯುವಾಗ ನಾವು ಮಾತೃಭಾಷೆಯ ನೆನಪನ್ನು ಮರೆತುಬಿಡಬೇಕು. ಹೊಸ ಭಾಷೆಯನ್ನು ಗಮನವಿಟ್ಟು ಕೇಳಬೇಕು, ಆಮೇಲೆ ಮಾತಾಡಬೇಕು, ಆಮೇಲೆ ಓದುವುದನ್ನೂ ಅನಂತರ ಬರೆಯುವುದನ್ನೂ ಕಲಿಯ ಬೇಕು. ಈ ನಾಲ್ಕು ತತ್ತ್ವಗಳು ಅನ್ಯಭಾಷಾಶಿಕ್ಷಣದಲ್ಲಿ ಮುಖ್ಯ ಸ್ಥಾನ ಪಡೆದಿವೆ.

ಒಂದು ಭಾಷೆಯನ್ನು ಕಲಿಯಲು ಪ್ರಾರಂಭಿಸುವಾಗ ಆ ಭಾಷೆಯನ್ನು ಧ್ಯಾನ ವಿಟ್ಟು ಕೇಳುವುದು ಬಹಳ ಅಗತ್ಯ. ಹಾಗೆ ಕೇಳಿದ ಮೇಲೆ ಆ ಭಾಷೆಯನ್ನು ಆಡುವವರ ಮಾತನ್ನು ಅನುಕರಣೆ ಮಾಡಬೇಕು. ಅನ್ಯಭಾಷೆಯ ವಿಶಿಷ್ಟ ಧ್ವನಿಗಳನ್ನೂ ವಾಕ್ಯರಚನಾ ಪದ್ಧತಿಯನ್ನೂ ಎಡೆಬಿಡದೆ ಉಚ್ಚರಿಸಬೇಕು. ಅನ್ಯಭಾಷೆಯಲ್ಲಿಯೇ ವಿಚಾರವಿನಿಮಯ ಸಂಭಾಷಣೆಗಳನ್ನು ಮಾಡಬೇಕು. ಆ ಭಾಷೆಯನ್ನು ಎಡೆಬಿಡದೆ ಉಪಯೋಗಿಸುವ ಅವಕಾಶ ದೊರೆಯಬೇಕು. ಭಾಷಾ ವಿದ್ಯಾರ್ಥಿ ರತಗತಿಯಲ್ಲಿ ನಿಷ್ಕ್ರಿಯನಾಗಕೂಡದು. ಆತ ಕಲಿಕೆಯಲ್ಲಿ ಸದಾ ಅಧ್ಯಾಪಕರ ಸಹಭಾಗಿಯಾಗಿರಬೇಕು. ಅದೂ ಅಲ್ಲದೆ ಒಂದು ಹೊಸ ಭಾಷೆಯನ್ನು ಕಲಿಯುವಾಗ ಆ ಭಾಷಾಸನ್ನಿವೇಶ ಬಹು ಮುಖ್ಯ. ವಿದ್ಯಾರ್ಥಿ ಆ ಭಾಷೆಯನ್ನಾಡುವ ಜನರ ಆಚಾರವಿಚಾರ ವೇಷಭೂಷಣ ಇತ್ಯಾದಿಗಳ ಪರಿಚಯ ಮಾಡಿಕೊಂಡಿರಬೇಕು. ಇದಕ್ಕಾಗಿ ಆತ ಆ ಭಾಷೆಯನ್ನು ಮಾತೃಭಾಷೆಯಾಗಿ ಮಾತಾಡುವವರ ಜೊತೆಯಲ್ಲಿರುವುದು ತುಂಬ ಪ್ರಯೋಜನಕಾರಿಯಾಗುತ್ತದೆ.

ಹೀಗೆ ಹೊಸ ರೀತಿಯಲ್ಲಿ ಕಡಿಮೆ ಸಮಯದಲ್ಲಿ ಅನ್ಯಭಾಷೆಯನ್ನು ಹೇಳಿಕೊಡುವ ವಿಧಾನಕ್ಕೆ 'ಸಾಂದ್ರ ಶಿಕ್ಷಣ ಪದ್ಧತಿ' ಎನ್ನುತ್ತಾರೆ. ಈ ಪದ್ಧತಿಯಲ್ಲಿ ಅನ್ಯಭಾಷೆಯಲ್ಲಿ ಮಾತೃಭಾಷೆಯಷ್ಟೇ ಪ್ರಾವೀಣ್ಯ ಗಳಿಸುವ ವಿಧಾನಗಳಿವೆ. ಮೊದಲು ಎರಡು ಭಾಷೆಗಳ ತೌಲನಿಕ ವಿಶ್ಲೇಷಣೆ ಮಾಡಿ ಎರಡು ಭಾಷೆಗಳಲ್ಲಿ ಕಂಡುಬರುವ ಸಾಮ್ಯ ವೈಷಮ್ಯಗಳ ಅಧ್ಯಯನ ಮಾಡಲಾಗುತ್ತದೆ. ಅದಕ್ಕನುಸಾರವಾಗಿ ಶಿಕ್ಷಣಸಾಮಗ್ರಿ ಹಾಗೂ ಪಠ್ಯಪುಸ್ತಕಗಳನ್ನು ರಚಿಸಲಾಗುತ್ತದೆ. ಭಾಷೆಯನ್ನು ತೀವ್ರವಾಗಿ ಅಂದರೆ ದಿನಕ್ಕೆ ಐದಾರು ಗಂಟೆಗಳ ಕಾಲ ಕಲಿಸಲಾಗುತ್ತದೆ. ಪ್ರತಿಯೊಂದು ಘಟ್ಟದಲ್ಲಿಯೂ ವಿದ್ಯಾರ್ಥಿಗಳು ಸಂಪಾದಿಸಿದ ಜ್ಞಾನವನ್ನು ಪರೀಕ್ಷಿಸಿ ಎಡರುತೊಡರುಗಳನ್ನು ಮನಗಂಡು ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಹೊಸ ಭಾಷೆಯ ತತ್ತ್ವಗಳು ಚೆನ್ನಾಗಿ ರೂಢಿಗತವಾಗಬೇಕಾದರೆ 'ಅತಿ ಕಲಿಕೆ'ಯ ಆವಶ್ಯಕತೆಯಿರುವುದರಿಂದ ಪುನರಾವರ್ತನೆಗೆ ಪ್ರಾಶಸ್ತ್ಯ ಕೊಡಲಾಗುತ್ತದೆ. ಸಹಜ ಸನ್ನಿವೇಶಗಳಲ್ಲಿ ನಡೆಯುವ ಸಂಭಾಷಣೆಗಳ ಮೂಲಕ ಆ ಭಾಷೆಯನ್ನು ವ್ಯವಹಾರದಲ್ಲಿ ಉಪಯೋಗಿಸುವ ತರಬೇತು ಕೊಡಲಾಗುತ್ತದೆ. ಭಾಷಾ ಪ್ರಯೋಗಶಾಲೆ ಹಾಗೂ ದೃಶ್ಯ–ಶ್ರವ್ಯ ಸಾಧನಗಳ ಮೂಲಕ ಶಿಕ್ಷಣದ ತೀವ್ರತೆಯನ್ನು ಅಧ್ಯಾಪಕ ಹೆಚ್ಚಿಸುತ್ತಾನೆ. ಅನ್ಯಭಾಷೆಯನ್ನೇ ತರಗತಿಯಲ್ಲಿ ಬಳಸಲಾಗುತ್ತದೆ.

ವಿದ್ಯಾರ್ಥಿಗಳು ಅನ್ಯಭಾಷೆಯನ್ನು ಕಲಿಯುವ ಉದ್ದೇಶಗಳು ಬೇರೆ ಬೇರೆಯಾಗಿರುತ್ತವೆ. ಶಾಲೆಯಲ್ಲಿ ಮಕ್ಕಳು ಮಾತೃಭಾಷೆಯಲ್ಲದ ಒಂದು ಅನ್ಯಭಾಷೆಯನ್ನು ಕಲಿಯಬೇಕಾಗುತ್ತದೆ. ಸರಕಾರದ ಅಧಿಕಾರಿಗಳು ಕಚೇರಿಯ ಕಾರ್ಯನಿರ್ವಹಣೆಗಾಗಿ ಹಿಂದಿಯನ್ನೋ ಪ್ರಾದೇಶಿಕ ಭಾಷೆಯನ್ನೋ ಕಲಿಯುತ್ತಾರೆ.

ಇನ್ನೊಂದು ಭಾಷೆಯಲ್ಲಿರುವ ವಿಜ್ಞಾನ ಹಾಗೂ ಇತರ ವಿಷಯಗಳ ತಿಳಿವಳಿಕೆಗಾಗಿ ವಿದ್ಯಾರ್ಥಿಗಳು ಅನ್ಯಭಾಷೆಯನ್ನು ಕಲಿಯುತ್ತಾರೆ. ನಾವು ವಿದೇಶಕ್ಕೆ ಹೋದಾಗ ಅಲ್ಲಿಯ ಜನರೊಡನೆ ವಿಚಾರವಿನಿಮಯ ಮಾಡಲು ಅಲ್ಲಿಯ ಭಾಷೆಯನ್ನು ಕಲಿಯುತ್ತೇವೆ. ಬೇರೆ ಪ್ರಾಂತದಿಂದ ಬಂದ ವ್ಯಾಪಾರಿಗಳು ಜನರೊಡನೆ ನಿಕಟ ಸಂಪರ್ಕ ಬೆಳೆಸಿ ಸುಗಮವಾಗಿ ವ್ಯಾಪಾರ ಸಾಗಿಸಲಿಕ್ಕಾಗಿ ಪ್ರಾದೇಶಿಕ ಭಾಷೆ ಕಲಿಯುತ್ತಾರೆ. ವಿದೇಶದ ಸಾಹಿತ್ಯ ಸಂಸ್ಕೃತಿ ಜನಜೀವನಗಳ ಪರಿಚಯ ಪಡೆಯಲು ಅಥವಾ ಸಂಶೋಧನೆ ನಡೆಸಲು ಅಲ್ಲಿಯ ಭಾಷೆಯನ್ನು ಕಲಿಯಬೇಕಾಗುತ್ತದೆ. ಭಾಷಾವಿಜ್ಞಾನಿ ಹಾಗೂ ಅಧ್ಯಾಪಕ ಅನ್ಯಭಾಷೆ ಕಲಿಯುವವರ ಉದ್ದೇಶವನ್ನು ಮೊದಲು ತಿಳಿದುಕೊಳ್ಳಬೇಕು. ಇದನ್ನು ನೆನಪಿನಲ್ಲಿಟ್ಟುಕೊಂಡು ಪಠ್ಯ ಪುಸ್ತಕವನ್ನು ತಯಾರಿಸಬೇಕು. ಜನರೊಡನೆ ಮಾತಾಡಿ ಸಂಪರ್ಕ ಬೆಳೆಸುವ ವ್ಯಾಪಾರಿ ಅ ಆ ಇ ಈ ವರ್ಣಮಾಲೆಯ ಕಡೆಗೆ ಹೆಚ್ಚು ಗಮನಕೊಡಬೇಕಾಗಿಲ್ಲ. ಒಬ್ಬ ಸರಕಾರಿ ಅಧಿಕಾರಿಗೆ ಬೇಕಾಗಿರುವ ಶಬ್ದಸಂಪತ್ತು, ವಾಕ್ಯವಿನ್ಯಾಸ ಇವು ಒಬ್ಬ ವಿಜ್ಞಾನಿಗೆ ಬೇಕಾದ ಶಬ್ದಸಂಪತ್ತು, ವಾಕ್ಯವಿನ್ಯಾಸಗಳಿಗಿಂತ ಭಿನ್ನವಾಗಿರುತ್ತವೆ—ಎಂಬುದನ್ನು ತಿಳಿದುಕೊಂಡು ಪಠ್ಯಸಾಮಗ್ರಿಗಳನ್ನು ರಚಿಸಬೇಕು. ಭಾಷಾ ಶಿಕ್ಷಣದ ಅವಧಿ ಕೂಡ ಕಲಿಯುವವರ ಆವಶ್ಯಕತೆಗನುಸಾರವಾಗಿ ಹೆಚ್ಚು ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಮೂರು ತಿಂಗಳ ಸಾಂದ್ರಶಿಕ್ಷಣದಿಂದ ಆಡುಭಾಷೆಯಲ್ಲಿ ಜನರೊಡನೆ ವ್ಯವಹಾರ ಮಾಡಲಿಕ್ಕೆ ಬೇಕಾದ ಜ್ಞಾನ ಪಡೆಯಬಹುದು. ಇನ್ನು ಮೂರು ತಿಂಗಳ ಅವಧಿಯಲ್ಲಿ ಆ ಭಾಷೆಯಲ್ಲಿ ಓದುವ ಮತ್ತು ಬರೆಯುವ ಸಾಮರ್ಥ್ಯ ಗಳಿಸಬಹುದು.

ಅನ್ಯಭಾಷೆಯ ಅಧ್ಯಾಪಕನಲ್ಲಿರಬೇಕಾದ ಅರ್ಹತೆಗಳನ್ನು ಮತ್ತು ಅವನು ಮಾಡಬೇಕಾದ ಕೆಲಸಗಳನ್ನು ಈ ರೀತಿ ಸಂಗ್ರಹಿಸಬಹುದು: ಅದು ಅಧ್ಯಾಪಕನ ಮಾತೃಭಾಷೆಯಾಗಿರಬೇಕು. ವಿದ್ಯಾರ್ಥಿಗಳ ಅನುಕರಣೆಗೆ ಆತ ಮಾದರಿಯಾಗಿರುವುದರಿಂದ ಅಧ್ಯಾಪಕನ ಉಚ್ಚಾರಣೆ ಸ್ಪಷ್ಟವಾಗಿರಬೇಕು. ಆತನಿಗೆ ಭಾಷಾ ವಿಜ್ಞಾನದ ಹಾಗೂ ಭಾಷಾ ಶಿಕ್ಷಣದ ಮೂಲತತ್ತ್ವಗಳ ಪರಿಜ್ಞಾನವಿರಬೇಕು. ತನ್ನ ಮಾತೃಭಾಷೆಯ ಜೊತೆಗೆ ವಿದ್ಯಾರ್ಥಿಯ ಮಾತೃಭಾಷೆಯ ಪರಿಜ್ಞಾನವೂ ಅವನಿಗೆ ಸಾಕಷ್ಟಿದ್ದು, ಆತ ಈ ಎರಡೂ ಭಾಷೆಗಳ ರಚನೆಯ ತೌಲನಿಕ ಅಧ್ಯಯನ ಮಾಡಿ, ಅನ್ಯಭಾಷೆಯ ಯಾವ ಯಾವ ಅಂಶಗಳು ವಿದ್ಯಾರ್ಥಿಗೆ ಅಡ್ಡಿ ಆತಂಕಗಳನ್ನುಂಟುಮಾಡುತ್ತವೆಯೆಂಬುದನ್ನು ಗಮನಿಸಿ, ಅದಕ್ಕಾಗಿ ವಿಶಿಷ್ಟವಾದ ಅಭ್ಯಾಸಗಳನ್ನು ತಯಾರಿಸಬೇಕು. ಅವನಿಗೆ ಅನ್ಯಭಾಷೆ ಮತ್ತು ಮಾತೃಭಾಷೆಗಳನ್ನಾಡುವ ಜನರ ಆಚಾರ, ಸಂಸ್ಕೃತಿ, ಸಭ್ಯತೆಗಳ ಪರಿಚಯವಿರಬೇಕು. ಭಾಷೆಯ ಎಷ್ಟೋ ಪ್ರಯೋಗಗಳನ್ನು ಸಂಸ್ಕೃತಿಯ ಹಿನ್ನೆಲೆಯಿಂದಲೆ ಅರಿತುಕೊಳ್ಳಬೇಕಾಗಿರುವುದರಿಂದ ಇದು ಅಗತ್ಯ. ಆಡುಭಾಷೆಯ ಪ್ರಭೇದಗಳು ಹಾಗೂ

ಭಾಷೆಯ ಚಾರಿತ್ರಿಕ ವಿಕಾಸ ಕೂಡ ಅವನಿಗೆ ತಿಳಿದಿದ್ದರೆ ಉತ್ತಮ. ವಿದ್ಯಾರ್ಥಿಗಳಲ್ಲಿ ಅನ್ಯಭಾಷೆಯ ಬಗೆಗೆ ಆದರ ಹಾಗೂ ಜಿಜ್ಞಾಸೆ ಹುಟ್ಟಿಸುವುದರಲ್ಲಿ ಆತ ಸಹಾಯಕನಾಗಬೇಕು. ಭಾಷಾಭ್ಯಾಸದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಹಂತ ಹಂತಗಳಲ್ಲಿಯೂ ತಿಳಿದುಕೊಂಡು ಪರಿಹಾರ ಕ್ರಮಗಳನ್ನು ಕಂಡುಹಿಡಿಯಬಲ್ಲವನಾಗಿರಬೇಕು.

ಮಾತೃಭಾಷೆ ಹಾಗೂ ಅನ್ಯಭಾಷೆಯ ತೌಲನಿಕ ಅಧ್ಯಯನ ಭಾಷಾ ಶಿಕ್ಷಣದಲ್ಲಿ ಯಾವ ರೀತಿ ಪ್ರಯೋಜನಕಾರಿ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಸೂಚಿಸಬಹುದು. ಈ ಅಧ್ಯಯನ ಬೇರೆ ಬೇರೆ ಸ್ತರಗಳಲ್ಲಿ, ಅಂದರೆ ಎರಡು ಭಾಷೆಗಳ ಧ್ವನಿವ್ಯವಸ್ಥೆ, ಶಬ್ದರಚನೆಯ ವ್ಯವಸ್ಥೆ, ವಾಕ್ಯವ್ಯವಸ್ಥೆ ಮುಂತಾದೆಡೆ, ನಡೆಯಬೇಕು. ಅನ್ಯಭಾಷೆಯ ಧ್ವನಿಗಳನ್ನು ಮೂರು ರೀತಿಯಾಗಿ ವರ್ಗೀಕರಿಸಬಹುದು : ೧ ಎರಡು ಭಾಷೆಗಳಲ್ಲಿಯೂ ಸಮಾನ ರೂಪದಿಂದ ಉಚ್ಚರಿಸುವ ಧ್ವನಿಗಳು ; ೨ ಮಾತೃಭಾಷೆಯಲ್ಲಿಲ್ಲದೆ ಅನ್ಯಭಾಷೆಯಲ್ಲಿ ಮಾತ್ರ ಕಂಡುಬರುವ ಧ್ವನಿಗಳು ; ಮತ್ತು ೩ ಮಾತೃಭಾಷೆ ಹಾಗೂ ಅನ್ಯಭಾಷೆಗಳಲ್ಲಿ ಇದ್ದರೂ ಎರಡೂ ಭಾಷೆಗಳಲ್ಲಿ ಬೇರೆ ಬೇರೆ ಪರಿಸರಗಳಲ್ಲಿ ಬೇರೆ ಬೇರೆ ವಿಧವಾಗಿ ಉಚ್ಚರಿಸಲ್ಪಡುವ ಧ್ವನಿಗಳು. ಅನ್ಯಭಾಷೆಯಲ್ಲಿ ಮಾತ್ರ ಕಂಡುಬರುವ ಧ್ವನಿಗಳ ಉಚ್ಚಾರಣೆಯನ್ನು ಕಲಿಸಲು ಕೆಲವು ವಿಶಿಷ್ಟವಾದ ಅಭ್ಯಾಸಗಳನ್ನು ಕೊಡಬೇಕಾಗುತ್ತದೆ. ಉದಾಹರಣೆಗೆ ಹಿಂದೀ ಭಾಷೆಯಲ್ಲಿ ಳಕಾರವಿರುವುದಿಲ್ಲ, ಆದರೆ ಲಕಾರವಿದೆ. ಹಿಂದೀ ಮಾತಾಡುವವರಿಗೆ ಕನ್ನಡ ಕಲಿಸುವಾಗ ಲ ಮತ್ತು ಳಕಾರಗಳು ಒಂದೇ ಸನ್ನಿವೇಶದಲ್ಲಿ ಬರುವ ಪದಯುಗ್ಮಗಳನ್ನು ಬಳಸಿ ಅವುಗಳೊಳಗಿನ ವ್ಯತ್ಯಾಸವನ್ನು ತೋರಿಸಿಕೊಡಬೇಕು. ಳಕಾರ ಬೇರೆ ಬೇರೆ ಸನ್ನಿವೇಶಗಳಲ್ಲಿ, ಅಂದರೆ ಶಬ್ದದ ಬೇರೆ ಬೇರೆ ಸ್ಥಾನಗಳಲ್ಲಿ ಬರುವ ಉದಾಹರಣೆಗಳನ್ನು ಮೊದಲು ಅಧ್ಯಾಪಕರ ಬಾಯಿಯಿಂದ ಕೇಳಿ, ಆಮೇಲೆ ವಿದ್ಯಾರ್ಥಿ ಉಚ್ಚರಿಸಬೇಕು. ಬೆಲೆ–ಬೆಳೆ, ಕಲೆ–ಕಳೆ, ಕಲಿಸು–ಕಳಿಸು ಮುಂತಾದ ಪದಯುಗ್ಮಗಳನ್ನೂ ಆಮೇಲೆ ಸ್ವರಗಳ ಮಧ್ಯದಲ್ಲಿ ಮತ್ತು ಬೇರೆ ವ್ಯಂಜನಕ್ಕೆ ಪರವಾಗಿ ಅಥವಾ ಪೂರ್ವವಾಗಿ ಳಕಾರ ಬರುವ ಅನೇಕ ಶಬ್ದಗಳನ್ನೂ ಉಚ್ಚರಿಸಬೇಕು. ಕನ್ನಡಿಗರು ಮಲಯಾಳ ಕಲಿಯುವಾಗ ಅಲ್ಲಿರುವ ಎರಡು ಬಗೆಯ ರಕಾರಗಳ (ಕಂಪಿತ ಮತ್ತು ತಾಡಿತ ರೇಫ) ಉಚ್ಚಾರಣೆ, ಱಳದ (ೞ) ಉಚ್ಚಾರಣೆ ಙ, ಞ ಕಾರಗಳ ಉಚ್ಚಾರಣೆ ಕಠಿಣವಾಗುತ್ತದೆ. ಆದಕ್ಕಾಗಿ ಈ ಧ್ವನಿಗಳು ಬೇರೆ ಬೇರೆ ಸನ್ನಿವೇಶಗಳಲ್ಲಿ ಬರುವ ಉದಾಹರಣೆಗಳನ್ನೂ ಈ ಧ್ವನಿಗಳಿಗೆ ಸಮೀಪವಾಗಿರುವ ಇತರ ಧ್ವನಿಗಳಿರುವ ಪದಯುಗ್ಮಗಳನ್ನೂ ವಿದ್ಯಾರ್ಥಿಗಳು ಉಚ್ಚರಿಸುವ ಹಾಗೆ ಮಾಡಬೇಕು. ಮೈಸೂರಿನ, ಮರಾಠಿ ಸಂಪರ್ಕವಿಲ್ಲದ, ಕನ್ನಡಿಗರಿಗೆ ಮರಾಠಿಭಾಷೆಯನ್ನು ಕಲಿಸಬೇಕಾದಾಗ ಮರಾಠಿಯ ಸಂವೃತ ಅಕಾರವನ್ನು, ವರ್ತ್ಸ್ಯ ಸ್ಪರ್ಶಸಂಘರ್ಷಗಳಾದ ತ್ಸ ದ್ಜ

ಗಳನ್ನೂ ಮಹಾಪ್ರಾಣಯುಕ್ತವಾದ ಮ್ಹ, ನ್ಹ, ಲ್ಹ, ರ್ಹ, ವ್ಹ ಮುಂತಾದ ವ್ಯಂಜನಗಳನ್ನೂ ಸರಿಯಾಗಿ ಉಚ್ಚರಿಸುವಂತೆ ಮಾಡಲೂ ಇಂಥ ಕ್ರಮ ಕೈಗೊಳ್ಳ ಬೇಕಾಗುತ್ತದೆ.

ಎಷ್ಟೋ ಧ್ವನಿಗಳು ಎರಡು ಭಾಷೆಗಳಲ್ಲೂ ಕಂಡುಬಂದರೂ ಎರಡೂ ಭಾಷೆ ಗಳಲ್ಲಿ ಅವು ಬರುವ ಪರಿಸರಗಳು ಬೇರೆಬೇರೆಯಾಗಿರುತ್ತವೆ. ಒಂದು ಭಾಷೆಯಲ್ಲಿ ಎರಡು ಧ್ವನಿಗಳು ಒಂದೇ ಧ್ವನಿಮಾದ ಉಪಧ್ವನಿಗಳಾಗಿದ್ದು ಒಂದೊಂದು ನಿಶ್ಚಿತವಾದ ಸನ್ನಿವೇಶದಲ್ಲಿ ಮಾತ್ರ ಬರುವುದಾದರೆ ಆ ಭಾಷೆಯ ವಿದ್ಯಾರ್ಥಿ ಅನ್ಯ ಭಾಷೆಯಲ್ಲಿಯೂ ಆ ಧ್ವನಿಗಳನ್ನು ಆಯಾ ಸನ್ನಿವೇಶದಲ್ಲಿ ಮಾತ್ರ ಉಚ್ಚರಿಸಲು ಸಮರ್ಥನಾಗಿ ಬೇರೆ ಸನ್ನಿವೇಶಗಳಲ್ಲಿ ಅವನ್ನು ತಪ್ಪಾಗಿ ಉಚ್ಚರಿಸುತ್ತಾನೆ. ಉದಾಹರಣೆಗೆ, ತಮಿಳು ಮಲಯಾಳಗಳಲ್ಲಿ ಅಘೋಷ ಸ್ಪರ್ಶಧ್ವನಿಗಳಾದ ಕಚಟ ತಪಗಳು ಪದಾದಿಯಲ್ಲಿಯೂ ಘೋಷಧ್ವನಿಗಳು ಪದಮಧ್ಯದಲ್ಲಿಯೂ ಉಚ್ಚರಿಸ ಲ್ಪಡುತ್ತವೆ. ಮಲಯಾಳ ಅಥವಾ ತಮಿಳು ಮಾತಾಡುವ ವಿದ್ಯಾರ್ಥಿ ಕನ್ನಡ ಕಲಿಯುವಾಗ ಕನ್ನಡದ ಪದಾದಿಯ ಘೋಷಸ್ಪರ್ಶವನ್ನು ಅಘೋಷವನ್ನಾಗಿಯೂ ಪದಮಧ್ಯದಲ್ಲಿಯ ಅಘೋಷಸ್ಪರ್ಶವನ್ನು ಘೋಷವನ್ನಾಗಿಯೂ ಉಚ್ಚರಿಸುತ್ತಾನೆ. ಗತಿ ಎನ್ನುವ ಶಬ್ದ ಅವನ ಬಾಯಿಯಲ್ಲಿ ಕದಿ ಎಂದಾಗುತ್ತದೆ. ಅಥವಾ ಪದ ಮಧ್ಯದಲ್ಲಿ ಅಘೋಷಸ್ಪರ್ಶವನ್ನು ಉಚ್ಚರಿಸಿದರೂ ಅದನ್ನು ತನ್ನ ಮಾತೃಭಾಷೆಯ ಅಭ್ಯಾಸದಂತೆ ದ್ವಿತ್ವವನ್ನಾಗಿ ಮಾಡುತ್ತಾನೆ. ಆಟ ಶಬ್ದ ಅವನ ಬಾಯಿಯಲ್ಲಿ ಆಟ್ಟ ಎಂದಾಗುತ್ತದೆ. ಮರಾಠಿ ಅಥವಾ ತೆಲುಗು ಮಾತೃಭಾಷೆಯಾಗಿರುವ ವಿದ್ಯಾರ್ಥಿ ಕನ್ನಡದ ಅ, ಉ, ಒ ಕಾರಗಳಿಗೆ ಪೂರ್ವದಲ್ಲಿ ಬರುವ ತ, ದ, ಕಾರಗಳನ್ನು ಉಚ್ಚರಿಸುವಾಗ ಸ್ಪರ್ಶಸಂಘರ್ಷಗಳಾಗಿ—ತ್ಸ, ದ್ಜ ಮುಂತಾಗಿ ಉಚ್ಚರಿಸುತ್ತಾನೆ. ಹುಚ್ಚು ಶಬ್ದವನ್ನು ಹುತ್ಸು ಎಂದು ಉಚ್ಚರಿಸುತ್ತಾನೆ. ಇಂಗ್ಲಿಷ್ ಭಾಷೆಯಲ್ಲಿ ಕನ್ನಡ ಭಾಷೆಯಂತೆ ದ್ವಿಸ್ಪರ್ಶಗಳ ಉಪಯೋಗವಿಲ್ಲದಿರು ವುದರಿಂದ ಅವರು ಕನ್ನಡದ ದ್ವಿಸ್ಪರ್ಶಗಳನ್ನು ಉಚ್ಚರಿಸಬೇಕಾದರೆ ಸಾಕಷ್ಟು ಪ್ರಯತ್ನಪಡಬೇಕಾಗುತ್ತದೆ. ಪ್ರತಿಯೊಂದು ಭಾಷೆಯ ಬಲಾಘಾತ, ಶ್ರುತಿ, ತಾನ ಇವುಗಳಲ್ಲಿಯೂ ಬೇಕಾದಷ್ಟು ಭಿನ್ನತೆಗಳಿವೆ. ಆಂಗ್ಲಭಾಷೆಯಲ್ಲಿರುವ ಬಲಾಘಾತವ್ಯವಸ್ಥೆ ಕನ್ನಡದಲ್ಲಿಲ್ಲ. ಹೀಗಾಗಿ ಆಂಗ್ಲ ವಿದ್ಯಾರ್ಥಿಗಳು ಕನ್ನಡ ಕಲಿಯುವಾಗ ಅವರ ಭಾಷೆಯ ನಿಯಮಕ್ಕನುಸಾರವಾಗಿ ಶಬ್ದಗಳ ಒಂದು ನಿಶ್ಚಿತ ವರ್ಣದ ಮೇಲೆ ಬಲಾಘಾತ ಹಾಕಿ, ಬಲಾಘಾತ ಹಾಕಿದ ವರ್ಣಗಳನ್ನು ತೀಕ್ಷ್ಣ ವಾಗಿ ಉಚ್ಚರಿಸಿ, ಬಲಾಘಾತ ಹಾಕದ ವರ್ಣಗಳನ್ನು ಉಚ್ಚಾರಣೆಯಲ್ಲಿ ತೇಲಿಸಿ ಅಥವಾ ಜಾರಿಸಿಬಿಡುತ್ತಾರೆ. ಹೀಗೆ ಬಲಾಘಾತ ಹಾಕಿದಾಗ ಹ್ರಸ್ವಸ್ವರ ದೀರ್ಘ ವಾಗುವುದೂ ಅದರ ಹಿಂದಿನ ಹಾಗೂ ಮುಂದಿನ ದೀರ್ಘಸ್ವರ ಹ್ರಸ್ವವಾಗುವುದೂ ದ್ವಿಸ್ಪರ್ಶ ಏಕಸ್ಪರ್ಶವಾಗುವುದೂ ಕಾಣಬರುತ್ತದೆ. ಮಕ್ಕಳು ಎಂಬ ಶಬ್ದವನ್ನು

ಉಚ್ಚರಿಸುವಾಗ ಮಕಾರದ ಮೇಲೆ ಬಲಾಘಾತ ಹಾಕಿ ಮಾಕಳು ಅಥವಾ ಮಾಕ್‌ಳು ಎಂದು ಉಚ್ಚರಿಸುತ್ತಾರೆ. ಹೀಗೆ ಮಾತೃಭಾಷೆಯ ಪ್ರಭಾವದಿಂದಾಗಿ ಅವರಲ್ಲಿ ಬೇರೂರಿದ ಅಭ್ಯಾಸಗಳನ್ನು ಅಧ್ಯಾಪಕ ಹೋಗಲಾಡಿಸಿ ಹೊಸ ಭಾಷೆಯ ಧ್ವನಿಗಳ ಸರಿಯಾದ ಉಚ್ಚಾರಣೆಗಳನ್ನು ಕಲಿಸಬೇಕಾದರೆ ವಿದ್ಯಾರ್ಥಿಯ ಮಾತೃಭಾಷೆಯ ಹಿನ್ನೆಲೆಯನ್ನು ನೋಡಿಕೊಂಡು ಅದಕ್ಕೆ ಬೇಕಾದ ಅಭ್ಯಾಸಗಳನ್ನು ತಯಾರಿಸಬೇಕಾಗುತ್ತದೆ.

ಪದರಚನೆ ಹಾಗೂ ವ್ಯಾಕರಣಾಂಶಗಳ ದೃಷ್ಟಿಯಿಂದ ಪ್ರತಿಯೊಂದು ಭಾಷೆಗೂ ಅದರದರದೇ ವೈಶಿಷ್ಟ್ಯವಿರುತ್ತದೆ. ನಾಮಪದಗಳ ಲಿಂಗ, ವಚನ, ವಿಭಕ್ತಿ ವ್ಯವಸ್ಥೆಯಾಗಲಿ ಕ್ರಿಯಾಪದಗಳ ಕಾಲ, ಪುರುಷ, ಲಿಂಗ, ವಚನ ವ್ಯವಸ್ಥೆಯಾಗಲಿ, ವಿಶೇಷಣ ವಿಶೇಷ್ಯಗಳ ಹೊಂದಾಣಿಕೆಯಾಗಲಿ ಬೇರೆಬೇರೆ ಭಾಷೆಗಳಲ್ಲಿ ಬೇರೆಬೇರೆ ತೆರನಾಗಿವೆ. ಮಲಯಾಳ ಭಾಷೆಯ ಕ್ರಿಯಾಪದ ರೂಪಗಳಲ್ಲಿ ಪುರುಷ, ಲಿಂಗ, ವಚನ ವಿವಕ್ಷೆಯಿಲ್ಲ. ಅದರ 'ವರುನ್ನು' ಎನ್ನುವ ಒಂದು ರೂಪಕ್ಕೆ ಪ್ರತಿಯಾಗಿ ಕನ್ನಡದಲ್ಲಿ ಬರುತ್ತೇನೆ, ಬರುತ್ತೇವೆ ಇತ್ಯಾದಿ ಪುರುಷ, ವಚನಗಳನ್ನು ಸೂಚಿಸುವ ಒಂಬತ್ತು ರೂಪಗಳಿವೆ. ಕನ್ನಡದಲ್ಲಿ ಪ್ರಥಮ ಮಧ್ಯಮ ಪುರುಷ ಕ್ರಿಯಾಪದ ರೂಪಗಳಲ್ಲಿ ಲಿಂಗವಿವಕ್ಷೆ ಇಲ್ಲ. ಆದರೆ ಕನ್ನಡದ ಹೋಗುತ್ತೇನೆ ಎನ್ನುವ ಒಂದು ರೂಪಕ್ಕೆ ಪ್ರತಿಯಾಗಿ ಹಿಂದಿಯಲ್ಲಿ ಪುಲ್ಲಿಂಗ ಸ್ತ್ರೀಲಿಂಗವನ್ನು ಸೂಚಿಸುವ 'ಆತಾ' 'ಆತೀ' ಎನ್ನುವ ಎರಡು ರೂಪಗಳಿವೆ. ಕನ್ನಡದ ಪ್ರಥಮ ಪುರುಷ ಏಕವಚನ ಸರ್ವನಾಮದಲ್ಲಿ ಲಿಂಗವ್ಯವಸ್ಥೆಯನ್ನು ತೋರಿಸುವ ಅವನು, ಅವಳು, ಅದು ಎನ್ನುವ ಮೂರು ರೂಪಗಳಿದ್ದರೆ ಹಿಂದಿಯಲ್ಲಿ 'ವೋ' ಎಂಬ ಒಂದೇ ರೂಪವಿದೆ. ಹಿಂದಿಯಲ್ಲಿ ನಿರ್ಜೀವವಾಚಕ ಶಬ್ದಗಳಿಗೂ, ವಿಶೇಷಣಗಳಿಗೂ ಪುಂ ಸ್ತ್ರೀ ಲಿಂಗ ವ್ಯವಸ್ಥೆಯಿದೆ. ಆದರೆ ಕನ್ನಡದಲ್ಲಿ ಅಂತಹ ವಿವಕ್ಷೆ ಇಲ್ಲ. ವಿಭಕ್ತಿ ಪ್ರತ್ಯಯಗಳ ಸಂಖ್ಯೆಗಳೂ ಅವು ಪ್ರತಿನಿಧಿಸುವ ಅರ್ಥಗಳೂ ಬೇರೆಬೇರೆ ಭಾಷೆಗಳಲ್ಲಿ ಬೇರೆಬೇರೆ ತೆರನಾಗಿವೆ. ಹಿಂದಿಯಲ್ಲಿ ಕರ್ಮಕಾರಕ ಹಾಗೂ ಸಂಪ್ರದಾನಕಾರಕಕ್ಕೆ ಒಂದೇ 'ಕೋ' ಪ್ರತ್ಯಯವಿದೆ. ಆದರೆ ಕನ್ನಡದಲ್ಲಿ ಈ ಎರಡು ಅರ್ಥಗಳನ್ನು ಸೂಚಿಸುವ 'ಅನ್ನು' ಮತ್ತು 'ಗೆ' ಅಥವಾ 'ಕ್ಕೆ' ಎಂಬ ಎರಡು ಪ್ರತ್ಯಯಗಳಿವೆ.

ವಾಕ್ಯರಚನೆಯ ಪದ್ಧತಿಯಲ್ಲಿಯೂ ಭಾಷೆ ಭಾಷೆಗಳಲ್ಲಿ ವೈಲಕ್ಷಣ್ಯಗಳುಂಟು. ಕನ್ನಡದಲ್ಲಿ ಶಬ್ದಗಳ ಅನುಕ್ರಮ ಕರ್ತೃ–ಕರ್ಮ–ಕ್ರಿಯೆ ಎಂದಾಗಿದೆ. ಆಂಗ್ಲ ಭಾಷೆಯಲ್ಲಿ ಕಾಣುವ ಕ್ರಮ ಕರ್ತೃ–ಕ್ರಿಯೆ–ಕರ್ಮ. ಆಂಗ್ಲಭಾಷೆಯಲ್ಲಿ ಪ್ರಶ್ನಾರ್ಥಕ ವಾಕ್ಯದಲ್ಲಿ ಕರ್ತೃ ಪದಕ್ಕೆ ಪೂರ್ವದಲ್ಲಿ ಕ್ರಿಯಾಪದ ಬರುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ಟು, ಫ್ರಂ, ಬೈ ಮುಂತಾದ ಉಪಸರ್ಗಗಳು ಬರುವ ಸನ್ನಿವೇಶದಲ್ಲಿ ಕನ್ನಡ ಪರಸರ್ಗಗಳನ್ನೋ ಪರಪ್ರತ್ಯಯಗಳನ್ನೋ ಉಪಯೋಗಿಸು

ತ್ತದೆ. 'ಮಾಡಿದವರು' ಎನ್ನುವ ಕೃದಂತನಾಮವನ್ನು ಕನ್ನಡದಲ್ಲಿ ಒಂದು ಶಬ್ದದ ಮೂಲಕ ಸೂಚಿಸಬಹುದು, ಆದರೆ ಅದೇ ಅರ್ಥವನ್ನು ಕೊಡಲು ಹಿಂದಿಯಲ್ಲಿ 'ಯಾರು ಮಾಡಿದರೋ ಅವರು' ಎನ್ನುವ ವಾಕ್ಯಾಂಶವನ್ನು ಉಪಯೋಗಿಸಬೇಕಾಗುತ್ತದೆ. ಉದ್ಧರಣಯುಕ್ತವಾದ ಮಿಶ್ರವಾಕ್ಯಗಳಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪ್ರಧಾನ ವಾಕ್ಯ ಮೊದಲೂ ಅಧೀನ ವಾಕ್ಯ ಆಮೇಲೂ ಇರುತ್ತವೆ—'ಅವನು ಹೇಳಿದನು ಏನೆಂದರೆ ನಾನು ನಾಳೆ ಬರುತ್ತೇನೆ'. ಆದರೆ ಕನ್ನಡದಲ್ಲಿ ಅಧೀನ ವಾಕ್ಯ ಮೊದಲು ಅಥವಾ ಪ್ರಧಾನ ವಾಕ್ಯದ ಮಧ್ಯದಲ್ಲಿ ಬರುತ್ತದೆ. 'ನಾನು ನಾಳೆ ಬರುತ್ತೇನೆಂದು ಅವನು ಹೇಳಿದನು' ಅಥವಾ 'ಅವನು ನಾನು ನಾಳೆ ಬರುತ್ತೇನೆಂದು ಹೇಳಿದನು'. ಹಿಂದೀ ವಿದ್ಯಾರ್ಥಿ ಅಥವಾ ಆಂಗ್ಲ ವಿದ್ಯಾರ್ಥಿ ಕನ್ನಡ ಕಲಿಯುವಾಗ ತನ್ನ ಮಾತೃಭಾಷೆಯ ವಾಕ್ಯರಚನೆಯ ರೀತಿಯಲ್ಲಿಯೇ ಕನ್ನಡದಲ್ಲೂ ವಾಕ್ಯಗಳನ್ನು ರಚಿಸುವ ಪ್ರಯತ್ನಗಳನ್ನು ಮಾಡುತ್ತಾನೆ.

ಅನ್ಯಭಾಷಾ ಶಿಕ್ಷಕ ಮಾತೃಭಾಷೆ ಮತ್ತು ಅನ್ಯಭಾಷೆಯ ವ್ಯಾಕರಣವನ್ನೂ ವಾಕ್ಯರಚನಾಕ್ರಮವನ್ನೂ ಅಧ್ಯಯನ ಮಾಡಿ ಅನ್ಯಭಾಷೆಯ ಯಾವ ಯಾವ ವ್ಯಾಕರಣಾಂಶಗಳು ವಿದ್ಯಾರ್ಥಿಯ ಮಾತೃಭಾಷೆಗಿಂತ ಭಿನ್ನವಾಗಿವೆ ಎಂಬುದನ್ನು ಮನಗಂಡು ಅಂಥ ಒಂದೊಂದು ಅಂಶಗಳನ್ನೂ ಒಂದೊಂದು ಪಾಠಗಳಲ್ಲಿ ಉಪಯೋಗಿಸಿಕೊಂಡು ಸೂಕ್ತವಾದ ಅಭ್ಯಾಸಗಳ ಮೂಲಕ ಕಲಿಸಬೇಕು. ಹೀಗೆಂದಮಾತ್ರಕ್ಕೆ ಆತ ವಿದ್ಯಾರ್ಥಿಗಳಿಗೆ ಭಾಷಾವಿಜ್ಞಾನದ ಬೋಧನೆ ಮಾಡಬೇಕೆಂದಾಗಲಿ ಎರಡು ಭಾಷೆಗಳ ತೌಲನಿಕ ವ್ಯಾಕರಣ ಕಲಿಸಬೇಕೆಂದಾಗಲಿ ಅರ್ಥವಲ್ಲ. ಪಾಠಗಳನ್ನೂ ಪಠ್ಯಸಾಮಗ್ರಿಗಳನ್ನೂ ತಯಾರಿಸುವಾಗ ಅಧ್ಯಾಪಕ ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಷ್ಟೆ.

ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಭಾವ ಬೀರಿದ ತಾಂತ್ರಿಕ ವಿಜ್ಞಾನ ಭಾಷಾಶಿಕ್ಷಣ ಹಾಗೂ ಭಾಷಾವಿಜ್ಞಾನಕ್ಕೂ ಅಮೂಲ್ಯವಾದ ಕೊಡುಗೆ ನೀಡಿದೆ. ಇಪ್ಪತ್ತನೆಯ ಶತಮಾನದ ಭಾಷಾವಿಜ್ಞಾನಿ ತಾಂತ್ರಿಕ ವಿಜ್ಞಾನದ ಪ್ರಗತಿಯಿಂದಲೂ ಸಾಕಷ್ಟು ಲಾಭ ಪಡೆದಿದ್ದಾನೆ. ಅನ್ಯಭಾಷೆಯನ್ನು ವೈಜ್ಞಾನಿಕ ರೀತಿಯಲ್ಲಿ ಶೀಘ್ರವಾಗಿ ಕಲಿಸಲಿಕ್ಕೆ ಭಾಷಾಪ್ರಯೋಗಶಾಲೆಯನ್ನು ರಚಿಸಿಕೊಂಡಿದ್ದಾನೆ. ಶ್ರವ್ಯ–ವಾಚ್ಯ ಪ್ರಯೋಗಶಾಲೆ, ದೃಶ್ಯ–ಶ್ರವ್ಯ ಪ್ರಯೋಗಶಾಲೆ ಮುಂತಾದ ಬೇರೆಬೇರೆ ರೀತಿಯ ಪ್ರಯೋಗಶಾಲೆಗಳಿವೆ. ಶ್ರವ್ಯ–ವಾಚ್ಯ ಪ್ರಯೋಗಶಾಲೆಯಲ್ಲಿ ಅನ್ಯಭಾಷೆಯನ್ನು ಕಲಿಸುವ ಸಲುವಾಗಿ ಟೇಪ್‌ರೆಕಾರ್ಡರ್‌ಗಳಿವೆ. ಪ್ರಯೋಗಶಾಲೆಯಲ್ಲಿ ವಿದ್ಯಾರ್ಥಿ ಬೇರೆ ವಿದ್ಯಾರ್ಥಿಗಳಿಗೆ ಕಾಣಿಸದಂತೆ ಗೋಡೆಗಳುಳ್ಳ ಮತ್ತು ಧ್ವನಿನಿಯಂತ್ರಿತವಾದ ಆಸನದಲ್ಲಿ ಕುಳಿತುಕೊಳ್ಳುತ್ತಾನೆ. ಅವನ ಮುಂದೆ ಎರಡು ಸಾಲುಗಳುಳ್ಳ ಟೇಪ್ ಮತ್ತು ಟೇಪ್‌ರೆಕಾರ್ಡರ್ ಇರುತ್ತದೆ. ಅಧ್ಯಾಪಕರು

ತಯಾರಿಸಿದ ವಾಕ್ಯಗಳು, ಸಂಭಾಷಣೆಗಳು, ಶಬ್ದಗಳು, ಪ್ರಶ್ನೆಗಳು ಇತ್ಯಾದಿಗಳು ಟೇಪಿನ ಮೇಲಿನ ಸಾಲಿನಲ್ಲಿ ಅಂಕಿತವಾಗಿರುತ್ತವೆ. ವಿದ್ಯಾರ್ಥಿಗಳು ಅನುಕರಣೆ ಮಾಡುವ ಹಾಗೂ ಉತ್ತರಿಸುವ ಶಬ್ದಗಳೂ ವಾಕ್ಯಗಳೂ ಕೆಳಗಡೆಯ ಸಾಲಿನಲ್ಲಿ ಅಂಕಿತವಾಗುತ್ತವೆ. ಇದರಿಂದ ವಿದ್ಯಾರ್ಥಿ ತಾನು ಆಡಿದ ಮಾತುಗಳನ್ನು ತಾನೇ ಕೇಳಿ ಮೂಲದೊಡನೆ ಹೋಲಿಸಿನೋಡಬಹುದು. ತಾನು ಕೊಟ್ಟ ಉತ್ತರವನ್ನು ಸರಿಯಾದ ಉತ್ತರದೊಡನೆ ಹೋಲಿಸಿ ತನ್ನನ್ನು ತಾನೇ ತಿದ್ದಿಕೊಳ್ಳಬಹುದು. ತಾನು ಕೊಟ್ಟ ಉತ್ತರವನ್ನು ಅಳಿಸಿ ಅದರ ಮೇಲೆ ಪುನಃ ರೆಕಾರ್ಡ್ ಮಾಡ ಬಹುದು. ತನ್ನ ವೈಯಕ್ತಿಕ ಆವಶ್ಯಕತೆಗನುಸಾರವಾಗಿ ಎಷ್ಟು ಸಲ ಬೇಕಾದರೂ ಪಾಠವನ್ನು ಕೇಳಿ ಪುನರುಚ್ಚಾರ ಮಾಡುವುದನ್ನಾಗಲಿ ಉತ್ತರಗಳನ್ನು ಹೇಳುವು ದನ್ನಾಗಲಿ ಮಾಡಬಹುದು. ಅಧ್ಯಾಪಕನಿಗೆ ಪ್ರತ್ಯೇಕವಾದ ಆಸನವಿರುತ್ತದೆ. ಆತ ಗುಂಡಿಯನ್ನು ಒತ್ತಿ ಪ್ರತಿಯೊಬ್ಬ ವಿದ್ಯಾರ್ಥಿಯೊಡನೆ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಸಂಬಂಧ ಕಲ್ಪಿಸಿಕೊಳ್ಳಬಹುದು. ಆತ ಸಾಮೂಹಿಕವಾಗಿ ಅಥವಾ ವೈಯಕ್ತಿಕವಾಗಿ ಸಲಹೆಗಳನ್ನು ಕೊಡಬಹುದು. ವಿದ್ಯಾರ್ಥಿಗೆ ತಿಳಿಯ ದಂತೆ ಆತನ ಉಚ್ಚಾರವನ್ನೂ ಉತ್ತರವನ್ನೂ ಕೇಳಿ ಸೂಕ್ತವಾದ ಸಲಹೆಗಳನ್ನು ಕೊಡಬಹುದು. ಇದರಿಂದ ಅಧ್ಯಾಪಕ ಒಂದು ಶಬ್ದವನ್ನೋ ವಾಕ್ಯವನ್ನೋ ಪದೇ ಪದೇ ಉಚ್ಚರಿಸಬೇಕಾಗಿಲ್ಲ. ವಿದ್ಯಾರ್ಥಿ ಕೂಡ ಇನ್ನೊಬ್ಬ ವಿದ್ಯಾರ್ಥಿ ಸರಿಯಾಗಿ ಉಚ್ಚರಿಸುವ ವರೆಗೆ ಕಾಯಬೇಕಾದ ಪ್ರಮೇಯವೂ ಇಲ್ಲ. ಒಂದೇ ಸಮಯದಲ್ಲಿ ಎಲ್ಲ ವಿದ್ಯಾರ್ಥಿಗಳೂ ಸಕ್ರಿಯವಾಗಿ ಭಾಗವಹಿಸಬಹುದು. ದೃಶ್ಯ–ಶ್ರವ್ಯ ಪ್ರಯೋಗಶಾಲೆ ಎನ್ನುವ ಇನ್ನೊಂದು ವಿಧದ ಪ್ರಯೋಗಶಾಲೆಯಲ್ಲಿ ಧ್ವನಿ ಯಂತ್ರಗಳ ಜೊತೆಗೆ ಚಲನ ಚಿತ್ರಗಳನ್ನು ನೋಡಿ ಕಲಿಯಬಹುದಾದ ವಿಧಾನ ಗಳಿವೆ. ಇವು ಮಾತ್ರವಲ್ಲದೆ ಸಚಿತ್ರ ಪುಸ್ತಕಗಳು, ರೇಖಾಪಟಗಳು, ಸ್ಲೈಡುಗಳು, ನೈಜ ವಸ್ತುಗಳು, ವಸ್ತುಗಳ ಮಾದರಿಗಳು ಮುಂತಾದ ದೃಶ್ಯಸಾಧನಗಳನ್ನೂ ಭಾಷಾಶಿಕ್ಷಣದಲ್ಲಿ ಬಳಸುತ್ತಾರೆ.

ಆಧುನಿಕ ಪ್ರಯೋಗಶಾಲೆ ಹಾಗೂ ದೃಶ್ಯ–ಶ್ರವ್ಯ ಸಾಧನಗಳ ಮೂಲಕ ಅನ್ಯಭಾಷೆಯನ್ನು ಕಲಿಸುವ ಪದ್ಧತಿ ಅಮೆರಿಕ, ಸೋವಿಯತ್ ದೇಶ ಮತ್ತು ಇತರ ಐರೋಪ್ಯ ರಾಷ್ಟ್ರಗಳಲ್ಲಿ ತುಂಬ ಪ್ರಗತಿ ಸಾಧಿಸಿದೆ. ಭಾರತದಲ್ಲಿಯೂ ಪುಣೆಯ ಡೆಕ್ಕನ್ ಕಾಲೇಜು, ಬೊಂಬಾಯಿಯ ವಿಲ್‌ಸನ್ ಕಾಲೇಜು, ದೆಹಲಿಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನ ಸಂಸ್ಥೆ, ಭಾರತೀಯ ತಾಂತ್ರಿಕ ಅಧ್ಯಯನ ಸಂಸ್ಥೆಗಳು, ಭಾರತೀಯ ಭಾಷೆಗಳ ಕೇಂದ್ರ ಅಧ್ಯಯನ ಸಂಸ್ಥೆ ಮುಂತಾದವು ಈ ಆಧುನಿಕ ವಿಧಾನಗಳನ್ನು ಅನುಷ್ಠಾನಕ್ಕೆ ತಂದಿವೆ. ಮೈಸೂರು ವಿಶ್ವ ವಿದ್ಯಾನಿಲಯವೇ ಮುಂತಾದ ವಿದ್ಯಾಪೀಠಗಳೂ ಈ ದಿಶೆಯಲ್ಲಿ ಕಾರ್ಯಾರಂಭ ಮಾಡುತ್ತಿವೆ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಅತಿಶೀಘ್ರವಾಗಿ ಅನ್ಯಭಾಷೆಯನ್ನು ಕಲಿಯಬೇಕಾದ ಪ್ರಸಂಗ ಬಂದಾಗಿನಿಂದ ಭಾಷಾವಿಜ್ಞಾನಿಗಳು ಭಾಷಾ ಶಿಕ್ಷಣದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುವುದರಲ್ಲಿ ನಿರತರಾಗಿದ್ದಾರೆ. ಪ್ರಗತಿ ಹೊಂದುತ್ತಿರುವ ಭಾಷಾವಿಜ್ಞಾನದ ಹೊಸ ಹೊಸ ಶಾಖೆಗಳೂ ಇದಕ್ಕೆ ತಮ್ಮ ಕೊಡುಗೆಗಳನ್ನು ನೀಡಿವೆ. ಕ್ರಮಬದ್ಧ ಅಧ್ಯಯನ (ಪ್ರೋಗ್ರಾಮ್ಡ್ ಲರ್ನಿಂಗ್), ಸೂಕ್ಷ್ಮತರಂಗ ಪದ್ಧತಿ (ಮೈಕ್ರೊ-ವೇವ್ ಮೆಥಡ್) ಮುಂತಾದ ಹೊಸ ಪದ್ಧತಿಗಳಿಂದ ಅಧ್ಯಾಪಕರು ಹೆಚ್ಚಾಗಿ ಬಿವರಿಳಿಸದೆ ಅತಿ ಕಡಿಮೆ ಸಮಯದಲ್ಲಿ ಭಾಷೆ ಕಲಿಸಲು ಸಾಧ್ಯವಾಗಿದೆ.

ಈ ರೀತಿಯ ಹೊಸ ಪದ್ಧತಿಗಳಿಂದ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಭಾಷೆಯ ಅಧ್ಯಯನ ಹಾಗೂ ಶಿಕ್ಷಣ ಒಂದು ನೀರಸವಾದ ಶ್ರಮವಾಗಿ ಪರಿಣಮಿಸದೆ ಅದೊಂದು ಆಹ್ಲಾದಕರ ಬೌದ್ಧಿಕ ಚಟುವಟಿಕೆಯಾಗುವುದರಲ್ಲಿ ಸಂದೇಹವಿಲ್ಲ.

ಎಂ. ಎಸ್. ಕೃಷ್ಣಮೂರ್ತಿ

ನೊಳಂಬ ಅಯ್ಯಪದೇವನ ಕಾಲ*

ನನ್ನಿಗಾಶ್ರಯ ಅಯ್ಯಪದೇವ ನೊಳಂಬಾಧಿರಾಜ ಮಹೇಂದ್ರನ ಮಗ. ಇವನು ಕ್ರಿ.ಶ. ಸು. ೮೯೬ರಲ್ಲಿ, ಅಂದರೆ ಮಹೇಂದ್ರನ ತರುವಾಯ, ಪಟ್ಟಕ್ಕೆ ಬಂದ. ಆದರೆ ಮಹೇಂದ್ರನ ತರುವಾಯ ನೊಳಂಬಸಿಂಹಾಸನವನ್ನೇರಿದ ರಾಜನ ವಿಚಾರವಾಗಿ ವಿದ್ವಾಂಸರುಗಳಲ್ಲಿ ಭಿನ್ನಾಭಿಪ್ರಾಯವಿದೆ. ಏಕೆಂದರೆ ಕ್ರಿ.ಶ. ೮೯೭ರ ಮದ್ದಗಿರಿ ಶಾಸನದಲ್ಲಿ[1] ಏಕವಾಕ್ಯ ನೊಳಂಬಾಧಿರಾಜ ನೊಳಿಪಯ್ಯನೆಂಬ ರಾಜ ರಾಜ್ಯವಾಳುತ್ತಿದ್ದನೆಂದು ಹೇಳಿದೆ. ಈ ಶಾಸನದಲ್ಲಿ ಬರುವ ನೊಳಂಬಾಧಿರಾಜ ನೊಳಿಪಯ್ಯ ಯಾರು, ಅವನಿಗೂ ನೊಳಂಬ ರಾಜಮನೆತನಕ್ಕೂ ಇದ್ದ ಸಂಬಂಧವೇನು ಎಂಬುದು ಇನ್ನೂ ವಿವಾದಾತ್ಮಕ. ನೊಳಂಬರ ವಂಶಾವಳಿಯನ್ನು ಕೊಡುವ ಯಾವ ಶಾಸನಗಳಲ್ಲಿಯೂ[2] ಮಹೇಂದ್ರನ ತರುವಾಯ ನೊಳಂಬಾಧಿರಾಜ ನೊಳಿಪಯ್ಯ ಪಟ್ಟಕ್ಕೆ ಬಂದನೆಂದು ಹೇಳುವುದಿಲ್ಲ. ಬದಲಾಗಿ ಅವೆಲ್ಲವೂ ಮಹೇಂದ್ರನ ಮಗನಾದ ಅಯ್ಯಪದೇವ ಮಹೇಂದ್ರನ ಅನಂತರ ರಾಜ್ಯವಾಳಿದನೆಂದೇ ಹೇಳುತ್ತವೆ. ಮತ್ತು ಅಯ್ಯಪದೇವನ ಮಕ್ಕಳು ಬೀರ ನೊಳಂಬ ಅಣ್ಣಿಗ ಹಾಗೂ ಈರಿವ ನೊಳಂಬ ದಿಲೀಪರೆಂದೇ ಹೇಳುತ್ತವೆ. ಆದರೆ ಅಯ್ಯಪದೇವನ, ಇದುವರೆಗೂ ತಿಳಿದಿರುವ, ಮೊದಲನೆಯ ಕಾಲವೆಂದರೆ ಕ್ರಿ.ಶ. ೯೧೮. ಆದ್ದರಿಂದ ಕ್ರಿ.ಶ. ೮೯೬ರ ಅನಂತರ, ಅಂದರೆ ಮಹೇಂದ್ರನ ಮರಣಾನಂತರ ಹಾಗೂ ಕ್ರಿ.ಶ. ೯೧೮ರ ನಡುವೆ ಬರುವ ೨೦ ವರ್ಷಗಳ ಅವಧಿಯಲ್ಲಿ ಯಾರು ನೊಳಂಬ ರಾಜ್ಯದ ಅಧಿಪತಿಗಳಾಗಿದ್ದರು, ಮಹೇಂದ್ರನ ಮಗನಾದ ಅಯ್ಯಪದೇವ ಎಲ್ಲಿಂದ ಎಲ್ಲಿಯ ವರೆಗೆ ರಾಜ್ಯವಾಳಿದ ಎಂಬುದು ಸಮಸ್ಯಾತ್ಮಕವಾಗಿಯೇ ಉಳಿದಿದೆ. ಮದ್ದಗಿರಿ ಶಾಸನದ ನೊಳಂಬಾಧಿರಾಜ ನೊಳಿಪಯ್ಯ ಯಾರು, ಕ್ರಿ.ಶ. ೮೯೭ ರಿಂದ ೯೧೮ರ ನಡುವೆ ನೊಳಂಬ ಸಿಂಹಾಸನ ಯಾರ ಕೈವಶದಲ್ಲಿತ್ತು,

* ಕ್ರಿ.ಶ. ೮೯೬–ಸು. ೯೩೫

1 E.C. XII, Mi. 27, 52

2 E.C. XII, Si. 28 ; S.I.I. IX, Pt. I No. 28, 38

ಅಯ್ಯಪದೇವ ಎಲ್ಲಿಂದ ಎಲ್ಲಿಯ ವರೆಗೆ ರಾಜ್ಯವಾಳಿದ—ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಈ ವಿಷಯದಲ್ಲಿ ಕೃಷ್ಣಶಾಸ್ತ್ರಿಗಳು ಮದ್ದಗಿರಿ ಶಾಸನದ[3] ನೊಳಂಬಾಧಿರಾಜ ನೊಳಿಪಯ್ಯ ಮಹೇಂದ್ರನ ತರುವಾಯ ಪಟ್ಟಕ್ಕೆ ಬಂದನೆಂದು, ಈತ ಮಹೇಂದ್ರನ ತಮ್ಮನಾದ (ನಿಜವಾಗಿ ಬಲತಮ್ಮ) ಈರಿವ ನೊಳಂಬನೆಂದು ಅವನಿ ಶಾಸನದ[4] ಆಧಾರದ ಮೇಲೆ ಹೇಳಿದ್ದಾರೆ.[5]

ಈ ಅವನಿ ಶಾಸನದಲ್ಲಿ ರಾಜಮನೋಜ ಪೊಳಲ್ಚೋರನ ಅಗ್ರಮಹಿಷಿ ದೀವಬ್ಬರಸಿ ಅನೇಕ ದಾನಧರ್ಮಗಳನ್ನು ಮಾಡಿ ತನ್ನ ಮಗ ರಾಜ್ಯವಾಳುತ್ತಿದ್ದ ಕಾಲದಲ್ಲಿ ತನ್ನ ಪತಿಯ ಹೆಸರಿನಲ್ಲಿ ಒಂದು ಅಗ್ರಹಾರವನ್ನು ಮಾಡಿಸಿದಳು. ಮಹೇಂದ್ರನ ತರುವಾಯ ಆ ಮಹಾತ್ಮನ ತಾಯಿ (ಜನನಿ) ಮಹೇಂದ್ರನ ಹೆಸರಿನಲ್ಲಿ ಒಂದು ಕೊಳವನ್ನೂ ತನ್ನ ಹೆಸರಿನಲ್ಲಿ ಒಂದು ಕೊಳವನ್ನೂ ಜೊತೆಗೆ ಈಶ ಹಾಗೂ ಮುಕುಂದ ಭವನಗಳನ್ನೂ ಮಾಡಿಸಿ ತನ್ನ ಕಡೆಯ ಮಗ ಈರಿವನೊಳಂಬ (ಕನಿಯ ನಂದನ) ಪಟ್ಟಕ್ಕೆ ಬರುವ ಕಾಲವನ್ನು ನಿರೀಕ್ಷಿಸುತ್ತ ದಾನಧರ್ಮಗಳನ್ನು ಮಾಡುತ್ತಿದ್ದಳು. ಅನಂತರ ಮಹೇಂದ್ರನ ಪರೋಕ್ಷದಲ್ಲಿ ಪೊಳಲ್ಚೋರ ಮಂಗಲದಲ್ಲಿ ದೀವಬ್ಬ ಸಮುದ್ರವನ್ನು ಮಾಡಿಸಿ ಅಲ್ಲಿ ಒಂದು ವಿಷ್ಣುಗೃಹವನ್ನು ಕಟ್ಟಿಸಿ, ಆವನ್ಯದಲ್ಲಿ ನೊಳಂಬನಾರಾಯಣೇಶ್ವರ ದೇವಾಲಯವನ್ನು ಕಟ್ಟಿಸಿ ಅಲ್ಲಿಗೆ ಒಂದು ಪಾಪನಾಶಿನೀ ಘಂಟೆಯನ್ನು ಕೊಟ್ಟು ಆ ದೇವಾಲಯಕ್ಕೆ ಸರ್ವಬಾಧಾಪರಿಹಾರವಾಗಿ ಯಳನಗರವನ್ನು ದಾನವಾಗಿ ಕೊಟ್ಟಳು ಎಂದು ಹೇಳಿದೆ.

ಈ ಶಾಸನದಲ್ಲಿ ಕಾಲವನ್ನು ತಿಳಿಸದೆ ಇರುವುದರಿಂದ ಇದನ್ನು ಲಿಪಿಯ ಆಧಾರದ ಮೇಲೆ ಕ್ರಿ.ಶ. ೯ನೆಯ ಶತಮಾನಕ್ಕೆ ಸೇರಿದ ಶಾಸನವೆಂದು ರೈಸರು ನಿರ್ಣಯಿಸಿದ್ದಾರೆ.

ಕೃಷ್ಣಶಾಸ್ತ್ರಿಗಳ ಪ್ರಕಾರ ದೀವಬ್ಬರಸಿಯ ಪತಿ ರಾಜಮನೋಜ ಪೊಳಲ್ಚೋರ ಮಹೇಂದ್ರನ ತಂದೆ ನೊಳಂಬಾಧಿರಾಜ ಪೊಳಲ್ಚೋರ. ಈ ಶಾಸನದಲ್ಲಿ ಈರಿವನೊಳಂಬ ಇನ್ನೂ ಚಿಕ್ಕ ಹುಡುಗನೆಂದು ಹೇಳಿರುವುದರಿಂದ ಮಹೇಂದ್ರ ಪಟ್ಟಕ್ಕೆ ಬಂದ ಅನಂತರ ಈರಿವನೊಳಂಬ ಹುಟ್ಟಿರಬೇಕು. ಮಹೇಂದ್ರ ಕ್ರಿ.ಶ. ಸುಮಾರು ೮೭೦ರಲ್ಲಿ ಪಟ್ಟಕ್ಕೆ ಬಂದ. ಒಂದು ಪಕ್ಷ ಮಹೇಂದ್ರ ಪಟ್ಟಕ್ಕೆ ಬರುವ ಮುಂಚೆ ಹುಟ್ಟಿದ್ದರೂ ಪ್ರಬಲನಾಗಿದ್ದ ಮಹೇಂದ್ರ ಅವನ ಸಿಂಹಾಸನದ ಮೇಲಿನ ಹಕ್ಕನ್ನು ಕಡೆಗಣಿಸಿ ತಾನೇ ಪಟ್ಟಕ್ಕೆ ಬಂದಿರಬೇಕು. ಮಹೇಂದ್ರನ ಮಗ ಅಯ್ಯಪದೇವನೆಂದು ಗೊತ್ತಿದ್ದರೂ ಮಹೇಂದ್ರನ

---

[3] E.C. XII, Mi. 27, 52

[4] E. C. XII, Mb. 38

[5] E. I. X, p. 54

ತರುವಾಯ ಅಯ್ಯಪದೇವ ಪಟ್ಟಕ್ಕೆ ಬಂದನೆಂದು ಹೇಳುವುದು ಕಷ್ಟ. ಏಕೆಂದರೆ ಇದುವರೆಗೂ ತಿಳಿದಿರುವ ಅಯ್ಯಪದೇವನ ಮೊದಲನೆಯ ಕಾಲವೆಂದರೆ ಕ್ರಿ.ಶ. ೯೧೮.[6] ಅಯ್ಯಪದೇವನ ಈ ಕಾಲಕ್ಕೂ ಮಹೇಂದ್ರನ ಕಡೆಯ ಕಾಲಕ್ಕೂ ನಡುವೆ ಬರುವ ಸುಮಾರು ೨೦ ವರ್ಷಗಳ ಅವಧಿಯಲ್ಲಿ ದೀವಬ್ಬರಸಿಯ ಮಗ ಹಾಗೂ ಮಹೇಂದ್ರನ ಬಲ ತಮ್ಮನಾದ ಈರಿವನಳಂಬ ನೊಳಂಬಾಧಿರಾಜ ನೊಳಿಪಯ್ಯನೆಂಬ ಹೆಸರಿನಲ್ಲಿ ಪಟ್ಟಕ್ಕೆ ಬಂದಿರಬೇಕು. ನೊಳಂಬಾಧಿರಾಜ ನೊಳಿಪಯ್ಯ ಅಯ್ಯಪದೇವನೆಂದೇ ರೈಸ್ ಹೇಳಿದ್ದಾರೆ. ಆದರೆ ಅಯ್ಯಪದೇವನ ವಿಶಿಷ್ಟವಾದ ಬಿರುದೆಂದರೆ ನನ್ನಿಗ ಹಾಗೂ ನನ್ನಿಗಾಶ್ರಯನೆಂದೇ ಹೊರತು ನೊಳಿಪಯ್ಯನೆಂದಲ್ಲ. ಈರಿವನೊಳಂಬ ನೊಳಿಪಯ್ಯನ ಹೆಸರನ್ನು ಹೊಂದಿರುವ ಎರಡು ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿವೆ.[7] ಆದರೆ ಈ ಶಾಸನಗಳು ಈರಿವನೊಳಂಬ ದಿಲೀಪನವೋ ನೊಳಂಬಾಧಿರಾಜ ನೊಳಿಪಯ್ಯನವೋ —ಎಂಬುದು ಸಂದೇಹಾಸ್ಪದ. ಒಂದು ಪಕ್ಷ ಇವು ಮಹೇಂದ್ರನ ಮೊಮ್ಮಗ ಈರಿವ ನೊಳಂಬ ದಿಲೀಪನದೇ ಆಗಿದ್ದಲ್ಲಿ ದಿಲೀಪ ಈಗಲೂ ಬಳಕೆಯಲ್ಲಿರುವ ಸಂಪ್ರದಾಯದಂತೆ ತನ್ನ ತಾತನ ಹೆಸರನ್ನೇ ತಾನೂ ಇಟ್ಟುಕೊಂಡಿದ್ದುದು ಸಾಧ್ಯ. ಇದು ನಿಜವಾದಲ್ಲಿ ದೀವಬ್ಬರಸಿಯ ಮಗ ಹಾಗೂ ಮಹೇಂದ್ರನ ಮಲತಮ್ಮನಾದ ಈರಿವನೊಳಂಬ ಹಾಗೂ ನೊಳಂಬಾಧಿರಾಜ ನೊಳಿಪಯ್ಯ ಇಬ್ಬರೂ ಒಬ್ಬರೇ ; ಮತ್ತು ನೊಳಂಬಾಧಿರಾಜ ಮಹೇಂದ್ರನ ತರುವಾಯ ಆತನ ಬಲತಮ್ಮನಾದ ನೊಳಂಬಾಧಿರಾಜ ನೊಳಿಪಯ್ಯ ಅಥವಾ ಈರಿವನೊಳಂಬ ಪಟ್ಟಕ್ಕೆ ಬಂದ. ಹಾಗೂ ಅಯ್ಯಪದೇವ ನೊಳಂಬಾಧಿರಾಜ ನೊಳಿಪಯ್ಯನ ಅನಂತರ ಕ್ರಿ.ಶ. ೯೧೮ರಲ್ಲಿ ಪಟ್ಟಕ್ಕೆ ಬಂದಿರಬಹುದು.

ಆದರೆ ಜಿ. ಎನ್. ಸಾಲತೊರೆ ಅವರು ಮೇಲೆ ಹೇಳಿದ, ಕೃಷ್ಣಶಾಸ್ತ್ರಿಗಳ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಕೇವಲ ಲಿಪಿಯ ಆಧಾರದ ಮೇಲೆ ನಿರ್ಧರಿಸಲಾದ ಈ ಶಾಸನದ ಕಾಲವನ್ನು ಅಲ್ಲಗಳೆದು ಚಾರಿತ್ರಿಕ ಆಧಾರದ ಮೇಲೆ ಈ ಶಾಸನವನ್ನು ಕ್ರಿ.ಶ. ೧೦ನೆಯ ಶತಮಾನದ ಅಂತ್ಯಭಾಗಕ್ಕೆ ಸೇರಿದ್ದೆಂದು ಹೇಳಿದ್ದಾರೆ.[8] ಸಾಲತೊರೆಯವರು ಈ ಶಾಸನದಲ್ಲಿ ಬರುವ ಪೊಳಲ್ಚೋರ, ಮಹೇಂದ್ರ ಮತ್ತು ಈರಿವ ನೊಳಂಬರನ್ನು ಕ್ರಿ.ಶ. ೧೦ನೆ ಶತಮಾನದ ಉತ್ತರಾರ್ಧದಲ್ಲಿ ಆಳಿದ ಅದೇ ಹೆಸರಿನ ಎರಡನೆಯ ರಾಜರುಗಳು ಅಂದರೆ ಎರಡನೆಯ ಪೊಳಲ್ಚೋರ, ಎರಡನೆಯ ಮಹೇಂದ್ರ ಹಾಗೂ ಎರಡನೆಯ ಈರಿವ ನೊಳಂಬ ಎಂದು ಹೇಳಿದ್ದಾರೆ.

ಸಾಲತೊರೆಯವರು ತಮ್ಮ ಈ ಲೇಖನದಲ್ಲಿ ಅವನಿ ಶಾಸನದ ಪೊಳಲ್ಚೋರ ಮಹೇಂದ್ರ ಹಾಗೂ ಈರಿವ ನೊಳಂಬರು ಅದೇ ಹೆಸರಿನ ಎರಡನೆಯ ರಾಜರುಗಳು

---

[6] E.C. X, Cd. 62

[7] E.C. X, Kl 198, Bp. 4

[8] *Indian Culture*, Vol. 6 ; 1939–40, pp. 429-37

ಎಂದು ನಂಬಲರ್ಹವಾದ ನಿದರ್ಶನಗಳಿಂದ ಸ್ಪಷ್ಟಪಡಿಸಿದ್ದಾರೆ. ಆದರೆ ಅವರ ಈ ಲೇಖನದಿಂದ ಮಹೇಂದ್ರನ ತರುವಾಯ ಯಾರು ನೊಳಂಬಸಿಂಹಾಸನವನ್ನು ಏರಿದರು ಮತ್ತು ಅಯ್ಯಪದೇವನ ಮೊದಲನೆಯ ಕಾಲಕ್ರಮ (ಕ್ರಿ.ಶ. ೯೧೮) ಮಹೇಂದ್ರನ ಕಡೆಯ ಕಾಲಕ್ರಮ (ಕ್ರಿ.ಶ. ೮೯೫) ಮಧ್ಯೆ ಇದ್ದ ೨೦ ವರ್ಷಗಳ ಅಂತರದಲ್ಲಿ ನೊಳಂಬವಾಡಿ ಯಾರ ವಶದಲ್ಲಿತ್ತು ಹಾಗೂ ಅದನ್ನು ಆಳುತ್ತಿದ್ದವರು ಯಾರು ಎಂಬುದಕ್ಕೆ ಸಮರ್ಪಕವಾದ ಉತ್ತರ ದೊರೆಯುವುದಿಲ್ಲ. ಆದುದರಿಂದ ನಾನು ಈ ಲೇಖನದಲ್ಲಿ ಮಹೇಂದ್ರನ ತರುವಾಯ ಅಯ್ಯಪದೇವ ಪಟ್ಟಕ್ಕೆ ಬಂದು ಕ್ರಿ.ಶ. ೮೯೬ರಿಂದ ಸು. ೯೩೫ರ ವರೆಗೆ ರಾಜ್ಯವಾಳಿದ; ಹಾಗೂ ಮದ್ದಗಿರಿ ಶಾಸನದ ನೊಳಂಬಾಧಿರಾಜ ನೊಳಿಪಯ್ಯ ಮತ್ತು ಅಯ್ಯಪದೇವ ಇಬ್ಬರು ಒಬ್ಬರೇ ಎಂದು ಕೆಳಕಂಡ ಆಧಾರದ ಮೇಲೆ ಹೇಳುತ್ತೇನೆ.

ನೊಳಂಬಾಧಿರಾಜ ಮಹೇಂದ್ರನ ಮರಣಾನಂತರ ಅಂದರೆ ಕ್ರಿ.ಶ. ೮೯೫ರ ಅನಂತರ ಅವನ ಮಗನಾದ ಅಯ್ಯಪದೇವ ಪಟ್ಟಕ್ಕೆ ಬಂದನೆಂದು ಹೇಳಲು ಸಾಕಷ್ಟು ನಿದರ್ಶನಗಳು ಉಂಟು. ಹೇಮಾವತಿ ಶಾಸನ,[9] ಧರ್ಮಪುರಿ ಶಾಸನ[10] ಹಾಗೂ ಕಳಕಟ್ಟೂರು ಶಾಸನದಲ್ಲಿ[11] ದೊರಕುವ ವಂಶಾವಳಿಯಲ್ಲಿ ಮಹೇಂದ್ರನ ಅನಂತರ ಅಯ್ಯಪದೇವನೇ ಪಟ್ಟಕ್ಕೆ ಬಂದನೆಂದು ತಿಳಿಯುತ್ತದೆ. ಕ್ರಿ.ಶ. ೮೯೮ರ ಮದ್ದಗಿರಿ ಶಾಸನದಲ್ಲಿ[12] ನೊಳಂಬಾಧಿರಾಜ ನೊಳಿಪಯ್ಯ ರಾಜ್ಯವಾಳುತ್ತಿದ್ದನೆಂದು ಹೇಳಿದೆ. ಈ ಶಾಸನದ ನೊಳಂಬಾಧಿರಾಜ ನೊಳಿಪಯ್ಯ ಅಯ್ಯಪದೇವನೆಂದೇ ರೈಸರ ವಾದ. ಆದರೆ ಕೃಷ್ಣಶಾಸ್ತ್ರಿಗಳು ಈತ ಅವನಿ ಶಾಸನದ[13] ಈರಿವ ನೊಳಂಬನೆಂದು ಹೇಳುತ್ತಾರೆ. ಮದ್ದಗಿರಿ ಶಾಸನದ ಕಾಲ ಕ್ರಿ.ಶ. ೮೯೮. ಈ ಶಾಸನದಲ್ಲಿ ನೊಳಂಬಾಧಿರಾಜ ನೊಳಿಪಯ್ಯ ಪಂಚಮಹಾಶಬ್ದ, ಪಲ್ಲವಾನ್ವಯ, ಪೃಥ್ವಿವಲ್ಲಭ, ಪಲ್ಲವಕುಲತಿಲಕ, ಏಕವಾಕ್ಯ ಮುಂತಾದ ಬಿರುದುಗಳನ್ನು ಹೊಂದಿದ್ದಾನೆ. ಈ ಬಿರುದುಗಳು ಆತನ ಸ್ವಾತಂತ್ರ್ಯ ಹಾಗೂ ಸಾರ್ವಭೌಮತ್ವವನ್ನೇ ತೋರಿಸುತ್ತವೆ. ಅವನಿ ಶಾಸನದಲ್ಲಿ ಈರಿವ ನೊಳಂಬ ಮಹೇಂದ್ರನ ಮರಣದ ಸಮಯದಲ್ಲಿ ಅಂದರೆ ಕ್ರಿ.ಶ. ಸು. ೮೯೫ರಲ್ಲಿ ಇನ್ನೂ ಚಿಕ್ಕ ಹುಡುಗನಾಗಿದ್ದನೆಂದು ಹೇಳಿದೆ. ಆದ್ದರಿಂದ ಕೇವಲ ಮೂರು ವರ್ಷಗಳ ಅನಂತರ, ಅಂದರೆ ಕ್ರಿ.ಶ. ೮೯೮ರಲ್ಲಿ, ಬರೆಯಲಾದ ಈ ಶಾಸನದಲ್ಲಿ ನೊಳಂಬಾಧಿರಾಜ ನೊಳಿಪಯ್ಯ ಸ್ವತಂತ್ರನಾಗಿ ಆಳುತ್ತಿದ್ದನೆಂಬುದು ಅತಿಶಯವಾಗಿ ಕಾಣುತ್ತದೆ. ಆದ್ದರಿಂದ ಮದ್ದಗಿರಿ ಶಾಸನದ ನೊಳಂಬಾಧಿರಾಜ ನೊಳಿಪಯ್ಯ ಅವನಿ ಶಾಸನದ

---

[9] E. C. XII Si. 28
[10] S. I. I. IX, pt. I No. 23
[11] ibid., 38
[12] E. C. XII Mi. 52
[13] E. C. X Mb 38

ಈರಿವ ನೊಳಂಬನಾಗಿರಲಾರ. ಮದ್ದಗಿರಿ ಶಾಸನದಲ್ಲಿ ಏಕವಾಕ್ಯ ನೊಳಂಬಾಧಿರಾಜ ನೊಳಿಪಯ್ಯ ನಾಲ್‌ಗಾವುಣ್ಡ ಕಡೆಯನಿಗೆ ಕೊಡುಗೆಯನ್ನು ನೀಡಿದನೆಂದು ಹೇಳಿದೆ. ಶಾಸನದ ಕಡೆಯ ಸಾಲಿನಲ್ಲಿ ಕೆಲ ಅಕ್ಷರಗಳು ಅಳಿಸಿಹೋಗಿವೆ. ನಂದಿನೊಳಂಬನೃಪ ಕೆಲವು ದಾನಗಳನ್ನು ಕೊಟ್ಟನೆಂದು ಹೇಳಿದೆ. ಈ ನಂದಿನೊಳಂಬನೃಪ ಮೇಲಿನ ಸಾಲುಗಳಲ್ಲಿ ಹೇಳಿರುವ ನೊಳಂಬಾಧಿರಾಜ ನೊಳಿಪಯ್ಯನೇ ಇರಬೇಕು. ನೊಳಂಬ ವಂಶದಲ್ಲಿ ನಂದಿನೊಳಂಬನೆಂಬ ಹೆಸರನ್ನು ಹೊಂದಿದ್ದ ರಾಜ ಇದುವರೆಗೂ ಯಾರೂ ಸಿಕ್ಕಿಲ್ಲ. ಹೇಮಾವತಿ ಶಾಸನದಲ್ಲಿ[14] ನನ್ನಿಗಾಶ್ರಯ ಅಯ್ಯಪದೇವನನ್ನು ನನ್ನಿನೊಳಂಬ ನೃಪನೆಂದು ಕರೆಯಲಾಗಿದೆ. ಈತನಿಗೆ ನನ್ನಿಗಾಶ್ರಯ, ನನ್ನಿಗ ಮುಂತಾದ ಬಿರುದುಗಳಿದ್ದುವು.[15] ಆದ್ದರಿಂದ 'ನನ್ನಿ ನೊಳಂಬ ನೃಪ' ಎಂಬುದು ಲಿಪಿಕಾರನ ತಪ್ಪಿನಿಂದಾಗಿ 'ನಂದಿ ನೊಳಂಬ ನೃಪ' ನೆಂದಾಗಿರಲೂ ಸಾಧ್ಯ. ಆದ್ದರಿಂದ ರೈಸ್ ಹೇಳುವ ಹಾಗೆ,[16] ಮದ್ದಗಿರಿ ಶಾಸನದ ನೊಳಂಬಾಧಿರಾಜ ನೊಳಿಪಯ್ಯ, ನೊಳಿಪಯ್ಯ, ಅಯ್ಯಪ ಈ ಹೆಸರುಗಳಲ್ಲಿ ಸಾಮ್ಯ ಬಹಳವಿರುವುದರಿಂದ ಈತ ಅಯ್ಯಪ ದೇವನೇ ಇರಬೇಕು. ಪ್ರಾಯಶಃ ಈತ ಪಟ್ಟಕ್ಕೆ ಬಂದ ಮೊದಲಲ್ಲಿ ನೊಳಿಪಯ್ಯ ನೆಂಬ ಬಿರುದನ್ನು ಹೊಂದಿದ್ದು ಕಾಲಕ್ರಮೇಣ ಈ ಹೆಸರನ್ನು ಆತ ಉಪಯೋಗಿಸದೆ ಇರಬಹುದು. ಈ ತರಹದ ಸನ್ನಿವೇಶಗಳು ಚರಿತ್ರೆಯಲ್ಲಿ ವಿರಳವಾದರೂ ಅಸಂಭವ ವಾದವೇನಲ್ಲ. ಇಂತಹ ಒಂದು ಪ್ರಸಂಗಕ್ಕೆ ನೊಳಂಬರ ಇತಿಹಾಸದಲ್ಲಿಯೇ ಒಂದು ಉದಾಹರಣೆಯನ್ನು ಕೊಡಬಹುದು. ಅಯ್ಯಪದೇವನ ಮಗನಾದ ಈರಿವ ನೊಳಂಬ ದಿಲೀಪ ಕ್ರಿ.ಶ. ಸು. ೯೪೦ರಲ್ಲಿ ಪಟ್ಟಕ್ಕೆ ಬಂದ. ಈತ ಏಕವಾಕ್ಯ, ಈರಿವ ನೊಳಂಬ ನೊಳಿಪಯ್ಯ, ನೊಳಂಬಾಧಿರಾಜ, ಪಲವರಾಮ, ಪಲರೊಡೆಗಂಡ ಇತ್ಯಾದಿ ಬಿರುದು ಗಳನ್ನು ಹೊಂದಿದ್ದ. ಕ್ರಿ.ಶ. ೯೫೦ರ ಅನಂತರ ಬರೆಯಲಾದ ಈತನ ಶಾಸನಗಳಲ್ಲಿ ಇವನನ್ನು ನೊಳಂಬಾಧಿರಾಜ ನೊಳಿಪಯ್ಯನೆಂದು ಮಾತ್ರ ಸಂಬೋಧಿಸಲಾಗಿದೆ. ಈತನ ಮುಖ್ಯ ಹೆಸರಾದ ದಿಲೀಪನೆಂಬುದೇ ಈ ಶಾಸನಗಳಲ್ಲಿ ಇಲ್ಲ. ಆದ್ದರಿಂದ ಅನೇಕರು ಈ ನೊಳಿಪಯ್ಯ ದಿಲೀಪನ ಮಗನೆಂದು ಭಾವಿಸಿದ್ದರು. ಆದರೆ ದಿಲೀಪನ ಮೊಮ್ಮಗ ನಾದ ಪೊಳಲ್ಚೋರನ ಕಂಬದೂರು ಶಾಸನದಿಂದ[17] ಕ್ರಿ.ಶ. ೯೬೫ರಲ್ಲಿ ದಿಲೀಪ ಇನ್ನೂ ಬದುಕಿದ್ದನೆಂದು ತಿಳಿಯುವುದರಿಂದ ದಿಲೀಪ ಈರಿವ ನೊಳಂಬ ನೊಳಿಪಯ್ಯನೆಂಬ ಹೆಸರಿನಲ್ಲಿ ರಾಜ್ಯವಾಳುತ್ತಿದ್ದನೆಂದು ತಿಳಿದುಬರುತ್ತದೆ.[18]

---

[14] E. C. XII Si. 28

[15] E.C. XII Si. 39, XI Cd. 62

[16] E.C. XII, Mi. 57 Introduction

[17] S.I.I. IX, Pt. I No. 30

[18] Q.J.M.S. Vol. 48, p. 36

ಅನಂತಪುರ ಜಿಲ್ಲೆಯ ಹೇಮಾವತೀ ಶಾಸನದಲ್ಲಿ[19] ಅಯ್ಯಪದೇವನೊಂದಿಗೆ ಮಹೇಂದ್ರಾಧಿರಾಜ ಕೆಲವು ದಾನಗಳನ್ನು ಮಾಡಿದನೆಂದು ಹೇಳಿದೆ. ಲಿಪಿಯ ಆಧಾರದ ಮೇಲೆ ಈ ಶಾಸನ ಕ್ರಿ.ಶ. ೯ನೆಯ ಶತಮಾನದ್ದೆಂದು ನಿರ್ಧರಿಸಲಾಗಿದೆ. ಆದ್ದರಿಂದ ಈ ಶಾಸನದ ಮಹೇಂದ್ರ ಒಂದನೆಯ ಪೊಳಲ್ಚೋರನ ಮಗ ಒಂದನೆಯ ಮಹೇಂದ್ರನೇ ಆಗಿರಬೇಕು. ಮಹೇಂದ್ರನ ಜೀವಿತಕಾಲದಲ್ಲಿಯೇ ಅಯ್ಯಪದೇವ ದಾನಧರ್ಮಾದಿಗಳನ್ನು ಮಾಡುವಷ್ಟು ಪ್ರಾಪ್ತವಯಸ್ಕನಾಗಿದ್ದನೆಂದು ತಿಳಿದುಬರುತ್ತದೆ. ಇದಲ್ಲದೆ ಕ್ರಿ.ಶ. ೯೧೯ರ ಜಕ್ಕಸಂದ್ರ ಶಾಸನದಲ್ಲಿ[20] ಅಯ್ಯಪದೇವನ ಮಗ ನೊಳಿಪ ರಾಜ್ಯವಾಳುತ್ತಿದ್ದನೆಂದು ಹೇಳಿದೆ. ಕ್ರಿ.ಶ. ೯೨೩ರ ಕಡಬಗೆರೆ ಶಾಸನದಲ್ಲಿ[21] ಅಯ್ಯಪ ದೇವನ ಮಗ ಅಣ್ಣಿಗ ರಾಜ್ಯವಾಳುತ್ತಿದ್ದನೆಂದು ಹೇಳಿದೆ. ಹಾಗೂ ಅಯ್ಯಪದೇವನ ಮೊಮ್ಮಗನಾದ ಇರುಳಚೋರ ಕ್ರಿ.ಶ. ೯೨೯ರಲ್ಲಿ ರಾಜ್ಯವಾಳುತ್ತಿದ್ದನೆಂದು ಧರ್ಮಪುರಿ ಶಾಸನದಲ್ಲಿ ಹೇಳಿದೆ.[22] ಆದ್ದರಿಂದ ಅಯ್ಯಪದೇವ ಮಹೇಂದ್ರನ ಮರಣದ ಸಮಯ ದಲ್ಲಿ ಪ್ರಾಪ್ತವಯಸ್ಕನಾಗಿದ್ದು ಕ್ರಿ.ಶ. ೯೦೦ರಷ್ಟರ ಹೊತ್ತಿಗೆ ಇಬ್ಬರು ಮಕ್ಕಳ ತಂದೆ ಯಾಗಿದ್ದನೆಂದೂ ಹೇಳಬಹುದು.

ಮಹೇಂದ್ರನ ಮರಣಕಾಲದಲ್ಲಿ ದೀವಬ್ಬರಸಿಯ ಮಗ ಈರಿವ ನೊಳಂಬ ಇನ್ನೂ ಸಣ್ಣ ಹುಡುಗನಾಗಿದ್ದನೆಂದೂ ದೀವಬ್ಬರಸಿ ತನ್ನ ಮಗನ ರಾಜ್ಯಭಾರದ ದಿನಗಳನ್ನು ನಿರೀಕ್ಷಿಸುತ್ತಿದ್ದಳೆಂದೂ ಅವನಿ ಶಾಸನದಲ್ಲಿ[23] ಹೇಳಿದೆ. ಕ್ರಿ.ಶ. ೮೯೬ರಲ್ಲಿ ರಾಜ ಮನೋಜ ಪೊಳಲ್ಚೋರನಿಗೆ ಇನ್ನೂ ರಾಜ್ಯಭಾರವನ್ನು ಹೊರಲಾರದಂಥ ಸಣ್ಣ ಮಗನಿದ್ದನೆಂಬುದು ನಂಬಲಸಾಧ್ಯವಾದ ವಿಷಯ. ಏಕೆಂದರೆ ಪೊಳಲ್ಚೋರ ಕಡೆಯ ಪಕ್ಷ ಕ್ರಿ.ಶ. ೮೩೦–೩೫ರ ಹೊತ್ತಿಗೆ ಪಟ್ಟಕ್ಕೆ ಬಂದ. ಪೊಳಲ್ಚೋರನ ತಂದೆಯಾದ ಚಾರುಪೊನ್ನೇರ ಕ್ರಿ.ಶ. ೮೨೮ರಲ್ಲಿ ಗಂಗರಾಚಮಲ್ಲನ ಕೈಕೆಳಗೆ ಆಳುತ್ತಿದ್ದ. ಸೇಲಂ ಜಿಲ್ಲೆಯಲ್ಲಿರುವ ರಾಯಕೋಟಾ ಶಾಸನದಲ್ಲಿ[24] ಮಹಾವಲಿಬಾಣರಸರು ಗಂಗನಾಡು, ಪೊಳಮಲೆನಾಡು, ಮುಂತಾದವುಗಳನ್ನು ಆಳುತ್ತಿದ್ದು ಮಣ್ಣೆಯ ಮೇಲೆ (ಬೆಂಗಳೂರು ಜಿಲ್ಲೆ) ಯುದ್ಧಕ್ಕೆ ಹೋದಾಗ ಕಾವಮಲ್ಲನ (ಪ್ರಾಯಶಃ ರಾಚಮಲ್ಲನ) ರಕ್ಷಿ ಪೊನ್ನೇರನೂ (ಚಾರು ಪೊನ್ನೇರ) ವೈಡುಂಬನೂ ಯುದ್ಧಮಾಡಲು ಮಣ್ಣೆಗೆ ಬಂದರು ಎಂದು ಹೇಳಿದೆ. ಈ ಶಾಸನ ಮಹಾವಲೀ ಬಾಣರಸನ ನಾಲ್ಕನೆಯ ವರ್ಷದ್ದೆಂದು ಅದರಲ್ಲೇ ಬರೆದಿದೆ. ಈ ಶಾಸನದ ಮಹಾವಲೀ ಬಾಣರಸ ಎರಡನೆಯ ವಿಜಯಾದಿತ್ಯ ಪ್ರಭುಮೇರು

[19] No. 12 of 1927 ; S.I.I, IX Pt. I No. 19
[20] E.C. IX Db 9
[21] 271 of 1918 ; S.I.I. IX Pt. I No. 57
[22] 198 of 1910 ; S.I I. IX Pt. I No. 23
[23] E.C. X, Mb 38
[24] No. 2 of 1900 ; S.I.I. VII No. 2

ವೆಂದು ಪಂಚಮುಖಿಯವರ ಅಭಿಪ್ರಾಯ.[25] ಈ ಅಭಿಪ್ರಾಯ ಸರಿಯಾಗಿರಲಾರದು. ಏಕೆಂದರೆ ಎರಡನೆಯ ವಿಜಯಾದಿತ್ಯ ಕ್ರಿ.ಶ. ೮೯೫–೯೧೦ರಲ್ಲಿ ಆಳಿದ.[26] ಈ ಕಾಲದಲ್ಲಿ ಆಳುತ್ತಿದ್ದ ನೊಳಂಬರ ದೊರೆಯೆಂದರೆ ಒಂದನೆಯ ಪೊಳಲ್ಚೋರನ ಮಗ ಒಂದನೆಯ ಮಹೇಂದ್ರ (ಕ್ರಿ.ಶ. ಸು. ೮೭೦–೮೯೭) ಮತ್ತು ಅವನ ಮಗ ಅಯ್ಯಪ ದೇವ (ಕ್ರಿ.ಶ. ಸು. ೮೯೬–೯೩೫). ಆದ್ದರಿಂದ ರಾಯಕೋಟಾ ಶಾಸನದ ಮಹಾವಲೀ ವಾಣರಸ ಎರಡನೆಯ ವಿಜಯಾದಿತ್ಯನಾಗಿರಲಾರ. ಈ ಶಾಸನದ ಮಹಾವಲೀ ಬಾಣರಸ ಒಂದನೆಯ ವಿಕ್ರಮಾದಿತ್ಯನ ಮಗನಾದ ವಧುವಲ್ಲಭ ಮಲ್ಲಿದೇವನಿರಲೂ ಸಾಧ್ಯ. ಈತ ರಾಜ್ಯವಾಳಿದ ಕಾಲ ಕ್ರಿ.ಶ. ಸು. ೮೨೪–೮೪೩.[27] ಈತ ತೆಲುಗು ಚೋಳರನ್ನು ಸೋಲಿಸಿ ಅವರ ರಾಜ್ಯವಾದ ರೇನಾಡನ್ನು ವಶಪಡಿಸಿಕೊಂಡ. ಈ ಸಮಯದಲ್ಲಿ ಮಲ್ಲಿದೇವ ಪ್ರಾಯಶಃ ಆ ಪ್ರಾಂತ್ಯದಲ್ಲಿ ಆಳುತ್ತಿದ್ದ ವೈಡುಂಬರ ಮೇಲೂ ಯುದ್ಧಮಾಡಿರಬಹುದು[28]. ರಾಯಕೋಟಾ ಶಾಸನದಲ್ಲಿ ಈತ ಗಂಗನಾಡನ್ನು ಆಳುತ್ತಿದ್ದನೆಂದು ತಿಳಿಸಿದೆ. ಬಾಣರ ವಶದಲ್ಲಿದ್ದ ಗಂಗನಾಡೆಂದರೆ ಗಂಗರು ಸಾಸಿರ ಪ್ರಾಂತ್ಯ.[29] ಈ ಪ್ರಾಂತ್ಯ ಪ್ರಾಯಶಃ ಈಗಿನ ಕೋಲಾರ, ಬೆಂಗಳೂರು ಜಿಲ್ಲೆಗಳ ನ್ನೊಳಗೊಂಡಿತ್ತು. ಗಂಗನಾಡು ಪ್ರಾಂತ್ಯ ಬಾಣರ ವಶದಲ್ಲಿತ್ತೆಂದು ಕ್ರಿ.ಶ. ೮೦೬ರ ರಾಷ್ಟ್ರಕೂಟ ಮೂರನೆಯ ಗೋವಿಂದನ ನಂದಿ ತಾಮ್ರಶಾಸನದಿಂದ ತಿಳಿಯುತ್ತದೆ.[30] ಒಂದನೆಯ ರಾಚಮಲ್ಲನ ಮಣ್ಣೆ ತಾಮ್ರಶಾಸನ ರಾಚಮಲ್ಲ ತನ್ನ ವೈರಿಗಳೆಲ್ಲರನ್ನೂ ನಿರ್ಮೂಲವಮಾಡಿ ಕ್ರಿ ಶ. ೮೨೮ರಲ್ಲಿ ರಾಜ್ಯವಾಳುತ್ತಿದ್ದನೆಂದು ತಿಳಿಸಿದೆ. ಆದ್ದರಿಂದ ರಾಚಮಲ್ಲ ಆಗತಾನೇ ಮಣ್ಣೆ ಮತ್ತು ಸುತ್ತಮುತ್ತಲ ಭಾಗಗಳನ್ನು ಶತ್ರುಗಳಿಂದ ಆಕ್ರಮಿಸಿಕೊಂಡಿದ್ದನೆಂಬುದು ನಿಸ್ಸಂದೇಹ.[31] ಏಕೆಂದರೆ ಈ ಪ್ರಾಂತ್ಯ ಕ್ರಿ.ಶ.೮೨೮ಕ್ಕೆ ಮುಂಚೆ ಬಾಣರ ವಶದಲ್ಲಿತ್ತು.[32] ಈ ಶಾಸನದಲ್ಲಿ ಕೊಟ್ಟಿರುವ ಮಹಾವಲಿ ಬಾಣರಸನ ಅಂದರೆ ವಧುವಲ್ಲಭ ಮಲ್ಲಿದೇವನ ನಾಲ್ಕನೆಯ ವರ್ಷವೂ ಹಾಗೂ ಮಣ್ಣೆ ತಾಮ್ರಶಾಸನದ ಕಾಲವೂ (ಕ್ರಿ.ಶ. ೯೨೮) ಒಂದೇ ಆಗಿರುವುದರಿಂದ ಬಾಣರಸ ಮಲ್ಲಿದೇವನೇ ಈ ಶಾಸನದ ಮಹಾವಲಿ ಬಾಣರಸ ಆಗಿರಬೇಕು.

---

25 E.I. XXIV p. 188

26 J.I.H. Vol. XXIX p. 165

27 M. S. Govinda Swamy : *The Role of Feudatories in Pallava History*, p. 13

28 Ibid

29 327 of 1912 ; S.I.I.IX, Pt. I, No. 6

30 M.A.R. 1913–14, pp. 68–70

31 J.I.H. Vol. XXIX, p. 171

32 M.A.R. 1913-14, p. 68-70 ; No. 2 of 1900 ; S.I.I. VII, No. 2

ಈ ಶಾಸನದ ಪ್ರಕಾರ ಪೊಳಲ್ಚೋರನ ತಂದೆಯಾದ ಚಾರು ಪೊನ್ನೇರ ಕ್ರಿ.ಶ. ೮೨೮ರಲ್ಲಿ ರಾಜ್ಯವಾಳುತ್ತಿದ್ದ. ಚಾರು ಪೊನ್ನೇರ ಯಾವಾಗ ಕಾಲವಾದ ಎಂಬುದು ಸರಿಯಾಗಿ ಗೊತ್ತಿಲ್ಲ. ಈತ ಕ್ರಿ.ಶ. ೮೨೮ರ ಅನಂತರ ಸ್ವಲ್ಪಕಾಲವಾದರೂ ಆಳಿರಬಹುದು. ಇವನ ಮಗನಾದ ನೊಳಂಬಾಧಿರಾಜ ಪೊಳಲ್ಚೋರ ಮೊದಲನೆಯ ರಾಚಮಲ್ಲನ (ಕ್ರಿ.ಶ. ೮೧೮-೫೩) ಹಾಗೂ ಎರೆಯಂಗ ನೀತಿಮಾರ್ಗನ (ಕ್ರಿ.ಶ. ಸು. ೮೫೩-೭೦) ಕೈಕೆಳಗೆ ಆಳುತ್ತಿದ್ದ.[33] ರಾಚಮಲ್ಲನ ಮಗಳು ಹಾಗೂ ನೀತಿಮಾರ್ಗನ ತಂಗಿಯಾದ ಜಾಯಬ್ಬೆಯನ್ನು ಪೊಳಲ್ಚೋರ ಮದುವೆಯಾದ.[34] ಇವನು ಮೊದಲನೆಯ ರಾಚಮಲ್ಲನ ಸಾಮಂತನಾಗಿದ್ದನೆಂದಮೇಲೆ ಈತ ಕ್ರಿ.ಶ. ೮೫೩ಕ್ಕೆ ಮುಂಚೆಯೇ ಅಂದರೆ ರಾಚಮಲ್ಲನ ಮರಣಕ್ಕೆ ಮುಂಚೆಯೇ ಪಟ್ಟಕ್ಕೆ ಬಂದಿರಬೇಕು. ಅಂದರೆ ಕನಿಷ್ಠಪಕ್ಷ ೮೫೦-೫೩ರ ಒಳಗೆ ಪಟ್ಟಕ್ಕೆ ಬಂದಿರಬೇಕು. ಕ್ರಿ.ಶ. ೮೫೦ರ ಹೊತ್ತಿಗಾಗಲೇ ಪೊಳಲ್ಚೋರನಿಗೆ ಸಾಕಷ್ಟು ವಯಸ್ಸಾಗಿತ್ತು. ಚಳ್ಳಕೆರೆಯ ಒಂದು ಶಾಸನದಲ್ಲಿ[35] ಪರಮೇಶ್ವರ ಪಲ್ಲವಾಧಿರಾಜನೂ ಆತನ ಮಗ ಪಲ್ಲವಮಲ್ಲನೂ ಪ್ರಭೂತವರ್ಷ ಪ್ರತಾಪಾವ ಲೋಕವಲ್ಲಭನ ಕೈಕೆಳಗೆ ಆಳುತ್ತಿದ್ದರೆಂದು ತಿಳಿಸಿದೆ. ಈ ಪ್ರಭೂತವರ್ಷ ಪ್ರತಾಪಾವ ಲೋಕವಲ್ಲಭ ರಾಷ್ಟ್ರಕೂಟ ಮೂರನೆಯ ಗೋವಿಂದನೆಂದು ಎ. ಎಸ್. ಅಳತೇಕರ್ ಹೇಳಿದ್ದಾರೆ.[36] ಪರಮೇಶ್ವರ ಪಲ್ಲವಾಧಿ ರಾಜ ಸಿಂಹಪೋತನ ಮಗನೆಂದು ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ.[37] ಹೇಮಾವತೀ ಶಾಸನದ ಪ್ರಕಾರ[38] ಸಿಂಹಪೋತನ ಮಗ ಚಾರುಪೊನ್ನೇರನೆಂದೂ ಆತನ ಮಗ ಪೊಳಲ್ಚೋರನೆಂದೂ ತಿಳಿದುಬರುತ್ತದೆ. ಆದ್ದರಿಂದ ಚಳ್ಳಕೆರೆ ಶಾಸನದಲ್ಲಿ ಕೊಟ್ಟಿರುವ ಸಿಂಹಪೋತನ ಮಗ ಪರಮೇಶ್ವರ ಪಲ್ಲವಾಧಿರಾಜ ಹಾಗೂ ಮೊಮ್ಮಗ ಪಲ್ಲವ ಮಲ್ಲರು ಹೇಮಾವತೀ ಶಾಸನದ ಚಾರುಪೊನ್ನೇರ ಹಾಗೂ ಅವನ ಮಗ ಪೊಳಲ್ಚೋರರಿರಬೇಕು. ಪ್ರಭೂತವರ್ಷ ಗೋವಿಂದನ (ಮೂರನೆಯ ಗೋವಿಂದ) ಆಳ್ವಿಕೆಯ ಕಾಲ ಕ್ರಿ. ಶ. ೭೯೩ರಿಂದ ೮೧೪.[39] ಮದರೀಕಲ್ಲು, ತೊಂಡೂರು ೧೨, ಅಮ್ಮವಳ್ಳಿ ೧೨, ಕೋಲೂರು ೧೨, ಗವಗಣೂರು ೩೦ನ್ನು ಪಲ್ಲವಮಲ್ಲ ಆಳುತ್ತಿದ್ದನೆಂದು ಈ ಶಾಸನದಲ್ಲಿ ಹೇಳಿದೆ. ಆದ್ದರಿಂದ ಕ್ರಿ.ಶ. ೮೧೪ರ ಹೊತ್ತಿಗೆ ಪಲ್ಲವಮಲ್ಲ ಕನಿಷ್ಠಪಕ್ಷ ೧೦ ವರ್ಷದ ಹುಡುಗನಾದರೂ ಆಗಿದ್ದಿರಬೇಕು.

[33] E.C. III, T p 47 ; Ibid. X, Kl. 79

[34] E.C. III, Si. 24, 38 ; E.I. X, p. 54

[35] E.C. XI Cl. 34

[36] *Rashtrakutas and Their Times*, p. 63, A. S. Altekar

[37] E.C. XI, Cl. 33

[38] E.C. XII, Sl. 28

[39] Altekar : Op. Cit. p. 63

ಅವನಿ ಶಾಸನದಲ್ಲಿ ಮಹೇಂದ್ರನ ಮರಣ ಕಾಲದಲ್ಲಿ, ಅಂದರೆ ಕ್ರಿ.ಶ. ೮೯೭ರಲ್ಲಿ ಈರಿವ ನೊಳಂಬ ಇನ್ನೂ ಚಿಕ್ಕಹುಡುಗನಾಗಿದ್ದನೆಂದು ಹೇಳಿದೆ. ಆ ಕಾಲದಲ್ಲಿ ಅವನಿಗೆ ಅತಿ ಹೆಚ್ಚೆಂದರೆ ಹತ್ತು-ಹನ್ನೆರಡು ವರ್ಷ ವಯಸ್ಸಾಗಿರಬಹುದು. ಹಾಗಿದ್ದಲ್ಲಿ ಈರಿವ ನೊಳಂಬ ಕ್ರಿ.ಶ. ೮೮೫ರಲ್ಲಿ ಹುಟ್ಟಿರಬೇಕು ಹಾಗೂ ಪೊಳಲ್ಚೋರನಿಗೆ ಆಗ ಸುಮಾರು ೮೦ ವರ್ಷ ವಯಸ್ಸಾಗಿರಬೇಕು. ಇಷ್ಟು ಇಳಿವಯಸ್ಸಿನಲ್ಲಿ ಪೊಳಲ್ಚೋರನಿಗೆ ಈರಿವ ನೊಳಂಬ ಹುಟ್ಟಿದನೆಂದು ಹೇಳಿದರೆ ಅದು ಅತಿ ಅಸ್ವಾಭಾವಿಕ ಹಾಗೂ ನಂಬಲಸಾಧ್ಯವಾದ ವಿಷಯವಾಗಿ ತೋರುತ್ತದೆ. ಆದುದರಿಂದ ಈರಿವ ನೊಳಂಬ ಮಹೇಂದ್ರನ ಬಲತಮ್ಮನಾಗಿರಲಾರ, ಹಾಗೂ ಅವನು ಕೃಷ್ಣಶಾಸ್ತ್ರಿಗಳು ಹೇಳಿರುವ ಪ್ರಕಾರ ಮಹೇಂದ್ರನ ತರುವಾಯ ಪಟ್ಟಕ್ಕೆ ಬಂದಿರಲಾರ. ಏಕೆಂದರೆ ಆಗಲೇ ಪ್ರಾಪ್ತ ವಯಸ್ಕನಾಗಿದ್ದ ಅಯ್ಯಪದೇವ ಮಹೇಂದ್ರನ ಮರಣದ ಸಮಯದಲ್ಲಿ ಇನ್ನೂ ಚಿಕ್ಕ ಹುಡುಗನಾಗಿದ್ದ ಈರಿವ ನೊಳಂಬನಿಗೆ ತನಗೆ ಬರಬೇಕಾದ ಸಿಂಹಾಸನ ಹೋಗುವುದನ್ನು ನೋಡಿಕೊಂಡು ಸುಮ್ಮನಿದ್ದಿರಲಾರ. ಆದುದರಿಂದ ಅಯ್ಯಪದೇವನೇ ಮಹೇಂದ್ರನ ತರುವಾಯ ಪಟ್ಟಕ್ಕೆ ಬಂದನೆಂದು ಹೇಳಬಹುದು. ಅವನಿ ಶಾಸನವನ್ನು ಚಾರಿತ್ರಿಕವಾಗಿ ಯಾವ ವಿಧದಲ್ಲಿಯೂ ಕ್ರಿ.ಶ. ೯ನೆಯ ಶತಮಾನಕ್ಕೆ ಸೇರಿಸುವುದಕ್ಕಾಗದೆ ಇರುವುದರಿಂದ ಸಾಲೆತೊರೆ ಅವರ ಅಭಿಪ್ರಾಯದಂತೆ ಈ ಶಾಸನ ಕ್ರಿ.ಶ. ೧೦ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದ್ದೆಂದು ಹೇಳಬಹುದು.

ನೊಳಂಬಾಧಿರಾಜ ಮಹೇಂದ್ರ ಕ್ರಿ.ಶ. ಸುಮಾರು ೮೯೭ರಲ್ಲಿ ಸಂಗವಾಡಿಯನ್ನು ಆಕ್ರಮಿಸಿಕೊಂಡು ಗಂಗರ ಜೊತೆ ಯುದ್ಧಮಾಡಿ ಮಡಿದ.[40] ಈತನ ತರುವಾಯ ಪಟ್ಟಕ್ಕೆ ಬಂದ ಈತನ ಮಗ ಅಯ್ಯಪದೇವ ತನ್ನ ವಂಶಕ್ಕೆ ಆದ ಅವಮಾನದ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿಯೋ ಅಥವಾ ಕಳೆದುಹೋದ ತನ್ನ ರಾಜ್ಯದ ಭಾಗಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿಯೋ ಗಂಗರ ಜೊತೆ ಯುದ್ಧವನ್ನು ಮುಂದುವರಿಸಿದ. ಅಯ್ಯಪದೇವ ಆಸಂಧಿನಾಡ ಮೇಲೆ ಯುದ್ಧಕ್ಕೆ ಹೋಗಿ ಕಲಿಕಟ್ಟೆಯಲ್ಲಿ ತನ್ನ ಸಮಸ್ತ ಬಲದೊಂದಿಗೆ ತಂಗಿದ್ದನೆಂದು ಮತ್ತು ಕಲಿಕಟ್ಟೆಯಲ್ಲಿ ನಡೆದ ಯುದ್ಧದಲ್ಲಿ ಮಾದಿವರ್ಮ ಮಡಿದನೆಂದು, ಆತನಿಗೆ ಸತ್ಯವಾಕ್ಯ ಪೆರ್ಮ್ಮಾನಡಿ ಹಾಗೂ ಎರೆಯಪ್ಪರು ಕಲ್ನಾಡನ್ನು ದಾನವಾಗಿ ಕೊಟ್ಟರೆಂದು ಮುಗಲವಳ್ಳಿಯ ಒಂದು ಶಾಸನದಿಂದ ತಿಳಿದುಬರುತ್ತದೆ.[41] ಅರಸೀಕೆರೆಯ ಮತ್ತೊಂದು ಶಾಸನದಲ್ಲಿ[42] ಸತ್ಯವಾಕ್ಯ ಕೊಂಗುಣಿ ವರ್ಮ್ಮ ಪೆರ್ಮ್ಮಾನಡಿಗಳು ಪೃಥ್ವಿರಾಜ್ಯವಾಳುತ್ತಿದ್ದಾಗ ಮತ್ತು ಎರೆಯಪ್ಪರಸರು ಸಮಸ್ತ ರಾಜ್ಯವಾಳುತ್ತಿದ್ದಾಗ ಆಸಂಧಿ ನಾಡಿನ ಬಲಿವಂಶ

[40] M.A.R. 192, p. 21

[41] E.C. VI, Cm. 129

[42] E.C. XV, Ak. 215

ತಿಲಕ ಮುತ್ತರಸ ಕಲಿಕಟ್ಟಿಯಲ್ಲಿ ನೊಳಂಬರೊಂದಿಗೆ ಕಾದಿ ಸತ್ತನೆಂದು ಹೇಳುತ್ತದೆ. ಕಲಿಕಟ್ಟಿ ಈಗಿನ ಅರಸೀಕೆರೆ ತಾಲ್ಲೂಕಿನಲ್ಲಿರುವ ಕಣಿಕಟ್ಟಿಯೆಂದು, ಈ ಶಾಸನಗಳ ಸತ್ಯವಾಕ್ಯ ಪೆರ್ಮ್ಮಾನಡಿ ಎರಡನೆಯ ರಾಜಮಲ್ಲನೆಂದು (ಕ್ರಿ.ಶ. ೮೭೦ರಿಂದ ೯೦೭) ಮತ್ತು ಎರೆಯಪ್ಪ ಅವನ ಅಣ್ಣನ ಮಗನೆಂದು ರೈಸ್ ಹೇಳಿದ್ದಾರೆ. (ಕ್ರಿ.ಶ. ೯೦೭–೯೩೭)[43]. ಈ ಶಾಸನಗಳಲ್ಲಿ ಸತ್ಯವಾಕ್ಯ ಪೆರ್ಮ್ಮಾನಡಿ ರಾಜ್ಯವಾಳುತ್ತಿದ್ದನೆಂದಿರುವುದರಿಂದ ಈ ಶಾಸನವನ್ನು ಕ್ರಿ.ಶ. ೯೦೭ರ ಮುಂಚೆಯೇ ಬರೆದಿರಬೇಕು ಹಾಗೂ ಅಯ್ಯಪನ ಆಸಂಧಿನಾಡ ಮೇಲೆ ಈ ಕಾಲದಲ್ಲಿ ಯುದ್ಧಕ್ಕೆ ಹೋಗಿರಬೇಕು. ಆದುದರಿಂದ ಮಹೇಂದ್ರನ ತರುವಾಯ ಅಯ್ಯಪದೇವ ನೊಳಂಬರಾಜ್ಯಕ್ಕೆ ಅಧಿಪತಿಯಾದ ಎಂಬುದು ಈ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಅಯ್ಯಪದೇವನ ಮೊದಲನೆಯ ಕಾಲವನ್ನು ತಿಳಿಸುವ ಶಾಸನ ಕ್ರಿ.ಶ. ೯೧೮ಕ್ಕೆ ಸೇರಿದ್ದು. ಚಿತ್ರದುರ್ಗದ ಬಾಗನಹಾಳು ಎಂಬಲ್ಲಿ ದೊರೆತಿರುವ ಈ ಶಾಸನದಲ್ಲಿ[44] ನನ್ನಿಗಾಶ್ರಯ ಅಯ್ಯಪದೇವ ಕ್ರಿ.ಶ. ೯೧೮ರಲ್ಲಿ ರಾಜ್ಯವಾಳುತ್ತಿದ್ದನೆಂದು ಹೇಳಿದೆ. ಈ ಶಾಸನದಲ್ಲಿ ಕಾಲವನ್ನು ಶಕವರ್ಷ ೮೪೧ ಈಶ್ವರ ಸಂವತ್ಸರ ಎಂದು ಹೇಳಿದೆ. ಆದರೆ ಶಕ ೮೪೧ ಪ್ರಮಾಥಿ ಸಂವತ್ಸರವಾಗಿತ್ತು. ಜಕ್ಕಸಂದ್ರದ ಮತ್ತೊಂದು ಶಾಸನದಲ್ಲಿ[45] ಅಯ್ಯಪದೇವನ ಮಗ ನೊಳಿಪ ಶಕ ೮೪೧ನೆ (ಕ್ರಿ.ಶ. ೯೧೯) ಬಹುಧಾನ್ಯ ಸಂವತ್ಸರದಲ್ಲಿ ರಾಜ್ಯವಾಳುತ್ತಿದ್ದನೆಂದು ಹೇಳಿದೆ. ಅಯ್ಯಪದೇವನ ಇತರ ಕಾಲಗಳೆಂದರೆ ಶಕ ೮೪೧ ವಿಕ್ರಮ ಸಂವತ್ಸರ (ಕ್ರಿ.ಶ. ೯೨೦)[46], ಶಕ ೮೪೪ ಚಿತ್ರಭಾನು (ಕ್ರಿ.ಶ. ೯೨೨ ಸೆಪ್ಟೆಂಬರ್ ೯),[47] ವಿರೋಧಿ ಸಂವತ್ಸರ (ಕ್ರಿ.ಶ. ೯೩೦),[48] ಶಕ ೮೫೩ (ಕ್ರಿ.ಶ. ೯೩೧–೩೨).[49] ಕ್ರಿ ಶ. ೯೨೦ರ ಬರಗೂರು ಶಾಸನದಲ್ಲಿ[50] ಅಯ್ಯಪದೇವ ತನ್ನ ಮನೋನಯನವಲ್ಲಭೆಯರಾದ ನಾಗಿಯಬ್ಬೆ ಮತ್ತು ಹೆಳೆಯಬ್ಬೆಯರ ಹೆಸರಿನಲ್ಲಿ ಬರಗೂರ ಮೂಲಸ್ಥಾನದ ಎರಡು ದೇಗುಲಗಳಿಗೆ ಭೂಮಿಯನ್ನು ದಾನ ಮಾಡಿದನೆಂದು ಹೇಳಿದೆ. ಕ್ರಿ.ಶ. ೯೨೨ರ ಕಡಬಗೆರೆ ಶಾಸನದಲ್ಲಿ[51] ಅಯ್ಯಪದೇವನ ಮಗನಾದ ಅಣಿಗ, ರಾಷ್ಟ್ರಕೂಟರ ದೊರೆಯಾದ ಮೂರನೆ ಇಂದ್ರನ ದಳಪತಿ ಕದಂಬ

[43] E.C. XV Ak. 215
[44] E.C. XI Cd 62
[45] E.C. IX Db 9
[46] E.C. XII Si. 39
[47] S.I. I. IX Pt I No. 57; 271 of 1918
[48] E.C. VI Kd. 6.
[49] 297 of 1918; S.I.I. IX Pt. I No. 61
[50] E.C. XII Si. 39
[51] S.I. I. IX Pt. I No. 57

ವಂಶೋದ್ಭವ ಕಣ್ಣವಾರ ಮುದುಗರ ದೇವಯ್ಯನ ಮಗನೊಂದಿಗೆ ಕಾದಿದನೆಂದು ಹೇಳಿದೆ. ಕ್ರಿ.ಶ. ೯೩೦ರ ಕುಪ್ಪೆಹಾಳು ಶಾಸನದಲ್ಲಿ[52] ಅಯ್ಯಪದೇವನ ಕಾಲದಲ್ಲಿ ಅಲ್ಲಾಡಿ ಕೊಂಡಮ್ಮರಸರು ಕುಪ್ಪೇಹಾಳಿನ ತಿರುವೆಂಗಡನಾಥನ ದೇವಾಲಯಕ್ಕೆ ದೀಪವನ್ನು ದಾನಮಾಡಿದರೆಂದು ಮತ್ತು ದೇವಾಲಯಕ್ಕೆ ಎಲ್ಲಾ ವಿಧವಾದ ತೆರಿಗೆಗಳನ್ನು ಮನ್ನಾ ಮಾಡಿದರೆಂದು ತಿಳಿಸುತ್ತದೆ. ಈ ಶಾಸನದಲ್ಲಿ ಕಾಲವನ್ನು ಕೇವಲ ವಿರೋಧಿಸಂವತ್ಸರವೆಂದು ಮಾತ್ರ ಕೊಟ್ಟಿದೆ. ಅಯ್ಯಪದೇವನ ಆಳ್ವಿಕೆಯ ಕಾಲದಲ್ಲಿ ವಿರೋಧಿ ಸಂವತ್ಸರ ಕ್ರಿ.ಶ. ೯೩೦ರಲ್ಲಿ ನಡೆಯುತ್ತಿತ್ತು. ಅಯ್ಯಪದೇವನ ಕಡೆಯ ಕಾಲದ ಅನಂತರ ಕ್ರಿ.ಶ. ೯೩೨. ಈ ಕಾಲದಲ್ಲಿ ಅಯ್ಯಪದೇವ ರಾಷ್ಟ್ರಕೂಟ ನಾಲ್ಕನೆಯ ಗೋವಿಂದನ ಕೈಕೆಳಗೆ ಮಾಸವಾಡಿ ಹಾಗೂ ಕೋಗಲಿಯನ್ನಾಳುತ್ತಿದ್ದನೆಂದು ಶಿರಸ್ಥಹಳ್ಳಿ ಶಾಸನದಲ್ಲಿ ಬರೆದಿದೆ.[53]

ಕ್ರಿ.ಶ. ೯೩೨ರ ಅನಂತರಕ್ಕೆ ಸೇರಿದ ಅಯ್ಯಪದೇವನ ಯಾವ ಶಾಸನವೂ ಇದುವರೆಗೆ ಸಿಕ್ಕಿಲ್ಲ. ಅಯ್ಯಪದೇವನ ಮರಣವೂ ಕ್ರಿ.ಶ. ಸು. ೯೩೫ರಲ್ಲಿ ಸಂಭವಿಸಿರಬಹುದು. ಏಕೆಂದರೆ ಪೂರ್ವ ಚಾಲುಕ್ಯರ ರಾಜನಾದ ಅಮ್ಮರಾಯನ ಕಾಲದ ಕುಂಬ್ರ ಶಾಸನ[54] ಎರಡನೆಯ ಚಾಲುಕ್ಯ ಭೀಮ ತನ್ನ ಶತ್ರುಗಳಲ್ಲಿ ಅತಿ ಭಯಂಕರನೂ ಅತಿ ಬಲಶಾಲಿಯೂ ಆದ ಅಯ್ಯಪದೇವನನ್ನು ಕೊಂದನೆಂದು ತಿಳಿಸುತ್ತದೆ. ಈ ಎರಡನೆಯ ಚಾಲುಕ್ಯ ಭೀಮ ಕ್ರಿ.ಶ. ೯೩೪ರಿಂದ ೯೪೫ರ ವರೆಗೆ ರಾಜ್ಯವಾಳಿದ. ಈತ ಗಂಡಮಹೇಂದ್ರ, ರಾಜಮಹೇಂದ್ರ ಮುಂತಾದ ಬಿರುದುಗಳನ್ನು ಹೊಂದಿದ್ದ.[55] ನೊಳಂಬರ ಹಾಗೂ ಪೂರ್ವ ಚಾಳುಕ್ಯರ ನಡುವೆ ಯುದ್ಧಗಳು ವಿರಳವಾದವೇನಲ್ಲ. ಇವೆರಡು ರಾಜ್ಯಗಳ ನಡುವೆ ಕಲಹಗಳು ಅತಿ ಮುಂಚಿನಿಂದಲೇ ನಡೆಯುತ್ತಿದ್ದವು. ಚಾಲುಕ್ಯ ಮೂರನೆಯ ಗುಣಗವಿಜಯಾದಿತ್ಯ ನೊಳಂಬ ರಾಷ್ಟ್ರದ ಮಂಗಿಯನ್ನು ಕೊಂದನೆಂದು ಒಂದನೆಯ ಚಾಲುಕ್ಯ ಭೀಮನ ಶಾಸನದಲ್ಲಿ ಹೇಳಿದೆ.[56] ಈ ಶಾಸನಗಳ ಮಂಗಿರಾಜ ಯಾರೆಂದು ಹೇಳುವುದು ಕಷ್ಟವಾದರೂ ಪೂರ್ವ ಚಾಲುಕ್ಯರ ಹಾಗೂ ನೊಳಂಬರ ನಡುವೆ ಅಂತಃಕಲಹಗಳು ನಡೆಯುತ್ತಿದ್ದುವು ಎಂಬುದು ಮಾತ್ರ ನಿಸ್ಸಂದೇಹ. ಅಯ್ಯಪದೇವನ ಮೊಮ್ಮಗನಾದ ಇರುಳಚೋರನ ಕಳಕಟ್ಟೂರು ಶಾಸನದಲ್ಲಿ[57] ಅಯ್ಯಪದೇವ ಅಮ್ಮಣರಾಯನನ್ನು ಸೋಲಿಸಿದನೆಂದು ಹೇಳಿದೆ. ಈ ಅಮ್ಮಣರಾಯ

52 E.C. VI Kd. 6

53 S.I. I. IX Pt. I No. 61

54 E.I. VII p. 190

55 I.A. XX, p. 269, E.I. VII, p. 190

56 A.R.I.E. 1918, p. 132 ; S.I.I. Vol. I, pp. 39-42 ; E.I. IV, p. 239

57 199 of 1910 ; S.I.I. IX, Pt. I, No. 38

ಕ್ರಿ.ಶ. ೯೧೮ರಿಂದ ೯೨೫ರ ವರೆಗೆ ಆಳಿದ ಒಂದನೆಯ ಅಮ್ಮರಾಯನಿರಬಹುದು. ಈತ (ಅಯ್ಯಪದೇವ) ಚಾಲುಕ್ಯರಿಗೆ ಅತಿ ಭಯಂಕರನೂ ಅತಿ ಪ್ರಬಲನೂ ಆಗಿದ್ದನೆಂದು ಪೂರ್ವ ಚಾಲುಕ್ಯರ ಶಾಸನಗಳಲ್ಲಿ ಹೇಳಿದೆ.[58]

ಅಯ್ಯಪದೇವ ಬೀರ ಮಹೇಂದ್ರನ ಜೊತೆಗೆ ತುಂಬೆಪಾಡಿಯಲ್ಲಿ ಕಾದಿದನೆಂದು ಕ್ರಿ.ಶ. ೯ನೆಯ ಶತಮಾನಕ್ಕೆ ಸೇರಿದ ಎರೆಯಪ್ಪನ ಬೇಗೂರು ಶಾಸನ[58(a)] ಹೇಳುತ್ತದೆ. ಅಯ್ಯಪದೇವನ ಸಹಾಯಕ್ಕಾಗಿ ಎರೆಯಪ್ಪ ನಾಗಟ್ಟರ ದಂಡನ್ನು ಕಳುಹಿಸಿದನೆಂದೂ ತುಂಬೆಪಾಡಿಯಲ್ಲಿ ಬೀರ ಮಹೇಂದ್ರನ ಜೊತೆ ನಡೆದ ಯುದ್ಧದಲ್ಲಿ ಅನೇಕ ವೀರರು ಮಡಿದರೆಂದೂ ಎರೆಯಪ್ಪ ಯುದ್ಧದಲ್ಲಿ ಇರುಗನ ಶೌರ್ಯವನ್ನು ಮೆಚ್ಚಿ ಆತನಿಗೆ ನಾಗಟ್ಟರ ಪಟ್ಟವನ್ನು ಕಟ್ಟಿ ಅನೇಕ ಹಳ್ಳಿಗಳನ್ನು ದಾನಮಾಡಿದ ನೆಂದೂ ಈ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ಬರುವ ಅಯ್ಯಪದೇವ ನೊಳಂಬಾಧಿರಾಜ ಮಹೇಂದ್ರನ ಮಗನೆಂಬುದು ನಿಸ್ಸಂದೇಹ. ಈತ ಗಂಗ ಎರೆಯಪ್ಪನ ಕೈಕೆಳಗೆ (ಕ್ರಿ.ಶ. ೯೦೭–೩೭) ರಾಜ್ಯವಾಳುತ್ತಿದ್ದ. ಆದರೆ ಅಯ್ಯಪ ದೇವನೊಂದಿಗೆ ಕಾದಿದ ವೀರ ಮಹೇಂದ್ರ ಯಾರು ಎಂಬುದು ಇನ್ನೂ ವಿವಾದಾತ್ಮಕ ವಾದ ವಿಷಯ. ಈತ ಪ್ರಾಯಶಃ ಪೂರ್ವ ಚಾಲುಕ್ಯ ಮನೆತನದ ಒಬ್ಬ ರಾಜನಿರ ಬಹುದು. ಚಾಲುಕ್ಯ ಮನೆತನದಲ್ಲಿ ಮಹೇಂದ್ರನೆಂಬ ಬಿರುದನ್ನು ಹೊಂದಿದ್ದವರು ಇಬ್ಬರು ರಾಜರು ಮಾತ್ರ. ಅವರಾರೆಂದರೆ ಮೊದಲನೆಯ ಅಮ್ಮರಾಯ (ಕ್ರಿ.ಶ. ೯೧೮-೨೫) ಹಾಗೂ ಎರಡನೆಯ ಚಾಲುಕ್ಯ ಭೀಮ (೯೩೪-೪೫).[59] ಅಯ್ಯಪದೇವ ಮೊದಲನೆಯ ಅಮ್ಮರಾಯನೊಂದಿಗೆ ಯುದ್ಧಮಾಡಿ ಆತನನ್ನು ಸೋಲಿಸಿದನೆಂದು ಕಳಕಟ್ಟೂರು ಶಾಸನದಲ್ಲಿ ಹೇಳಿದೆ.[60] ಆದುದರಿಂದ ಈತ ಬೇಗೂರು ಶಾಸನದ ಬೀರಮಹೇಂದ್ರನಿರಲಾರ. ಎರಡನೆಯ ಚಾಲುಕ್ಯ ಭೀಮ ತನ್ನ ವೈರಿಗಳಲ್ಲಿ ಒಬ್ಬನಾದ ಅತಿ ಭಯಂಕರನಾದ ಅಯ್ಯಪದೇವನನ್ನು ಕೊಂದ ಎಂದು ಕಾಲಕುಂಬ್ರ ಶಾಸನದಲ್ಲಿ ಹೇಳಿದೆ.[61] ಈತನೇ ಬೇಗೂರು ಶಾಸನದ ಬೀರಮಹೇಂದ್ರನಾಗಿದ್ದರೆ ಈತ ಪಟ್ಟಕ್ಕೆ ಬಂದಕೂಡಲೆ ಗಂಗ ಎರೆಯಪ್ಪನ ಮೇಲೆ ದಂಡೆತ್ತಿಬಂದಿರಬೇಕು. ಏಕೆಂದರೆ ಈತ ಕ್ರಿ.ಶ. ಸು. ೯೩೪ರಲ್ಲಿ ಪಟ್ಟಕ್ಕೆ ಬಂದ. ಗಂಗ ಎರೆಯಪ್ಪನ ಕಡೆಯ ಕಾಲವೆಂದರೆ ಕ್ರಿ.ಶ. ೯೩೭.[62] ಆದುದರಿಂದ ಈತ ಕ್ರಿ.ಶ. ೯೩೪-೩೭ರಲ್ಲಿ ಗಂಗರಾಜ್ಯದ ಮೇಲೆ ದಂಡೆತ್ತಿಬಂದಿರಬೇಕು. ಇದುವರೆಗೆ ತಿಳಿದಿರುವಂತೆ ಅಯ್ಯಪದೇವನ

58 E.I. VII, p. 190

58 (a) E.C. VI, Bn. 83 ; E.I. VI, p. 45 ; Urd. I, p. 348

59 Sewell–*Historical Inscriptions of Southern India*, p. 269

60 S.I.I. IX. Pt. I, No. 38

61 E.I. VII, p. 190

62 Sewell : op. cit., p. 269, E. I. VI, p. 40

ಕಡೆಯ ಕಾಲವೆಂದರೆ ಕ್ರಿ.ಶ. ೯೩೨–೩೩. ಇಷ್ಟು ಹೊತ್ತಿಗೆ ಅಯ್ಯಪದೇವನಿಗೆ ಸಾಕಷ್ಟು ವಯಸ್ಸಾಗಿತ್ತು. ಪ್ರಾಯಶಃ ಅಯ್ಯಪದೇವ ಬೀರಮಹೇಂದ್ರನೊಂದಿಗೆ ತುಂಬೆಪಾಡಿಯಲ್ಲಿ ಕಾದಿ ಮಡಿದಿರಬಹುದು. ಹಾಗೂ ಬೇಗೂರು ಶಾಸನದ ಬೀರ ಮಹೇಂದ್ರ ಪೂರ್ವ ಚಾಲುಕ್ಯ ಮನೆತನದ ಎರಡನೆಯ ಭೀಮನಿರಬಹುದು.

ಅಯ್ಯಪದೇವನ ರಾಜ್ಯಭಾರಕಾಲ ಬಹಳ ದೀರ್ಘವಾದದ್ದು. ಈತ ಕ್ರಿ.ಶ. ೮೯೬ರಿಂದ ೯೩೫ರ ವರೆಗೆ, ಅಂದರೆ ಸು. ೩೯ ವರ್ಷಗಳ ದೀರ್ಘರಾಜ್ಯ ಭಾರವನ್ನು ಮಾಡಿದ. ಈತನ ಮಕ್ಕಳು ಹಾಗೂ ಮೊಮ್ಮಕ್ಕಳು ಈತನ ಕೈಕೆಳಗೆ ರಾಜ್ಯವಾಳುತ್ತಿದ್ದುದನ್ನು ನಾವು ನೋಡಿದ್ದೇವೆ. ಅಯ್ಯಪದೇವನಿಗೆ ನಾಯಬ್ಬೆ, ಹೆಳೆಯಬ್ಬೆ,[63] ಪೊಲ್ಲಬ್ಬರಸಿ [64]ಎಂಬ ಮೂವರು ಹೆಂಡತಿಯರು ಇದ್ದರು. ಪೊಲ್ಲಬ್ಬರಸಿ ಗಂಗಮನೆತನದವಳೆಂದು, ಅವಳ ಮಗನೇ ಬೀರನೊಳಂಬ ಅಣ್ಣಿಗನೆಂದು ಧರ್ಮಪುರಿಯ ಒಂದು ಶಾಸನದಲ್ಲಿ ಹೇಳಿದೆ.[65] ಅಯ್ಯಪದೇವನಿಗೆ ನೊಳಿಪ,[66] ಬೀರನೊಳಂಬ ಅಣ್ಣಿಗ ಹಾಗೂ ಈರಿವನೊಳಂಬ ದಿಲೀಪ[67] ಎಂಬ ಮೂವರು ಗಂಡುಮಕ್ಕಳಿದ್ದರು. ಇವರಲ್ಲಿ ಅಣ್ಣಿಗ ಬೀರನೊಳಂಬ, ಅಯ್ಯಪದೇವನ ಕೈಕೆಳಗೆ ಕ್ರಿ.ಶ. ೯೨೨ ರಿಂದಲೇ ರಾಜ್ಯವಾಳುತ್ತಿದ್ದ.[68] ಈತ ಕ್ರಿ.ಶ. ಸುಮಾರು ೯೪೦ರ ವರೆಗೆ ರಾಜ್ಯವಾಳಿ ರಾಷ್ಟ್ರಕೂಟ ಮೂರನೆಯ ಕೃಷ್ಣನಿಂದ ಸೋತುಹೋದ.[69] ಬೀರನೊಳಂಬ ಅಣ್ಣಿಗನ ತಮ್ಮನಾದ ಈರಿವ ನೊಳಂಬ ಈತನ ತರುವಾಯ ಕ್ರಿ.ಶ. ಸುಮಾರು ೯೪೨ರಲ್ಲಿ ಪಟ್ಟಕ್ಕೆ ಬಂದ.[70]

---

63 E. C. XII Si. 39
64 198 of 1910; S. I. I. IX Pt. 1 No. 23
65 ibid
66 E. C. IX Db. 9
67 E. C. XII Si. 28
68 S. I. I. IX Pt. I No. 57
69 E. I. V p. 199; I. A. V p. 192
70 E. C. XIL Si. 28

ನೊಳಂಬ–ಪಲ್ಲವರು

ಕ್ರಿ.ಶ. ೭೫೦ರಿಂದ ೧೦೫೫ರ ವರೆಗಿನ ಸುಮಾರು ಮೂರು ಶತಮಾನಗಳ ಕಾಲದಲ್ಲಿ ಕರ್ಣಾಟಕದ ಇತಿಹಾಸದಲ್ಲಿ ಭಾಗವಹಿಸಿದ ಸಾಮಂತ ರಾಜವಂಶಗಳಲ್ಲಿ ನೊಳಂಬ–ಪಲ್ಲವರ ಭೂಮಿಕೆ ಬಹು ಮಹತ್ತ್ವಪೂರ್ಣವಾಗಿದೆ. ಬಾಣರು, ರಾಷ್ಟ್ರಕೂಟರು, ಗಂಗರು, ಚಾಲುಕ್ಯರು ವೈದುಂಬರೇ ಮೊದಲಾದ ದಕ್ಷಿಣ ಭಾರತೀಯ ರಾಜಕುಲಗಳೊಡನೆ ನೊಳಂಬ–ಪಲ್ಲವರಿಗೆ ನಿಕಟ ಸಂಬಂಧವಿದ್ದಿತು. ಪಶ್ಚಿಮ ಗಂಗರ ಆಶ್ರಯ ಪಡೆದ ನೊಳಂಬ–ಪಲ್ಲವರು 'ನೊಳಂಬಾಳಿಗೆ ೧,೦೦೦' ಎಂಬ ನಾಡಿನ ಮಾಂಡಲಿಕರಾಗಿ ರಾಜಕೀಯ ಕಾರ್ಯಕಲಾಪಗಳನ್ನು ಪ್ರಾರಂಭಿಸಿದರು. ಈಗಿನ ಆಂಧ್ರಪ್ರದೇಶದ ಅನಂತಪುರವೂ ಮೈಸೂರಿನ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳೂ ಈ ನಾಡಿನಲ್ಲಿ ಅಂತರ್ಗತವಾಗಿದ್ದುವು. 'ನೊಳಂಬಾಳಿಗೆ ೧,೦೦೦' ಎಂದರೆ '೧,೦೦೦ ಹಳ್ಳಿಗಳಿರುವ ನೊಳಂಬಾಳಿಗೆ', ಎಂದು ಅರ್ಥ. ಮೂಡಲಲ್ಲಿ ಪೆನ್ನಾರ ನದಿಯೂ ಪಶ್ಚಿಮದಲ್ಲಿ ಹಗರಿ ನದಿಯೂ ಈ ಪ್ರದೇಶದ ಗಡಿಗಳಾಗಿದ್ದಿರಬೇಕು. ನೊಳಂಬರ ಪ್ರಾಬಲ್ಯವು ವರ್ಧಿಸಿದಂತೆಲ್ಲಾ ಅವರ ರಾಜ್ಯಕ್ಷೇತ್ರವೂ ವಿಸ್ತರಿಸುತ್ತಾ ಹೋಗಿ, ಹತ್ತನೆಯ ಶತಮಾನದ ಅಂತ್ಯದಲ್ಲಿ ೩೨,೦೦೦ ಹಳ್ಳಿಗಳ ಪ್ರದೇಶವಾಗಿ ರೂಪಿತವಾಯಿತು. ಈ ನೊಳಂಬಾಳಿಗೆ ೩೨,೦೦೦ ಎಂಬ ಪ್ರಾಂತವು ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಂದಲೂ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಿಂದಲೂ ಕೂಡಿದುದಾಗಿತ್ತು.

ಕರ್ಣಾಟಕದಲ್ಲಿ ಪಲ್ಲವರ ಪ್ರಭುತ್ವವು ನಿರಸಿತವಾದ ಮೇಲೆ, ಮೈಸೂರಿನ ಉತ್ತರ ಭಾಗದ ಮತ್ತು ಈಶಾನ್ಯಭಾಗದ, ಎಂದರೆ ಈಗಿನ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ, ಆಧಿಪತ್ಯವು 'ನೊಳಂಬ (ನೊಣಂಬ)' ರಾಜಕುಲಕ್ಕೆ ಸೇರಿತು. ಆ ರಾಜ್ಯಕ್ಕೆ 'ನೊಳಂಬವಾಡಿ' ಇಲ್ಲವೆ 'ನೊಳಂಬವಾಡಿ ೩೨,೦೦೦' ಎಂದು ಅವರ ಹೆಸರೇ ಪ್ರಾಪ್ತವಾಯಿತು. ನೊಳಂಬವಾಡಿಯು ಸೇಲಂ ಜಿಲ್ಲೆಯ ಬಹು ಭಾಗಕ್ಕೂ ವಿಸ್ತರಿಸಿದ್ದಿತೆಂದು ಆ ಜಿಲ್ಲೆಯ ಧರ್ಮಪುರಿಯಲ್ಲಿ ಸಿಕ್ಕಿದ ಶಾಸನಗಳಿಂದ ತಿಳಿದುಬರುವುದು. ಸೀರ್ಯ ತಾಲ್ಲೂಕಿನ ಬಡಗು ಗಡಿಯಲ್ಲಿರುವ ಹೆಂಜೂರು (ಇಲ್ಲವೆ ಪೆಂಜೂರು) ಅಥವಾ ಹೇಮಾವತಿ ನೊಳಂಬರ ಮೂಲ ರಾಜಧಾನಿಯಾಗಿದ್ದಿತು[1].

[1] ಎಂ. ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ: ಕರ್ಣಾಟಕದ ಇತಿಹಾಸ ದರ್ಶನ, ಕರ್ಣಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು, ಪು. ೧೫೨

ಎಚ್. ಎ. ಖಾನ್

ಗ್ರಂಥಾಲಯ ಮತ್ತು ಸಮಾಜ

ಗ್ರಂಥಾಲಯ ಜನಸಾಮಾನ್ಯರ ಬಳಕೆಗೆ ಬಂದದ್ದು ಇಪ್ಪತ್ತನೆಯ ಶತಮಾನದಲ್ಲಿ ಯಾದರೂ ಪ್ರಮುಖ ದೇಶಗಳಲ್ಲಿ ಪ್ರಾಚೀನಕಾಲದಿಂದಲೂ ಗ್ರಂಥಾಲಯಗಳಿದ್ದು ದನ್ನು ನಾವು ವಿವಿಧ ದೇಶಗಳ ಸಾಮಾಜಿಕ ಇತಿಹಾಸವನ್ನು ಅವಲೋಕಿಸಿದಾಗ ಕಾಣುತ್ತೇವೆ. ಗ್ರಂಥಾಲಯ ಹಾಗೂ ಸಮಾಜ—ಇವೆರಡರ ಸಂಬಂಧ ಹೇಗೆ ಬೆಳೆ ಯಿತು, ಅದಕ್ಕೆ ಕಾರಣವೇನು, ಯಾವ ರೀತಿಯಲ್ಲಿ ಈ ಸಂಬಂಧವಿದೆ ಮತ್ತು ಆಧುನಿಕ ಸಮಾಜದಲ್ಲಿ ಇದರ ಪಾತ್ರವೇನು—ಎಂಬ ಕೆಲವು ಪ್ರಶ್ನೆಗಳು ಉದ್ಭವಿ ಸುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ತ್ರಿಕೋನ ಸಂಬಂಧ

'ಗ್ರಂಥಾಲಯ', 'ಗ್ರಂಥಪಾಲಕ' ಮತ್ತು 'ಸಮಾಜ' ಎಂಬ ಶಬ್ದಗಳನ್ನು ನಾವು ಪ್ರತಿದಿನವೂ ಹಲವಾರು ಸಾರಿ ಕೇಳಿರಬಹುದು, ಓದಿರಬಹುದು ಅಥವಾ ಉಪಯೋಗಿಸಿರಬಹುದು. ಈ ಶಬ್ದಗಳ ಅರ್ಥವೇನೆಂಬುದನ್ನು ತಿಳಿಯುವುದು ಮುಖ್ಯ.

ಗ್ರಂಥಾಲಯದ ಕಾರ್ಯಭಾರಗಳನ್ನು ಗ್ರಂಥಾಧಿಕಾರಿಗಳೂ ಇತರರೂ ವಿವಿಧ ರೀತಿಗಳಲ್ಲಿ ಹೇಳಿದ್ದಾರೆ. ಅವೆಲ್ಲವನ್ನೂ ಸ್ಥೂಲವಾಗಿ ಮುಂದೆ ಕಾಣಿ ಸಿರುವ ನಾಲ್ಕು ಪ್ರಕಾರಗಳಾಗಿ ವಿಂಗಡಿಸುವುದು ಸಾಧ್ಯ: ೧ ಗ್ರಂಥಾಲಯಕ್ಕೆ ತಕ್ಕ 'ಸಾಮಗ್ರಿ'ಯ ಸಂಗ್ರಹಣೆ (ಕಲೆಕ್ಷನ್ ಆಫ್ ಮಟೀರಿಯಲ್), ೨ ಸಾಮಗ್ರಿ ಸಂರಕ್ಷಣೆ (ಪ್ರಿಸರ್ವೇಷನ್ ಆಫ್ ಮಟೀರಿಯಲ್), ೩ ಸಾಮಗ್ರಿ ಸಂಘಟನೆ (ಆರ್ಗನೈಸೇಷನ್ ಆಫ್ ಮಟೀರಿಯಲ್) ಮತ್ತು ೪ ಸಾಮಗ್ರಿ ಪ್ರಸಾರಣ (ಡಿಸ್ಸೆಮಿನೇಷನ್ ಆಫ್ ಮಟೀರಿಯಲ್).


ಯಾವ ಸಂಸ್ಥೆಯಲ್ಲಿ ಈ ಕಾರ್ಯಗಳು ನೆರವೇರುತ್ತವೆಯೋ ಅದನ್ನು 'ಗ್ರಂಥಾಲಯ'ವೆಂದೂ, ಯಾರ ಮೂಲಕ ಈ ಕಾರ್ಯಗಳು ನೆರವೇರುವುವೋ

ಅವನನ್ನು 'ಗ್ರಂಥಪಾಲಕ'ನೆಂದೂ ಕರೆಯುತ್ತಾರೆ. ಕೆಲವು ಜನ ಕೆಲವು ನಿಯಮಿತ ಉದ್ದೇಶಗಳಿಗಾಗಿ ಒಂದುಗೂಡುವುದೇ 'ಸಮಾಜ'ವೆಂದು ಸ್ಥೂಲವಾಗಿ ಹೇಳಬಹುದು.

ಮೇಲ್ಕಾಣಿಸಿದ ಅರ್ಥಗಳನ್ನು ಸ್ವಲ್ಪ ದೀರ್ಘವಾಗಿ ವಿಚಾರಿಸಿದ ಪಕ್ಷದಲ್ಲಿ ಕೆಲವು ಪ್ರಶ್ನೆಗಳು ತಲೆದೋರುತ್ತವೆ. ಗ್ರಂಥಾಲಯ ಅಥವಾ ಗ್ರಂಥಪಾಲಕನಿಗೂ ಸಮಾಜಕ್ಕೂ ಸಂಬಂಧವಿದೆಯೇ? ಇದ್ದರೆ ಅದು ಯಾವ ತರಹದ ಸಂಬಂಧ? ಈ ಪ್ರಶ್ನೆಗಳನ್ನು ನಾವು ನೇರವಾಗಿ ಮೂರು ಪ್ರಮೇಯಗಳಿಂದ ಉತ್ತರಿಸಬಹುದು: ಗ್ರಂಥಪಾಲಕನಿರುವುದು ಗ್ರಂಥಾಲಯದಿಂದ; ಗ್ರಂಥಾಲಯವಿರುವುದು ಸಮಾಜದಿಂದ: ಸಮಾಜ 'ಇರುವುದು' ಸಾಮಾಜಿಕ ಸಂಸ್ಥೆಗಳಿಂದ (ಉದಾಹರಣೆ: ಗ್ರಂಥಾಲಯ).

ಈ ಪ್ರಮೇಯಗಳ ಫಲಿತವಾದ ನಿಗಮನಗಳಿಂದ ಸಮಾಜಕ್ಕೂ ಗ್ರಂಥಾಲಯಗಳಿಗೂ ಇರುವ ಸಂಬಂಧದ ಸ್ವರೂಪವನ್ನು ತಿಳಿದುಕೊಳ್ಳುವುದು ಸಾಧ್ಯ. ಗ್ರಂಥಪಾಲಕ ಸ್ವತಃ ಯಾವ ಪ್ರಾಮುಖ್ಯವನ್ನೂ ತಳೆಯಲಾರ. ಗ್ರಂಥಾಲಯದ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವನಿಗೆ ಸಮಾಜದಲ್ಲಿ ಒಂದು ಪ್ರಾಮುಖ್ಯ ಅಥವಾ ಮಹತ್ತ್ವ ಲಭ್ಯವಾಗುತ್ತದೆ. ಹೀಗೆಯೇ, ಗ್ರಂಥಾಲಯದಲ್ಲಿ ಸಾವಿರಾರು ಗ್ರಂಥಗಳಿದ್ದಮಾತ್ರಕ್ಕೆ ಅದು ತನ್ನ ನಿಜಾರ್ಥದಲ್ಲಿ ಗ್ರಂಥಾಲಯವೆನ್ನಿಸಲಾರದು; ಆದರೆ ಅದೇ ಗ್ರಂಥಾಲಯ ಸಂಗ್ರಹಿಸಿದ ಗ್ರಂಥಗಳನ್ನು ಗ್ರಂಥಾಲಯಸಿಬ್ಬಂದಿಯ ಮೂಲಕ ಸಮಾಜದ ಆವಶ್ಯಕತೆಗಳನ್ನು ಪೂರೈಸಿದರೆ ಅದೊಂದು ಸಾಮಾಜಿಕ ಸಂಸ್ಥೆ ಎಂದು ಪರಿಗಣಿತವಾಗುತ್ತದೆ. ಗ್ರಂಥಾಲಯದಲ್ಲಿ ಸಂಘಟಿಸಿದ ಪುಸ್ತಕಗಳನ್ನು ಸಾಮಾಜಿಕರು ಓದಿ, ತಮ್ಮ ನಿತ್ಯಜೀವನದಲ್ಲಿ, ಕಸಬುಗಳಲ್ಲಿ ಉಪಯೋಗಿಸಿದರೆ ಆ ಸಮಾಜದ ಜನ ಸಂತುಷ್ಟರಾಗಿ ಮತ್ತು ಪ್ರಗತಿಪರರಾಗಿ ಬಾಳುತ್ತಾರೆ. ಆದ್ದರಿಂದಲೇ ಒಂದು ಸಮಾಜ ಪ್ರಗತಿಪರವಾಗಿದೆಯೋ ಇಲ್ಲವೋ ಎಂಬುದನ್ನು ಅಳೆಯಬೇಕಾದರೆ ಆ ಸಮಾಜದ ಗ್ರಂಥಾಲಯಗಳು ಒಂದು ಸಾಧನ. ಈ ಮಾತನ್ನು ಸಿದ್ಧಪಡಿಸಲು ನಾವು ಬಹು ಕಷ್ಟಪಡಬೇಕಾಗಿಲ್ಲ. ಪಾಶ್ಚಾತ್ಯ ದೇಶಗಳ ಕಡೆಗೆ ದೃಷ್ಟಿ ಹರಿಸಿದರೆ ಸಾಕು. ಗ್ರಂಥಾಲಯ, ಅದರಲ್ಲಿಯೂ ಸಾರ್ವಜನಿಕ ಗ್ರಂಥಾಲಯ, ಅಲ್ಲಿಯ ಸಮಾಜದ ಒಂದು ಪ್ರಮುಖ ಅಂಗವಾಗಿರುವುದನ್ನು ಕಾಣುತ್ತೇವೆ.

ಹೀಗೆ ಗ್ರಂಥಪಾಲಕ, ಗ್ರಂಥಾಲಯ ಮತ್ತು ಸಮಾಜ ಇವು ಸಮಾಜ ಘಟನೆಯ ತ್ರಿಕೋನಗಳು. ಒಂದೊಂದೂ ಇನ್ನೊಂದನ್ನು ಪರಸ್ಪರವಾಗಿ ಅವಲಂಬಿಸುತ್ತದೆ. ಸಮಾಜದ ಬೆಳೆವಣಿಗೆಗೆ ಗ್ರಂಥಾಲಯ ಅತ್ಯಗತ್ಯ; ಗ್ರಂಥಾಲಯದ ಬೆಳೆವಣಿಗೆಗೆ ಗ್ರಂಥಪಾಲಕ ಅತ್ಯಗತ್ಯ; ಯಾವ ಸಮಾಜ ಗ್ರಂಥಾಲಯಗಳನ್ನು ಮತ್ತು ಇದರಿಂದಾಗಿ ಗ್ರಂಥಬರಹಗಳನ್ನು ಕಡೆಗಣಿಸಿದೆಯೋ, ಆ ಸಮಾಜವನ್ನು



ಬೇರೆಯವರು ಕಡೆಗಣಿಸಿದ್ದಾರೆ. ಸಾಮಾಜಿಕ ಇತಿಹಾಸದಲ್ಲಿ ಇಂಥ ಉದಾಹರಣೆಗಳನ್ನು ಆಗಾಗ್ಗೆ ನೋಡಬಹುದು. ಇತ್ತೀಚಿಗೆ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಸಂಭವಿಸಿದ ಒಂದು ಘಟನೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಉತ್ತರ ಕಾರೊಲೈನ ಪ್ರದೇಶದ ಒಂದು ಹಳ್ಳಿಯ ಜನ ಟ್ಯಾನಿಕ್ ಆಮ್ಲವನ್ನು ಸಾಂಪ್ರದಾಯಿಕ ರೀತಿಯಿಂದ ತಯಾರಿಸುವುದರಲ್ಲಿ ಬಹಳ ಹೆಸರುವಾಸಿಯಾಗಿದ್ದರು. ನೆರೆಹೊರೆಯ ಜನರಲ್ಲಿ ಈ ಜನಾಂಗಕ್ಕೆ ಬಹಳ ಮನ್ನಣೆಯಿತ್ತು. ಆದರೆ ಕೆಲಕಾಲದ ಅನಂತರ ಹತ್ತಿರದ ಊರಿನ ಜನ ಯೂರೋಪಿನಲ್ಲಿ ಪ್ರಕಟವಾದ ಕೆಲವು ಗ್ರಂಥಗಳನ್ನು ಓದಿ ಟ್ಯಾನಿಕ್ ಆಮ್ಲವನ್ನು ಬೇರೆ ರೀತಿಯಿಂದ ಉದ್ಯೋಗಪ್ರಮಾಣವಾಗಿ ತಯಾರಿಸುವ ವಿಧಾನ ಕಂಡುಹಿಡಿದರು. ಇವರಿಬ್ಬರ ಸ್ಪರ್ಧೆಯಲ್ಲಿ ಸಾಂಪ್ರದಾಯಿಕ ರೂಢಿಯಿಂದ ತಯಾರುಮಾಡುತ್ತಿದ್ದ ಜನಾಂಗ ಹೊಸ ಜ್ಞಾನದ ಬೆಳಕನ್ನು ಪಡೆಯದಿದ್ದುದರಿಂದ ಹಿಂದುಳಿಯಬೇಕಾಯಿತು. ಜ್ಞಾನದ ಬೆಳಕನ್ನು ಯಾರು ಅಲಕ್ಷಿಸುವರೋ ಅದರ ಪರಿಣಾಮ ಎಷ್ಟು ಅಹಿತಕಾರಿಯಾಗುವುದು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಜ್ಞಾನವಿಸರಣದಲ್ಲಿ ಪ್ರಮುಖ ಪಾತ್ರ ಈಗಿನ ಕಾಲದಲ್ಲಿ ಗ್ರಂಥಾಲಯಗಳಿಗೆ ಸೇರಿದ್ದು. ಈ ಸಾಮಾಜಿಕ ಸಂಸ್ಥೆಗಳನ್ನು ನಾವು ಅಚ್ಚುಕಟ್ಟಾಗಿ ಕಟ್ಟಿ, ಪೋಷಿಸಿ, ಬೆಳೆಸಿದರೆ ಒಂದು ಸಮಾಜ ಮುನ್ನಡೆಯಲಿಕ್ಕೆ ದಾರಿಮಾಡಿದಂತಾಗುತ್ತದೆ.

ಸಂಬಂಧದ ಇತಿಹಾಸ

ಭಾರತ, ಚೀನ, ಗ್ರೀಸ್ ಮತ್ತು ಈಜಿಪ್ಟ್‌ಗಳಲ್ಲಿ ಪ್ರಾಚೀನ ಕಾಲದಿಂದಲೂ ಗ್ರಂಥಾಲಯಗಳು ಇದ್ದುದನ್ನು ನಾವು ಕಾಣಬಹುದು. ಹೀಗಿದ್ದಪಕ್ಷದಲ್ಲಿ ಈ ದೇಶಗಳನ್ನು ಈಗ ಮುಂದುವರಿದ ರಾಷ್ಟ್ರಗಳೆಂದು ಏಕೆ ಎಣಿಸಲಾಗುವದಿಲ್ಲ ? ಈ ದೇಶಗಳು ಏಕೆ ಹಿಂದುಳಿದುವು ? ಇನ್ನೊಂದು ರೀತಿಯಿಂದ ಹೇಳಬೇಕಾದರೆ, ಗ್ರಂಥಾಲಯ ಮತ್ತು ಸಮಾಜ ಇವುಗಳ ಸಂಬಂಧ ಇತ್ತೀಚಿನದೋ ? ಹಾಗಿದ್ದರೆ, ಮೊದಲು ಇವೆರಡರ ಸಂಬಂಧವೇನಿತ್ತು ? ಈ ಪ್ರಶ್ನೆಗಳನ್ನು ಉತ್ತರಿಸಲು ಮಾನವನ ಸಾಮಾಜಿಕ ಇತಿಹಾಸವನ್ನು ಗಮನಿಸಬೇಕಾಗುತ್ತದೆ.

ಇತಿಹಾಸದ ಬೇರೆಬೇರೆ ಕಾಲಗಳಲ್ಲಿದ್ದ ಸಾಮಾಜಿಕ ರಚನೆ, ಗ್ರಂಥಾಲಯ ರಚನೆ ಮತ್ತು ಗ್ರಂಥಸಂಗ್ರಹಣ, ಅವನ್ನು ಉಪಯೋಗಿಸುತ್ತಿದ್ದ ಜನಾಂಗ ಮತ್ತು ಮುಖ್ಯ ಸಾಮಾಜಿಕ ಹಾಗೂ ವೈಜ್ಞಾನಿಕ ಬೆಳವಣಿಗೆಗಳ ಪ್ರಭಾವಗಳನ್ನು ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ :

ಕಾಲ	ಸಮಾಜದ ಪ್ರರೂಪ	ಗ್ರಂಥಾಲಯದ ಪ್ರರೂಪ	ಗ್ರಂಥಾಲಯ ಸಾಮಗ್ರಿಯ ಪ್ರರೂಪ	ಸೇವೆಪಡೆವ ವರ್ಗ	ಮುಖ್ಯ ಪ್ರಭಾವಗಳು
ಪ್ರಾಚೀನಯುಗ	ಕೃಷಿ ಪ್ರಧಾನ	ಧಾರ್ಮಿಕ, ಮಠೀಯ ಮತ್ತು ಅರಮನೆಯ ಗ್ರಂಥಾಲಯಗಳು	ಜೇಡಿಮಣ್ಣಿನ ಫಲಕಗಳು, ಶಿಲಾಶಾಸನಗಳು, ಚರ್ಮದ ಹಸ್ತಪ್ರತಿಗಳು, ಪಪೈರಸ್ ಹಸ್ತಪ್ರತಿಗಳು, ಓಲೆಯ ಗರಿಗಳು, ತಾಮ್ರಪಟಗಳು	ಧಾರ್ಮಿಕರು, ಮಠೀಯರು, ರಾಜರು ಮುಂತಾದವರು	೧ ಮಾನವ ತನ್ನ ಮೂಲ ಅಗತ್ಯಗಳ ಪೂರೈಕೆಯಲ್ಲೇ ತೊಡಗಿದ್ದ. ೨ ಜ್ಞಾನ ಕೇವಲ ಕೆಲವರ ಸೊತ್ತಾಗಿತ್ತು.
ಮಧ್ಯಯುಗ	ಕೃಷಿ, ಕೈಗಾರಿಕೆ ಪ್ರಧಾನ	ಸಾಂಸ್ಥಿಕ ಗ್ರಂಥಾಲಯಗಳು ಉದಾ: ಕುಶಲಕರ್ಮಿಗಳ ಸಂಸ್ಥೆಗಳ ಗ್ರಂಥಾಲಯಗಳು	ಮುದ್ರಿತ ಗ್ರಂಥಗಳು	ಧಾರ್ಮಿಕರು, ವೃತ್ತಿನಿರತರು	೧ ಕಾಗದ ಮತ್ತು ಮುದ್ರಣ ತಂತ್ರಜ್ಞಾನ ೨ ಕೈಗಾರಿಕಾ ಕ್ರಾಂತಿ ೩ ಫ್ರೆಂಚ್ ಕ್ರಾಂತಿ
ನೂತನಯುಗ	ಕೈಗಾರಿಕೆ ಮತ್ತು ವೈಜ್ಞಾನಿಕ ಪ್ರಧಾನ	ಸಾಮಾಜಿಕ ಗ್ರಂಥಾಲಯಗಳು, ಶೈಕ್ಷಣಿಕ ಗ್ರಂಥಾಲಯಗಳು, ವಿಶಿಷ್ಟ ಗ್ರಂಥಾಲಯಗಳು	೧ ಅಚ್ಚಾದ ಗ್ರಂಥಗಳು ೨ ಮುದ್ರಣೇತರ ಸಾಮಗ್ರಿ (ಅಚ್ಚಾಗದ ಸಾಮಗ್ರಿ, ದೃಕ್ ಶ್ರವಣ ಸಾಮಗ್ರಿ, ಭಿತ್ತಿಪತ್ರ, ಚಿತ್ರ, ಚಲನಚಿತ್ರ, ಮುದ್ರಿಕೆ, ಇತ್ಯಾದಿ)	ಜನಸಾಮಾನ್ಯರು, ವಿದ್ಯಾರ್ಥಿ ಮತ್ತು ಅಧ್ಯಾಪಕ ವೃಂದ, ವಿಜ್ಞಾನಿಗಳು	ವಿಜ್ಞಾನ ತಂತ್ರಜ್ಞಾನಗಳಲ್ಲಿ ಪ್ರಗತಿ

ಪ್ರಾಚೀನ ಕಾಲದಲ್ಲಿ ನಾವು ಕಾಣುವುದು ಕೃಷಿಕ ಸಮಾಜ. ಆ ಕಾಲದಲ್ಲಿ ಮಾನವ ತನ್ನ ಮೂಲ ಆವಶ್ಯಕತೆಗಳಾದ ಆಹಾರ, ಬಟ್ಟೆ ಮತ್ತು ವಸತಿ ಇವನ್ನು ಪೂರೈಸುವುದರಲ್ಲಿ ಸತತವಾಗಿ ಶ್ರಮಿಸಬೇಕಾಗಿತ್ತು. ಆದಾಗ್ಯೂ ರಾಜರಿಗೆ ಮತ್ತು ಧಾರ್ಮಿಕರಿಗೆ ಮೀಸಲಾದ ಕೆಲವು ಗ್ರಂಥಾಲಯಗಳಿದ್ದುವು. ಆಗಿನ ಗ್ರಂಥಾಲಯ ಗಳಲ್ಲಿ ಜೇಡಿಮಣ್ಣಿನ ಫಲಕಗಳು, ಶಿಲಾಶಾಸನಗಳು, ಚರ್ಮ, ಪಪೈರಸ್ ಮತ್ತು ಓಲೆಗರಿಯ ಹಸ್ತಪ್ರತಿಗಳು, ತಾಮ್ರಪಟಗಳು ಮುಂತಾದವನ್ನು ಸಂಗ್ರಹಿಸಡಲಾಗು ತ್ತಿತ್ತು. ಆದರೆ ಇವೆಲ್ಲವೂ ಧಾರ್ಮಿಕರ ಹಾಗೂ ಅರಸರ ಸೊತ್ತಾಗಿದ್ದವು. ವೈಯಕ್ತಿಕವಾಗಿ ಮಾನವನಿಗೆ ಜ್ಞಾನದ ಬಗ್ಗೆ ಯಾವ ಹಕ್ಕುಗಳೂ ಇರಲಿಲ್ಲ. ಹೀಗಾಗಿ ಆ ಕಾಲದ ಸಮಾಜದಲ್ಲಿ ಮಾನವನಿಗೂ ಗ್ರಂಥಾಲಯಗಳಿಗೂ ಬಹಳ ದೂರದ ಸಂಬಂಧವಿತ್ತು.

ಮಧ್ಯ ಮತ್ತು ಮಧ್ಯೋತ್ತರ ಯುಗಗಳಲ್ಲಿ ಸಮಾಜ ರಚನೆ ಪರಿವರ್ತನೆ ಗೊಂಡಿತು. ಮಾನವ ಇನ್ನೂ ಮುಖ್ಯವಾಗಿ ಕೃಷಿಯಲ್ಲಿಯೇ ತೊಡಗಿದ್ದರೂ ಅವನು ಅದಕ್ಕೆ ಹೊಸ ಹಾಗು ಸುಧಾರಿಸಿದ ಉಪಕರಣಗಳನ್ನು ಶೋಧಿಸಿದ. ಕಾಗದ ಮತ್ತು ಅಚ್ಚಿನ ಕಲೆ ಕಲಿತ ಮೇಲೆ ಮಾನವ ತನ್ನ ಆಚಾರವಿಚಾರಗಳನ್ನು ಕಾಗದದ ಮೇಲೆ ಬರೆಯಹತ್ತಿದ. ಅವನ್ನು ಪುಸ್ತಕಗಳ ರೂಪದಲ್ಲಿ ಪ್ರಕಟಿಸಿದ. ಇದರಿಂದಾಗಿ ಜನಸಾಮಾನ್ಯರಲ್ಲಿ ಜ್ಞಾನಾಭಿವೃದ್ಧಿ ಹೆಚ್ಚುಹೆಚ್ಚಾಗಿ ಬೆಳೆಯಿತು. ಈ ಸಮಯದಲ್ಲಿ ಮಾನವಜೀವನದ ದೃಷ್ಟಿಕೋನವನ್ನೂ ಜೀವನವಿಧಾನವನ್ನೂ ಬದಲಾಯಿಸುವಂಥ ಎರಡು ಕ್ರಾಂತಿಗಳು ಸಂಭವಿಸಿದುವು: ಒಂದು ಫ್ರೆಂಚ್ ಕ್ರಾಂತಿ, ಇನ್ನೊಂದು ಕೈಗಾರಿಕಾ ಕ್ರಾಂತಿ. ಫ್ರೆಂಚ್ ಕ್ರಾಂತಿ ಎಲ್ಲ ಮಾನವರ ಆಜನ್ಮ ಸಿದ್ಧಹಕ್ಕುಗಳಾದ ಸ್ವಾತಂತ್ರ್ಯ, ಸಮತೆ ಮತ್ತು ಭ್ರಾತೃತ್ವಗಳನ್ನು ಘೋಷಿಸಿತು. ಕೈಗಾರಿಕಾ ಕ್ರಾಂತಿಯಿಂದ ಯಂತ್ರಯುಗದ ಆರಂಭವಾಯಿತು. ಈ ಕ್ರಾಂತಿಗಳ ಪ್ರಭಾವ ಸಮಾಜ ಹಾಗೂ ಗ್ರಂಥಾಲಯಗಳ ಮೇಲೆ ಆಗದೆ ಇರಲಿಲ್ಲ. ಕೈಗಾರಿಕಾ ಕ್ರಾಂತಿಯ ಪ್ರಭಾವದಿಂದ ಕೃಷಿಪ್ರಧಾನ ಸಮಾಜ ಕಾಲಾನುಕ್ರಮದಲ್ಲಿ ಕೈಗಾರಿಕಾ ಸಮಾಜವಾಗಿ ರೂಪುಗೊಂಡಿತು. ಜನಸಾಮಾನ್ಯರಲ್ಲಿ ಜ್ಞಾನ ಮತ್ತು ಕೈಗಾರಿಕಾ ಪ್ರಸಾರ ಬೆಳೆಯಿತು. ಇದರಿಂದಾಗಿ ಸಾಂಸ್ಥಿಕ (ಇನ್‌ಸ್ಟಿಟ್ಯೂ ಷನಲ್) ಗ್ರಂಥಾಲಯಗಳು ಸ್ಥಾಪನೆಗೊಂಡವು. ಇವುಗಳಲ್ಲಿ ನಾನಾ ಕಸಬುಗಳಿಗೂ ಉದ್ಯೋಗಗಳಿಗೂ ಸಂಬಂಧಿಸಿದ ಪುಸ್ತಕಗಳೂ ಉಪಕರಣಗಳೂ ಸಂಗ್ರಹೀತ ವಾಗಿದ್ದುವು. ಈ ಗ್ರಂಥಾಲಯಗಳನ್ನು ಮುಖ್ಯವಾಗಿ ಕಸಬುದಾರರೂ ಔದ್ಯೋಗಿಗಳೂ ಉಪಯೋಗಿಸುತ್ತಿದ್ದರು.

ಜ್ಞಾನಪ್ರಸಾರ, ಪುಸ್ತಕ ಮತ್ತು ಪುಸ್ತಕ ಭಂಡಾರಗಳು ಹೆಚ್ಚಾದಂತೆ ಕೆಲವರು ವಿಜ್ಞಾನದ ವಿಷಯಗಳಲ್ಲಿ ಸಂಶೋಧನೆಗೆ ಹೆಚ್ಚು ಗಮನ ನೀಡಿದರು. ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದೊಂದಿಗೆ ಸ್ಪರ್ಧಿಸಲು ವಿಜ್ಞಾನದ ಬೆಳವಣಿಗೆಯೇ

ಸಾಧನವಾಯಿತು. ಇದರಿಂದಾಗಿ ಈಗ ಪ್ರಚಲಿತವಿರುವ ಸಮಾಜವನ್ನು ವಿಜ್ಞಾನ ಸಮಾಜವೆಂದೂ, ಈ ಯುಗವನ್ನು ವಿಜ್ಞಾನಯುಗವೆಂದೂ ಕರೆಯಬಹುದಾಗಿದೆ. ನೂತನ ಸಮಾಜದ ಬೇಡಿಕೆಗಳನ್ನು ಪೂರೈಸಲು ವಿವಿಧ ಗ್ರಂಥಾಲಯಗಳು ಹುಟ್ಟಿ ಬೆಳೆದುವು. ಇವುಗಳಲ್ಲಿ ಮುಖ್ಯವಾದವೆಂದರೆ ಸಾರ್ವಜನಿಕ ಗ್ರಂಥಾಲಯ, ಶೈಕ್ಷಣಿಕ ಗ್ರಂಥಾಲಯ ಮತ್ತು ವಿಶೇಷ ಗ್ರಂಥಾಲಯ.

ಓದುಬರಹಗಳು ತನ್ನ ಮೂಲಭೂತ ಹಕ್ಕುಗಳೆಂದು ಮಾನವನೀಗ ಭಾವಿಸಿದ್ದಾನೆ. ಇವನ್ನು ಪೂರೈಸಲು ಅವನಿಗಾಗಿ ಸಾರ್ವಜನಿಕ ಗ್ರಂಥಾಲಯಗಳು ಸ್ಥಾಪಿತವಾದುವು. ಈ ಗ್ರಂಥಾಲಯಗಳಲ್ಲಿ ಯಾವದೇ ಶುಲ್ಕ ಕೊಡದೆ ಅವನು ತನ್ನ ಜ್ಞಾನಾಭಿವೃದ್ಧಿ ಮಾಡಿಕೊಳ್ಳಲಾರಂಭಿಸಿದ. ಇವು ಅವನನ್ನು ತನ್ನ ಕಸಬನ್ನು ಉಚ್ಚರೀತಿಯಲ್ಲಿ ನಿರ್ವಹಿಸುವುದಕ್ಕೆ, ಸಮಾಜಕ್ಕೆ ತನ್ನ ಹೊಣೆಗಾರಿಕೆ ಏನೆಂಬು ದನ್ನು ಅರಿತು ಸುಸಂಘಟಿತವಾದ ಸಮಾಜವನ್ನು ಕಟ್ಟಲಿಕ್ಕೆ ಮತ್ತು ಸುಖವಾದ ಬಾಳು ಸಾಗಿಸಲಿಕ್ಕೆ ದಾರಿ ತೋರಿದುವು.

ಬೇರೆಬೇರೆ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾದಂತೆ, ಅವುಗಳಲ್ಲಿ ಆಯಾ ತರಹದ ಶೈಕ್ಷಣಿಕ ಗ್ರಂಥಾಲಯಗಳೂ ಸ್ಥಾಪಿತವಾದುವು. ಶಾಲಾ ಗ್ರಂಥಾಲಯ ಗಳು, ಕಾಲೇಜು ಗ್ರಂಥಾಲಯಗಳು, ವಿಶ್ವವಿದ್ಯಾಲಯ ಗ್ರಂಥಾಲಯಗಳು ಅಲ್ಲಲ್ಲಿ ಬೆಳೆಯತೊಡಗಿದುವು. ಇವೆಲ್ಲವೂ ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡುವಲ್ಲಿ ಮಹತ್ತ್ವದ ಪಾತ್ರವಹಿಸುತ್ತವೆ. ಇವಲ್ಲದೆ ವಿಜ್ಞಾನ ಸಂಸ್ಥೆಗಳ ಬೇಡಿಕೆಗಳು ವಿಶಿಷ್ಟ ರೀತಿಯವಾದ್ದರಿಂದ, ಇತ್ತೀಚೆಗೆ ವಿಶೇಷ ಗ್ರಂಥಾಲಯಗಳೂ ಸ್ಥಾಪಿತ ವಾಗಿವೆ. ವಿಜ್ಞಾನ ಗ್ರಂಥಾಲಯ, ವೃತ್ತಪತ್ರಿಕೆಗಳ ಗ್ರಂಥಾಲಯ, ಫಿಲ್ಮ್‌ಗಳ ಗ್ರಂಥಾಲಯ ಇವನ್ನು ಈ ಸರಣಿಯಲ್ಲಿ ಸೇರಿಸಬಹುದು. ಇವು ವಿಶಿಷ್ಟವಾದ ರೀತಿಯಲ್ಲಿ ತಮ್ಮ ತಮ್ಮ ಓದುಗರಿಗೆ ಸಹಾಯ ನೀಡುತ್ತವೆ.

ಮೇಲೆ ಹೇಳಿದ ವಿವರಣೆಯಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದಲ್ಲಿ ಗ್ರಂಥಾಲಯ ಮತ್ತು ಸಮಾಜಗಳ ನಡುವೆ ದೂರವೂ ಪರೋಕ್ಷವೂ ಆಗಿದ್ದ ಸಂಬಂಧ ಮಧ್ಯ ಯುಗದಲ್ಲಿ ಪರಸ್ಪರ ನಿಕಟವೂ, ನೇರವೂ ಆಗಿ ಮಧ್ಯೋತ್ತರ ಯುಗದಲ್ಲಿ ಈ ಪ್ರವೃತ್ತಿ ಇನ್ನೂ ಬೆಳೆದು ಆಧುನಿಕ ಯುಗದಲ್ಲಿ ಅತ್ಯಂತ ನಿಕಟವೂ ನೇರವೂ ಆಗಿ ಪರಿಣಮಿಸಿದೆ. ಗ್ರಂಥಾಲಯ ಈಗ ಜೀವನದ ಒಂದು ಆವಶ್ಯಕ ಅಂಗವಾಗಿ ಪರಿಣಮಿಸಿದೆ.

ಈ ನಿಕಟ ಸಂಬಂಧದಿಂದ ಉದ್ಭವಿಸಿರುವ ಸಾಮಾಜಿಕ ಮತ್ತು ಆಡಳಿತ ಸಂಬಂಧಿಯಾದ ಕೆಲವು ಅಂಶಗಳನ್ನು ಇಲ್ಲಿ ಗಮನಿಸಬೇಕಾಗಿದೆ. ಮೊದಲನೆಯದು, ಸಮಾಜಕ್ಕೆ ಸಂಬಂಧಿಸಿದಂತೆ ಗ್ರಂಥಪಾಲಕನ ಕರ್ತವ್ಯವನ್ನು ಕುರಿತದ್ದು. ಗ್ರಂಥ ಪಾಲಕ ಸಮಾಜದ ಅಗತ್ಯಗಳನ್ನು ಅರಿತುಕೊಳ್ಳಬೇಕು. ಇವನ್ನು ತಿಳಿಯ ಬೇಕಾದರೆ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನೂ, ಸಮಾಜದ ಶೈಕ್ಷಣಿಕ ಮತ್ತು

ಸಾಂಸ್ಕೃತಿಕ ಅಗತ್ಯಗಳನ್ನೂ ಅವನು ಅರಿತುಕೊಳ್ಳಬೇಕು. ಈ ಸ್ಥಿತಿಗತಿಗಳನ್ನು ಅಭ್ಯಸಿಸಿದ ಮೇಲೆ ಗ್ರಂಥಪಾಲಕ ಸಮಾಜದ ಜನರ ಕೂಡ ಮತ್ತು ಇತರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಕೂಡ ನಿಕಟ ಸಂಬಂಧವನ್ನು ಸ್ಥಾಪಿಸಬೇಕು. ಇದರ ಸಲುವಾಗಿ ಅವನು ಪುಸ್ತಕಪ್ರದರ್ಶನ, ವಿಸ್ತರಣೋಪ ನ್ಯಾಸಗಳು ಮತ್ತು ಸಾಂಸ್ಕೃತಿಕ ಸಮಾರಂಭಗಳನ್ನು ಏರ್ಪಡಿಸಬೇಕಾಗುತ್ತದೆ.

ಇನ್ನು ಆಡಳಿತ ಸಂಬಂಧವಾದ ಸಮಸ್ಯೆಗಳನ್ನು ವಿಚಾರಿಸೋಣ: ೧ ಗ್ರಂಥಾಲಯದ ಸ್ಥಳವನ್ನು ಕುರಿತದ್ದು ಮೊದಲನೆಯ ಪ್ರಶ್ನೆ. ಜನಸಾಮಾನ್ಯರು ಗ್ರಂಥಾಲಯದ ಸದುಪಯೋಗ ಪಡೆಯಬೇಕಾದರೆ ಗ್ರಂಥಾಲಯವನ್ನು ಜನನಿಬಿಡ ಸ್ಥಳಗಳ ಕೇಂದ್ರದಲ್ಲಿ ಕಟ್ಟಿಸಬೇಕು. ಇಂಥ ಪ್ರದೇಶಗಳಲ್ಲಿ ಜನರು ದೈನಂದಿನ ಕಾರ್ಯಗಳಿಗೋಸ್ಕರ ಸಹಜವಾಗಿ ಸಂಚರಿಸಬೇಕಾಗುವುದರಿಂದ ಅಲ್ಲಿ ಬಂದಾಗ ಗ್ರಂಥಾಲಯಕ್ಕೆ ಭೇಟಿಕೊಡುವ ಆಸಕ್ತಿ ಅವರಲ್ಲಿ ಮೂಡುತ್ತದೆ. ಹೀಗೆ ಅದರ ಉಪಯೋಗ ಎಲ್ಲರಿಗೂ ಸುಲಭವಾಗಿ ಲಭ್ಯವಾಗುತ್ತದೆ.

೨ ತೆರೆದ ಬಾಗಿಲು ಅಥವಾ ಮುಕ್ತದ್ವಾರ: ನೂತನ ಗ್ರಂಥಾಲಯಗಳು ತೆರೆದ ಬಾಗಿಲು ಪದ್ಧತಿಯನ್ನು ಅನುಸರಿಸುತ್ತವೆ. ಇದರಿಂದ ಸಮಾಜದ ಪ್ರತಿಯೊಬ್ಬನಿಗೂ ತನಗೆ ಬೇಕಾದ ಪುಸ್ತಕವನ್ನು ಆಯ್ದು, ಕೈಗೆತ್ತಿಕೊಂಡು, ಓದಿ ತಿಳಿದುಕೊಳ್ಳಲು ಸುಲಭವಾಗಿ ಅವಕಾಶ ಒದಗಿಸಿದಂತಾಗುತ್ತದೆ.

೩ ಗ್ರಂಥಾಲಯ ಸಿಬ್ಬಂದಿ: ಗ್ರಂಥಾಲಯಗಳು ಸಮಾಜಕ್ಕೆ ಸೇವೆ ಸಲ್ಲಿಸಬೇಕಾದರೆ ಸೂಕ್ತವಾದ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಗ್ರಂಥಾಲಯಶಾಸ್ತ್ರದಲ್ಲಿ ತರಬೇತಿ ಪಡೆದ ಗ್ರಂಥಾಲಯ ಸಿಬ್ಬಂದಿ ಒದಗಬೇಕು. ಪುಸ್ತಕಕ್ಕೂ ಜನರಿಗೂ ನಡುವಣ ಸಂಬಂಧ ನಿಕಟವಾಗಿ, ಉಪಯುಕ್ತವಾಗಿ ಬೆಳೆಯುವ ಹಾಗೆ ಸೇವೆ ಸಲ್ಲಿಸುವುದೇ ಸಿಬ್ಬಂದಿಯ ಕರ್ತವ್ಯ.

೪ ಗ್ರಂಥಾಲಯ ಕಾರ್ಯ: ಮೇಲಣ ಗುರಿಯನ್ನು ಮುಟ್ಟಬೇಕಾದರೆ ಗ್ರಂಥಾಲಯ ಕಾರ್ಯವನ್ನು ಸುಸಂಘಟಿತ ರೀತಿಯಲ್ಲಿ ನಡೆಸಬೇಕಾಗುತ್ತದೆ. ಗ್ರಂಥಾಲಯಕ್ಕೆ ಬಂದ ಒಂದು ವ್ಯಕ್ತಿ ತಾನು ಗ್ರಂಥಾಲಯಕ್ಕೆ ಬಂದದ್ದು ಸಾರ್ಥಕವಾಯಿತು ಎಂಬ ಭಾವನೆಯಿಂದ ಹೊರಬೀಳಬೇಕು. ಈ ಭಾವನೆ ಅವನಲ್ಲಿ ತಲೆದೋರಬೇಕಾದರೆ ಗ್ರಂಥಾಲಯ ಸಿಬ್ಬಂದಿಯಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಗ್ರಂಥಾಲಯಕಾರ್ಯವನ್ನು ದಕ್ಷತೆಯಿಂದ ಮತ್ತು ಸೇವಾಭಾವನೆಯಿಂದ ನಿರ್ವಹಿಸಬೇಕು.

೫ ಗ್ರಂಥಾಲಯ ನಿಯಮಗಳು: ಇದರ ಇನ್ನೊಂದು ತರ್ಕಬದ್ಧ ನಿಬಂಧಿತವೆಂದರೆ ಗ್ರಂಥಾಲಯದ ನಿಯಮಗಳು. ಗ್ರಂಥಾಲಯವನ್ನು ಉಪಯೋಗಿಸುವವರಿಗೆ ಅನುಕೂಲವಾಗಿರುವಂತೆ ನಿಯಮಗಳನ್ನು ರಚಿಸಬೇಕೇ ಹೊರತು ಇವು ಅಡಚಣೆಗಳಾಗಿ ಪರಿಣಮಿಸಬಾರದು.

೬ ಗ್ರಂಥಾಲಯ ಪ್ರಸಾರಣ: ಗ್ರಂಥಾಲಯ ಸಿಬ್ಬಂದಿ ಮೊದಲು ಓದುಗರಿಗೆ ಅನುಸ್ಥಾಪನ ಶಿಕ್ಷಣ (ಓರಿಯೆಂಟೇಷನ್ ಕೋರ್ಸ್) ನೀಡಬೇಕು. ಗ್ರಂಥಾಲಯದ ಸ್ವರೂಪ, ಅದನ್ನು ಬಳಸುವ ವಿಧಾನ ಮುಂತಾದವನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು. ತದನಂತರ ಗ್ರಂಥಾಲಯ ಕೈಪಿಡಿ, ಪುಸ್ತಕ ಪಟ್ಟಿ, ಪುಸ್ತಕ ಸೂಚಿ, ಮುಂತಾದವುಗಳಿಂದ ಓದುಗರಿಗೆ ಸಹಾಯ ನೀಡಿ, ಗ್ರಂಥಾಲಯದ ಉಪಯೋಗ ಹೆಚ್ಚುವ ಹಾಗೆ ಕಾರ್ಯನಿರತವಾಗಬೇಕು.

ಗ್ರಂಥಾಲಯ ಒಂದು ಸಾಮಾಜಿಕ ಸಂಸ್ಥೆ ಎಂಬುದು ಇಂದು ಹಲವು ಪರಿಣತರ ಅಭಿಮತವಾಗಿದೆ. ಯಾಕೆಂದರೆ ಇದು ಸಮಾಜದಿಂದ ನಿರ್ಮಿತವಾಗಿ, ಸಮಾಜಕ್ಕೇ ದುಡಿಯುವುದಾಗಿ, ಸಮಾಜದ್ದೇ ಆದ ಸಂಸ್ಥೆ. ಗ್ರಂಥಾಲಯ ಮತ್ತು ಸಮಾಜ ಇವೆರಡರ ಬೆಳವಣಿಗೆಯನ್ನೇ ಜನಸಾಮಾನ್ಯರ ಅಭಿವೃದ್ಧಿ ಅವಲಂಬಿಸಿದೆ ಯೆಂಬುದು ನಿರ್ವಿವಾದ.

ಎಸ್. ಪ್ರಭುಸ್ವಾಮಿ

ಆಗ್ನೇಯ ಏಷ್ಯ ದೇಶಗಳ ವಿವಾದಾತ್ಮಕ ಅಭಿವೃದ್ಧಿ ಯೋಜನೆ

೧೯೬೯ರಲ್ಲಿ ಆಗ್ನೇಯ ಏಷ್ಯ ದೇಶಗಳ ಸಚಿವರು, ತಮ್ಮ ದೇಶಗಳ ಆರ್ಥಿಕಾಭಿವೃದ್ಧಿಯ ವಿಷಯದಲ್ಲಿ ಚರ್ಚಿಸಲು ಸಭೆ ಸೇರಿದ್ದರು. ೧೯೭೦ರ ದಶಕದಲ್ಲಿ ತಮ್ಮ ದೇಶಗಳಲ್ಲಿ ಉದ್ಭವಿಸಬಹುದಾದ ಆರ್ಥಿಕ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿ ಒಂದು ವರದಿಯನ್ನು ತಯಾರಿಸುವ ಕಾರ್ಯವನ್ನು ಏಷ್ಯದ ಅಭಿವೃದ್ಧಿ ಬ್ಯಾಂಕಿಗೆ ವಹಿಸಲು ಈ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಮೇಲ್ಕಂಡ ನಿರ್ಧಾರದ ಪ್ರಕಾರ ಏಷ್ಯದ ಅಭಿವೃದ್ಧಿ ಬ್ಯಾಂಕು ಈ ಕೆಳಗೆ ಕಂಡ ೮ ದೇಶಗಳಿಗೆ ಅನ್ವಯಿಸುವಂತೆ ಅಧ್ಯಯನ ನಡೆಸಲು ಏರ್ಪಾಡು ಮಾಡಿತು : ಥೈಲೆಂಡ್, ಮಲೇಷ್ಯ, ಫಿಲಿಪೀನ್ಸ್, ಸಿಂಗಪುರ, ಇಂಡೋನೇಷ್ಯ, ದಕ್ಷಿಣ ವಿಯಟ್ನಾಂ, ಲಾವೋಸ್ ಮತ್ತು ಕಾಂಬೋಡಿಯ. ಮುಂದೆ ಸೂಚಿಸಿರುವ ಆರು ಪ್ರಮುಖ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಲು ನಿರ್ಧರಿಸಲಾಯಿತು: ೧ ಆಗ್ನೇಯ ಏಷ್ಯ ದೇಶಗಳ ಮೇಲೆ ಹಸಿರು ಕ್ರಾಂತಿಯ ಪರಿಣಾಮಗಳು ; ೨ ೧೯೭೦ರ ದಶಕದಲ್ಲಿ ಕೈಗಾರಿಕಾಭಿವೃದ್ಧಿ ಸಾಧಿಸಲು ಇರುವ ಅನುಕೂಲಗಳು ; ೩ ವಿದೇಶಿ ವ್ಯಾಪಾರದ ಸಮಸ್ಯೆಗಳು ; ೪ ವಿದೇಶೀ ಬಂಡವಾಳದ ಆವಶ್ಯಕತೆ ಮತ್ತು ಅದನ್ನು ಒದಗಿಸುವ ಮಾರ್ಗಗಳು ; ೫ ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು ; ಮತ್ತು ೬ ವಿಯಟ್ನಾಂ ಯುದ್ಧ ನಿಂತುಹೋದ ಪಕ್ಷದಲ್ಲಿ ಈ ಪ್ರದೇಶದಲ್ಲಿ ಉಂಟಾಗಬಹುದಾದ ಪರಿಣಾಮಗಳು.

ಅಮೆರಿಕ ಸಂಯುಕ್ತಸಂಸ್ಥಾನ, ಯೂರೋಪ್ ಮತ್ತು ಏಷ್ಯಗಳಲ್ಲಿರುವ ಕೆಲವು ಪ್ರಸಿದ್ಧ ಅರ್ಥಶಾಸ್ತ್ರಜ್ಞರನ್ನು ಆಹ್ವಾನಿಸಿ ಅಧ್ಯಯನ ನಡೆಸುವಂತೆ ಕೇಳಿಕೊಳ್ಳಲಾಯಿತು. ಆರು ಸಮಸ್ಯೆಗಳಿಗೆ ಸಂಬಂಧಿಸಿದಂತೆ ಆರು ಪ್ರತ್ಯೇಕ ವರದಿಗಳನ್ನು ತಯಾರಿಸಲು ಅವರಿಗೆ ಸೂಚಿಸಲಾಯಿತು. ಆ ವರದಿಗಳೆಲ್ಲವನ್ನೂ ಕ್ರೋಡೀಕರಿಸಿ ಒಂದು ಸಮಗ್ರ ವರದಿಯನ್ನು ತಯಾರಿಸುವ ಕಾರ್ಯವನ್ನು ಲಂಡನ್ ಸ್ಕೂಲ್ ಆಫ್

ಎಕನಾಮಿಕ್ಸ್‌ನ ಹೆಸರುವಾಸಿಪಡೆದ ಅರ್ಥಶಾಸ್ತ್ರ ಪ್ರಾಧ್ಯಾಪಕ ಹಾಲಾ ಮಿಂಟರಿಗೆ ವಹಿಸಲಾಯಿತು. ರಾಷ್ಟ್ರೀಯ ಭಾವೋದ್ರೇಕಗಳಿಗೆ ಗಮನಕೊಡದೆ, ಸಂಪೂರ್ಣವಾಗಿ ಈ ಪ್ರದೇಶದ ಆರ್ಥಿಕ ಪ್ರಗತಿಯನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಮಿಂಟ್ ಒಂದು ವರದಿಯನ್ನು ತಯಾರಿಸಿ ಏಷ್ಯದ ಅಭಿವೃದ್ಧಿ ಬ್ಯಾಂಕಿಗೆ ಸಲ್ಲಿಸಿದರು.

ಏಷ್ಯದ ಅಭಿವೃದ್ಧಿ ಬ್ಯಾಂಕು ವರದಿಯನ್ನು ಪ್ರಕಟಿಸಿದ ಕೂಡಲೇ ಅನೇಕ ವಾದವಿವಾದಗಳು ಕಾಣಿಸಿಕೊಂಡಿವೆ. ಆಗ್ನೇಯ ಏಷ್ಯ ದೇಶಗಳಲ್ಲಿರುವ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವರದಿಯಲ್ಲಿ ಸೂಚಿಸಿರುವ ಆರ್ಥಿಕ ಕಾರ್ಯಕ್ರಮಗಳನ್ನು ಪರಿಶೀಲಿಸಿದರೆ ಅವು ಕ್ರಾಂತಿಕಾರಿ ಅಂಶಗಳನ್ನು ಒಳಗೊಂಡಿವೆ ಎಂದು ಕಂಡುಬರುತ್ತದೆ. ವರದಿಯಲ್ಲಿ ಸೂಚಿಸಿರುವ ಅನೇಕ ಸಲಹೆಗಳನ್ನು ಈ ಪ್ರದೇಶದಲ್ಲಿರುವ ದೇಶಗಳು ಒಪ್ಪುವಂತೆ ಕಂಡುಬರುವುದಿಲ್ಲ. ಆದುದರಿಂದಲೇ ಅನೇಕ ರೀತಿಯ ವಾದವಿವಾದಗಳು ಉದ್ಭವಿಸಿವೆ.

ಮಿಂಟರ ವರದಿಯಲ್ಲಿ ಸೂಚಿಸಿರುವ ಒಂದು ಮುಖ್ಯ ವಿವಾದಾತ್ಮಕ ಸಲಹೆ ಯೆಂದರೆ ಈ ಪ್ರದೇಶದಲ್ಲಿರುವ ಎಲ್ಲ ದೇಶಗಳು ಹಸಿರು ಕ್ರಾಂತಿಯನ್ನು ಸಾಧಿಸಬೇಕಿಲ್ಲ ಎಂಬುದು. ತಾಂತ್ರಿಕವಾಗಿ ಎಲ್ಲ ದೇಶಗಳಿಗೂ ಆಹಾರಧಾನ್ಯಗಳ ಉತ್ಪನ್ನದಲ್ಲಿ ಸ್ವಯಂ ಪೂರ್ಣತೆ ಪಡೆಯಲು ಸಾಧ್ಯವಿದ್ದರೂ, ಆರ್ಥಿಕ ದೃಷ್ಟಿಯಿಂದ ನೋಡಿದರೆ ಎಲ್ಲ ದೇಶ ಗಳೂ ಹಸಿರುಕ್ರಾಂತಿಯನ್ನು ಅನುಷ್ಠಾನಕ್ಕೆ ತರಬೇಕಾಗಿಲ್ಲ ಎಂಬುದು ಮಿಂಟರ ಸಲಹೆ. ಈ ಪ್ರದೇಶದ ಮುಖ್ಯ ಬೆಳೆ ಬತ್ತ. ಈಗ ಈ ಪ್ರದೇಶದಲ್ಲಿಯ ಒಂದೆರಡು ದೇಶಗಳು ಬತ್ತದ ಬೆಳೆಯಲ್ಲಿ ಸ್ವಯಂಪೂರ್ಣತೆ ಪಡೆದಿರುವುವಲ್ಲದೆ, ಅಕ್ಕಿಯನ್ನು ರಫ್ತುಮಾಡುವ ಶಕ್ತಿ ಪಡೆದಿವೆ. ಆದ್ದರಿಂದ ಈ ಒಂದೆರಡು ದೇಶಗಳು ಆಧುನಿಕ ರೀತಿಯ ವ್ಯವಸಾಯ ಪದ್ಧತಿಯನ್ನು ಅಳವಡಿಸಿಕೊಂಡು ಬತ್ತದ ಬೆಳೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಿ ಅಕ್ಕಿಯನ್ನು ಬೇರೆ ದೇಶಗಳಿಗೆ ಸದಾಕಾಲವೂ ರಫ್ತುಮಾಡಬೇಕು. ಉಳಿದ ದೇಶಗಳಲ್ಲಿ ಬತ್ತದ ಬೆಳೆಯಲ್ಲಿ ಸ್ವಯಂಪೂರ್ಣತೆ ಪಡೆಯಲು ಯತ್ನಿಸಬಾರದು. ಏಕೆಂದರೆ ಆ ದೇಶ ಗಳಲ್ಲಿ ಬತ್ತವನ್ನು ಬೆಳೆಯಲು ಅಧಿಕ ಖರ್ಚಾಗುತ್ತದೆ. ಬತ್ತ ಬೆಳೆಯುವುದರ ಬದಲು ಅಲ್ಲಿ ಮೆಕ್ಕೆಜೋಳ, ತಾಳೆ ಎಣ್ಣೆ, ರಬ್ಬರ್, ತರಕಾರಿ, ಹಣ್ಣು, ಮರದ ದಿಮ್ಮಿ ಮತ್ತು ಸಂಬಾರ ಪದಾರ್ಥಗಳ ಉತ್ಪನ್ನಕ್ಕೆ ಪ್ರೋತ್ಸಾಹ ಕೊಡಬೇಕು. ಮೇಲ್ಕಂಡ ಉತ್ಪನ್ನ ಗಳಿಗೆ ಈ ದೇಶಗಳ ವಾಯುಗುಣ ಮತ್ತು ಭೂಗುಣ ಬಹಳ ಉತ್ತಮವಾಗಿವೆ. ಆದ್ದರಿಂದ ಇಲ್ಲಿ ಬತ್ತ ಬೆಳೆಯುವುದಕ್ಕಿಂತ ಮೇಲ್ಕಂಡ ಬೆಳೆಗಳನ್ನು ಬೆಳೆದರೆ ಅಧಿಕ ವರಮಾನ ಉಂಟಾಗುತ್ತದೆ. ಈ ವರಮಾನವನ್ನು ಉಪಯೋಗಿಸಿಕೊಂಡು ಅಕ್ಕಿಯನ್ನು ಪಕ್ಕದ ದೇಶಗಳಿಂದ ಆಮದು ಮಾಡಿಕೊಳ್ಳುವುದು ಸೂಕ್ತ ಎಂಬುದು ಮಿಂಟರ ಸಲಹೆ.

ತಮ್ಮ ಸಲಹೆಯನ್ನು ಈ ಪ್ರದೇಶದ ಕೆಲವು ದೇಶಗಳಲ್ಲಿ ಅನುಷ್ಠಾನಕ್ಕೆ ತರುವುದು ಕಷ್ಟ ಎಂಬುದನ್ನು ಮಿಂಟರೇ ಒಪ್ಪಿಕೊಳ್ಳುತ್ತಾರೆ. ಏಕೆಂದರೆ ಪ್ರಧಾನ ಆಹಾರಧಾನ್ಯ ವಾದ ಬತ್ತದ ಬೆಳೆಯಲ್ಲಿ ಸ್ವಯಂಪೂರ್ಣತೆ ಸಾಧಿಸುವುದು ಅನೇಕ ದೇಶಗಳಿಗೆ ರಾಷ್ಟ್ರೀಯ

ಗೌರವದ ಪ್ರಶ್ನೆಯಾಗಿದೆ. ತಮ್ಮ ರಾಷ್ಟ್ರೀಯ ಗೌರವವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ದೇಶಗಳು ಅಧಿಕ ವೆಚ್ಚ ಮಾಡುತ್ತಿವೆ ಮತ್ತು ಬಡತನ ಅನುಭವಿಸುತ್ತಿವೆ. ಈ ಒಣಪ್ರತಿಷ್ಠೆಯನ್ನು ಬಿಟ್ಟು ಆರ್ಥಿಕವಾಗಿ ನ್ಯಾಯಸಮ್ಮತವಾದ ಮಾರ್ಗವನ್ನು ಅನುಸರಿಸಿ ತಮ್ಮ ಬಡತನವನ್ನು ಹೋಗಲಾಡಿಸಿಕೊಳ್ಳಬೇಕೆಂದು ಮಿಂಟ್ ವಾದಿಸುತ್ತಾರೆ. ಇವರ ವಾದದಿಂದ ಕೆಲವು ದೇಶಗಳಿಗೆ ತೃಪ್ತಿಯಾಗಿಲ್ಲ. ಆದುದರಿಂದಲೇ ಈಗ ಈ ದೇಶಗಳಲ್ಲಿ ಅನೇಕ ರೀತಿಯ ವಾದವಿವಾದಗಳೆದ್ದಿವೆ.

ಮಿಂಟರ್ ಮತ್ತೊಂದು ಸಲಹೆ ಕೈಗಾರಿಕಾಭಿವೃದ್ಧಿಗೆ ಸಂಬಂಧಿಸಿದ್ದು. ಹಾಲಿ ಆಮದು ಮಾಡಿಕೊಳ್ಳುತ್ತಿರುವ ಅನೇಕ ರೀತಿಯ ಸಿದ್ಧವಸ್ತುಗಳನ್ನು ಈ ದೇಶಗಳಲ್ಲೇ ಉತ್ಪಾದಿಸಿ ಆಮದನ್ನು ತಗ್ಗಿಸಲು ಪ್ರಯತ್ನಮಾಡಲಾಗುತ್ತಿದೆ. ಇಂಥ ಪ್ರಯತ್ನ ಈ ದೇಶಗಳ ಆರ್ಥಿಕ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಮಿಂಟ್ ಸೂಚಿಸಿದ್ದಾರೆ. ಅನೇಕ ರೀತಿಯ ಸಿದ್ಧವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ತಯಾರಿಸಲು ಈ ದೇಶಗಳಲ್ಲಿ ತಕ್ಕ ವಾತಾವರಣವಿಲ್ಲ. ಆದರೆ ಬೇರೆ ರೀತಿಯ ಸೌಕರ್ಯವನ್ನು ಈ ದೇಶಗಳು ಪಡೆದಿವೆ. ಅವನ್ನು ಸದುಪಯೋಗಪಡಿಸಿಕೊಳ್ಳಬೇಕೆಂಬುದು ಮಿಂಟರ ಸಲಹೆ. ಈಗ ಈ ದೇಶಗಳು ಅನೇಕ ಕಚ್ಚಾಸಾಮಗ್ರಿಗಳನ್ನು ರಫ್ತುಮಾಡುತ್ತಿವೆ. ಅವನ್ನು ಹಾಗೆಯೇ ರಫ್ತುಮಾಡುವುದರ ಬದಲು ಸಿದ್ಧವಸ್ತುಗಳನ್ನಾಗಿ ಮಾಡಿ ರಫ್ತುಮಾಡಬೇಕು. ಇದರಿಂದ ಇವುಗಳ ವರಮಾನ ಅಧಿಕಗೊಳ್ಳುತ್ತದೆ. ತಮಗೆ ಬೇಕಾದ ಉಳಿದ ವಸ್ತುಗಳನ್ನು ಆಮದುಮಾಡಿಕೊಳ್ಳುವುದು ಒಳ್ಳೆಯದು ಎಂದು ಮಿಂಟ್ ಸೂಚಿಸಿದ್ದಾರೆ. ಅಂದರೆ ಪಾಶ್ಚಾತ್ಯ ದೇಶಗಳ ಮಾದರಿಯಲ್ಲಿ ಎಲ್ಲ ರೀತಿಯ ಕೈಗಾರಿಕಾಭಿವೃದ್ಧಿ ಸಾಧಿಸುವುದರ ಬದಲು, ಈ ದೇಶಗಳಲ್ಲಿರುವ ಪರಿಸ್ಥಿತಿಗೆ ತಕ್ಕ ಹಾಗೆ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕೆಂಬುದು ಮಿಂಟರ ಮುಖ್ಯ ಸಲಹೆ.

ಈ ದೇಶಗಳಲ್ಲಿ ಉತ್ಪತ್ತಿಯಾಗುತ್ತಿರುವ ಕಚ್ಚಾಸಾಮಗ್ರಿಗಳನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ಅವುಗಳಿಂದ ಸಿದ್ಧವಸ್ತುಗಳನ್ನು ಉತ್ಪಾದಿಸಿ ರಫ್ತುಮಾಡಲಾರಂಭಿಸಿದರೆ ಈ ದೇಶಗಳ ವಿದೇಶೀ ವ್ಯಾಪಾರ ಬಹಳ ಅಭಿವೃದ್ಧಿಗೊಂಡು ಅಧಿಕ ವರಮಾನ ಉಂಟಾಗುತ್ತದೆ ಎಂಬುದು ಮಿಂಟರ ಅಭಿಪ್ರಾಯ. ಈ ದೇಶಗಳ ಉತ್ಪಾದನೆಗೆ ಪ್ರಪಂಚದ ಇತರ ಕಡೆ ಬಹಳ ಬೇಡಿಕೆ ಇದೆ. ಆದುದರಿಂದ ಈ ಸದವಕಾಶವನ್ನು ಉಪಯೋಗಿಸಿಕೊಂಡು ಈ ದೇಶಗಳು ತಮ್ಮ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕು. ಅದನ್ನು ಬಿಟ್ಟು ಪಾಶ್ಚಾತ್ಯ ರಾಷ್ಟ್ರಗಳ ಅನುಕರಣೆ ಮಾಡಿ ಬೃಹದಾಕಾರದಲ್ಲಿ ಕೈಗಾರಿಕಾ ವ್ಯವಸ್ಥೆಯನ್ನು ಬೆಳೆಸಿಕೊಂಡು ನಷ್ಟ ಅನುಭವಿಸಬಾರದು ಎಂಬುದು ಮಿಂಟರ ಸಲಹೆ.

ಮೇಲ್ಕಂಡ ಸಲಹೆಗಳನ್ನು ಈ ಪ್ರದೇಶದಲ್ಲಿರುವ ಅನೇಕ ನಾಯಕರು ಒಪ್ಪಿಕೊಳ್ಳಲು ಸಿದ್ಧರಿಲ್ಲ. ತಮ್ಮ ದೇಶಗಳಲ್ಲಿ ಸಾಕಷ್ಟು ಕೈಗಾರಿಕಾಭಿವೃದ್ಧಿಯನ್ನು (ಪಾಶ್ಚಾತ್ಯ ದೇಶಗಳಂತೆ) ಸಾಧಿಸದೆ ಹೋದರೆ, ತಾವು ಸದಾಕಾಲವೂ ಬೇರೆ ದೇಶಗಳ

ಹಂಗಿನಲ್ಲಿರಬೇಕಾಗುತ್ತದೆ ಎಂಬ ಭಯ ಈ ದೇಶಗಳ ನಾಯಕರಲ್ಲಿ ಉಂಟಾಗಿದೆ. ಸದಾಕಾಲವೂ ತಮ್ಮ ದೇಶಗಳಲ್ಲಿ ದೊರೆಯುವ ಕಚ್ಚಾಸಾಮಗ್ರಿಗಳು ಮತ್ತು ಅವುಗಳಿಂದ ತಯಾರಿಸಬಹುದಾದ ಸಿದ್ಧವಸ್ತುಗಳ ಮಾರಾಟದಲ್ಲೇ ನಿರತರಾದರೆ ತಮಗೆ ಎಂದಾದರೂ ತೊಂದರೆ ಉಂಟಾಗಬಹುದೆಂದು ಈ ದೇಶಗಳು ಭಯಪಡುತ್ತವೆ. ಏಕೆಂದರೆ ಈ ವಸ್ತುಗಳನ್ನು ಕೊಳ್ಳುವ ದೇಶಗಳು ತಮ್ಮತಮ್ಮಲ್ಲೇ ಒಂದು ಒಪ್ಪಂದಕ್ಕೆ ಬಂದು ಉದ್ದೇಶಪೂರ್ವಕವಾಗಿ ಈ ದೇಶಗಳ ವಸ್ತುಗಳಿಗೆ ಕಡಿಮೆ ಬೆಲೆ ದೊರಕುವಂತೆ ಮಾಡಬಹುದು. ಆಗ ತಾವು ನಿಸ್ಸಹಾಯಕರಾಗಿ ಪಾಶ್ಚಾತ್ಯ ದೇಶಗಳು ಹೇಳಿದಂತೆ ಕೇಳಬೇಕಾಗಿ ಬರುತ್ತದೆ—ಎಂಬುದು ಈ ದೇಶಗಳ ನಾಯಕರ ಭೀತಿ. ಜೊತೆಗೆ ಈ ದೇಶಗಳಲ್ಲಿ ದೊರೆಯುವ ಕಚ್ಚಾವಸ್ತುಗಳನ್ನು ಒಂದೇ ಸಮನೆ ಬಳಸಿಕೊಂಡರೆ ಮುಂದಿನ ಜನಾಂಗ ದುಃಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ. ಈಗ ದೊರೆಯುತ್ತಿರುವ ಸಂಪತ್ತನ್ನು ತಮ್ಮ ದೇಶದ ಮುಂದಿನ ಜನಾಂಗದ ಹಿತದೃಷ್ಟಿಯಿಂದ ಕಾಪಾಡಿಕೊಂಡುಬರುವುದು ತಮ್ಮ ಆದ್ಯಕರ್ತವ್ಯ ಎಂದು ಈ ದೇಶಗಳ ಅನೇಕ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

ಈ ಯೋಜನೆಯನ್ನು ಈ ದೇಶಗಳು ಒಪ್ಪಿಕೊಂಡು ಅನುಷ್ಠಾನಕ್ಕೆ ತರುತ್ತವೆಯೆ—ಎಂಬುದು ಅನುಮಾನಾಸ್ಪದ ವಿಷಯವಾಗಿದೆ. ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಈ ದೇಶಗಳು ಮೇಲ್ಕಂಡ ಯೋಜನೆಯನ್ನು ತಳ್ಳಿಹಾಕಿ ತಮಗೆ ಸರಿಬಂದ ರೀತಿಯಲ್ಲಿ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವ ಲಕ್ಷಣಗಳೇ ಹೆಚ್ಚಾಗಿ ಕಂಡುಬರುತ್ತಿವೆ.

ಕೆ. ಜಿ. ವಸಂತಮಾಧವ

ವಿಜಯನಗರ ಅರಸರ ಕಾಲದಲ್ಲಿ ಕೋಟೇಶ್ವರ ದೇವಸ್ಥಾನ

ಕರ್ಣಾಟಕದಲ್ಲಿ ಆಳಿದ ಅರಸುಮನೆತನಗಳಲ್ಲಿ ವಿಜಯನಗರದ ಅರಸುಮನೆತನ ಕರ್ಣಾಟಕ ಸಂಸ್ಕೃತಿಗೆ ಅಮೂಲ್ಯ ಕಾಣಿಕೆ ನೀಡಿದೆ. ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಗಳು ಗಂಡಾಂತರದಲ್ಲಿದ್ದಾಗ ಅವನ್ನು ರಕ್ಷಿಸಿ, ಬೆಳೆಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಇವರು ತಮ್ಮ ಆಳ್ವಿಕೆಯಲ್ಲಿ ಸಾಮ್ರಾಜ್ಯದ ನಾನಾ ಭಾಗಗಳಲ್ಲಿ ಪುರಾತನ ಹಿಂದೂ ದೇವಾಲಯಗಳ ಜೀರ್ಣೋದ್ಧಾರಮಾಡಿ, ಹಲವಾರು ದೇವಸ್ಥಾನಗಳನ್ನು ಕಟ್ಟಿಸಿ ಅವುಗಳಲ್ಲಿ ಧಾರ್ಮಿಕ ಕಾರ್ಯಗಳು ಸಾಂಗವಾಗಿ ನಡೆಯುವುದಕ್ಕೆ ದತ್ತಿ ಬಿಟ್ಟಿದ್ದರು. ಆಗ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಮಂಗಳೂರು ಮತ್ತು ಬಾರಕೂರು ರಾಜ್ಯಗಳಲ್ಲೂ ಈ ಕಾರ್ಯ ನಡೆಯಿತು. ಬಾರಕೂರಿನ ರಾಜ್ಯದ ಕೋಟೇಶ್ವರ ದೇವಸ್ಥಾನದಲ್ಲಿ ಧಾರ್ಮಿಕ ಪರಂಪರೆಯನ್ನು ಹೇಗೆ ಉಳಿಸಿ ಮತ್ತು ಬೆಳೆಸಿಕೊಂಡು ಹೋಗಲು ಸಹಾಯಕವಾಯಿತೆಂಬುದನ್ನು ವಿವರಿಸುವುದು ಈ ಲೇಖನದ ಉದ್ದೇಶ.

ಕೋಟೇಶ್ವರದ ಪೂರ್ವಚರಿತ್ರೆ

ಕೋಟೇಶ್ವರ ಕುಂದಾಪುರದಿಂದ ೨ ಮೈಲಿ ದಕ್ಷಿಣಕ್ಕೆ ಇದೆ. ಇಲ್ಲಿರುವುದು ಕೋಟಿಲಿಂಗೇಶ್ವರ ದೇವಸ್ಥಾನ. ಇಲ್ಲಿಯ ಸ್ಥಳಚರಿತ್ರೆ ದಂತಕತೆಯಿಂದ ಹಣೆದುಕೊಂಡಿದೆ. 'ಕೇರಳೋತ್ಪತ್ತಿ'ಯಂತೆ ಕೇರಳ ತುಳುವದಿಂದ ಪ್ರತ್ಯೇಕವಾಗುವ ಮೊದಲು ತುಳುಂಬನ್ ಪೆರುಮಾಳ ಕೋಟೇಶ್ವರದಲ್ಲಿ ರಾಜ್ಯವಾಳುತ್ತಿದ್ದುದರಿಂದ ಈ ನಾಡು ತುಳುನಾಡಾಯಿತು.[1] ಆದರೆ ಇದಕ್ಕೆ ಯಾವ ಆಧಾರವೂ ಇಲ್ಲ. ಸ್ಕಂದ ಪುರಾಣ ಇದನ್ನು

---

[1] ಕೇಶವ ಕೃಷ್ಣ ಕುಡುವ, ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ, ಪು. ೧. ಕೇರಳೋತ್ಪತ್ತಿಯಲ್ಲಿ ತಿಳಿಸಿದ ವಿವರ ಇತಿಹಾಸಕ್ಕೆ ದೂರವಾದದ್ದು. ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಇತಿಹಾಸ ಕನ್ನಡ ನಾಡಿನ ರಾಜಕೀಯದೊಂದಿಗೆ ಹೆಣೆದುಕೊಂಡದ್ದು. ಇಲ್ಲಿಯ ಹೆಚ್ಚಿನ ಶಾಸನಗಳು ಕನ್ನಡ ಲಿಪಿಯಲ್ಲಿವೆಯಲ್ಲದೆ ಮಲಯಾಳಿ ಲಿಪಿಯಲ್ಲಿಲ್ಲ. ಈ ಪ್ರವೇಶಕ್ಕೆ ತುಳುನಾಡೆಂಬ ಹೆಸರು ಕ್ರಿ.ಶ. ೧೧ನೆಯ ಶತಮಾನದಿಂದ ಬಂದಿದೆಯೆಂದು ಶಾಸನಗಳಿಂದ ತಿಳಿದು ಬರುತ್ತದೆ. ಕೋಟೇಶ್ವರದಲ್ಲಿ ಈಗ ತುಳು ಭಾಷೆ ಬಳಕೆಯಲ್ಲಿ ಇಲ್ಲ.

ಧ್ವಜೇಶ್ವರವೆಂತಲೂ ಇದು ಪರಶುರಾಮನ ಸಪ್ತ ಪುಣ್ಯಕ್ಷೇತ್ರಗಳಲ್ಲಿ ಒಂದೆಂದೂ ತಿಳಿಸುತ್ತದೆ. ಸ್ಕಂದಪುರಾಣ ಏಕಕಾಲದಲ್ಲಿ ರಚಿತವಲ್ಲವಾದಕಾರಣ ಇದರ ಐತಿಹಾಸಿಕ ನೆಲೆಯನ್ನು ನಿರ್ಧರಿಸುವುದು ತೊಡಕಿನ ವಿಷಯ. ಕ್ರಿ.ಶ. ೧೩ನೆಯ ಶತಮಾನದಲ್ಲಿ ಆಳಿದ ಆಳುಪ ವಸುಚಕ್ರವರ್ತಿಗೆ ಸಂತಾನವಿಲ್ಲದುದರಿಂದ ಈತ ಈಗಿನ ಕೋಟೇಶ್ವರ ದಲ್ಲಿ ಕೋಟಿ ಲಿಂಗೇಶ್ವರ ದೇವಸ್ಥಾನವನ್ನು ಕಟ್ಟಿಸಿದನೆಂಬ ಪ್ರತೀತಿಯುಂಟು. ಆದರೆ ವಸುಚಕ್ರವರ್ತಿಯನ್ನು ಕುರಿತ ವಿವರಗಳು ಈವರೆಗೆ ಶಾಸನಗಳಲ್ಲಿ ಸಿಕ್ಕಿಲ್ಲ.[2] ಈ ದೇವಸ್ಥಾನದ ವಿವರಗಳನ್ನು ತಿಳಿಸುವ ಮೊದಲ ಶಾಸನ ಕ್ರಿ.ಶ. ೧೩೬೪–೬೫ರಂದು. ಈ ದೇವಸ್ಥಾನದ ಶಿಲ್ಪಕಲೆಯನ್ನು ಅಭ್ಯಸಿಸಿದ ಡಾ. ಗುರುರಾಜಭಟ್ಟರು ಇದನ್ನು ಕ್ರಿ.ಶ. ೮ ಅಥವಾ ೯ನೆಯ ಶತಮಾನದ್ದೆಂದು ನಿರ್ಧರಿಸಿದ್ದಾರೆ. ಕಾಳಾಮುಖರ ವರ್ಚಸ್ಸಿನಿಂದ ಈ ಪ್ರದೇಶಕ್ಕೆ ಕೋಟೇಶ್ವರವೆಂಬ ಹೆಸರು ಬಂದಿದೆಯೆಂಬುದು ಇವರ ಅಭಿಪ್ರಾಯ.[3]

ವಿಜಯನಗರ–ಕೋಟೇಶ್ವರ

ಇಲ್ಲಿ ಧಾರ್ಮಿಕ ವಿಧಿಗಳನ್ನು ಸಾಂಗವಾಗಿ ನೆರವೇರಿಸಲು ವಿಜಯನಗರದ ಅರಸರು ಸಹಕಾರ ನೀಡಿದ್ದರೆಂಬುದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಬುಕ್ಕರಾಯನ ಒಂದು ಶಾಸನ (ಕ್ರಿ.ಶ. ೧೩೫೭) ಬುಕ್ಕರಾಯನನ್ನು ಉಲ್ಲೇಖಿಸಿ, ಅವನ ಪ್ರಧಾನಿ ಧನನಾಯಕ ಕೋಟೀಶ್ವರಸ್ವಾಮಿ ದೇವರಲ್ಲಿ "ಆಚಂದ್ರಾರ್ಕವಾಗಿ ರುದ್ರಪೂಜೆ ನಡೆಸುವ ಹಾಗೆ ವಿಷ್ಣುತಿರುಳನ ಕೈಯಲ್ಲಿ ರವಳದೇವ ಮೂಲವಾಗಿ ತಾ ಕೊಂಡು ಕೋಟೀಶ್ವರ ದೇವರಿಗೆ ಮಾನ್ಯವಾಗಿಬಿಟ್ಟನು"[4] ಎಂದು ಹೇಳಿದೆ. ಕ್ರಿ.ಶ. ೧೩೭೪ರ ಶಾಸನವೂ ಬುಕ್ಕರಾಯನ ಕಾಲದ್ದೇ. ಅವನ ಪ್ರತಿನಿಧಿಯಾಗಿ ಮಲಿಧನನಾಯಕ ಬಾರಕೂರಿನಲ್ಲಿ ಆಳಿಕೊಂಡಿದ್ದಾಗ, "ಚಕ್ಕರಿ ಗ್ರಾಮದ ೩೦ ಕುಟುಂಬದವರು ೧೨ ಹೊನ್ನನ್ನು ಮತ್ತು ೩ ಮುಡಿ ಹಾನೆ ೩೦ರ ಮಕ್ಕಿ ಗದ್ದೆಯನ್ನು" ಕೋಟೇಶ್ವರ ದೇವರ

---

[2] ದಿವಂಗತ ಡಾ. ಸಾಲೆತೊರೆ ಅವರು ತಮ್ಮ 'ಪ್ರಾಚೀನ ಕರ್ನಾಟಕ' (Vol. I) ಪುಸ್ತಕದಲ್ಲಿ ವಸುಚಕ್ರವರ್ತಿಯ ವಿಷಯವಾಗಿ ವಿವರವಾಗಿ ತಿಳಿಸಿದ್ದಾರೆ (Page 124, 125, 3!5). ಇವರು ನೀಡಿರುವ ವಿವರಕ್ಕೆ 'ಪ್ರತ್ತಿಗೆ ಗ್ರಾಮ ಪದ್ಧತಿ'ಯೇ ಆಧಾರವಾಗಿದೆ. ಇವರು ತಿಳಿಸಿದ ವಿಷಯ ದಂತಕಥೆಗಳಿಂದ ಕೂಡಿದ್ದು. ಬಸ್ರೂರಿನ ದೇವಸ್ಥಾನದ ಅಷ್ಟಾವಧಾನ ಮತ್ತು ಅಲ್ಲಿಯ ದೇವದಾಸಿಯರ ನರ್ತನ ಪದಗಳು ವಸುಚಕ್ರವರ್ತಿಯ ವಿಷಯ ತಿಳಿಸುತ್ತವೆ. ಆದರೆ ವಸುಚಕ್ರವರ್ತಿಯ ಕುರಿತಾಗಿ ವಿವರವಾದ ಒಂದು ಶಾಸನವೂ ಸಿಕ್ಕಿಲ್ಲ.

[3] Gururaja Bhat, Dr. P : *A Cultural and Political Histoy of Tulunadu* (Unpublished thesis submitted to the University of Mysore)

[4] South Indian Inscription IX, Part II, 406; ದೇವಸ್ಥಾನದ ಪಡಸಾಲೆಯಲ್ಲಿರುವ ಶಾಸನ

ಪೂಜೆಗೆ ಅರ್ಪಿಸಿದ್ದನೆಂದು ತಿಳಿಸುತ್ತದೆ.[5] ಇಲ್ಲಿ ಸಿಕ್ಕಿದ ಇನ್ನೊಂದು ಶಾಸನ (೧೩೬೫), ವೀರಬುಕ್ಕರಾಯನ ಆಜ್ಞೆಯಿಂದ ಧರಣಿದೇವ ಚತುರ್ಗಡಿಯ ಭೂಮಿಯ ಉತ್ಪತ್ತಿ ೧೨೪ ಮುಡಿ ಮತ್ತು ೧೮ ಹಾನೆ ಅಕ್ಕಿಯನ್ನು ಕ್ರಯಕ್ಕೆ ತೆಗೆದುಕೊಂಡು ಇದನ್ನು ಇಲ್ಲಿಯ ದೇವಸ್ಥಾನದಲ್ಲಿ ನಡೆಯುವ ಸಮಾರಾಧನೆಯ ಖರ್ಚಿಗೆ ದಾನಮಾಡಿದನೆಂದು[6] ಹೇಳುತ್ತದೆ. ಈ ಧಾರ್ಮಿಕ ಕಾರ್ಯಗಳು ಸಾಂಗವಾಗಿ ನೆರವೇರುವಂತೆ ರಾಜ ಈ ಭೂಮಿಯ ತೆರಿಗೆಯಲ್ಲಿ ವಿನಾಯಿತಿ ನೀಡಿದ. ಇವುಗಳಿಂದ ವಿಜಯನಗರದ ಅರಸರ ಧಾರ್ಮಿಕ ಶ್ರದ್ಧೆ ವ್ಯಕ್ತವಾಗುತ್ತದೆ. ಕ್ರಿ.ಶ. ೧೩೭೨ರ ಬುಕ್ಕರಾಯನ ಇನ್ನೊಂದು ಶಾಸನ ಶ್ರೀಕೋಟೇಶ್ವರ ದೇವರ ಸನ್ನಿಧಿಯಲ್ಲಿ "ಕೊಡಿ ಹಬ್ಬದಲ್ಲು ಉಭಯ ಜಂಗಮರಿಗೆ ಆರೋಹಣ ಧರ್ಮಕ್ಕೆ ಕೊಟ್ಟ ಬಾಳಿನ ವಿವರ ೧೨ ಮುಡಿ ಅಕ್ಕಿ ಮತ್ತು ೪೦ ಹಾನೆ ಉತ್ಪತ್ತಿ ಬೆಳೆಯುವ ಜಮೀನು[7] ದಾನಮಾಡಿದ ವಿಷಯ ತಿಳಿಸುತ್ತದೆ. ಬೊಮ್ಮರಸ ಒಡೆಯ ಬಾರಕೂರು ರಾಜ್ಯವನ್ನು ಆಳುತ್ತಿರುವಲ್ಲಿ ಮಹಾಪ್ರಧಾನಿ ಮುದ್ದೆ ದಂಣಾಯಕ ಸ್ವಲ್ಪ ಭೂಮಿಯನ್ನು ಮತ್ತು ೬೫ ಹೊನ್ನಿನ ಚಿನ್ನವನ್ನು ಇಲ್ಲಿ ದೇವರಿಗೆ ಪುಷ್ಯಪರಾಗ ಪುಣ್ಯಕಾಲದಲ್ಲು ದಾನಮಾಡಿದನೆಂದು ತಿಳಿಸಿ ಇಲ್ಲಿಯ ದೇವರಿಗೆ ಚಿನ್ನದ ಕಲಶದಂಡವನ್ನು ಮಾಡಿಸಿದನೆಂದು ೧೩೭೭ರ ಇನ್ನೊಂದು ಶಾಸನ ತಿಳಿಸುತ್ತದೆ.[8] ಇದೂ ಬುಕ್ಕರಾಯನದೇ. ಕ್ರಿ.ಶ. ೧೪೧೧ರಲ್ಲಿ ಬಾಚಣ್ಣ ಒಡೆಯರು ಬಾರಕೂರಿನಲ್ಲಿ ವಿಜಯನಗರ ಅರಸರ ಪ್ರತಿನಿಧಿಯಾಗಿ ಆಳಿಕೊಂಡಿದ್ದಾಗ ಹರಿಯಪ್ಪರಸ ಮುಂತಾದ ಪ್ರಮುಖರು ಈ ದೇವಸ್ಥಾನದ ನಂದಾದೀವಿಗೆಗೂ ಬ್ರಾಹ್ಮಣರ ಸಮಾರಾಧನೆಗೂ ೭ ಹೊನ್ನಿನ ಜಮೀನನ್ನು ಈ ದೇವರಿಗೆ ಧಾರಾಪೂರ್ವಕವಾಗಿ ಬಿಟ್ಟಿದ್ದರೆಂದು ತಿಳಿಸುತ್ತದೆ.[9] ಕ್ರಿ.ಶ. ೧೪೪೭ರಲ್ಲಿ ವಿಜಯನಗರದ "ರಾಜಾಧಿರಾಜ, ರಾಜಪರಮೇಶ್ವರ ಶ್ರೀವೀರಪ್ರತಾಪ ದೇವರಾಯ ಮಹಾರಾಯನ ನಿರೂಪದಿಂದ ಬಾರಕೂರು ರುಪ್ಪಂಣ ಒಡೆಯರು ಶ್ರೀ ಕೋಟಿನಾಥ ದೇವರಿಗೆ ೨೦೮½ ಹೊನ್ನಿನ ಉತ್ಪತ್ತಿಯಿರುವ ಕರುವ ಕುಂದ ಗ್ರಾಮವನು ದೇವರಾಯನ ಹೆಸರಿನಲ್ಲಿ ಕೋಟೇಶ್ವರ ದೇವಸ್ಥಾನದಲ್ಲಿ ಧಾರ್ಮಿಕ

---

5 S.I. IX, Part II, No. 407; ದೇವಸ್ಥಾನದ ಒಲಗ ಮಂಟಪದ ಪಶ್ಚಿಮಕ್ಕಿರುವ ಶಾಸನ

6 S.I. IX, Part II, No. 409; ದೇವಸ್ಥಾನದ ಪೂರ್ವಪ್ರಾಕಾರದಲ್ಲಿರುವ ಶಾಸನ

7 S.I. IX, Part II, No. 415; ದೇವಸ್ಥಾನದ ಪೂರ್ವಪ್ರಾಕಾರದ ಹೊರಗಿರುವ ಶಾಸನ

8 S.I. IX, Part II, No. 417; ದೇವಸ್ಥಾನದ ಪೂರ್ವಪ್ರಾಕಾರದ ಅಂಚಿನಲ್ಲಿರುವ ಶಾಸನ

9 S.I. IX, Part II, No. 435; ದೇವಸ್ಥಾನದ ಪೂರ್ವ ಪಡಸಾಲೆಯಲ್ಲಿರುವ ಇನ್ನೊಂದು ಶಾಸನ

ಕಾರ್ಯಗಳು ಸಾಂಗವಾಗಿ ನೆರವೇರುವಂತೆ ಧರ್ಮಶಾಸನ ಬಿಟ್ಟಿದ್ದರು.[10] "ಶಾಲಿವಾಹನ ಶಕ ೧೪೬೭ರ ಸಂದು ಒಂಬತ್ತನೆಯ ವರ್ತಮಾನ ಪರಾಭವ ಸಂವತ್ಸರದಲ್ಲಿ ಕಾರ್ತಿಕ ಮಾಸ ಶು. ೧೫ರಲ್ಲು ಬಾರಕೂರಿನಲ್ಲಿ ವಿಜಯನಗರ ಚಕ್ರವರ್ತಿಗಳಾಜ್ಞಾನುಸಾರವಾಗಿ ಆಳಿಕೊಂಡಿದ್ದ ಅಚ್ಚಪ್ಪ ಒಡೆಯರು ಶ್ರೀ ಸದಾಶಿವ ಮಹಾರಾಯರಿಗೆ ಶತ್ರುಕ್ಷಯ ಮಿತ್ರೋರ್ಜಿತ, ಆಯುರಾರೋಗ್ಯ ಐಶ್ವರ್ಯ ವೃದ್ಧಿಯಾಗಬೇಕೆಂದು ಕೋಟೇಶ್ವರ ದೇವರಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳು ಸಾಂಗವಾಗಿ ನೆರವೇರಲಿಕ್ಕೆ ಹುದರ ಹಳಿವಾಡದಲು ೫೦ ಗದ್ಯಾಣದ ಭೂಮಿಯನ್ನು ಬಿಟ್ಟಿದ್ದರು.[11] ಈ ಶಾಸನದ ವೈಶಿಷ್ಟ್ಯವೇನೆಂದರೆ, ವಿಜಯನಗರದ ಅರಸರ ಧಾರ್ಮಿಕ ಸಹಿಷ್ಣುತೆಯನ್ನು ತಿಳಿಸುವುದೇ. ರಾಮರಾಜ ವೇಂಕಟಾದ್ರಿಯವರು ಶ್ರೀವೈಷ್ಣವ ಪಂಥದವರಾಗಿದ್ದರೆಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ವಿಜಯನಗರದ ಕೊನೆಯ ಅರಸರು ವೈಷ್ಣವ ಪಕ್ಷಪಾತಿಗಳಾಗಿ ಶಿವದೇವಾಲಯವನ್ನು ಕಡೆಗಣಿಸಿದ್ದರೆಂಬುದು, ಇದರಿಂದಾಗಿ ಶ್ರೀವೈಷ್ಣವ ಮತ್ತು ಶೈವರಲ್ಲಿ ಮತಭೇದ ಉಂಟಾಗಿ ವಿಜಯನಗರದ ಪತನಕ್ಕೆ ನಾಂದಿಯಾಯಿತು[12] ಎಂಬುದು ಶಿವಮೂರ್ತಿಶಾಸ್ತ್ರೀ ಅವರ ಅಭಿಪ್ರಾಯ. ಆದರೆ ಈ ಶಾಸನ ಈ ವಾದ ಸರಿಯಿರಲಾರದೆಂಬುದನ್ನು ತಿಳಿಸುತ್ತದೆ. ಶೈವ ದೇವಾಲಯವಾದ ಕೋಟೇಶ್ವರ ದೇವಸ್ಥಾನಕ್ಕೆ ಕ್ರಿ.ಶ. ೧೫೬೦ರ ವರೆಗೆ ವಿಜಯನಗರ ಅರಸರಿಂದ ಉಂಬಳಿ ಸಿಗುತ್ತಿತ್ತೆಂದು ಇನ್ನು ಕೆಲವು ಶಾಸನಗಳು ತಿಳಿಸುತ್ತವೆ.[13] ವಿಜಯನಗರದ ಅರಸರು ಇಲ್ಲಿಯ ಧಾರ್ಮಿಕ ಕಾರ್ಯಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ, ಇಲ್ಲಿ ಧಾರ್ಮಿಕ ಕಾರ್ಯಗಳಿಗೆ ಭಂಗ ಉಂಟಾದಾಗ ಅದನ್ನು ರಾಜರು ಪ್ರತ್ಯಕ್ಷವಾಗಿ ವಿಚಾರಿಸಿ ತಕ್ಕ ಕ್ರಮ ಕೈಕೊಳ್ಳುತ್ತಿದ್ದರೆಂದು ಇಲ್ಲಿ ಸಿಕ್ಕಿದ ಇನ್ನೊಂದು ಶಾಸನ ತಿಳಿಸುತ್ತದೆ.[14] ಈ ಶಾಸನದಂತೆ (೧೫೫೧) : ಕೋಟೇಶ್ವರ ದೇವಸ್ಥಾನದ ಕೊಡಿ[15] ಹಬ್ಬದಲ್ಲಿ ತುಳುರಾಜ್ಯ ಕೂಡಿದಲ್ಲಿ ಜನರು ತಮ್ಮತಮ್ಮೊಳಗೆ ಕಾದಾಡಿ, ಬ್ರಾಹ್ಮಣರು ಶೂದ್ರರ ಹೆಣಗಳು

---

[10] S.I. IX, Part II, No. 451

[11] S.I. IX, Part II, No 621; ದೇವಸ್ಥಾನದ ಓಲಗಮಂಟಪದ ಪಶ್ಚಿಮಕ್ಕಿರುವ ಶಾಸನ

[12] ಶಿವಮೂರ್ತಿಶಾಸ್ತ್ರಿ, ಬಿ: ಮಲೆನಾಡಿನ ರಾಜ್ಯದ ಮೂರು ಚಿತ್ರಗಳು, ಪುಟ 45

[13] S.I. IX, Part II, No. 673

[14] S.I. IX, Part II, No. 621

[15] ಕೋಟೇಶ್ವರ ರಥೋತ್ಸವಕ್ಕೆ ಕೊಡಿಹಬ್ಬವೆಂದು ಈ ಕಡೆಯಲ್ಲಿ ಕರೆಯುತ್ತಾರೆ. ಈ ರಥೋತ್ಸವದ ಮಾರನೆ ದಿನ ಓಕುಳಿ ಜರುಗುತ್ತದೆ. ಇಲ್ಲಿಯ ಹೆಚ್ಚಿನ ಜಾತಿಯವರು ಓಕುಳಿ ಹಬ್ಬದಲ್ಲಿ ಭಾಗವಹಿಸುತ್ತಾರೆ. ಈ ಹಬ್ಬ ಪ್ರತಿವರ್ಷ ವೃಶ್ಚಿಕ ಮಾಸ ಪೂರ್ಣಿಮೆಯಲ್ಲಿ ಜರುಗುತ್ತದೆ. ಕುಂದಾಪುರ ತಾಲ್ಲೂಕಿನಲ್ಲಿ ನಡೆಯುವ ರಥೋತ್ಸವಗಳಲ್ಲಿ ಇದು ಮೊದಲನೆಯದು. ಈ ಹಬ್ಬ ಕೊಡಿ ತಿಂಗಳಲ್ಲಿ ಬರುವುದರಿಂದ ಇದನ್ನು ಕೊಡಿಹಬ್ಬವೆನ್ನುತ್ತಾರೆ.

ದೇವಸ್ಥಾನದೊಳಗೆ ಬಿದ್ದು ಗೋಹತ್ಯವಾಗಿ ದೇವಸ್ಥಾನದ ಬಾಗಿಲು ಮುಚ್ಚಿ ಇನ್ನಿತರ ಧರ್ಮಕಾರ್ಯಗಳು ಆರು ತಿಂಗಳ ಪರ್ಯಂತ ನಿಂತುಹೋದಾಗ ಇದು ವಿಜಯನಗರದ ಚಕ್ರವರ್ತಿ ಸದಾಶಿವರಾಯನಿಗೆ ತಿಳಿದು ಇದನ್ನು ವಿಚಾರಿಸುವಂತೆ ಬಾರಕೂರಿನಲ್ಲಿ ತನ್ನ ಪ್ರತಿನಿಧಿಯಾದ ಏಕದಳ ನಾಯಕನಿಗೆ ಆಜ್ಞಾಪಿಸಿದ. ರಾಜಪ್ರತಿನಿಧಿಯಾದ ಏಕದಳ ನಾಯಕ ಇಲ್ಲಿಗೆ ಆಗಮಿಸಿ ಇಲ್ಲಿ ನಡೆದ ವ್ಯಾಜ್ಯಗಳನ್ನು ತೀರ್ಮಾನಿಸಿ ದೇವಸ್ಥಾನದಲ್ಲಿ ಪ್ರಾಯಶ್ಚಿತ್ತ ನಡೆಸುವುದಕ್ಕೆ ೩೫ ವರಹವನ್ನು ಕೊಟ್ಟ. ಕ್ರಿ.ಶ. ೧೫೫೪ರಲ್ಲಿ ಸಿಕ್ಕಿದ ಶಾಸನ, ವಿಜಯನಗರ ಚಕ್ರವರ್ತಿ ಸದಾಶಿವರಾಯನ ಆಜ್ಞಾನುಸಾರವಾಗಿ ಕೆಳದಿ ಸದಾಶಿವ ನಾಯಕ ಈ ದೇವಸ್ಥಾನದ ಧಾರ್ಮಿಕ ಕಾರ್ಯಗಳನ್ನು ಸಾಂಗವಾಗಿ ನೆರವೇರಿಸಲು ಜಮೀನನ್ನು ಈ ದೇವಸ್ಥಾನಕ್ಕೆ ಬಿಟ್ಟನೆಂದು ತಿಳಿಸುತ್ತದೆ.[16] ಕ್ರಿ.ಶ. ೧೫೬೨ರಲ್ಲಿ ಕೆಳದಿ ಸದಾಶಿವ ನಾಯಕ ವಿಜಯನಗರದ ಸದಾಶಿವ ಮಹಾರಾಯನ ನಿರೂಪದಿಂದ ತುಳು ರಾಜ್ಯವನ್ನು ಆಳಿಕೊಂಡಿರುವಲ್ಲಿ ಕೋಟೀಶ್ವರ ದೇವರ ರುದ್ರಾಭಿಷೇಕ ಮತ್ತು ಶಿವರಾತ್ರಿಯಲ್ಲಿ ನಡೆಯುವ ರಂಗಪೂಜೆಗೆ ಬಸ್ರೂರು ಹೋಳಿಯ ಬಳಿಯ ಚತುಶೆಟ್ಟಿ ಬಿಟ್ಟನೆಂದು ತಿಳಿಸಿದೆ.[17]

ಈ ಶಾಸನಗಳಿಂದ ತಿಳಿದುಬರುವ ವಿಷಯವೇನೆಂದರೆ, ವಿಜಯನಗರ ಅರಸರು ಇಲ್ಲಿಯ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ವಹಿಸಿದ್ದರು. ಇಲ್ಲಿ ದತ್ತಿಬಿಟ್ಟ ಶಾಸನಗಳು ವಿಜಯನಗರ ಅರಸರ ಹೆಸರಿನಲ್ಲಿಯೇ ಇವೆ. ಇದೂ ಅಲ್ಲದೆ ಇಲ್ಲಿಯ ಪ್ರಮುಖ ನಾಗರಿಕರು ದೇವಸ್ಥಾನಕ್ಕೆ ಉಂಬಳಿ ಬಿಡುವಾಗ, ವಿಜಯನಗರ ಚಕ್ರವರ್ತಿಗಳ ಹೆಸರನ್ನೂ ಕೂಡಿಸಿಕೊಂಡಿದ್ದರು. ಇದರಿಂದಾಗಿ ವಿಜಯನಗರ ಚಕ್ರವರ್ತಿಗಳು ಇಲ್ಲಯ ಜನರ ವಾತ್ಸಲ್ಯಕ್ಕೆ ಪಾತ್ರರಾಗಿದ್ದರೆಂದೂ ಇಲ್ಲಿಯ ಜನರಿಗೆ ವಿಜಯನಗರ ಸಮ್ರಾಟರಲ್ಲಿ ಅಪಾರ ಸ್ವಾಮಿಭಕ್ತಿಯಿತ್ತೆಂದೂ ತಿಳಿದರೆ ತಪ್ಪಾಗಲಿಕ್ಕಿಲ್ಲ.[18]

ದೇವಸ್ಥಾನದ ಆಡಳಿತತ್ರಯ

ಇಲ್ಲಿ ಸಿಕ್ಕಿದ ಶಾಸನಗಳು ಈ ದೇವಸ್ಥಾನದ ಆಡಳಿತ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. “ ವಿಷ್ಣು ಆಸ್ರಣನ ಮಗ ನಾರಾಯಣ ಆಸ್ರಣ ರಾಯದ ಆಸ್ರಣನ ಮಗ ಕೃಷ್ಣ ಆಸ್ರಣ ”ನೆಂದು[19] ಒಂದು ಶಾಸನದಲ್ಲಿ ಉಲ್ಲೇಖಿಸಿದೆ. ಆಸ್ರಣರೆಂದರೆ

---

[16] Ranga Achar, V., *Topographical list of Inscriptions of Madras Presidency,* Vol. II

[17] S.I. Vol. IX, Part II, No. 673

[18] S.I. Vol. IX, Part II, No. 621; “ ಸದಾಶಿವರಾಯರಿಗೆ ಶತ್ರುಕ್ಷಯ ಮಿತ್ರೋರ್ಜಿತ ಆಯುರಾರೋಗ್ಯ ಐಶ್ವರ್ಯವೃದ್ಧಿಯಾಗಬೇಕೆಂದೂ, ರಾಮರಾಜ ವೆಂಕಟಾದ್ರಿ ರಾಜರುಗಳಿಗೆ ಪುಣ್ಯವಾಗಬೇಕೆಂದೂ” ಈ ಶಾಸನದಲ್ಲಿ ತಿಳಿಸಿದೆ.

[19] S. I. IX, Part II, No. 673

ದೇವಸ್ಥಾನದ ಪೂಜಾವಿಧಿಗಳನ್ನು ಸಾಂಗವಾಗಿ ನಡೆಸಿಕೊಂಡು ಹೋಗುವವರು.[20] ಈ ದೇವಸ್ಥಾನದಲ್ಲಿ ಸೇವಾವರ್ಗವಿದ್ದಿತು. ಇದರ ಬಗ್ಗೆಯೂ ಶಾಸನಗಳಲ್ಲಿ ಉಲ್ಲೇಖವಿದೆ. ಇವುಗಳಂತೆ "ದೇವಸ್ಥಾನದಲ್ಲಿ ಬ್ರಾಹ್ಮಣ ಅಡಿಕೆ (ಗೆ?) ಮಾಡುವನೊಬ್ಬ.... ದೇವರಿಗೆ ಚಾಮರವನಿಕ್ಕುವ [ಹೆ]ಮಕ್ಕಳು ಜನ ಎರಡಕ್ಕಂ ಪ್ರತಿದಿನ ಒಂದಕ್ಕಂ ಅಕ್ಕಿನಾಡ (ಹಾನೆ) ಎರಡರ ಲೆಕ್ಕವರುಷ ಒಂದಕ್ಕಂ ಅಕ್ಕಿ ಹಾನೆತ್ರರ ಲೇಖದ ಮೂಡೆ ಹದಿನೆಂಟು....ತನಕ ದಂಡದ ಚವರಿ ಸದಕ ಹಳತಾದೆಡೆ ಹೊಸತ ಮಾಡಿಸುವನು. ದೇವರ ಫಲವಸತಿಗೆ ಹರಿದೆಡೆ ಹೊಸ ಪಟ್ಟಿಗಳ(ಹೊಲಿಸಿ)ಕ್ಕುಡುವನು. ಆ ಮಠದ ಬೋಹರಿಸುವ ಬಸವಿತ್ತಿಯು ಜದ ಒಂದಕ್ಕಂ ವರಿಸ ಒಂದಕ್ಕಂ ಅಕ್ಕಿಮೂಡೆ ೩ ಹಾನೆ ಹತ್ತು, ಮಠದ ಪಾದುಕೆ ಕಸವ ಗುಡಿಸಿದರೆಯು।"[21] ಈ ಸೇವಾವರ್ಗದ ಜನ ದೇವಸ್ಥಾನದ ನೈರ್ಮಲ್ಯವನ್ನು ಕಾಪಾಡಿಕೊಂಡು ಹೋಗುತ್ತಿದ್ದರು. ಈ ರೀತಿ ಸೇವಾವರ್ಗ ರಾಜವೈಭವವನ್ನು ಪಡೆದ ದೇವಗೃಹದಲ್ಲಿತ್ತು.[22] ಈ ಪ್ರದೇಶದಲ್ಲಿ ಯಾವ ದೇವಸ್ಥಾನಕ್ಕಾಗಲಿ, ಯಾವ ವ್ಯಕ್ತಿಗಾಗಲಿ ದಾನಮಾಡುವಾಗ ಈ ದೇವಸ್ಥಾನಕ್ಕೂ ಅದರಲ್ಲಿ ಸ್ವಲ್ಪ ಭಾಗ ಸಲ್ಲಿಸಬೇಕಿತ್ತು. ಈ ವಿಚಾರವನ್ನು ಇಲ್ಲಿ ಸಿಕ್ಕಿದ ಎರಡು ಶಾಸನಗಳು ಪುಷ್ಟೀಕರಿಸುತ್ತವೆ. ಒಂದು ಶಾಸನದಂತೆ[23] ಶಾ.ಶ. ೧೪೦೬ರ ಫಾಲ್ಗುಣದಲ್ಲಿ ಬಾಚಣ್ಣ ಒಡೆಯರು ಬಾರಕೂರಿನಲ್ಲಿ ಆಳಿಕೊಂಡಿರುವಾಗ ಕುಂದಾಪುರದ ಎರಡು ಧನಿಗಳು ಈ ಸ್ಥಳದಲ್ಲಿ ಬ್ರಹ್ಮಾದಾಯಕ್ಕೆ ತೆಗೆದುಕೊಂಡು ಅದನ್ನು ಶೃಂಗೇರಿಯ ನರಸಿಂಹ ಭಾರತಿಯವರಿಗೆ ಉದಾರವಾಗಿ ಬಿಟ್ಟಿದ್ದರು. ಬಿಟ್ಟ ಉತ್ಪತ್ತಿಯಲ್ಲಿ ಕೋಟೀಶ್ವರ ದೇವರಿಗೆ ನಾಡ ಹಾನೆ ೬೦ ಅಕ್ಕಿನಾಗಂಡುಗದಲು ಮತ್ತು ಮೂರು ಮುಡೆ ಭತ್ತವು ಸಲ್ಲಬೇಕು—ಎಂದು ಹೇಳಿದೆ. "ಶ್ರೀ ಕೋಟೀಶ್ವರದೇವರ ಸನ್ನಿಧಿಯಲು ಬಸ್ರೂರು ಪದುವಕೇರಿಯ ಗಣಪಶೆಟ್ಟಿಯು ಮಗ ಹೊಳೆಯ ಬಳಿಯ ಚತುಶೆಟ್ಟಿ ಶಿವರಾತ್ರಿ ಪುಣ್ಯಕಾಲದಲ್ಲು ಕಟ್ಟಿಸಿದ ಮಠಧರ್ಮಕ್ಕೆ" ಬಿಟ್ಟ[24] ಧರ್ಮಶಾಸನದಲ್ಲಿ "ಕೋಟೀಶ್ವರದೇವರ ರುಧ್ರಾಭಿಷೇಕ ಮು ೯, ಶಿವರಾತ್ರಿ ರಂಗಪೂಜೆಗೆ ಬಿಟ್ಟ ದಾನದ ವಿಷಯ ತಿಳಿಸುತ್ತದೆ. ಆದುದರಿಂದ ಈ ದೇವಸ್ಥಾನ ಸೀಮೆದೇವಸ್ಥಾನವಾಗಿರಬೇಕು. ಈ ದೇವಸ್ಥಾನದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳನ್ನು ಸಾಂಗವಾಗಿ ನೋಡಿಕೊಂಡು ಹೋಗುವ ಜವಾಬ್ದಾರಿ ಬಾರಕೂರಿನ ರಾಜ್ಯಪಾಲನಿಗಿದ್ದಿದ್ದರೂ ವಿಜಯನಗರದ ಅರಸರು ಇದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ವಿಜಯನಗರದ ಅರಸರು

[20] ಗುರುರಾಜ ಭಟ್ಟ, ಡಾ. ಆರ್., ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು, ಪು ೧೩

[21] S.I. IX, Part II, No. 409, 417, 673

[22] ಗುರುರಾಜ ಭಟ್ಟ, ಡಾ. ಆರ್., ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು, ಪು. ೧೯

[23] S.I. IX, Part II, No. 430

[24] S.I. IX, Part II, No. 673

ಈ ದೇವಸ್ಥಾನಕ್ಕೆ ಬಿಟ್ಟ ಉಂಬಳಿ ಜಮೀನಿಗೆ ತೆರಿಗೆಯಿಂದ ವಿನಾಯಿತಿ ದೊರಕುತ್ತಿತ್ತು.[25]

ದೇವಸ್ಥಾನದಲ್ಲಿಯ ಧಾರ್ಮಿಕ ಚಟುವಟಿಕೆಗಳು

ಇಲ್ಲಿಯ ಶಾಸನಗಳು ದೇವಸ್ಥಾನದಲ್ಲಿ ಆ ಕಾಲದಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳನ್ನು ತಿಳಿಸುತ್ತವೆ. ಈ ಪೂಜಾಕಟ್ಟಳೆಗಳಿಗೆ ರಾಜರಿಂದಲೂ ಇಲ್ಲಿಯ ಪ್ರಮುಖ ಪ್ರಜೆಗಳಿಂದಲೂ ಉಂಬಳಿ ಸಿಗುತಿತ್ತು. ಇಲ್ಲಿಯ ಧಾರ್ಮಿಕ ಕಟ್ಟಳೆಗಳನ್ನು ಪಾಲಿಸಬೇಕಿತ್ತೆಂದೂ ಶಾಸನಗಳು ತಿಳಿಸುತ್ತವೆ. ಈ ದೇವಸ್ಥಾನದಲ್ಲಿ ನಡೆಯುವ ಇನ್ನೊಂದು ಧಾರ್ಮಿಕ ಚಟುವಟಿಕೆಯಾದ ಹಬ್ಬಗಳಲ್ಲಿ ಕೊಡಿಹಬ್ಬ ಮುಖ್ಯವಾಗಿದೆ. ಈ ಹಬ್ಬದ ವಿಚಾರವಾಗಿ ಇಲ್ಲಿಯ ಒಂದು ಶಾಸನ ಈ ರೀತಿಯಾಗಿ ತಿಳಿಸುತ್ತದೆ: "ಶ್ರೀಮತು ಕೋಟೇಶ್ವರ ದೇವರ ಸಂನಿಧಿಯಲು ಕಟ್ಟಿಯ ಹಬ್ಬದಲು ಉಬಯ ಜಂಗಮರಿಗೆ ಆರೋಹಣ ಧರ್ಮಕ್ಕೆ "[26] ೧೨ ಮುಡಿ ಮತ್ತು ೪೦ ಹಾನೆ ಉತ್ಪತ್ತಿ ಬರುವ ಜಮೀನನ್ನು ಭೃಂಗಿನಾಥ ನಂದಿನಾಥ ವೀರಭದ್ರ ಮತ್ತು ಗಣಕೂಮಾರ ಹೆಗ್ಡೆಯರು ದೇವಸ್ಥಾನದಲ್ಲಿ ದಾನಬಿಟ್ಟರು. ಇಲ್ಲಿಯ ಇನ್ನೊಂದು ಶಾಸನ ಕೋಟೇಶ್ವರ ಕೊಡಿಹಬ್ಬದಲ್ಲಿ ತುಳುರಾಜ್ಯವೇ ಕೂಡಿದೆಯೆಂದು ವರ್ಣಿಸಿದೆ.[27] ಇದರಿಂದಾಗಿ ಕೊಡಿಹಬ್ಬ ಈಗಿನಂತೆ ಆ ಕಾಲದಲ್ಲೂ ಪ್ರಖ್ಯಾತವಾಗಿತ್ತೆಂದು ತಿಳಿಯಬಹುದು.

ವಿಜಯನಗರ ಅರಸರ ಅನಂತರ ಈ ಪ್ರದೇಶದಲ್ಲಿ ಆಳ್ವಿಕೆಗೆ ಬಂದ ಕೆಳದಿ ಅರಸರೂ ಇಲ್ಲಿಯ ಪೂರ್ವಮರ್ಯಾದೆಯನ್ನೂ ಧರ್ಮ ಕಟ್ಟಳೆಗಳನ್ನೂ ಸಾಂಗವಾಗಿ ನಡೆಸಿಕೊಂಡು ಬಂದರು.

---

[25] S.I. Vol. IX, Part II, No. 621
[26] S.I. Vol. IX, Part II, No. 409
[27] S.I. Vol. IX, Part II, No. 621

ವಿಜಯನಗರ ರಾಜ್ಯ ದೈವನಿರ್ಮಿತ ರಾಜ್ಯವೇ ಹೊರತು, ಮನುಷ್ಯನಿರ್ಮಿತವಲ್ಲವೆಂದು ಅಂದಿನ ಜನ ದೃಢವಾಗಿ ನಂಬಿದ್ದರು. ಅದರ ಮೂಲೋತ್ಪತ್ತಿಯನ್ನು ಕುರಿತು ಯಾವುದೋ ನಿಗೂಢ ಭಾವನೆ ಅವರಲ್ಲಿ ನೆಲೆಯಾಗಿತ್ತು. ಅದೊಂದು ವಿಶಿಷ್ಟ ಸೃಷ್ಟಿ ಮಾತ್ರವಲ್ಲ—ಭಗವಾನ್ ವಿರೂಪಾಕ್ಷನ ವಾಸಸ್ಥಾನವೆಂದೂ ನರಸಿಂಹ, ವಿಟ್ಠಲ, ಶ್ರೀರಾಮಚಂದ್ರ, ಹನುಮಂತ, ವೀರಭದ್ರ ಮೊದಲಾದ ಅನೇಕ ದೇವಾಧಿದೇವತೆಗಳ ನಿಲಯವೆಂದೂ ಜನ ನಂಬಿದ್ದರು. ದುರ್ಗದ ಪರಿಸರದಲ್ಲಾಗಲಿ ಉದ್ಯಾನ ಮಂದಿರಗಳಲ್ಲಾಗಲಿ ವೀರಾಧಿವೀರರ ಮೂರ್ತಿಗಳೂ ಚೈತ್ಯಾಲಯಗಳೂ ಗುಡಿ ದೇಗುಲಗಳೂ ಉಪವನಗಳೂ ಕಾರಂಜಿಗಳೂ ಗುಹೆಗಳೂ ಶೈಲಗಳೂ ಸುಗಂಧಪುಷ್ಪ ಮಾಲೆಗಳಿಂದ ಅಲಂಕೃತವಾಗಿದ್ದುವು. ಜಲದೇವತೆಗಳು ಎಡೆಯಾಡುವ ನಿತ್ಯನಿರ್ಝರಗಳು, ಅಶರೀರವಾಣಿ ಹೊರಡುವ ಗುಹೆಗಳು, ನಾಗ ಸಮಾಧಿಗಳು, ನಿತ್ಯಾರಾಧನೆಯಿಂದ ಪವಿತ್ರವಾದ ಪ್ರಾಚೀನ ಶಿಲೆಗಳು, ವೃಕ್ಷಪೂಜೆ, ಶಿಲಾಪೂಜೆ, ಮೂರ್ತಿಪೂಜಾದಿಗಳು ನಗರದ ನಿತ್ಯಜೀವನದ ರಹಸ್ಯವನ್ನು ಮಂತ್ರಪುಷ್ಟ ವರ್ಧಿಸಿದುವು. ಪ್ರಜೆಯಾದವನು ಜನ್ಮ ತಾಳಿರುವುದು ಈ ದೇವತೆಗಳಿಗಾಗಿ ಇವರ ಆರಾಧನೆಗಾಗಿ ಸಂತತವಾಗಿ ನಡೆಯತಕ್ಕ ವಿಧಿ ಸಂಸ್ಕಾರಗಳೂ ಧರ್ಮೋತ್ಸವಗಳೂ ಪ್ರಜೆಯ ಅನನ್ಯಾಧಿಕಾರ. ಅವುಗಳನ್ನು ಅವನು ಬಿಟ್ಟುಕೊಡುವಂತೆಯೂ ಇಲ್ಲ, ಹೊಸದಾಗಿ ಗಳಿಸಿಕೊಳ್ಳುವಂತೆಯೂ ಇಲ್ಲ. ಎಲ್ಲೋ ಒಮ್ಮೊಮ್ಮೆ ಗಂಡಾಂತರ ಕಾಲಗಳಲ್ಲಿ ಹೊರತು, ಬೇರೆಂದೂ ಅವನು ನಗರವನ್ನು ಬಿಟ್ಟುಹೋಗಲಾರ; ಹಾಗೆಲ್ಲಾದರೂ ಹೊರಟುಹೋದ ಪಕ್ಷಕ್ಕೆ, ಅವನು ಸಮಾಜ ಬಹಿಷ್ಕೃತನಾಗಿ ಪ್ರಜೆಯ ಹಕ್ಕುಬಾಧ್ಯತೆಗಳನ್ನು ಕಳೆದುಕೊಳ್ಳಬೇಕಾಗುತ್ತಿತ್ತು. ದೇವತಾರಾಧನೆ ಅವನ ನಿತ್ಯಕರ್ಮ. ಕಲಾಪ್ರದರ್ಶನ, ಧಾರ್ಮಿಕೋತ್ಸವಗಳು ದೇವತಾರಾಧನೆಯ ಅಂಗವಾಗಿದ್ದುವು. ವಿಜಯನಗರದಲ್ಲಿ ವರ್ಷದ ಬಹುಭಾಗವೆಲ್ಲ ವಿಪರೀತ ಸೆಕೆಯಿದ್ದ ಕಾರಣ, ಈ ಉತ್ಸವಗಳೆಲ್ಲ ಹೊರಬಯಲಿನಲ್ಲಿಯೇ ನಡೆಯುತ್ತಿದ್ದುವು. ಸಾರ್ವಜನಿಕ ಸ್ಥಳಗಳಲ್ಲಿ ಚಿತ್ರಗಳೂ, ದೇವತಾ ಪ್ರತಿಮೆಗಳೂ ಕಣ್ಮನಗಳನ್ನು ಸೆಳೆಯುವಂತಿದ್ದುವು. 'ಸ್ತೋತ್ರಗಳೂ ಹೋಮ ಹವನಗಳೂ ಜನರ ಮನೋವೈಕಲ್ಯವನ್ನು ಕಳೆಯುತ್ತಿದ್ದುವು. ರಾಮನವಮಿ, ಕೃಷ್ಣಜನ್ಮಾಷ್ಟಮಿ, ದೀಪಾವಳಿ, ಮಹಾಶಿವರಾತ್ರಿ, ಕಾಮನ ಹಬ್ಬ ಇವೆಲ್ಲದಕ್ಕೂ ಮಿಗಿಲಾಗಿ ಪ್ರಸಿದ್ಧವಾದ ನವರಾತ್ರಿ, ದುರ್ಗಾಷ್ಟಮಿ, ನವಮಿ, ವಿಜಯದಶಮಿ, ಮೊದಲಾದ ಉತ್ಸವಗಳಿಂದ ಜನರು ಹರ್ಷಚಿತ್ತರಾಗಿದ್ದರು. ಕುಶಲಕರ್ಮ ಪ್ರದರ್ಶನ, ನೃತ್ಯ ದೇವತಾ ವಿಗ್ರಹಗಳ ಮೆರವಣಿಗೆ, ರಥ ತುರಗಗಳ ಪಂತ, ಮಲ್ಲಯುದ್ಧ', ವನ್ಯಮೃಗಗಳೊಡನೆ ಕಾಳಗ, ಬೊಂಬೆಯಾಟ—ಇವುಗಳೂ ಧಾರ್ಮಿಕ ಸಮಾರಂಭಗಳೇ ಆಗಿದ್ದುವು.[1]

—ಡಾ. ಎಂ. ವಿ. ಕೃಷ್ಣರಾವ್,
ಎಂ. ಕೇಶವಭಟ್ಟ

[1] ಕರ್ಣಾಟಕ ಇತಿಹಾಸದರ್ಶನ, ಕರ್ಣಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು, ಪು. ೯೮೫

ಡಾ. ಬಿ. ಷೇಕ್ ಆಲಿ

ಡಾ. ಎಂ. ವಿ. ಕೃಷ್ಣರಾವ್

ಇತಿಹಾಸದ ದಿಗಂತದಲ್ಲಿ ಸುಮಾರು ಅರ್ಧಶತಮಾನಕಾಲ ಜ್ಞಾನಜ್ಯೋತಿಯನ್ನು ಅವಿರತವಾಗಿ ಬೆಳಗಿದ ಡಾ. ಎಂ. ವಿ. ಕೃಷ್ಣರಾವ್ ಅವರ ನಿಧನದಿಂದ ದುರ್ದೈವ ಕರ್ನಾಟಕದ ಮತ್ತೊಬ್ಬ ಸುಪುತ್ರನನ್ನು ಕಸಿದುಕೊಂಡಿದೆ. ಬಿ. ಲೂಯಿ ರೈಸ್, ಆರ್. ನರಸಿಂಹಾಚಾರ್ಯ, ಶಾಮಶಾಸ್ತ್ರೀ, ವೆಂಕಟೇಶ್ವರಲು ಮತ್ತು ಎಂ. ಎಚ್. ಕೃಷ್ಣ : ಇವರ ಘನವೆತ್ತ ಹೆಸರುಗಳು ವಿದ್ವತ್ ಪ್ರಪಂಚಕ್ಕೆ ಮತ್ತು ಕರ್ಣಾಟಕದ ಘನತೆ ಮತ್ತು ಗೌರವಗಳ ಏಳಿಗೆಗಾಗಿ ಸಲ್ಲಿಸಿರುವ ಅಮೋಘ ಸೇವೆಯಿಂದ ಮೈಸೂರಿನೊಂದಿಗೆ ಶಾಶ್ವತವಾಗಿ ಉಳಿದುಕೊಂಡಿವೆ. ನಮ್ಮ ಭೌತಿಕ ದೃಷ್ಟಿಗೆ ಅಗೋಚರವಾದ, ಆದರೆ ನಮ್ಮ ಇತಿಹಾಸ ಮತ್ತು ಸಂಸ್ಕೃತಿಗಳ ಮೇಲೆ ಅಚ್ಚಳಿಯದಂಥ ಪ್ರಭಾವ ಬೀರಿ ಮರೆಯಾದ ಇಂಥ ಮಹಾ ಧೀಮಂತರ ಶ್ರೇಣಿಯಲ್ಲಿ ಡಾ. ಎಂ. ವಿ. ಕೃಷ್ಣರಾವ್ ಸೇರಿ ಅಮರರಾಗಿದ್ದಾರೆ. ಅಧ್ಯಾಪಕರಾಗಿ, ವಿದ್ವಾಂಸರಾಗಿ, ಭಾಷಣಕಾರರಾಗಿ, ಸಂಘಟನಕಾರರಾಗಿ, ಸ್ನೇಹಿತರಾಗಿ ಹಾಗೂ ಒಬ್ಬ ವ್ಯಕ್ತಿಯಾಗಿ ಅವರು ಹೊಂದಿದ್ದ ಅಪೂರ್ವ ಪ್ರತಿಭೆ ಮತ್ತು ವರ್ಚಸ್ಸುಗಳಿಗಾಗಿ ಹಾಗೂ ಹಳೆಯ ತಲೆಮಾರಿನ ಕೊನೆಯ ಕೊಂಡಿಯೋಪಾದಿಯಲ್ಲಿದ್ದಂಥ ಎಂ. ವಿ. ಕೆ. ಅವರನ್ನು ಕಳೆದುಕೊಂಡಿದ್ದಕ್ಕಾಗಿ ನಾವು ಸಂತಾಪವನ್ನು ಸೂಚಿಸಬೇಕಾಗಿದೆ. ಅವರೊಂದಿಗೆ ಸಂಪರ್ಕ ಹೊಂದಿದ ಯಾರನ್ನಾದರೂ ಅವರ ಅಕ್ಷಯ ಶಕ್ತಿ, ಸಹೃದಯತೆ, ಉದಾರತಾದೃಷ್ಟಿ ಮತ್ತು ನಿರರ್ಗಳ ವಾಗ್ಮಿತೆಗಳು ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದುವು. ಇಂಥವರ ಪ್ರೌಢಿಮೆ ನಮ್ಮ ರಾಜ್ಯಕ್ಕೆ ಅದರಲ್ಲೂ ನಮ್ಮ ವಿಶ್ವವಿದ್ಯಾನಿಲಯಕ್ಕೆ ಪ್ರತಿಷ್ಠೆ ಮತ್ತು ಘನತೆಗಳನ್ನು ತಂದು ಕೊಟ್ಟಿದೆ.

ಎಂ. ವಿ. ಕೆ. ಅವರು ಒಂದು ಪ್ರಸಿದ್ಧ ಮಾಧ್ವ ಬ್ರಾಹ್ಮಣ ಮನೆತನದಲ್ಲಿ ಕ್ರಿ.ಶ. ೧೯೦೧ರ ಸೆಪ್ಟೆಂಬರ್ ಎರಡು, ಕೃಷ್ಣಾಷ್ಟಮಿಯ ದಿನ ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ, ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಕಾಲದಲ್ಲಿ ಕನ್ನಡ ಶಿಕ್ಷಣಮಾಧ್ಯಮವನ್ನು ಹೈಸ್ಕೂಲ್ ಶಿಕ್ಷಣ

ದಲ್ಲಿ ಅಳವಡಿಸಲು ಧೀರೋದಾತ್ತ ಹೆಜ್ಜೆಯನ್ನಿಟ್ಟ ಎನ್. ಎಸ್. ಸುಬ್ಬರಾವ್ ಅವರ ಹತ್ತಿರದ ಸಂಬಂಧಿಗಳು. ಎಂ. ವಿ. ಕೆ. ಅವರು ಬಾಲ್ಯದಿಂದಲೂ ಆಟ ಪಾಠಗಳಲ್ಲಿ ಅತ್ಯಂತ ಆಸಕ್ತಿ ಹೊಂದಿದ್ದರು. ಸ್ನೇಹಿತರನ್ನು ಆರಿಸುವಾಗ ಎಚ್ಚರಿಕೆ ವಹಿಸುತ್ತಿದ್ದರು. ಅವರು ತಮ್ಮ ಸಹಪಾಠಿಗಳೊಂದಿಗೆ ಅನೇಕ ಆಸಕ್ತಿಕಾರಕ ವಿಷಯಗಳನ್ನು ಚರ್ಚಿಸುತ್ತಿದ್ದರು. ತಮ್ಮ ನಡೆವಳಿಕೆ ಮತ್ತು ಸದ್ಗುಣಗಳಿಂದ ಗುರುಹಿರಿಯರ ಮೆಚ್ಚುಗೆ ಗಳಿಸಿದ್ದರು. ಅವರು ಕೆ. ಟಿ. ಷಾ, ಡಾ. ರಾಧಾ ಕೃಷ್ಣನ್, ರಾಷ್ಟ್ರಕವಿ ಕುವೆಂಪು ಮುಂತಾದ ಅನೇಕ ಮಹಾತತ್ತ್ವಜ್ಞಾನಿಗಳು, ಕವಿಗಳು ಹಾಗೂ ಆಡಳಿತಗಾರರ ಕಾರ್ಯಕ್ಷೇತ್ರ ಹಾಗೂ ಜ್ಞಾನದೇಗುಲವಾದ ಮಹಾರಾಜ ಕಾಲೇಜಿನಲ್ಲಿ ತಮ್ಮ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದು ಕೊಂಡರು. ಥಾಮಸ್ ಡೆನ್‌ಹ್ಯಾಮ್, ಸಿ. ಆರ್. ರೆಡ್ಡಿ, ರಾಧಾಕುಮುದ್ ಮುಖರ್ಜಿ, ವೆಂಕಟೇಶ್ವರಲು ಮತ್ತು ಎಂ. ಎಚ್. ಕೃಷ್ಣರಂತಹ ಗುರುಗಳ ಶಿಷ್ಯರಾಗುವ ಅದೃಷ್ಟ ಅವರದಾಯಿತು. ಒಳ್ಳೆಯ ಶಿಕ್ಷಕರಾಗುವ ಅರ್ಹತೆ ಪಡೆಯಲು ಬಿ.ಟಿ. ಪದವಿ ಗಳಿಸಿದರು. ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದರು. ಅವರು ತಮ್ಮ ಕಾಯಕನಿಷ್ಠೆಯಿಂದ ಸಹಾಯಕ ಪ್ರೊಫೆಸರರ ಹುದ್ದೆಗೇರಿದರು. ಜ್ಞಾನದಾಹ ಮತ್ತು ಪ್ರಗಲ್ಭ ಪಾಂಡಿತ್ಯವನ್ನು ಪಡೆದ ವಿದ್ವಾಂಸರ ಪಾದದಡಿಯಲ್ಲಿ ಜ್ಞಾನವನ್ನು ವೃದ್ಧಿಸುವ ಆಸೆ ಇವರನ್ನು ಲಂಡನ್ನಿಗೆ ಕರೆದೊಯ್ಯಿತು. ಪ್ರೊಫೆಸರ್ ಲಾಸ್ಕಿಯಂಥ ವಿದ್ವಾಂಸರ ಬಳಿ ಕೆಲಸ ಮಾಡಿದರು. ಅವರ ಶ್ರಮಪೂರಿತ ದುಡಿಮೆಯ ಫಲವಾಗಿ 'ಗ್ರೋತ್ ಆಫ್ ಲಿಬರಲಿಸಂ ಇನ್ ಇಂಡಿಯ ಇನ್ ದಿ ನೈನ್‌ಟೀನ್ತ್ ಸೆಂಚುರಿ' ಎಂಬ ಕೃತಿ ಹೊರಬಂತು. ಎಂ. ವಿ. ಕೆ. ಅವರು ಏಕೈಕ ವಿಷಯದಲ್ಲಿ ಪ್ರವೀಣತೆ ಪಡೆಯುವ ಕಿರುದಾರಿಯನ್ನು ಬಿಟ್ಟು ಎಲ್ಲ ವಿಷಯಗಳಲ್ಲೂ ಏಕಪ್ರಕಾರವಾದ ಆಸಕ್ತಿ ತೋರಿಸತೊಡಗಿದರು. ಅವರು ಇಂಗ್ಲಿಷ್ ಭಾಷೆಯಲ್ಲಿ, ಇತಿಹಾಸದಲ್ಲಿ, ರಾಜ್ಯಶಾಸ್ತ್ರದಲ್ಲಿ ಮತ್ತು ತತ್ತ್ವ ಶಾಸ್ತ್ರದಲ್ಲಿ ಅಪರಿಮಿತ ಪಾಂಡಿತ್ಯ ಪಡೆದರು. ಇದು ಎಷ್ಟರಮಟ್ಟಿಗಿತ್ತೆಂದರೆ, ಈ ವಿಷಯಗಳಲ್ಲಿ ಅವರು ಯಾವುದೇ ಉನ್ನತ ಜ್ಞಾನಪೀಠವನ್ನೂ ಅಲಂಕರಿಸಲು ಸಾಮರ್ಥ್ಯ ಸಂಪಾದಿಸಿದ್ದರು.

ಎಂ. ವಿ. ಕೆ. ಅವರು ನೀಳವಾಗಿ, ಸೌಮ್ಯವಾಗಿ, ದೃಢವಾಗಿ, ಸುಂದರ ವಾಗಿದ್ದರು. ಅವರ ಮಿಂಚುತ್ತಿದ್ದ ಅಕ್ಷಿದ್ವಯಗಳಲ್ಲಿ ಆಳವಾದ ಜ್ಞಾನಜ್ಯೋತಿ ಯನ್ನು ಅಡಗಿಸಿಟ್ಟಂತಿತ್ತು. ಸಮಯವೊದಗಿದಾಗ ಅವರ ವಿಚಾರವಾಹಿನಿ ಚಿಲುಮೆಯಂತೆ ಚಿಮಿ ಅವ್ಯಾಹತವಾಗಿ ಹೊರಹೊಮ್ಮುತ್ತಿತ್ತು. ಅವರ ಧ್ವನಿ ಮಧುರ, ನುಡಿ ಮೃದು, ಸಂಭಾಷಣೆಯಲ್ಲಿ ನಿರರ್ಗಳ. ಅವರು ತರಗತಿಯ ಕೊಟಡಿಯಲ್ಲಿ ಹೆಚ್ಚು ಭಾವವಶರಾಗುತ್ತಿದ್ದರು. ವಿದ್ಯಾರ್ಥಿಗಳಿಗೆ, ಅದರಲ್ಲೂ ಹೊಸತಾಗಿ ಸೇರಿದವರಿಗೆ, ಅವರ ಸ್ಪಷ್ಟೋಚ್ಚಾರಣೆಯ ಘನವಾದ ಅಭಿಪ್ರಾಯ

ಗಳನ್ನು ಗ್ರಹಿಸುವುದೇ ಒಂದು ಸಾಹಸವಾಗಿತ್ತು. 'ಭಾರತ ಬಿಟ್ಟು ತೊಲಗಿ' ಚಳವಳಿ ನಡೆದ ಚರಿತ್ರಾರ್ಹ ವರ್ಷವಾದ ಕ್ರಿ.ಶ. ೧೯೪೨ರಲ್ಲಿ ನಾವು ಹೊಸದಾಗಿ ಮೊದಲ ನೆಯ ಆನರ್ಸ್ ತರಗತಿಗೆ ಸೇರಿಕೊಂಡೆವು. ಆಗ ಅವರು ನಮಗೆ ರಾಜ್ಯಶಾಸ್ತ್ರ ವನ್ನು ಬೋಧಿಸುತ್ತಿದ್ದರು. ಅವರ ಉಪನ್ಯಾಸದ ಪ್ರಭಾವ ನಮಗೆ ಕಬ್ಬಿಣದ ಕಡಲೆಯ ಹಾಗಿತ್ತು. ಮೊದಲ ಕೆಲವು ದಿನಗಳಲ್ಲಿ ನಾವು ಏನನ್ನೂ ಗ್ರಹಿಸಲು ಸಾಧ್ಯವಾಗಲಿಲ್ಲ. ಅವರ ಘನವಾದ ಭಾಷೆಯ ಮುಂದೆ ಅವರ ಅಭಿಪ್ರಾಯಗಳು ಹುದುಗಿಹೋಗುತ್ತಿದ್ದವು. ಅವರ ವಿಶಾಲವಾದ ಜ್ಞಾನ, ಬುದ್ಧಿವಂತಿಕೆ ಮತ್ತು ಅಂತರ್‌ದೃಷ್ಟಿಯಿಂದ ಮತ್ತು ಅವರು ಆಗಾಗ ಮಾಡುತ್ತಿದ್ದ ವಿಷಯಬದಲಾವಣೆ ಯಿಂದ, ನಮ್ಮನ್ನು ಮೂಕರನ್ನಾಗಿಸುತ್ತಿದ್ದರು. ಅವರು ನಿಗದಿಪಡಿಸಿದ ಪಾಠಕ್ರಮ ಗಳಿಗೇ ಸೀಮಿತವಾಗುತ್ತಿದ್ದುದು ಅಪರೂಪ. ಶಿಕ್ಷಣವರ್ಷಕ್ಕೆ ನಿಗದಿಪಡಿಸಿದ ಯಾವೊಂದು ಸಣ್ಣ ವಿಷಯವನ್ನೂ ಬಿಡುತ್ತಿರಲಿಲ್ಲ. ಅವರು ಯಾವಾಗಲೂ ಯಾವುದೇ ಸಮಸ್ಯೆಯನ್ನೂ ಸಂಪೂರ್ಣವಾಗಿ ವಿಶ್ಲೇಷಿಸುವುದರಲ್ಲಿ, ವಿಶಾಲವಾದ ಸಮೀಕ್ಷೆಯಲ್ಲಿ ಮತ್ತು ಸಾಮಾನ್ಯ ನಿರೂಪಣೆಯಲ್ಲಿ ಹೆಚ್ಚಿನ ಹರ್ಷವನ್ನು ತೋರಿಸು ತ್ತಿದ್ದರು. ಅವರು ಅತ್ಯಂತ ಸೂಕ್ಷ್ಮ ವಿಷಯಗಳಿಗೂ ಆದ್ಯಗಮನ ಕೊಡುವಂಥ ಲೂಯಿ ಫಿಷರ್, ಲಾರ್ಡ್ ಆಕ್ಟನ್ ಮತ್ತು ಜೆ. ಬಿ. ಬ್ಯೂರಿಯರ ವರ್ಗಕ್ಕೆ ಸೇರಿದವ ರಾಗಿದ್ದರು. ಸರಳ ಪಠ್ಯಪುಸ್ತಕಗಳಿಗೇ ಅಂಟಿಕೊಳ್ಳುವ ಬದಲು, ವಿಶಾಲದೃಷ್ಟಿ, ಮಹದ್ಭಾವನೆ ಮತ್ತು ಆತ್ಮವಿಶ್ವಾಸವನ್ನು ತಂದುಕೊಡುವ ವಿಚಾರಭರಿತ ಗ್ರಂಥ ಗಳನ್ನು ಅಧ್ಯಯನ ಮಾಡುವುದರಿಂದ ಬಹಳಷ್ಟು ನೆರವಾಗುತ್ತದೆ ಎಂಬುದನ್ನು ಬೇಗ ಕಲಿತುಕೊಂಡೆವು. ಅವರು ನಮಗೆ ಯಾವಾಗಲೂ ಲಾಸ್ಕಿ ಅಥವಾ ಮಾರ್ಕ್ಸ್ ಅಥವಾ ರೂಸೊ ಅಥವಾ ಹಾಬ್ಸ್‌ರ ಕೃತಿಗಳಿಗಿಂತ ಕಡಿಮೆ ಮಟ್ಟದ ಕೃತಿಗಳನ್ನು ಓದಲು ಹೇಳುತ್ತಿರಲಿಲ್ಲ. ಜ್ಞಾನಪಿಪಾಸೆಯನ್ನು ಹಿಂಗಿಸಿಕೊಳ್ಳಲು ಮಹಾಕೃತಿಗಳನ್ನೇ ಆಶ್ರಯಿಸಬೇಕು ಎಂಬ ಅಂಶ ನಮ್ಮ ಮನಸ್ಸಿಗೆ ಹೊಗುವಂತೆ ಮಾಡಿದ್ದರು. ಅವರ ಉಪನ್ಯಾಸಗಳು ಪರೀಕ್ಷಾದೃಷ್ಟಿಯಿಂದ ಪ್ರಯೋಜನಕ್ಕೆ ಬರದಿದ್ದುದರಿಂದ ಪುಸ್ತಕಲೋಕವನ್ನು ಶೋಧಿಸುವ ಹವ್ಯಾಸವನ್ನು ಬೆಳೆಸಿ ಕೊಂಡೆವು. ಇದರಿಂದ ಸಾಕಷ್ಟು ಪ್ರತಿಫಲವೂ ದೊರೆಯುತ್ತಿತ್ತು. ನಾವು ತರಗತಿ ಗಳಿಗೆ ಹೆಚ್ಚು ಪೂರ್ವಅಧ್ಯಯನ ಮಾಡಿಕೊಂಡು ಹೋದಷ್ಟೂ ಹೆಚ್ಚುಹೆಚ್ಚಾಗಿ ಅವರ ಉಪನ್ಯಾಸಗಳನ್ನು ಮೆಚ್ಚುತ್ತಿದ್ದೆವು. ಕಬ್ಬಿಣ ಕಡಲೆಯಾಗಿದ್ದಂತಹ ಅವರ ಉಪನ್ಯಾಸಗಳು, ಬುದ್ಧಿಯ ಕುಲುಮೆಯಲ್ಲಿ ಕಾದಮೇಲೆ ಉಲ್ಲಾಸಕರ ಮತ್ತು ಗಹನವಾದ ಸಂಭಾಷಣೆಗಳ ಹುರಿಗಡಲೆಯಾಗಿ ಮಾರ್ಪಟ್ಟವು. ನಾವು ಮಾಡ ಬೇಕಾಗಿದ್ದ ಕೆಲಸವೆಂದರೆ, ಅವರ ಅಧರದ್ವಯಗಳಿಂದ ಪ್ರವಹಿಸುತ್ತಿದ್ದ ಜ್ಞಾನ ವಾಹಿನಿಯನ್ನು ತಲ್ಲೀನತೆಯಿಂದ ಗಮನಿಸಿ, ಮನನಮಾಡಿಕೊಂಡು ಅವರೊಡ್ಡಿದ ಅನೇಕ ಸಮಸ್ಯೆಗಳಿಗೆ ಮನೆಯಲ್ಲಿ ನಿಷ್ಠೆಯಿಂದ ಉತ್ತರಗಳನ್ನು ಅರಸಬೇಕಾಗಿತ್ತು.

ಸಮಂಜಸವಾಗಿ ಪ್ರತಿಕ್ರಿಯೆಯನ್ನು ತೋರುವ ವಿದ್ಯಾರ್ಥಿಗಳ ಬುದ್ಧಿಯನ್ನು ಹರಿತಗೊಳಿಸಲು ಸವಾಲನ್ನು ಹಾಕುವುದೇ ಅವರ ಬೋಧನಕ್ರಮವಾಗಿತ್ತು. ಅವರು ಬೌದ್ಧಿಕವಾಗಿ ಗಗನದೆತ್ತರ ಬೆಳೆದಿದ್ದರೂ ಸಾಮಾನ್ಯನನ್ನೂ ಹೆಚ್ಚು ಹೆಚ್ಚು ಮೇಲೇರಿಸುತ್ತಿದ್ದರು. ಅವರೊಂದಿಗೇ ತೇಲುವವರನ್ನು ಪ್ರೀತಿಸುತ್ತಿದ್ದರು ಮತ್ತು ಲೌಕಿಕ ಜಂಜಾಟದಲ್ಲಿಯೇ ಜಡವಾಗಿದ್ದವರನ್ನು ಮೂದಲಿಸುತ್ತಿದ್ದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರು ಉತ್ಸಾಹವಿಲ್ಲದೆ ಯಾವಾಗಲೂ ಯಾವ ಮಹತ್ಕಾರ್ಯವನ್ನೂ ಸಾಧಿಸಲಾಗಿಲ್ಲವೆಂಬ ನಂಬಿಕೆಯನ್ನುಳ್ಳಂಥ ಸ್ಫೂರ್ತಿದಾಯಕ ಅಧ್ಯಾಪಕರಾಗಿದ್ದರು.

ಎಂ. ವಿ. ಕೆ. ಅವರು ನನಗೆ ಬಲ್ಲಂತೆ ಎಂಥ ಉಪಾಧ್ಯಾಯರು ಎಂಬುದನ್ನು ತಿಳಿಸಿದ್ದೇನೆ. ಅವರು ತಮ್ಮ ಅದ್ಭುತ ಭಾವನಾಶಕ್ತಿಯಿಂದ ಚರಿತ್ರೆಯನ್ನೂ ಸಾಹಿತ್ಯದ ಒಂದು ಪ್ರಕಾರದ ಸಾಧನವನ್ನಾಗಿ ಮಾಡಿಕೊಂಡಿದ್ದುದು ಸತ್ಯ. ಅವರು ತಮ್ಮ ಅಕ್ಷಯಶಬ್ದಕೋಶದಿಂದ ಮತ್ತು ಬಹು ನಾಟಕೀಯವಾಗಿ ಅನನುಕರಣೀಯವಾದ ರೀತಿಯಲ್ಲಿ ಚಾರಿತ್ರಿಕ ಪಾತ್ರಗಳನ್ನು ಚಿತ್ರಿಸಿ ಇತಿಹಾಸವನ್ನು ಒಂದು ಭವ್ಯ ಕಲೆಯನ್ನಾಗಿ ಮಾಡಿದ್ದಾರೆ. ಅವರು ಪಾಲಿಬಸ್ ಮತ್ತು ಥ್ಯೂಸಿಡೈಡಿಸರಂತೆ ಚರಿತ್ರೆಯ ಉಪಯೋಗ ರಾಜ್ಯಶಾಸ್ತ್ರದ ಕಲಿಕೆಗೆ ಶಿಕ್ಷಣವಿದ್ದಂತೆ ಎಂದು ಭಾವಿಸಿದ್ದರು. ಇವರು ಇತಿಹಾಸ ಮತ್ತು ರಾಜ್ಯಶಾಸ್ತ್ರಗಳೆರಡರ ಸಮ್ರ ವಿದ್ಯಾರ್ಥಿಯಾಗಿದ್ದಂತೆ ಅವೆರಡರ ಸುಗಮ ಸಮ್ಮಿಳನವನ್ನು ನೋಡಲು ಇಷ್ಟಪಡುತ್ತಿದ್ದರು. ಅವರ ಸ್ಫೂರ್ತಿಯುತ ಇತಿಹಾಸ ಬರವಣಿಗೆಗಳಲ್ಲಿ ಎದ್ದು ಕಾಣುವ ಎರಡು ಅಂಶಗಳೆಂದರೆ ರಾಷ್ಟ್ರೀಯತೆ ಮತ್ತು ತತ್ತ್ವಜ್ಞಾನ. 'ಗಂಗಾಸ್ ಆಫ್ ತಲಕಾಡ್' ಅಥವಾ 'ಗ್ಲಿಂಪ್ಸಸ್ ಆಫ್ ಕರ್ನಾಟಕ' ಅಥವಾ 'ಫ್ರೀಡಂ ಮೂವ್‌ಮೆಂಟ್', 'ಕರ್ನಾಟಕದ ಇತಿಹಾಸ ದರ್ಶನ' ಎಲ್ಲದರಲ್ಲೂ ಅವರ ಚರಿತ್ರೆಗೆ ಚೇತನಶಕ್ತಿಯೆಂದರೆ ಉಜ್ವಲ ರಾಷ್ಟ್ರಪ್ರೇಮ. ತಪಸ್ವಿಗಳು ದೇವರನ್ನು ನಂಬುವಂತೆ ಅವರು ನಮ್ಮ ನಾಡಿನ ಭವ್ಯತೆಯಲ್ಲಿ ನಂಬಿಕೆಯನ್ನಿಟ್ಟಿದ್ದರು. ಚರಿತ್ರೆಯೆಂಬುದು 'ನಾಗರಿಕ' ಕಲ್ಪನೆಯ ನಾಲ್ಕು ಮೂಲ ಸ್ವಾತಂತ್ರ್ಯಗಳಾದ ದಾರಿದ್ರ್ಯದಿಂದ ಮುಕ್ತಿ, ಶೋಷಣೆಯಿಂದ ಮುಕ್ತಿ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯಗಳತ್ತ ಗಮನವೀಯಲು ನಮ್ಮ ಯುವಕರಿಗೆ ಸ್ಫೂರ್ತಿಕೊಡುವಂಥ ಮಾಧ್ಯಮವಾಗಬೇಕೆಂದು ಅವರು ಬಯಸಿದ್ದರು. "ಚರಿತ್ರೆಯಿಂದ ಉದಾರತೆಯನ್ನು ಪಡೆಯದಿದ್ದರೆ ರಾಜ್ಯಶಾಸ್ತ್ರ ಕೇವಲ ಕ್ಷುಲ್ಲಕವಾಗುತ್ತದೆ ಮತ್ತು ಇತಿಹಾಸ ರಾಜ್ಯಶಾಸ್ತ್ರದ ಸಂಪರ್ಕವನ್ನು ಕಳೆದುಕೊಂಡರೆ ಕೇವಲ ಸಾಹಿತ್ಯವಾಗುತ್ತದೆ" ಎಂಬ ಸರ್ ಜಾನ್ ಸೀಲಿಯ ಅಭಿಪ್ರಾಯವನ್ನೇ ಇವರೂ ಹೊಂದಿದ್ದರು. ಇತಿಹಾಸ ಯುವಕರನ್ನು ಅವರ ದೀರ್ಘವಾದ ಮೌಢ್ಯದಿಂದ ಎಬ್ಬಿಸುವ ಒಂದು ಮದ್ದಾಗಬೇಕು. ಪ್ರಾಯಶಃ ಇಂಥ ಆವಶ್ಯಕತೆ ನಮ್ಮ ದೇಶಕ್ಕಿಂತ ಹೆಚ್ಚಾಗಿ

ಬೇರೆಲ್ಲೂ ಇರಲಾರದು. ಎಂ. ವಿ. ಕೆ.ಯವರ ಮೇಲೆ ಅಧಿಕ ಪ್ರಭಾವ ಬೀರಿದ ಇನ್ನೊಂದು ವಿಷಯವೆಂದರೆ ತತ್ತ್ವಶಾಸ್ತ್ರ. ತತ್ತ್ವಜ್ಞಾನಕ್ಕೆ ತೌರಿನಂತಿರುವ ಮಹಾರಾಜ ಕಾಲೇಜಿನಲ್ಲಿ ಬೆಳೆದ ಅವರಲ್ಲಿ ಮಾನವನ ಬೌದ್ಧಿಕ ಮತ್ತು ತಿಳಿವಳಿಕೆಯ ಬೆಳವಣಿಗೆಯೇ ಇತಿಹಾಸವೆಂಬ ಹೊಸ ದೃಷ್ಟಿಕೋನ ರೂಪುಗೊಂಡಿತು. ಯಾವುದು ಇತಿಹಾಸದ ಮುಂಜಾವಿನಿಂದಲೂ ಭೂತ-ಭವಿಷ್ಯತ್ತನ್ನು ಕೂಡಿಸಿ ಸಂಯೋಗವನ್ನು ಕಾಯ್ದುಕೊಂಡು ಬಂದಿದೆಯೋ ಆ ಪ್ರಗತಿಯೆಂಬ ಭಾವನೆಯಲ್ಲಿ ಅವರು ವಿಶ್ವಾಸವಿಟ್ಟ ಆಶಾವಾದಿಗಳಾಗಿದ್ದರು. ಈ ನವೀನ ದೃಷ್ಟಿಕೋನದಿಂದ ಚರಿತ್ರೆ ಕೇವಲ ಜ್ಞಾನದ ಒಂದು ಶಾಖೆ ಮಾತ್ರವಲ್ಲದೆ ಅದರದೇ ಆದಂತಹ ರೀತಿ ಮತ್ತು ಕ್ರಮದಿಂದ ಇತರ ಶಾಖೆಗಳಲ್ಲಿ ಆಗುವ ಎಲ್ಲ ರೀತಿಯ ವಿಕಾಸವನ್ನೂ ತಿಳಿಸುವ ಚಾರಿತ್ರದರ್ಶನವಾಗಿದೆ ಎಂಬ ಭಾವನೆ ಮೂಡಿತು. ಇಂತಹ ದೃಷ್ಟಿ ಚರಿತ್ರಕಾರನಿಗೆ ಸಮಸ್ಯೆಗಳನ್ನು ಭಾವವಶತೆ ಮತ್ತು ಡಂಭಾಚಾರದಿಂದ ನೋಡುವ ಬದಲು ಗಂಭೀರತೆಯಿಂದ ಮತ್ತು ಬುದ್ಧಿವಂತಿಕೆಯಿಂದ ಪರಿಶೀಲಿಸುವ ಮನೋಭಾವವನ್ನು ಮೂಡಿಸುತ್ತದೆ.

ಇಂದಿನ ಕಾಲಕ್ಕೆ ಸಾಗಿಬಂದ ಗತಕಾಲದ ಅನೇಕ ಹಂತಗಳನ್ನು ತಿಳಿಸುವುದರ ಮೂಲಕ ಚರಿತ್ರೆ ಬುದ್ಧಿ ಮತ್ತು ಆತ್ಮಗಳಿಗೆ ಚೇತನಯುತವಾದ ಪೋಷಣೆಯನ್ನು ಒದಗಿಸುವ ಜ್ಞಾನಮೂಲವಾಗಿದೆ. ಅವರು ಒಂದು ರೀತಿಯಲ್ಲಿ ವೃತ್ತಿತತ್ತ್ವಜ್ಞಾನಿಗಳಿಗಿಂತ ವಿಭಿನ್ನವಾಗಿದ್ದರು. ಅವರು ಚರಿತ್ರಕಾರರ ಬೌದ್ಧಿಕ ಪರಿಮಿತಿಯೊಳಗೆ ಇರುವಂಥ ಅಭಿಪ್ರಾಯಗಳೇ ಮಾನವ ಗರಿಷ್ಠ ಮಿತಿಯಲ್ಲಿ ಗ್ರಹಿಸಬಹುದಾದಂಥ ಪರಿಜ್ಞಾನವೆಂದು ಒಪ್ಪುತ್ತಿರಲಿಲ್ಲ. ಇತಿಹಾಸದಲ್ಲಿ ಅಪರಿಮಿತ ವ್ಯಾಖ್ಯಾನಗಳನ್ನು ನಿರೂಪಿಸಲು ಬರುತ್ತದೆ. ಅದರಲ್ಲಿ ಕೊನೆ ಎಂಬುದೇ ಇಲ್ಲ. ಯಾವುದೇ ಒಂದು ಧರ್ಮ ಅಥವಾ ಒಂದು ರೀತಿಯ ಸರ್ಕಾರ ಅಥವಾ ಒಂದು ವಿಧದ ತತ್ತ್ವಜ್ಞಾನವೇ ಅಂತಿಮ ಮತ್ತು ಪರಿಪೂರ್ಣವೆಂದು ಊರ್ಜಿತಪಡಿಸಲು ಯಾರಿಗೂ ಸಾಧ್ಯವಿಲ್ಲ. ಹಾಗೂ ಆ ರೀತಿಯ ವಾದ ಅಭಿವೃದ್ಧಿಯನ್ನು ಗೌಣವಾಗಿಸುತ್ತದೆ. ಚರಿತ್ರೆ ಯಾವಾಗಲೂ ಉತ್ತಮದ ಕಡೆಗೆ ಬದಲಾಯಿಸುತ್ತಿರುತ್ತದೆ. ಉದಾಹರಣೆಗೆ ಭಾರತದ ಚರಿತ್ರೆಯು ಒಂದೊಂದು ರಾಜ ಸಂತತಿಯೂ ಹಳೆಯ ಮೌಲ್ಯಗಳನ್ನು ಹೀರಿಕೊಂಡು, ನಮ್ಮ ಸಂಸ್ಕೃತಿಯನ್ನು ಕಾಲಕಾಲಕ್ಕೆ ಬೆಳೆಸುತ್ತಿರುವ ಒಂದು ಪೂರ್ಣಚೇತನಕ್ಕೆ ತಮ್ಮ ಕಾಣಿಕೆಗಳನ್ನು ಸಲ್ಲಿಸಿವೆ. ಎಂ. ವಿ. ಕೆ. ಅವರು ಬ್ಯೂರಿಯವರ ಇತಿಹಾಸದ ಪ್ಲೂರಲಿಸ್ಟಿಕ್ ವ್ಯಾಖ್ಯಾನವನ್ನು ಒಪ್ಪುತ್ತಿದ್ದರು. ಇದರಲ್ಲಿ ಚರಿತ್ರಕಾರನ ನಿರ್ಧಾರಗಳು ಅವನ ಮುಂದೆ ಹೊಸ ಹೊಸ ಅಂಶಗಳು ಬಂದಂತೆ ಬದಲಾವಣೆಯಾಗಬೇಕು ಎಂಬ ದೃಷ್ಟಿ ಇದೆ. ನಮ್ಮ ಗತಕಾಲದ ಕಲ್ಪನೆ ವರ್ತಮಾನ ಕಾಲವನ್ನೂ ರೂಪಿಸಲು ಸಹಾಯವಾಗುವಂತೆ ಅರಿವನ್ನುಂಟುಮಾಡುವುದೇ ಚರಿತ್ರೆಯ ಮಹತ್ಸಾಧನೆ.

ಇದು ಮಾನವನ ಬೌದ್ಧಿಕ ವಿಕಾಸದ ನವಹಂತ. ಈ ನಿಲವನ್ನು ಒಪ್ಪದೆ ಇರುವವರು ಎಂ. ವಿ. ಕೆ. ಅವರು ಸಿದ್ಧಾಂತಕ್ಕೆ ಪ್ರಾಮಾಣಿಕವಾದ ಆದ್ಯತೆಯನ್ನು ಕೊಡಲಿಲ್ಲ ಎಂದು ಟೀಕಿಸುವುದು ಅನಾವಶ್ಯಕ. ಇದು ಉಜ್ವಲ ಪಾಂಡಿತ್ಯವಿರುವವರಿಗೆ ಸೇರಿದ್ದು. ಅವರು ಹೇಗೆ ಎಲ್ಲರ ಹಿತವನ್ನೂ ಬಯಸಿ, ಯಾರಿಗೂ ಅಹಿತವನ್ನೆಣಿಸದೆ, ಆತ್ಮಸಾಕ್ಷಿಯಿಂದ ಕರುಣಾಮಯರಾಗಿದ್ದರೋ ಹಾಗೆ ಚರಿತ್ರೆಗೂ ಅವರೆಂದೂ ಸೀಮಿತವನ್ನು ಹಾಕದೆ ವ್ಯಾಪನಗೊಳಿಸಿದರು. ಇತಿಹಾಸ ತತ್ತ್ವಶಾಸ್ತ್ರದಂತೆ ಎಲ್ಲ ಕ್ಷೇತ್ರವನ್ನೂ ಪ್ರವೇಶಿಸಬೇಕೆಂದು ಅವರು ಬಯಸುತ್ತಿದ್ದರು.

ಎಲ್ಲ ಕಾಲಗಳ ಚರಿತ್ರೆ ಹೇಗೆ ವಿಸ್ತಾರದ ಕ್ರಮದಲ್ಲಿ ಮುಖ್ಯವೋ ಹಾಗೆ ಚರಿತ್ರಕಾರ ಮಾನವನ ಎಲ್ಲ ಚಟುವಟಿಕೆಗಳನ್ನೂ ಅಧಿಕೃತವಾಗಿ ಪರಿಶೀಲಿಸುವಂತಿರಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ಘಟನೆಗಳು ಮತ್ತು ವಿಷಯಗಳು ಒಂದಕ್ಕೊಂದು ಕ್ರಮಬದ್ಧವಾಗಿ ಮತ್ತು ಶಾಶ್ವತವಾದ ಕ್ರಮದಿಂದ ಅಂಟಿಕೊಂಡಿವೆ; ಆದರಿಂದ ಚರಿತ್ರಕಾರನ ಕಾರ್ಯವೆಂದರೆ ಒಂದು ಭಾಗದ ಕಾರ್ಯದೊಂದಿಗೆ ಇನ್ನೊಂದು ಭಾಗದ ಕಾರ್ಯವನ್ನು ಸಂಬಂಧಿಸುವುದಾಗಿದೆ—ಎಂದು ಎಂ. ವಿ. ಕೆ. ಅವರು ನಂಬಿದ್ದರು. ಉದಾಹರಣೆಗೆ ವಿದೇಶಾಂಗ ಚರಿತ್ರೆಯನ್ನು ವಿಚಾರ ವಿಕಾಸದ ಚರಿತ್ರೆಯೊಂದಿಗೂ ಧಾರ್ಮಿಕ ಕಥೆಯನ್ನು ಅದು ಯಾವ ಸಂಸ್ಕೃತಿಯ ಮಧ್ಯವರ್ತಿಯಿಂದ ರೂಪುಗೊಂಡಿದೆ ಎಂಬುದಕ್ಕೂ ಸಂಬಂಧ ಕಲ್ಪಿಸಿ ವಿಶ್ಲೇಷಿಸುವುದು. ಅಂತರ್‌ದೃಷ್ಟಿ, ಅನುಭವ ಮತ್ತು ಸೂಕ್ಷ್ಮಮತಿಯಲ್ಲಿ ಇತಿಹಾಸದ ನಿಜವಾದ ಮೌಲ್ಯ ಅಡಗಿದೆ; ಅತಿಯಾದ ಸಂಕುಚಿತ ಪ್ರಾವೀಣ್ಯವನ್ನು ಹೊಂದುವುದರಿಂದ ಅದರ ದರ್ಶನ ನಮಗೆ ನಷ್ಟವಾಗುತ್ತದೆ. ಅಂತರ್‌ದೃಷ್ಟಿ ಮತ್ತು ಬುದ್ಧಿವಂತಿಕೆಗಳು ಒಬ್ಬ ಚರಿತ್ರಕಾರನನ್ನು ಥೂಸಿಡೈಡಿಸ್‌ನಂತೆ ನೀತಿಬೋಧಕನನ್ನಾಗಿ ಮಾಡುತ್ತದೆ. ಥೂಸಿಡೈಡಿಸನ ಕೆಲವು ಅಮರ ಸತ್ಯಪ್ರತಿಪಾದಕಗಳಾದ "ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತದಿಂದ ಸುದಿನ ಬರುತ್ತದೆ", "ಯಥೋಚಿತತೆಗಿಂತಲೂ ನ್ಯಾಯವೇ ಮೇಲು", "ಜನಪ್ರಿಯತೆಯ ಹುಚ್ಚು ವಿನಾಶಕ್ಕೆಡೆಗೊಡುತ್ತದೆ" ಮತ್ತು: "ರಾಜಕೀಯ ಪಾತಕ ಹಿಂಸೆಗಿಂತ ಕೀಳು" ಎಂಬವು ಇಂತಹ ಪರಿಜ್ಞಾನದಿಂದ ಮೂಡಿಬಂದವು. ಎಂ. ವಿ. ಕೆ. ಅವರ ವಿಚಾರವೈಖರಿ ಮತ್ತು ಬರೆವಣಿಗೆಗಳು ಇಂಥ ಉನ್ನತವಾದ ತತ್ತ್ವಜ್ಞಾನದ ಸಾಲಿಗೆ ಸೇರುತ್ತವೆ. ಇವರು ಕೇವಲ ಸಿದ್ಧಾಂತಕ್ಕೆ ಅಂಟಿಕೊಳ್ಳುವ ಮತ್ತು ಸಂದುಹೋದ ಕಾಲದ ಸಾಮಗ್ರಿಗಳನ್ನರಸುತ್ತಾ ಇರುವ ಚರಿತ್ರಕಾರನಿಗೆ ಹೊರತಾದ ಮಹಾದಾರ್ಶನಿಕತೆ, ಸ್ವಯಂರೂಪದ ದೃಷ್ಟಿ ಮತ್ತು ಪರಿಪೂರ್ಣ ಜ್ಞಾನವನ್ನು ಪಡೆದಂಥ ದ್ರಷ್ಟಾರರಾಗಿದ್ದರು.

ಕಡೆಯದಾಗಿ ಎಂ. ವಿ. ಕೆ. ಯವರನ್ನು ಒಬ್ಬ ವ್ಯಕ್ತಿಯ ದೃಷ್ಟಿಯಲ್ಲಿ ನೋಡೋಣ. ಅವರ ಇಡೀ ಜೀವನ ಪರಿಶುದ್ಧ ಹೃದಯದಿಂದ ಆತ್ಮಪವಿತ್ರತೆ ಮತ್ತು ಆತ್ಮತೇಜಸ್ಸಿನಿಂದ ಹಾಗೂ ತಪಶ್ಚರ್ಯೆಯಿಂದ ಕೂಡಿತ್ತು. ಅವರ

ಅಕ್ಷಯಶಕ್ತಿ, ಸದಭಿರುಚಿ, ವಿನಯ ಮತ್ತು ಸದಾ ಹಸನ್ಮುಖಿಗಳಾಗಿರುತ್ತಿದ್ದಂಥ ಸ್ವಭಾವಗಳನ್ನು ಅವರ ಅಸಂಖ್ಯ ಸ್ನೇಹಿತವೃಂದ ನೆನೆಸಿಕೊಳ್ಳುತ್ತದೆ. ಇದರಿಂದ ಅವರು ಎಂಥ ಎದುರಾಳಿಯನ್ನೂ ಹಿಮ್ಮೆಟ್ಟಿಸುವ ಶಕ್ತಿ ಪಡೆದ ಉತ್ಸಾಹ ಪೂರಿತ ವ್ಯಕ್ತಿಯಾಗಿದ್ದರು. ಅವರ ಅಗಾಧ ವಿದ್ಯಾರ್ಥಿಗಣ ಅವರು ತೋರಿಸುತ್ತಿದ್ದ ವಾತ್ಸಲ್ಯ, ಅಭಿಮಾನ, ಪ್ರೇಮ ಮತ್ತು ಕರುಣೆಗಳನ್ನು ಎಂದಿಗೂ ಮರೆಯಲಾರದು. ಹೊಸ ಆಲೋಚನೆಗಳು, ಕಲ್ಪನೆಗಳು ಮತ್ತು ಆದರ್ಶಗಳನ್ನಿಟ್ಟುಕೊಂಡಿದ್ದ ಅವರೊಡನೆ ಮಾತನಾಡುವುದೇ ನಿಜವಾಗಿಯೂ ಉಲ್ಲಾಸಕರವಾಗಿತ್ತು. ಅವರು ಆದರ್ಶಜೀವಿಯಾಗಿದ್ದರೂ ಆ ಆದರ್ಶಗಳು ಅವರನ್ನು ಸ್ವಪ್ನಜೀವಿಯನ್ನಾಗಿ ಮಾಡಿರಲಿಲ್ಲ. ಅವರಿಗೆ ಒಳ್ಳೆಯ ಜೀವನ, ಉಡುಗೆ, ತೊಡಿಗೆ, ಆಹಾರಗಳ ಮೇಲಿದ್ದ ಹಂಬಲ ಮತ್ತು ವಿನೋದಪ್ರಿಯತೆ, ಸಜ್ಜನರ ಸಹವಾಸ ಮತ್ತು ಉಪಕಾರಿ ಪ್ರವೃತ್ತಿಗಳು ಒಂದು ವಿಶಿಷ್ಟ ವ್ಯಕ್ತಿತ್ವವನ್ನು ತಂದುಕೊಟ್ಟಿದ್ದವು. ಅವರು ಉದಾರದೃಷ್ಟಿಯನ್ನಿಟ್ಟುಕೊಂಡಿದ್ದರು, ಸಂಕುಚಿತತನ ಮತ್ತು ಹಮ್ಮುಬಿಮ್ಮುಗಳಿಂದ ದೂರವಾಗಿದ್ದರು. ಹಿಂದುಳಿದವರಿಗೆ ಮತ್ತು ಶೋಷಿತ ವರ್ಗಕ್ಕೆ ಸಹಾಯ ಮಾಡಲು ಶಕ್ತಿಮೀರಿ ಶ್ರಮಿಸುತ್ತಿದ್ದರು. ಅವರಿಗೆ ಉದಾರತೆ ಕೇವಲ ವೇದಿಕೆಯ ಮೇಲಿನ ಘೋಷಣೆಯಾಗಿ ಪರಿಣಮಿಸಿರಲಿಲ್ಲ. ನಿಜವಾಗಿ ಕಾರ್ಯಗತ ಮಾಡಬೇಕಾಗಿದ್ದ ನಿಷ್ಠ ನಂಬಿಕೆಗಳಾಗಿ ಪರಿಣಮಿಸಿದ್ದುವು.

ಅವರು ಪರೀಕ್ಷಾ ಫಲಿತಾಂಶದಲ್ಲಿಯಾಗಲಿ ವಿಶ್ವವಿದ್ಯಾನಿಲಯದಲ್ಲಿ ಸೇವಾ ನೇಮಕಗಳಲ್ಲಾಗಲಿ ಕಾಲದ ಜವಾಬ್ದಾರಿಯುತ ಪರಿಜ್ಞಾನದಿಂದ ಸಮಾಜದಲ್ಲಿ ಹಿಂದುಳಿದವರಿಗೆ ಆದ್ಯತೆ ಕೊಡುತ್ತಿದ್ದರು. ಅವರು ಸಾಮಾಜಿಕವಾಗಿ ದುರ್ಬಲವಾದ ವರ್ಗದವರನ್ನೂ, ಉತ್ತಮ ಹಿನ್ನೆಲೆಯನ್ನೂ ಹೊಂದಿದ್ದವರಿಗೆ ಬುದ್ಧಿಮತ್ತೆಯಲ್ಲಿ ಸರಿದೂಗಲಿಲ್ಲ. ಅವರು ಜಾತಿ ಮತ್ತು ಪಂಗಡಗಳ ಹೆಸರಿನಲ್ಲಿ ವ್ಯಕ್ತಿಯ ಗೌರವಕ್ಕೆ ಧಕ್ಕೆ ತರುವ ಪ್ರಯತ್ನವನ್ನು ಕಟುವಾಗಿ ನಿಂದಿಸುತ್ತಿದ್ದರು. ಪ್ರೀತಿ ಮತ್ತು ಸೇವೆಯಲ್ಲಿಯೇ ಮಹಾಗುಣವಡಗಿದೆ ಎಂಬ ಸಂದೇಶವನ್ನು ಸಾರಿದ ಮತ್ತು ಅದೇ ರೀತಿ ಬಾಳಿದ ಮಹಾನುಭಾವರವರು.

ಇಂಥ ಮಾನವೀಯ ಗುಣಗಳೊಂದಿಗೆ ಎಂ. ವಿ. ಕೆ. ಅವರು ಅದ್ಭುತವಾದ ಸಂಘಟನಶಕ್ತಿ ಪಡೆದಿದ್ದರು. ಇವರು ಬೃಹತ್ ಯೋಜನೆಗಳನ್ನು ರೂಪಿಸುತ್ತಿದ್ದರು ಮತ್ತು ಅವನ್ನು ಕಾರ್ಯಗತ ಮಾಡುವಾಗ ಪರಿಪೂರ್ಣತೆಯಲ್ಲಿ ಜರ್ಮನ್ ಪ್ರವೀಣನಂತೆ, ಮನೋಹರತೆಯಲ್ಲಿ ಫ್ರೆಂಚ್ ಕಲೆಗಾರನಂತೆ ನಿರ್ವಹಿಸುತ್ತಿದ್ದರು. ಅವರು ವ್ಯವಸ್ಥೆಗೊಳಿಸಿದ ಅನೇಕ ಸಮಾರಂಭಗಳನ್ನು ನಾವು ನೋಡಿದ ಹೆಮ್ಮೆಗೆ ಪಾತ್ರರಾಗಿದ್ದೇವೆ. ಅವುಗಳಲ್ಲಿ ಇತಿಹಾಸ ಸಂಘದ ಚಿನ್ನದ ಹಬ್ಬ ಮತ್ತು ವಜ್ರಮಹೋತ್ಸವ, ಹಿಸ್ಟಾರಿಕಲ್ ರಿಕಾರ್ಡ್ಸ್ ಕಮಿಷನಿನ ಅಧಿವೇಶನ ಮತ್ತು ಮಹಾರಾಜ ಕಾಲೇಜಿನ ಶತಮಾನೋತ್ಸವಗಳು ಬಹು ಪ್ರಮುಖವಾದವು. ಈ

ಎಲ್ಲ ಸಮಾರಂಭಗಳ ಯಶಸ್ಸಿಗಾಗಿ ವಿಶ್ವಪ್ರಯತ್ನಮಾಡಿ ಅವುಗಳ ನೇತೃತ್ವವನ್ನು ನಿರ್ವಹಿಸಿದರು. ೧೯೪೪ರಲ್ಲಿ ಮಹಾರಾಜ ಕಾಲೇಜಿನ ಇತಿಹಾಸ ಸಂಘದ ಸ್ವರ್ಣ ಮಹೋತ್ಸವವನ್ನು ಆಚರಿಸಲಾಯಿತು.

ಅವರು ಈ ಸಂದರ್ಭದಲ್ಲಿ ದೊಡ್ಡ ದೊಡ್ಡ ವಿದ್ವನ್ಮಣಿಗಳನ್ನು ನಮ್ಮ ದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಮೇಲೆ ಉಪನ್ಯಾಸಗಳನ್ನು ಕೊಡಲು ಆಹ್ವಾನಿಸಿದ್ದರು. ಇಂಥ ಒಂದು ಸಂದರ್ಭದಲ್ಲಿ ಬಿ. ಎಂ. ಶ್ರೀಕಂಠಯ್ಯ ಅವರು ನಮ್ಮ ಗುರಿಯನ್ನು ಕರ್ಣಾಟಕದ ಏಕೀಕರಣಕ್ಕಾಗಿ ಹೋರಾಡುವತ್ತ ಹರಿಸಿದರು. ಅದು ಆಗ ಒಂದು ಕ್ರಾಂತಿಕಾರಕ ಹೆಜ್ಜೆಯಾಗಿದ್ದರೂ, ಒಂದು ದಶಕದ ಅನಂತರ ಆ ಕನಸು ನನಸಾಯಿತು. ೧೯೫೧ರಲ್ಲಿ ಮಹಾರಾಜ ಕಾಲೇಜಿನ ಶತಮಾನೋತ್ಸವವನ್ನು ಆಚರಿಸಿದಾಗ, ಎಂ. ವಿ. ಕೆ. ಅವರು ಪ್ರಮುಖ ಮತ್ತು ಅಮೂಲ್ಯ ಪಾತ್ರ ನಿರ್ವಹಿಸಿದರು. ೧೯೫೪ರಲ್ಲಿ ಇತಿಹಾಸ ಸಂಘದ ವಜ್ರಮಹೋತ್ಸವವನ್ನು ಆಚರಿಸಬೇಕಾಯಿತು. ಆಗ ಎಂ. ವಿ. ಕೆ. ಅವರು ತೋರಿದ ಶ್ರದ್ಧೆ, ವಹಿಸಿದ ಪಾತ್ರ ಅವಿಸ್ಮರಣೀಯ ಮತ್ತು ಅಮೋಘವಾದವು. ಈ ವೈಭವದ ಸಮಾರಂಭ ಒಂದು ವಾರಕಾಲ ನಡೆಯಿತು. ಇದಕ್ಕಾಗಿ ಎಂ. ವಿ. ಕೆ. ಅವರು ಒಂದು ವರ್ಷ ಮೊದಲಿನಿಂದಲೇ ಸಿದ್ಧತೆ ಮಾಡಿಕೊಂಡರು. ಇದರಲ್ಲಿದ್ದಂಥ ಮುಖ್ಯ ಸಮಸ್ಯೆಯೆಂದರೆ ಹಣದ ಸಂಗ್ರಹ. ಸ್ಮರಣ ಸಂಚಿಕೆಯ ಬಿಡುಗಡೆ, ಮಹೋತ್ಸವದ ಬಹುಮಾನ, ಕಾಲೇಜಿನ ಮುಂಭಾಗದಲ್ಲಿದ್ದ ಅಶೋಕ ಸ್ತಂಭದ ಸುತ್ತ ಚಿಲುಮೆಯನ್ನು ನಿರ್ಮಿಸುವುದು ಮತ್ತು ಒಳಾಂಗಣದ ಎದುರಿಗೆ ಗೋಡೆಯ ಮೇಲೆ ಗಡಿಯಾರವನ್ನು ಇಡುವುದು—ಇವೇ ಮೊದಲಾದ ಕಾರ್ಯಗಳು ವೆಚ್ಚವನ್ನು ಅಧಿಕಗೊಳಿಸಿದ್ದುವು. ಅವರು ಈ ಸಮಾರಂಭಕ್ಕೆ ಕೊಟ್ಟಂಥ ಪ್ರಚಾರ, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಲ್ಲಿ ಮೂಡಿಸಿದ ಉತ್ಸಾಹ, ಈ ಸಂಘದ ಹಳೆಯ ವಿದ್ಯಾರ್ಥಿಗಳಿಂದ ಮತ್ತು ಸಾರ್ವಜನಿಕರಿಂದ ಪಡೆದ ನೆರವು —ಇವು ಅವರ ಸಾಧನೆಯನ್ನು ತೋರಿಸುತ್ತವೆ. ಉದ್ಘಾಟನದ ಅಧ್ಯಕ್ಷತೆಗೆ ಮಹಾರಾಜರನ್ನು ಆಹ್ವಾನಿಸಿ ನಡೆಸಿದ ಅಪೂರ್ವ ಸಮಾರಂಭ ನಮ್ಮ ಮನಸ್ಸಿನಲ್ಲಿ ಇನ್ನೂ ಹಸಿರಾಗಿ ಉಳಿದಿದೆ.

ಎಂ.ವಿ.ಕೆ. ಅವರು ೧೯೫೭ರಲ್ಲಿ ನಿವೃತ್ತರಾದರು. ಅವರು ಸೇವೆಯಲ್ಲಿದ್ದುದಕ್ಕಿಂತ ನಿವೃತ್ತಿಯ ಅನಂತರ ಹೆಚ್ಚು ಕ್ರಿಯಾಶೀಲರಾಗಿ, ರಚನಾತ್ಮಕವಾಗಿ ಮತ್ತು ಚೇತನಭರಿತರಾಗಿದ್ದರು. ಅವರ ಧರ್ಮಪತ್ನಿಯವರು ೧೯೫೪ರಲ್ಲಿ ನಿಧನರಾದರು. ತಮ್ಮ ವೈಯಕ್ತಿಕ ಜೀವನದ ನಷ್ಟದ ಪರಿಣಾಮವನ್ನು ತಮ್ಮ ಕಾರ್ಯಕ್ಷೇತ್ರಕ್ಕೆ ತಟ್ಟಲು ಬಿಡದೆ, ಹಿಡಿದ ಕಾರ್ಯಗಳನ್ನು ನಡೆಸಿಕೊಂಡು ಬಂದರು. ಇದರ ಅನಂತರ ಇವರು ಬೆಂಗಳೂರಿನಲ್ಲೇ ನೆಲೆಸಲು ನಿರ್ಧರಿಸಿ ತಮ್ಮ ಕಾರ್ಯಕ್ಷೇತ್ರಕ್ಕೆ ವಿಶೇಷ ವ್ಯಾಪ್ತಿಯನ್ನು ಪಡೆದುಕೊಂಡರು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ಯಾವುದೇ ಸಾಹಿತ್ಯ ಚಟುವಟಿಕೆಯಲ್ಲಾದರೂ ಒಂದಲ್ಲ ಒಂದು ರೀತಿಯಲ್ಲಿ ಅವರ ಪಾತ್ರವಿಲ್ಲದೆ

ಇರುತ್ತಿರಲಿಲ್ಲ. ಅವರಿಗೆ ಬೋಧನೆಯಲ್ಲಿ ಬಹಳ ಆಸಕ್ತಿಯಿತ್ತು. ಅಲ್ಲಿ ವಿಶ್ವವಿದ್ಯಾನಿಲಯಕ್ಕೆ ಸೇರಿದ ಒಂದು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಮೂಲಕ ಯಾವಾಗಲೂ ಶಿಷ್ಯಸಮೂಹದೊಡನೆ ಬೆರೆತು ತಮ್ಮ ವೃತ್ತಿಯನ್ನು ಮುಂದುವರಿಸಿದ್ದರು. ಇದರ ಜೊತೆಗೆ, ಯುವಕರು ಪ್ರಪಂಚಾದ್ಯಂತ ವ್ಯವಸ್ಥಿತ ಸಮಾಜದ ಕಟ್ಟುಪಾಡುಗಳನ್ನು ಪ್ರತಿಭಟಿಸುತ್ತಿದ್ದ ಕಾಲದಲ್ಲಿ ಇವರು 'ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿ'ಗೆ ಉಪಾಧ್ಯಕ್ಷರಾದರು. ಇವರು 'ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ಸಂಘ'ಕ್ಕೂ ಅಧ್ಯಕ್ಷರಾಗಿದ್ದರು. ಬಹುಕಾಲದಿಂದಲೂ 'ಮಿಥಿಕ್ ಸೊಸೈಟಿ'ಗೆ ಅವಶ್ಯವಾಗಿದ್ದ ಚೇತನಯುತ ಅಧ್ಯಕ್ಷ ಸ್ಥಾನವನ್ನು ಇವರು ಹೆಚ್ಚು ಯಶಸ್ವಿಯಾಗಿ ತುಂಬಿದ್ದರು.

ಸರ್ಕಾರ ಉದ್ದೇಶಿಸಿದ್ದ 'ಕರ್ಣಾಟಕದಲ್ಲಿ ಸ್ವಾತಂತ್ರ್ಯ ಚಳವಳಿ'ಯೆಂಬ ಇತಿಹಾಸ ರಚನೆಯ ಯೋಜನೆಯನ್ನು ಎಂ.ವಿ.ಕೆ. ಅವರು ವಹಿಸಿಕೊಂಡು ಅತ್ಯಂತ ಸಮರ್ಥ ರೀತಿಯಲ್ಲಿ ನಿರ್ವಹಿಸಿದರು. ಬೆಂಗಳೂರಿನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಸೇರಿದಾಗ ಇವರು 'ಗ್ಲಿಂಪ್ಸಸ್ ಆಫ್ ಕರ್ಣಾಟಕ ಹಿಸ್ಟೊರಿ' ಎಂಬ ಗ್ರಂಥವನ್ನು ರಚಿಸಿದರು. ಇವರು ಮಾತನಾಡುತ್ತಿದ್ದಷ್ಟೆ ಸುಲಲಿತವಾಗಿ ಬರೆಯುವ ಶಕ್ತಿ ಪಡೆದಿದ್ದರು. ಇದಲ್ಲದೆ 'ರಾಯಲ್ ಏಷ್ಯಾಟಿಕ್ ಸೊಸೈಟಿ'ಯ ಫೆಲೊ ಆಗಿ, 'ಹಿಸ್ಟಾರಿಕಲ್ ರಿಕಾರ್ಡ್ಸ್ ಕಮಿಷನ್'ನ ಸದಸ್ಯರಾಗಿ, ಆಚಾರ್ಯ ತುಳಸಿಯವರ ಅಣುವ್ರತ ಸಮಿತಿಯ ನಿರ್ದೇಶಕರಾಗಿ, 'ಬ್ರಹ್ಮವಾದಿನ್' ನಿಯತ ಕಾಲಿಕದ ಸಂಪಾದಕರಾಗಿ ಮತ್ತು ಕನ್ನಡ ವಿಶ್ವಕೋಶದ ಇತಿಹಾಸ ವಿಭಾಗದ ಸಮಿತಿಯ ಸಂಯೋಜಕರಾಗಿ ನಾನಾ ಸಂಘಸಂಸ್ಥೆಗಳೊಡನೆ ತಮ್ಮ ಸಂಪರ್ಕವನ್ನಿಟ್ಟುಕೊಂಡು ಸೇವೆಸಲ್ಲಿಸುತ್ತಿದ್ದರು. ಶ್ರೀಸಾಮಾನ್ಯನಿಗೆ ವಿದ್ಯೆ ಮುಟ್ಟಬೇಕಾದರೆ ಅದು ತಾಯ್ನುಡಿಯಿಂದ ಮಾತ್ರ ಸಾಧ್ಯವಲ್ಲದೆ ಅನ್ಯಭಾಷೆಯ ಮೂಲಕ ಸಾಧ್ಯವಿಲ್ಲವೆಂಬುದನ್ನು ಮನಗಂಡಿದ್ದರು. 'ಕರ್ಣಾಟಕ ಇತಿಹಾಸ ದರ್ಶನ'ವನ್ನು ರಚಿಸುವುದರ ಮೂಲಕ ತಮ್ಮ ಭಾವನೆಯನ್ನು ಕಾರ್ಯಗತಗೊಳಿಸಿ ಈ ದಿಸೆಯಲ್ಲಿ ಒಂದು ಮಹಾ ಹೆಜ್ಜೆಯನ್ನಿಟ್ಟರು. ಈ ಬೃಹತ್‌ಕೃತಿ ಅವರನ್ನು ಪ್ರಖ್ಯಾತಗೊಳಿಸುವುದಲ್ಲದೆ ಕರ್ಣಾಟಕದ ಉದ್ದಗಲಕ್ಕೂ ಪ್ರತಿಯೊಂದು ಮನೆಯಲ್ಲೂ ಈ ಇತಿಹಾಸ ಜ್ಯೋತಿಯನ್ನು ಪ್ರತಿಷ್ಠಾಪಿಸುತ್ತದೆ. ಎಂ.ವಿ.ಕೆ. ಅವರು ತಮ್ಮ ಜೀವನದ ಕಡೆಯ ಕಾಲದವರೆಗೂ ಚಟುವಟಿಕೆಯಿಂದ ಕೂಡಿದ್ದರು. ಇತಿಹಾಸ ವಿಭಾಗದ ಯೋಜನೆಯಾದ ಕರ್ಣಾಟಕದ ಇತಿಹಾಸವನ್ನು ಆಮೂಲಾಗ್ರವಾಗಿ ಹೊರತರುವ ಸಮಿತಿಗೆ ಸದಸ್ಯರನ್ನಾಗಿ ವಿಶ್ವವಿದ್ಯಾನಿಲಯ ಇತ್ತೀಚೆಗೆ ಅವರನ್ನು ನೇಮಿಸಿದಾಗ ಅದನ್ನು ಹರ್ಷದಿಂದ ಒಪ್ಪಿಕೊಂಡು ೧೯೭೧ರ ಫೆಬ್ರುವರಿ ತಿಂಗಳಲ್ಲಿ ನಡೆದ ಸಭೆಗೂ ಬಂದಿದ್ದರು. ಆದರೆ ದುರದೃಷ್ಟವಶಾತ್ ಅವರು ಈ ಕಾರ್ಯ ಕೈಗೂಡುವ ಮೊದಲೇ ನಮ್ಮನ್ನಗಲಿದುದು ದುಃಖದಾಯಕ ಘಟನೆಯಾಗಿದೆ.

ಹೀಗೆ ಬೌದ್ಧಿಕ ಪ್ರಪಂಚದ ಜ್ಞಾನಪೀಠದ ಅನಭಿಷಿಕ್ತ ಚಕ್ರವರ್ತಿಯಂತಿದ್ದ

ಎಂ.ವಿ.ಕೆ. ಅವರ ರಚನಾತ್ಮಕ, ಕ್ರಿಯಾತ್ಮಕ, ಪ್ರತಿಬಿಂಬಾತ್ಮಕ ಮತ್ತು ಪ್ರತಿಭಾ ಪೂರಿತವಾದ, ಚೇತನಮಯವಾದ, ಬೌದ್ಧಿಕವಾಗಿ ಸಂಪ್ರದಾಯವಾದಿಯಾಗಿದ್ದರೂ ಪ್ರಜಾಪ್ರಭುತ್ವದ ಸ್ಫೂರ್ತಿಯನ್ನು ಹೊಂದಿದ್ದಂಥ ಪ್ರಾಣಜ್ಯೋತಿ ನಮ್ಮನ್ನಗಲಿ ಕಣ್ಮರೆಯಾಗಿದೆ. ಅವರ ನಿಧನದಿಂದ ಅಸಾಧ್ಯವಲ್ಲದಿದ್ದರೂ ತುಂಬಲು ಕಷ್ಟಕರವಾದ ನಷ್ಟವಾಗಿರುವುದು ಸತ್ಯ. ಇಂಥ ಮಹಾನುಭಾವರ ನೆನಪು ಎಂದೆಂದಿಗೂ ಹಸಿರಾಗಿರಲಿ. ಪರಮಾತ್ಮ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ.

ಡಾ. ಎಂ. ಮಾದಯ್ಯ
ಮತ್ತು
ಸಿ. ಕೆ. ರೇಣುಕಾರ್ಯ

ಸೈಮನ್ ಕುಜ್ನೆಟ್ಸ್

ಅರ್ಥಶಾಸ್ತ್ರದಲ್ಲಿ ಈ ವರ್ಷ ನೊಬೆಲ್ ಬಹುಮಾನವನ್ನು ಪಡೆದಿರುವವರು ಅಮೆರಿಕ ಸಂಯುಕ್ತಸಂಸ್ಥಾನದ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಸೈಮನ್ ಕುಜ್ನೆಟ್ಸ್. ಎಪ್ಪತ್ತು ವರ್ಷ ವಯಸ್ಸಿನ ಈ ಜ್ಞಾನವೃದ್ಧರಿಗೆ ದೊರೆತಿರುವ ಈ ಅತ್ಯುಚ್ಚ ಸನ್ಮಾನ ವಿಶ್ವದ ಎಲ್ಲ ಅರ್ಥವಿಜ್ಞಾನಿಗಳಿಗೆ ಹಾಗೂ ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ.

ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆಯುವವರಲ್ಲಿ ಪ್ರೊಫೆಸರ್ ಕುಜ್ನೆಟ್ಸ್ ನಾಲ್ಕನೆಯವರು. ಅರ್ಥಶಾಸ್ತ್ರಕ್ಕಾಗಿ ನೊಬೆಲ್ ಪ್ರಶಸ್ತಿ ನೀಡಿಕೆ ಪ್ರಾರಂಭವಾದದ್ದು ೧೯೬೯ರಲ್ಲಿ. ಆ ವರ್ಷ ಪ್ರಥಮ ಬಹುಮಾನವನ್ನು ನಾರ್ವೆಯ ಪ್ರೊಫೆಸರ್ ರ್ಯಾಗ್ನರ್ ಫ್ರಿಶ್ ಮತ್ತು ನೆದರ್‌ಲೆಂಡ್ಸ್‌ನ ಜಾನ್ ಟಿನ್‌ಬರ್ಗನ್ ಒಟ್ಟಾಗಿ ಪಡೆದುಕೊಂಡರು. ೧೯೭೦ರ ಬಹುಮಾನವನ್ನು ಮೆಸಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಸಿದ್ಧ ಅರ್ಥವಿಜ್ಞಾನಿ ಪ್ರೊಫೆಸರ್ ಸ್ಯಾಮ್ಯುಯಲ್‌ಸನ್‌ಗೆ ನೀಡಲಾಯಿತು. ಇವರುಗಳಿಗೆ ಸನ್ಮಾನ ದೊರೆತದ್ದು ಇವರ ಸಿದ್ಧಾಂತಗಳ ಮಂಡನೆ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ, ಅವುಗಳ ಅನ್ವಯಕ್ಕಾಗಿ. ಆದರೆ ಕುಜ್ನೆಟ್ಸ್ ಅವರಿಗೆ ಬಹುಮಾನ ದೊರೆಯುತ್ತಿರುವುದು, ಪ್ರಶಸ್ತಿ ನೀಡುತ್ತಿರುವ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್ ಸಾರಿರುವಂತೆ, 'ಅವರ ಸಮೀಕ್ಷಾತ್ಮಕ ಪ್ರಾಯೋಗಿಕ ಆರ್ಥಿಕ ಬೆಳವಣಿಗೆಯ ವಿಶ್ಲೇಷಣೆ ಹಾಗೂ ಫಲಿತಾಂಶ ವಿವರಣೆಗಾಗಿ.' 'ಅವರ ಈ ವಿವರಣೆ ಕಳೆದ ಶತಮಾನದ ಉತ್ತರಾರ್ಧದಿಂದ ಅರ್ಥವ್ಯವಸ್ಥೆಗಳ ಆರ್ಥಿಕ ಹಾಗೂ ಸಾಮಾಜಿಕ ಸ್ವರೂಪ ಮತ್ತು ಆರ್ಥಿಕ ಅಭಿವೃದ್ಧಿಯ ವಿಷಯಗಳಲ್ಲಿ ನೂತನ ಹಾಗೂ ಆಳವಾದ ಪ್ರವೇಶವನ್ನು ದೊರಕಿಸಿಕೊಟ್ಟಿದೆ' ಎಂದು ಅಕಾಡೆಮಿ ಅಭಿಪ್ರಾಯಪಟ್ಟಿದೆ.

ಅಕಾಡೆಮಿಯ ವಿವರಣೆಯಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅರ್ಥಶಾಸ್ತ್ರದ ಮೀಮಾಂಸೆಗಳಿಗೆ ಎರಡು ಮುಖಗಳಿವೆ ಎಂಬುದು ಕೂಡ ಅರ್ಥಶಾಸ್ತ್ರಾಭ್ಯಾಸಿಗಳಿಗೆ ಗೊತ್ತಿರುವ ವಿಷಯ. ಮೊದಲನೆಯದು, ಅರ್ಥವಿಜ್ಞಾನಿ ತನ್ನ ಮೇಧಾಶಕ್ತಿಯಿಂದ, ಪರಿಕಲ್ಪನೆಗಳ ಆಧಾರದ ಮೇಲೆ ಮಂಡಿಸುವ ಹೊಸಹೊಸ ಸಿದ್ಧಾಂತಗಳದು. ಅವನ ಮಂಡನೆ, ಮುಖ್ಯವಾಗಿ ಅವನ ಬುದ್ಧಿಶಕ್ತಿ, ಆ ಕ್ಷೇತ್ರದಲ್ಲಿ ಬಂದ ಸಿದ್ಧಾಂತಗಳ ಸತ್ಯಾಸತ್ಯತೆ, ತಾರ್ಕಿಕ ಕ್ರಮಬದ್ಧತೆ ಇವನ್ನು ಹೊಂದಿಕೊಂಡು, ಸತ್ಯವಾದುದೂ ಪ್ರಖರವಾದುದೂ ಆಗಬಹುದು. ಅಥವಾ ಕಾಲಕ್ರಮದಲ್ಲಿ ಅವನ ಪರಿಕಲ್ಪನೆಗಳು ಆಧಾರರಹಿತವಾಗಿ ಪರಿಣಮಿಸಿ ಅವನ ಸಿದ್ಧಾಂತಗಳು ಬಿದ್ದುಹೋಗಬಹುದು. ಈ ರೀತಿಯ ಸಿದ್ಧಾಂತಮಂಡನೆ ಮಾಡಿರುವ, ಮಾಡುತ್ತಿರುವ ಅರ್ಥವಿಜ್ಞಾನಿಗಳು ಅರ್ಥಶಾಸ್ತ್ರ ಪ್ರಪಂಚದಲ್ಲಿ ಬಹಳ ಜನ. ಆದರೆ ಸಿದ್ಧಾಂತವನ್ನು ಮಂಡಿಸುವ ಮತ್ತೊಂದು ಕಠಿಣವಾದ ಕ್ರಮವೂ ಉಂಟು. ಇದು ಅನುಭವೈಕ ಪ್ರಯೋಗ (ಎಂಪಿರಿಕಲ್) ಕ್ರಮ. ಯಾವುದೇ ಸಿದ್ಧಾಂತವನ್ನು ಮಂಡಿಸಬೇಕಾದರೂ, ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಅಂಕಿ-ಸಂಖ್ಯೆಗಳನ್ನೂ ಸಂಗ್ರಹಿಸಿ, ಇವನ್ನು ವಿಶ್ಲೇಷಿಸಿ, ಅನುಭವಸತ್ಯವಾದ ಸಿದ್ಧಾಂತವನ್ನು ರೂಪಿಸಿ, ಅದರ ಅನ್ವಯಗಳಿಂದ ದೊರಕಬಹುದಾದ ಫಲಿತಾಂಶಗಳನ್ನು ಪತ್ತೆಹಚ್ಚುವುದು. ಎರಡನೆಯ ಕ್ರಮವನ್ನು ಅನುಸರಿಸುವುದು ಬಹಳ ಕಷ್ಟವಾದ ವಿಷಯ. ಇದು ತಾಳ್ಮೆಯನ್ನು ಪರೀಕ್ಷಿಸುವಂಥದು. ಹಿಂದೆಯೇ ನಿರೀಕ್ಷಿಸಿದ್ದ ಫಲಿತಾಂಶ ದೊರೆಯದೆ ಮಾನಸಿಕ ವೇದನೆಯನ್ನುಂಟುಮಾಡಬಹುದಾದ್ದು; ಈ ವೈಜ್ಞಾನಿಕ ಅನ್ವೇಷಣೆಯಿಂದ ಆಕರ್ಷಿತರಾಗುವವರು ಬಹಳ ವಿರಳ. ಪ್ರೊಫೆಸರ್ ಕುಜ್ನೆಟ್ಸ್ ಎರಡನೆಯ ಬಗೆಗೆ ಸೇರಿರುವರಷ್ಟೇ ಅಲ್ಲದೆ ಆ ಕ್ಷೇತ್ರದಲ್ಲಿ ಇಡೀ ವಿಶ್ವದಲ್ಲೇ ಶಿಖರಪ್ರಾಯವಾಗಿರುವ ಅರ್ಥವಿಜ್ಞಾನಿ.

ಈ ಅನ್ವೇಷಣೆಗೆ ಇರುವ ತೊಡಕುಗಳು ಅನೇಕ. ಇಲ್ಲಿ ಅನ್ವೇಷಕನ ಸ್ನೇಹ ವಿಷಯಗಳೊಂದಿಗಲ್ಲ, ಸಂಖ್ಯೆಗಳೊಂದಿಗೆ. ಕುಜ್ನೆಟ್ಸ್ ಅಸಾಧಾರಣ ತಾಳ್ಮೆಯ, ಸಂಯಮಪೂರ್ಣವಾದ, ಅನುದ್ವಿಗ್ನ ವಿಜ್ಞಾನಿಯಾಗಿ ಈ ಕ್ಷೇತ್ರದಲ್ಲಿ ನಡೆಸಿರುವ ಸಂಶೋಧನೆಗೆ ಪ್ರತಿಯಾಗಿ ನೊಬೆಲ್ ಬಹುಮಾನ ಅವರ ಕೋಣೆಯ ಬಾಗಿಲಿಗೆ ಬಂದದ್ದು ಆಶ್ಚರ್ಯವನ್ನುಂಟುಮಾಡುವ ವಿಷಯವೇನಲ್ಲ.

ಜೀವನ: ಪ್ರೊಫೆಸರ್ ಸೈಮನ್ ಕುಜ್ನೆಟ್ಸ್ ೧೯೦೧ರ ಏಪ್ರಿಲ್ ೩೦ರಂದು ರಷ್ಯದಲ್ಲಿ ಜನಿಸಿದರು. ಆದರೆ ಬಹಳ ಚಿಕ್ಕವರಿದ್ದಾಗಲೇ ಅಮೆರಿಕಕ್ಕೆ ತೆರಳಿದರು. ಅಲ್ಲೇ ಅವರು ಬಿ.ಎಸ್. (೧೯೨೩) ಮತ್ತು ಎಂ.ಎ. (೧೯೨೪) ಪದವಿಗಳನ್ನು ಕೊಲಂಬಿಯ ವಿಶ್ವವಿದ್ಯಾನಿಲಯದಿಂದ ಪಡೆದು, ೧೯೨೬ರಲ್ಲಿ ಅಲ್ಲಿಂದಲೇ ಡಾಕ್ಟರೇಟ್ ಪದವಿಯನ್ನು ಸಹ ಪಡೆದುಕೊಂಡರು. ಅವರು ಡಾಕ್ಟರೇಟ್‌ಗಾಗಿ 'ಚಿಲ್ಲರೆ ಹಾಗೂ ಸಗಟು ವ್ಯಾಪಾರದಲ್ಲಿ ಆವರ್ತಕ ವ್ಯತ್ಯಾಸಗಳು' ಎಂಬ

ವಿಷಯದ ಮೇಲೆ ಮಹಾಪ್ರಬಂಧವನ್ನು ರಚಿಸುವಾಗಲೇ ಅವರಿಗೆ ಸಂಖ್ಯಾ ಪರಿಮಾಣ ವಿಶ್ಲೇಷಣೆಯಲ್ಲಿದ್ದ ಮೇಧಾಶಕ್ತಿ ಪ್ರಕಟವಾಯಿತು. ಅವರ ಮಹಾ ಪ್ರಬಂಧ ೧೯೨೬ರಲ್ಲಿ ಪುಸ್ತಕರೂಪದಲ್ಲಿ ಹೊರಬಂತು. ೧೯೩೦–೫೪ರ ಅವಧಿಯಲ್ಲಿ ಅವರು ಪೆನ್ಸಿಲ್‌ವೇನಿಯ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ಮತ್ತು ಸಂಖ್ಯಾ ಶಾಸ್ತ್ರ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. ಅನಂತರ ೧೯೫೪ರಿಂದ ೧೯೬೦ರ ವರೆಗೆ ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಕೆಲಸಮಾಡಿ ೧೯೬೦ರಲ್ಲಿ ವಿಶ್ವವಿಖ್ಯಾತ ಹಾರ್ವರ್ಡ್ ವಿಶ್ವ ವಿದ್ಯಾನಿಲಯಕ್ಕೆ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಆಗಮಿಸಿದರು.

ಸಂಶೋಧನೆ ಬೋಧನೆಗಳಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿರುವ ಕುಜ್ನೆಟ್ಸ್ ಅವರಿಗೆ ಸನ್ಮಾನ ದೊರೆಯುತ್ತಿರುವುದು ಇದೇ ಮೊದಲಲ್ಲ. ಈಗಾಗಲೇ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಸಂಶೋಧನ ಸಂಸ್ಥೆಗಳು ಉಚ್ಚ ಗೌರವ ಪದವಿಗಳನ್ನು ನೀಡಿ ಅವರನ್ನು ಸನ್ಮಾನಿಸಿವೆ. ಜೆರುಸಲೇಂನ ಹಿಬ್ರೂ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ. ಇಂಗ್ಲೆಂಡಿನ ರಾಯಲ್ ಸ್ಟಾಟಿಸ್ಟಿಕಲ್ ಸೊಸೈಟಿ ಅವರನ್ನು ಗೌರವ ಫೆಲೋ ಅನ್ನಾಗಿ ಮಾನ್ಯ ಮಾಡಿದೆ. ಪ್ರಿನ್ಸ್‌ಟನ್, ಪೆನ್‌ಸಿಲ್‌ವೇನಿಯ, ಹಾರ್ವರ್ಡ್ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಎಸ್.ಸಿ.ಡಿ. ಪದವಿಯನ್ನೂ ಕೊಲಂಬಿಯ ಡಿ.ಎಚ್.ಎಲ್. ಗೌರವ ಪದವಿ ಯನ್ನೂ ನೀಡಿವೆ.

ಬೋಧನೆ, ಸಂಶೋಧನೆಗಳ ಮಧ್ಯೆ ಸಹ ಸಮಯ ದೊರಕಿಸಿಕೊಂಡು ಕುಜ್ನೆಟ್ಸ್ ಅವರು ವಿಶ್ವದ ಅನೇಕ ಸಮಿತಿಗಳಲ್ಲಿ ಸಲಹೆಗಾರರಾಗಿ, ಸದಸ್ಯರಾಗಿ ಕೆಲಸ ಮಾಡಿದ್ದಾರೆ. ೧೯೨೭–೬೧ರಲ್ಲಿ ಅವರು ನ್ಯೂ ಯಾರ್ಕಿನ ನ್ಯಾಷನಲ್ ಬ್ಯೂರೋ ಆಫ್ ಎಕನಾಮಿಕ್ ರಿಸರ್ಚ್‌ನ ಸದಸ್ಯರಲ್ಲೊಬ್ಬರಾಗಿದ್ದರು. ೧೯೬೦ ರಿಂದ ಮತ್ತೆ ಅದೇ ಸಂಸ್ಥೆಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೪೨–೪೪ರ ಅವಧಿಯಲ್ಲಿ ಅವರು ವಾಷಿಂಗ್‌ಟನ್ನಿನ ಬ್ಯೂರೋ ಆಫ್ ಪ್ಲಾನಿಂಗ್ ಅಂಡ್ ಸ್ಟಾಟಿಸ್ಟಿಕ್ಸ್‌ನ ಸಹನಿರ್ದೇಶಕರಾಗಿದ್ದರು. ೧೯೪೬ರಲ್ಲಿ ಚೀನದ ನ್ಯಾಷನಲ್ ರಿಸೋರ್ಸಸ್ ಕಮಿಟಿಯ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ೧೯೫೦–೫೧ರಲ್ಲಿ ಅವರು ಭಾರತದ ರಾಷ್ಟ್ರೀಯ ವರಮಾನ ಸಮಿತಿಯ ಸದಸ್ಯರಾಗಿದ್ದರು.

ವಿಶ್ವದ ಪ್ರತಿಷ್ಠಿತ ಜ್ಞಾನಸಂಸ್ಥೆಗಳಲ್ಲಿ ಅವರು ಪಡೆದಿರುವ ಸದಸ್ಯತ್ವ ಅವರಿಗೆ ಅರ್ಥಶಾಸ್ತ್ರ ಪ್ರಪಂಚದಲ್ಲಿ ದೊರೆಯುತ್ತಿರುವ ಗೌರವಕ್ಕೆ ದ್ಯೋತಕ. ಅಮೆರಿಕನ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್, ಅಮೆರಿಕನ್ ಸ್ಟಾಟಿಸ್ಟಿಕಲ್ ಅಸೋಸಿಯೇಷನ್, ಇಂಟರ್‌ನ್ಯಾಷನಲ್ ಸ್ಟಾಟಿಸ್ಟಿಕಲ್ ಇನ್‌ಸ್ಟಿ ಟ್ಯೂಟ್, ಅಮೆರಿಕನ್ ಫಿಲಸಾಫಿಕಲ್ ಸೊಸೈಟಿ, ಎಕಾನೊಮಿಟ್ರಿಕ್ ಸೊಸೈಟಿ ಮತ್ತು ಸ್ವೀಡಿಷ್ ರಾಯಲ್ ಅಕಾಡೆಮಿ ಆಫ್ ಸೈನ್ಸಸ್‌ಗೆ ಇವರು ಸದಸ್ಯರು.

೧೯೫೪ರಲ್ಲಿ ಅಮೆರಿಕನ್ ಎಕನಾಮಿಕ್ ಅಸೋಸಿಯೇಷನಿನ ಅಧ್ಯಕ್ಷರನ್ನಾಗಿ ಮಾಡಿ ಅರ್ಥಶಾಸ್ತ್ರ ಪ್ರಪಂಚ ಇವರಿಗೆ ತನ್ನ ಗೌರವ ಸೂಚಿಸಿತು.

ಸಂಶೋಧನ ಸಾಧನೆ: ಪ್ರೊಫೆಸರ್ ಕುಜ್ನೆಟ್ಸ್ ಅವರ ಸಂಶೋಧನ ಪ್ರಪಂಚ ವಿಶಿಷ್ಟವಾದುದು. ಸಂಖ್ಯೆಗಳ ನಡುವೆ ಅವರ ಜೀವನ. ಸಂಖ್ಯೆಗಳಿಗೆ ಪರಿಮಾಣಸೂತ್ರ ನಿರೂಪಣೆ ಅವರ ಕೊಡುಗೆ. ಬಂದ ಫಲಿತಾಂಶಗಳನ್ನು ಕ್ರಮಬದ್ಧವಾಗಿ ವಿಶ್ಲೇಷಿಸಿ, ಫಲಿತಾಂಶದ ತರ್ಕಬದ್ಧ ಅನ್ವಯಗಳ ಮಂಡನೆ ಅವರ ಕ್ರಮ. ಅವರು ತಮ್ಮ ಸಂಶೋಧನೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಉಪಯುಕ್ತವಾಗಿದೆ. ಅವರ ಕೃತಿಗಳನ್ನು ಕುರಿತು ಅಕಾಡೆಮಿ ಹೀಗೆ ಹೇಳಿದೆ: "ಆರ್ಥಿಕ ಅಸ್ತಿತ್ವಗಳ ಸಂಕ್ಷಿಪ್ತ ಪರಿಮಾಣ ನಿರೂಪಣೆಗಾಗಿ ಸತತವಾಗಿ ದುಡಿದಿರುವ ಕುಜ್ನೆಟ್ಸರ ವಿವರಣೆ, ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗಳ ಕ್ರಮಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಸುಸಂಬದ್ಧ ಮಾರ್ಗಗಳಾಗಿವೆ."

ಪ್ರೊಫೆಸರ್ ಕುಜ್ನೆಟ್ಸರ ಶ್ರೇಯಸ್ಸಿಗೆ ಕಾರಣವಾದ ಗ್ರಂಥಗಳು ಹಲವಾರಿವೆ. ಅವುಗಳಲ್ಲಿ ಮುಖ್ಯವಾದವು ಇವು: ೧ ಸೆಕ್ಯುಲರ್ ಮೂವ್‌ಮೆಂಟ್ಸ್ ಇನ್ ಪ್ರೊಡಕ್ಷನ್ ಅಂಡ್ ಪ್ರೈಸಸ್, ೧೯೩೦. ೨ ಸೀಸನಲ್ ವೇರಿಯೇಷನ್ಸ್ ಇನ್ ಇಂಡಸ್ಟ್ರಿ ಅಂಡ್ ಟ್ರೇಡ್, ೧೯೩೩. ೩ ನ್ಯಾಷನಲ್ ಇನ್‌ಕಮ್ ಅಂಡ್ ಕ್ಯಾಪಿಟಲ್ ಫಾರ್ಮೇಷನ್ (೧೯೧೯–೧೯೩೫), ೧೯೩೭. ೪ ಕಮಾಡಿಟಿ ಫ್ಲೋ ಅಂಡ್ ಕ್ಯಾಪಿಟಲ್ ಫಾರ್ಮೇಷನ್ ೧೯೩೮. ೫ ನ್ಯಾಷನಲ್ ಇನ್‌ಕಮ್ ಅಂಡ್ ಇಟ್ಸ್ ಕಾಂಪೊಸಿಷನ್ಸ್, ಸಂಪುಟ ೧ ಮತ್ತು ೨, ೧೯೪೧. ೬ ನ್ಯಾಷನಲ್ ಪ್ರಾಡಕ್ಟ್ ಸಿನ್ಸ್ ೧೮೬೯, ೧೯೪೬. ೭ ಇನ್‌ಕಮ್ ಅಂಡ್ ವೆಲ್ತ್ ಸೀರೀಸ್, ೨ (ಸಂಪಾದಿತ), ೧೯೫೨. ೮ ಷೇರ್ಸ್ ಆಫ್ ಅಪ್ಪರ್ ಇನ್‌ಕಮ್ ಗ್ರೂಪ್ಸ್ ಇನ್ ಇನ್‌ಕಮ್ ಅಂಡ್ ಸೇವಿಂಗ್ಸ್, ೧೯೫೩. ೯ ಎಕನಾಮಿಕ್ ಚೇಂಜಸ್: ಸೆಲೆಕ್ಟೆಡ್ ಎಸ್ಸೇಸ್ ಇನ್ ಬಿಸಿನೆಸ್ ಸೈಕಲ್ಸ್, ನ್ಯಾಷನಲ್ ಇನ್‌ಕಮ್ ಅಂಡ್ ಎಕನಾಮಿಕ್ ಗ್ರೋತ್, ೧೯೫೪. ೧೦ ಇನ್‌ಕಮ್ ಅಂಡ್ ವೆಲ್ತ್ ಸೀರೀಸ್, ೫ (ಸಂಪಾದಿತ), ೧೯೫೫. ೧೧ ಎಕನಾಮಿಕ್ ಗ್ರೋತ್: ಬ್ರಜಿಲ್, ಇಂಡಿಯಾ ಅಂಡ್ ಜಪಾನ್, ೧೯೫೫. ೧೨ ಸಿಕ್ಸ್ ಲೆಕ್ಚರ್ಸ್ ಆನ್ ಎಕನಾಮಿಕ್ ಗ್ರೋತ್ ೧೯೫೯. ೧೩ ಪಾಪ್ಯುಲೇಷನ್ ರೀಡಿಸ್ಟ್ರಿಬ್ಯೂಷನ್ ಅಂಡ್ ಎಕನಾಮಿಕ್ ಗ್ರೋತ್, ಯುನೈಟೆಡ್ ಸ್ಟೇಟ್ಸ್ (೧೮೭೦–೧೯೫೦), ೧೯೬೦. ೧೪ ಕ್ಯಾಪಿಟಲ್ ಇನ್ ದಿ ಅಮೆರಿಕನ್ ಎಕಾನಮಿ, ೧೯೬೧. ೧೫ ಎಕನಾಮಿಕ್ ಟ್ರೆಂಡ್ಸ್ ಇನ್ ದಿ ಸೋವಿಯಟ್ ಯೂನಿಯನ್ (ಬರ್ಗ್‌ಸನ್‌ರೊಡನೆ ಸಂಪಾದಿತ), ೧೯೬೩. ೧೬ ಪೋಸ್ಟ್‌ವಾರ್ ಎಕನಾಮಿಕ್ ಗ್ರೋತ್, ೧೯೬೪. ೧೭ ಮಾಡರ್ನ್ ಎಕನಾಮಿಕ್ ಗ್ರೋತ್, ೧೯೬೬. ೧೮ ಎಕನಾಮಿಕ್ ಗ್ರೋತ್ ಆಫ್ ನೇಷನ್ಸ್: ಟೋಟಲ್ ಔಟ್‌ಪುಟ್ ಅಂಡ್ ಪ್ರೊಡಕ್ಷನ್ ಸ್ಟ್ರಕ್ಚರ್, ೧೯೭೧.

ಪ್ರೊಫೆಸರ್ ಕುಜ್ನೆಟ್ಸರ ಸಾಧನೆ ಇರುವುದು ಮುಖ್ಯವಾಗಿ ಆರ್ಥಿಕ ಬೆಳವಣಿಗೆ ಮತ್ತು ರಾಷ್ಟ್ರೀಯ ಆದಾಯ ವಿಶ್ಲೇಷಣೆಗಳಲ್ಲಿ. ಅವರ ಗ್ರಂಥಗಳಲ್ಲಿ ಮಾಡರ್ನ್ ಎಕನಾಮಿಕ್ ಗ್ರೋತ್: ರೇಟ್, ಸ್ಟ್ರಕ್ಚರ್ ಅಂಡ್ ಸ್ಪ್ರೆಡ್, ೧೯೬೬ ಮತ್ತು ಎಕನಾಮಿಕ್ ಗ್ರೋತ್ ಆಫ್ ನೇಷನ್ಸ್: ಟೋಟಲ್ ಔಟ್‌ಪುಟ್, ಅಂಡ್ ಪ್ರೊಡಕ್ಷನ್ ಸ್ಟ್ರಕ್ಚರ್, ೧೯೭೧ ಎಂಬ ಎರಡು ಗ್ರಂಥಗಳು ಮೈಲಿಗಲ್ಲುಗಳಂತಿವೆ. ರಾಯಲ್ ಅಕಾಡೆಮಿ ಆಫ್ ಸೈನ್ಸಸ್ ಬಹುಮಾನವನ್ನು ಪ್ರಕಟಿಸುತ್ತ, ಈ ಗ್ರಂಥಗಳನ್ನು ಕುರಿತು, 'ಇವು ಅಂತರರಾಷ್ಟ್ರೀಯ ಉತ್ಪನ್ನದ ಮತ್ತು ರಾಷ್ಟ್ರೀಯ ವರಮಾನಗಳ ಹೆಚ್ಚಳ ಹಂಚಿಕೆಗಳ ಅಂತರರಾಷ್ಟ್ರೀಯ ಹೋಲಿಕೆಗಳನ್ನು ಕುರಿತು ಹೊಸ ವಿಷಯವನ್ನೂ ವಿನೂತನ ವಿಶ್ಲೇಷಣೆ ಮತ್ತು ವಿವರಣೆಗಳನ್ನೂ ನೀಡುತ್ತವೆ' ಎಂದು ಹೇಳುತ್ತದೆ.

'ಮಾಡರ್ನ್ ಎಕನಾಮಿಕ್ ಗ್ರೋತ್‌ನಲ್ಲಿ ಅವರು ಮುಂಡಿಸುವ ವಿಷಯ ಬಹಳ ವಿಶಿಷ್ಟವಾದ್ದು, ಅನೇಕ ಅರ್ಥಶಾಸ್ತ್ರಜ್ಞರಿಗೆ ಹೊಸ-ಹೊಸ ಸಂಶೋಧನೆಗಳನ್ನು ಕೈಗೊಳ್ಳಲು ಪ್ರೇರಕವಾದ್ದು. ಕುಜ್ನೆಟ್ಸರ ಅಭಿಪ್ರಾಯದಂತೆ, ಆಧುನಿಕ ಆರ್ಥಿಕ ಬೆಳವಣಿಗೆ ೧೭೬೦ರ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಆರಂಭವಾದದ್ದು, ೧೮೫೦ರ ವೇಳೆಗೆ ಅನೇಕ ಐರೋಪ್ಯ ರಾಷ್ಟ್ರಗಳಿಗೆ ಹರಡಿ, ಪ್ರಥಮ ಯುದ್ಧದ ವೇಳೆಗೆ ಸುಮಾರು ೧೫-೧೬ ರಾಷ್ಟ್ರಗಳನ್ನು ಆವರಿಸಿತು. ಈಗ ಸಾಧಾರಣವಾಗಿ ಪ್ರಪಂಚದ ಎಲ್ಲ ಹಿಂದುಳಿದ ರಾಷ್ಟ್ರಗಳಲ್ಲೂ ಆಧುನಿಕ ಆರ್ಥಿಕ ಬೆಳವಣಿಗೆಯ ಬೀಜ ಬಿತ್ತಲಾಗಿದೆ. ಆಧುನಿಕ ಆರ್ಥಿಕ ಬೆಳೆವಣಿಗೆಯ ವೈಶಿಷ್ಟ್ಯವೆಂದರೆ, ಜನಜೀವನಕ್ಕೂ ಆರ್ಥಿಕ ಬೆಳೆವಣಿಗೆಗೂ ವಿಜ್ಞಾನದ ಅಳವಡಿಕೆ. ಈ ಕಾರಣದಿಂದಲೇ ರಾಷ್ಟ್ರಗಳಲ್ಲಿ ತಲಾ ವರಮಾನವೂ ರಾಷ್ಟ್ರೀಯ ವರಮಾನವೂ ಹೆಚ್ಚಾಗಿವೆ ಎನ್ನುತ್ತಾರೆ. ಕುಜ್ನೆಟ್ಸ್ ಅವರ ವಿಚಾರಗಳು ಸದಾ ಪರಿಮಾಣನಿರೂಪಣೆಯನ್ನೆ ಹಿನ್ನೆಲೆಯಾಗಿ ಉಳ್ಳಂಥವು. ಬೆನ್ನೆಲುಬಿಲ್ಲದ ಸಿದ್ಧಾಂತಗಳು ಕುಜ್ನೆಟ್ಸರಿಗೆ ಹಿಡಿಸುವುದಿಲ್ಲ.

ರಾಷ್ಟ್ರೀಯ ವರಮಾನದ ವಿಶ್ಲೇಷಣೆಯಲ್ಲಿ ಸಹ ಕುಜ್ನೆಟ್ಸರದು ವಿಶಿಷ್ಟವಾದ ಮಾರ್ಗ. ರಾಷ್ಟ್ರೀಯ ವರಮಾನದ ಅಂದಾಜಿನ ಹಾದಿಯು ದೊಡ್ಡ ತೊಡಕೆಂದರೆ ನಿರ್ದಿಷ್ಟವಾದ ಆರ್ಥಿಕ ಪರಿಕಲ್ಪನೆಗಳ ಉಪಯೋಗ. ಈ ತೊಡಕನ್ನು ಸಮರ್ಥವಾಗಿ ಬಿಡಿಸಿರುವ ಶ್ರೇಯಸ್ಸು ಕುಜ್ನೆಟ್ಸರದು. ಅವರು ರಾಷ್ಟ್ರೀಯ ವರಮಾನಕ್ಕೆ ಸಂಬಂಧಿಸಿದಂತೆ ಅನೇಕ ಪರಿಮಾಣ ವಿಶ್ಲೇಷಣೆಗಳನ್ನು ನಡೆಸಿದ್ದಾರೆ. ಪ್ರಪಂಚದ ಅನೇಕ ರಾಷ್ಟ್ರಗಳು ಈ ದೃಷ್ಟಿಯಿಂದ ಅವರಿಗೆ ಬಹಳ ಋಣಿಯಾಗಿರಬೇಕು. ಒಂದು ದೇಶದ ರಾಷ್ಟ್ರೀಯ ಆದಾಯದ ಬೆಳೆವಣಿಗೆಗಿಂತ ಮತ್ತೊಂದು ರಾಷ್ಟ್ರದ ಆದಾಯದ ಬೆಳೆವಣಿಗೆ ಹೇಗೆ ಮತ್ತು ಏಕೆ ಭಿನ್ನವಾಗಿದೆ ಎಂಬುದರ ವೈಜ್ಞಾನಿಕ ವಿಶ್ಲೇಷಣೆ ಕುಜ್ನೆಟ್ಸರ ಸಾಹಸಕ್ಕೆ ದೃಷ್ಟಾಂತ.

ವಿಶ್ವದ ಬೇರೆ ಯಾವ ಅರ್ಥಶಾಸ್ತ್ರಜ್ಞನೂ ಪ್ರೊಫೆಸರ್ ಕುಜ್ನೆಟ್ಸರಷ್ಟು ಪರಿಮಾಣಾತ್ಮಕವಾಗಿ ರಾಷ್ಟ್ರೀಯ ವರಮಾನ ವಿಶ್ಲೇಷಣೆಯನ್ನೂ ಆರ್ಥಿಕ ಬೆಳವಣಿಗೆಯ ವಿಶ್ಲೇಷಣೆಯನ್ನೂ ಮಾಡಿಲ್ಲ. ಇವರು ತಮ್ಮ ಗಂಭೀರ ಬರವಣಿಗೆ ಯಿಂದಾಗಿ ಅನೇಕ ಅರ್ಥಶಾಸ್ತ್ರಜ್ಞರನ್ನು ಪ್ರಚೋದಿಸಿದ್ದಾರೆ. ಗೌಣವಾದ ಅನೇಕ ಅಂಶಗಳು ಆರ್ಥಿಕ ಬೆಳವಣಿಗೆಯಲ್ಲಿ ಹೇಗೆ ಪರಿಣಾಮ ಬೀರಬಲ್ಲವು ಎಂಬ ವಿಷಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಇವರ ಬರವಣಿಗೆಯಲ್ಲಿ ಎದ್ದು ಕಾಣುವ ಸ್ತುತ್ಯಾರ್ಹ ಅಂಶಗಳೆಂದರೆ, ಅವರ ಸ್ಪಷ್ಟ ನಿರೂಪಣೆ, ಆರ್ಥಿಕ ಸಂಭಾವನೆಗಳಿಗೆ ಅವರು ನೀಡುವ ಸಂಶಯಾತೀತ ವಿವರಣೆ ಮತ್ತು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸುವ ವಿಶ್ಲೇಷಣೆ. ಅಂಕಿ-ಅಂಶಗಳ ಸಮೂಹವೆಂದರೆ ಸಾಧಾರಣವಾಗಿ ಅನೇಕರಿಗೆ ಭಯ ಹುಟ್ಟಿಸುವ ವಿಷಯ. ಆದರೆ ಕುಜ್ನೆಟ್ಸ್ ಇದಕ್ಕೆ ಅಪವಾದ.

ಕೊನೆಯದಾಗಿ ಅವರ ವಿಜ್ಞಾನಸ್ವಭಾವದ ಬಗ್ಗೆ ಒಂದು ಮಾತು ಹೇಳ ಬೇಕು. ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞ ಜೆ. ಎಂ. ಕೇನ್ಸ್ ಒಂದು ಕಡೆ[1] ಅದ್ವಿತೀಯ ಅರ್ಥವಿಜ್ಞಾನಿಗೆ ಇರಬೇಕಾದ ಲಕ್ಷಣಗಳನ್ನು ಹೀಗೆ ವಿವರಿಸುತ್ತಾರೆ: "ಆತ ಗಣಿತಜ್ಞ, ಇತಿಹಾಸಜ್ಞ, ರಾಜಕಾರಣಿ ಮತ್ತು ಸ್ವಲ್ಪಮಟ್ಟಿಗೆ ವೇದಾಂತಿ ಆಗಿರಬೇಕು. ಅವನು ಸಂಕೇತಗಳ ಭಾಷೆಯನ್ನು ಅರ್ಥಮಾಡಿಕೊಂಡು ಪದಗಳ ಮೂಲಕ ಅದನ್ನು ವಿವರಿಸುವ ಶಕ್ತಿ ಪಡೆದಿರಬೇಕು. ಅವನು ಸಮಷ್ಟಿ ಅಂಶಗಳ ಮೂಲಕ ನಿರ್ದಿಷ್ಟವನ್ನು ಕುರಿತು ಚಿಂತಿಸುವವನಾಗಿರಬೇಕು. ಒಂದೇ ವಿಚಾರದಲ್ಲಿ ಅವ್ಯಕ್ತ ಮತ್ತು ವ್ಯಕ್ತಗಳನ್ನು ಮುಟ್ಟುವವನಾಗಿರಬೇಕು. ಆತ ಹಿಂದಿನ ವಿಷಯಗಳ ಆಧಾರದ ಮೇಲೆ ವರ್ತಮಾನವನ್ನು ವಿಶ್ಲೇಷಿಸಿ, ಭವಿಷ್ಯಕ್ಕೆ ನೀತಿ ಯನ್ನು ರೂಪಿಸುವ ಸಾಮರ್ಥ್ಯ ಪಡೆದಿರಬೇಕು. ಆತ ಮಾನವನ ಸ್ವಭಾವ, ಸಾಮಾಜಿಕ ಸಂಸ್ಥೆಗಳು ಇವನ್ನು ನಿರ್ಲಕ್ಷಿಸದೆ ವಿಷಯವನ್ನು ಕುರಿತು ಚಿಂತಿಸ ಬೇಕು. ಅವನು ಉದ್ದೇಶಸಾಧನೆಗಾಗಿ, ಆದರೆ ಏಕಕಾಲದಲ್ಲಿಯೇ ತನಗೋಸ್ಕರ ಆಸಕ್ತಿ ವಹಿಸದೆ ಇರುವಂಥ ಮನೋಭಾವ ಹೊಂದಿರಬೇಕು. ಕಲಾವಿದನಂತೆ ನಿರ್ಲಿಪ್ತ ಹಾಗೂ ನಿಷ್ಠನಾಗಿರಬೇಕು. ಆದರೆ ಸಂದರ್ಭ ಬಂದಾಗ ರಾಜಕಾರಣಿ ಯಂತೆ ಜನರ ಸಾಮೀಪ್ಯವನ್ನು ಪಡೆದಿರಬೇಕು." ಪ್ರೊಫೆಸರ್ ಕುಜ್ನೆಟ್ಸ್ ಈ ಗುಣಗಳ ಗಣಿ.

ಕುಜ್ನೆಟ್ಸರ ನೆನಪು ಸದಾ ಉಳಿಯುವುದಕ್ಕೆ ಕಾರಣವಾದ್ದೆಂದರೆ ಅವರು ರಚಿಸಿದ ಸ್ಥೂಲ ರಾಷ್ಟ್ರೀಯ ಉತ್ಪನ್ನ (ಗ್ರಾಸ್ ನ್ಯಾಷನಲ್ ಪ್ರಾಡಕ್ಟ್-ಜಿ.ಎನ್.ಪಿ.) ಎಂಬ ಶಬ್ದ. ಆರ್ಥಿಕ ಸಾಧನೆಗಳನ್ನು ಅಳೆಯಲು ಇದನ್ನೊಂದು

[1] J. M. Keynes: *Alfred Marshall*, 1842–1924, Economic Journal, 1924

ಸಾಧನವನ್ನಾಗಿ ಅವರು ಬೆಳೆಸಿದರು. ಆದರೆ ವಿಧಿಯ ಅಣಕವೆಂದರೆ ಇದು: ಜಿ.ಎನ್.ಪಿ. ಅಷ್ಟೇನೂ ನಿಖರವಾದ್ದಲ್ಲವೆಂದು ಈಚಿನ ತಲೆಮಾರಿನ ಅರ್ಥಶಾಸ್ತ್ರಜ್ಞರು ವಾದಿಸುತ್ತಿರುವಾಗಲೇ ಕುಜ್ನೆಟ್ಸರಿಗೆ ಅದಕ್ಕಾಗಿ ಬಹುಮಾನ ಬಂದಿದೆ. ಮಾರುಕಟ್ಟೆಗೆ ಬಾರದ ಅಥವಾ ಮಾರಾಟಕ್ಕೆ ಒಳಪಡದ ಅನೇಕ ಆರ್ಥಿಕ ಚಟುವಟಿಕೆಗಳು ಜಿ.ಎನ್.ಪಿ.ಯ ಲೆಕ್ಕಾಚಾರದಲ್ಲಿ ಸೇರುವುದಿಲ್ಲ. ಉತ್ಪಾದನ ವ್ಯವಸ್ಥೆಯಲ್ಲಿ ಒಳ್ಳೆಯವುಗಳ ಉತ್ಪಾದನೆಯ ಜೊತೆಗೆ ಕೆಟ್ಟವೂ ಉತ್ಪಾದನೆಯಾಗುವುವೆಂಬುದನ್ನು ಅದು ಪರಿಗಣಿಸುವುದಿಲ್ಲ—ಎಂಬುದು ಇವರ ವಾದ. ಆದರೆ ತಮ್ಮ "ಜಿ.ಎನ್.ಪಿ."ಯಲ್ಲಿ ದೋಷವೇ ಇಲ್ಲವೆಂದಾಗಲಿ, ಅದು ಸಂಪೂರ್ಣ ವಸ್ತುನಿಷ್ಠವೆಂದಾಗಲಿ ತಾವೆಂದೂ ಹೇಳುವುದಿಲ್ಲವೆಂದು ಕುಜ್ನೆಟ್ಸ್ ಹಿಂದಿನಿಂದಲೂ ಎಚ್ಚರಿಸುತ್ತಲೇ ಬಂದಿದ್ದಾರೆ. ಜಿ.ಎನ್.ಪಿ.ಯ ಅಳತೆಯ ಪರಿಷ್ಕೃತ ವಿಧಾನಗಳನ್ನು ನವೆಂಬರಿನಲ್ಲಿ ಕುಜ್ನೆಟ್ಸರ ಹಾಜರಿಯಲ್ಲಿ ಪ್ರಿನ್ಸ್‌ಟನ್‌ನಲ್ಲಿ ನಡೆಯಲಿರುವ ಸಮ್ಮೇಳನವೊಂದರಲ್ಲಿ ಚರ್ಚಿಸಲಾಗುತ್ತದೆ.

ಕುಜ್ನೆಟ್ಸರ ವಿಶಿಷ್ಟ ಕೊಡುಗೆ

ಕುಜ್ನೆಟ್ಸರ ಅಧ್ಯಯನಕ್ಕೆ ಪ್ರಾಮುಖ್ಯ ಬಂದಿರುವುದು ರಾಷ್ಟ್ರೀಯ ವರಮಾನದ ಮಾಪನ ಕಾರ್ಯದಲ್ಲಿ ಅಗತ್ಯವಾದ ಸಾಂಖ್ಯಿಕ ಉಪಕರಣಗಳ ಕೇವಲ ಪರಿಷ್ಕರಣದಿಂದ ಅಲ್ಲ; ಅಭಿವೃದ್ಧಿಕ್ರಿಯೆಗಳ ಬಗ್ಗೆ ಅವರು ಮಾಡಿರುವ ವಿಶ್ಲೇಷಣೆಯ ಉಪಯುಕ್ತತೆಯಿಂದ. ನಾನಾ ದೇಶಗಳ ವಿಭಿನ್ನ ಸಾಮಾಜಿಕ, ರಾಜಕೀಯ ಅಭಿವೃದ್ಧಿಯ ಸ್ಪಷ್ಟ ವಿಶ್ಲೇಷಣೆ ಅವರ ಅಧ್ಯಯನಗಳಿಂದ ಸಾಧ್ಯವಾಗಿದೆ. ಅವುಗಳಲ್ಲಿ ಸಾಧ್ಯವಾಗಿರುವ ಬದಲಾವಣೆಗಳನ್ನು—ಅಥವಾ ನಿರೀಕ್ಷಿತ ಬದಲಾವಣೆಗಳು ಏಕೆ ಸಾಧ್ಯವಾಗಿರಲಿಲ್ಲವೆಂಬುದನ್ನು—ಮುಖ್ಯವಾಗಿ ಅವರ ಅಧ್ಯಯನಗಳ ನೆರವಿನಿಂದ ಅರಿಯಬಹುದಾಗಿದೆ. 'ಪೂರ್ಣವಾಗಿ ಅಭಿವೃದ್ಧಿ ಹೊಂದದ ರಾಷ್ಟ್ರಗಳು—ಹಿಂದಿನ ಬೆಳೆವಣಿಗೆಯ ವಿನ್ಯಾಸದ ದೃಷ್ಟಿಯಲ್ಲಿ ಪ್ರಕೃತ ಗುಣಲಕ್ಷಣಗಳು (೧೯೫೮)' ಎಂಬ ಲೇಖನದಲ್ಲಿ ಅವರು ಈ ವಿಚಾರವನ್ನು ಚರ್ಚಿಸಿದ್ದಾರೆ. 'ಐರೋಪ್ಯ ಕಕ್ಷೆಯಲ್ಲಿ ಸದ್ಯದಲ್ಲಿ ಬೆಳೆವಣಿಗೆ ಹೊಂದಿರುವ ದೇಶಗಳು ಕೈಗಾರಿಕಾಭಿವೃದ್ಧಿಪೂರ್ವದ ಘಟ್ಟವನ್ನು ಮುಟ್ಟಿದಾಗ, ಕೈಗಾರಿಕಾಕರಣದ ಪರಿಣಾಮಗಳಿಗೆ ಅಥವಾ ಅದಕ್ಕೆ ಆನುಷಂಗಿಕವಾಗಿ ಸಂಭವಿಸಿದ ಮುಖ್ಯ ಬೆಳೆವಣಿಗೆಗಳಿಗೆ ತಕ್ಕಂತೆ ಈ ಸಮಾಜಗಳು ಹೊಂದಾವಣೆ ಮಾಡಿಕೊಳ್ಳಲು ಅನುವು ಮಾಡಿಕೊಡುವಂಥ ವಿವಿಧ ಸಾಮಾಜಿಕ, ರಾಜಕೀಯ, ಆರ್ಥಿಕ ಸಂಸ್ಥೆಗಳನ್ನೂ ವಿಶಿಷ್ಟವಾದ ಮೌಲ್ಯ ವಿನ್ಯಾಸವನ್ನೂ ಪಡೆದೇ ಇದ್ದುವು' ಎಂದು ಅವರು ಹೇಳಿದ್ದಾರೆ. ಒಂದು ರೀತಿಯಲ್ಲಿ ಇದು ಐರೋಪ್ಯ ದೇಶಗಳ ಮತ್ತು ಹಿಂದುಳಿದ ದೇಶಗಳ ಕೈಗಾರಿಕಾ ಕ್ರಾಂತಿಗೆ ಸಹಾಯಕವಾದ ಸಂಸ್ಥೆಗಳ ಮತ್ತು ಧೋರಣೆಗಳ ವಿವೇಚನೆಯಾಗಿದೆ. ಈ ಸಂಸ್ಥೆಗಳ ಮತ್ತು ಧೋರಣೆಗಳ ಅಭಾವವೇ ಕಡಿಮೆ ಅಭಿವೃದ್ಧಿಹೊಂದಿದ ದೇಶಗಳ ಬೆಳೆವಣಿಗೆ ಕುಂಠಿತವಾಗಲು ಕಾರಣವಾಗಿದೆಯೆಂದು ಯಾರಾದರೂ ತರ್ಕಿಸಬಹುದಾಗಿದೆ.[1]

—ವಿ. ಕೆ. ಶ್ರೀನಿವಾಸನ್

---

[1] *Economic Times*, November 1, 1971

ಪುಸ್ತಕಲೋಕ

ಸಮಾಜಶಾಸ್ತ್ರ : ಲೇ : ಟಿ. ಎಸ್. ಮಲ್ಲಿಕಾರ್ಜುನಯ್ಯ, ವ್ಹಿ. ಎಸ್. ಉಪ್ಪಿನ, ಎಚ್. ವ್ಹಿ. ನಾಗೇಶ ಮತ್ತು ಡಿ. ಎಚ್. ಭಡಂಕರ ; ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪುಟ ೧೨೬ ; ಬೆಲೆ : ರೂ. ೩

ಸಮಾಜಶಾಸ್ತ್ರ ಎಂಬ ಪುಸ್ತಕ ಕರ್ನಾಟಕ ವಿಶ್ವವಿದ್ಯಾಲಯದ ಮೊದಲನೆಯ ಬಿ.ಎ. ಮೊದಲನೆಯ ಭಾಗದಲ್ಲಿ ಸಮಾಜಶಾಸ್ತ್ರದ ಪಠ್ಯಪುಸ್ತಕ. ಈ ಗ್ರಂಥವನ್ನು ನಾಲ್ಕು ಜನ ಸಮಾಜಶಾಸ್ತ್ರ ಪ್ರಾಧ್ಯಾಪಕರು ಬರೆದಿದ್ದಾರೆ. ಪುಸ್ತಕದಲ್ಲಿ ಒಟ್ಟು ಒಂಬತ್ತು ಅಧ್ಯಾಯಗಳಿವೆ. ಪೀಠಿಕಾಪ್ರಕರಣದಲ್ಲಿ ಸಮಾಜಶಾಸ್ತ್ರದ ಬೆಳೆವಣಿಗೆಯ ಸ್ವರೂಪವನ್ನು ಸಂಕ್ಷೇಪವಾಗಿ ನಿರೂಪಿಸಿ, ಸಮಾಜಶಾಸ್ತ್ರದ ವ್ಯಾಪ್ತಿ ಮತ್ತು ಅಧ್ಯಯನದ ವಿಷಯಗಳನ್ನು ಪರಿಶೀಲಿಸಲಾಗಿದೆ. ಲೇಖಕರು ಸಮಾಜಶಾಸ್ತ್ರವನ್ನು ವಿಜ್ಞಾನವೆಂದು ಪರಿಗಣಿಸಲು ಅದು ಹೇಗೆ ಅರ್ಹವೆಂಬುದನ್ನು ತಿಳಿಯಪಡಿಸಿದ್ದಾರೆ. ಇದಲ್ಲದೆ ಸಮಾಜಶಾಸ್ತ್ರಕ್ಕೂ ಸಮಾಜವಿಜ್ಞಾನದ ಇನ್ನು ಕೆಲವು ವಿಭಾಗಗಳಿಗೂ ಇರುವ ಸಂಬಂಧಗಳನ್ನು ಸಾಕಷ್ಟು ವಿವರಣೆಗಳೊಂದಿಗೆ ಚರ್ಚಿಸಿದ್ದಾರೆ. ಸಮಾಜಶಾಸ್ತ್ರ ಕ್ಷೇತ್ರದಲ್ಲಿ ಭಾರತದಲ್ಲಿ ಆಗಿರುವ ಬೆಳೆವಣಿಗೆಯ ವಿಚಾರದಲ್ಲಿ ಹಲವು ವಿಷಯಗಳನ್ನು ಸೇರಿಸಿ, ಸಮಾಜಶಾಸ್ತ್ರಕ್ಕೂ ಮತ್ತು ವಿಜ್ಞಾನಗಳಿಗೂ ಸಂಬಂಧಗಳನ್ನು ನಮ್ಮ ಜೀವನದ ಹಲವು ಅಂಶಗಳ ವಿವರಣೆಗಳೊಂದಿಗೆ ವಿಶ್ಲೇಷಿಸಬಹುದಿತ್ತು. ಎರಡನೆಯ ಅಧ್ಯಾಯದಲ್ಲಿ ಸಮಾಜವನ್ನೂ ಮೂರನೆಯ ಅಧ್ಯಾಯದಲ್ಲಿ ಸಮುದಾಯವನ್ನೂ ನಿರೂಪಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಕುಟುಂಬದ ಸ್ಥೂಲ ವಿವೇಚನೆಯಿದೆ. ಐದನೆಯ ಅಧ್ಯಾಯದಲ್ಲಿ ವಿವಾಹದ ಉದ್ದೇಶಗಳನ್ನು ಹೇಳಿ ವಿವಾಹ ಪದ್ಧತಿಗಳನ್ನು ವಿವರಿಸಲಾಗಿದೆ. ಕುಟುಂಬ ಮತ್ತು ವಿವಾಹಗಳನ್ನು ವಿವರಿಸುವ ಮೊದಲು ಸಂಘಸಂಸ್ಥೆಗಳನ್ನು ಕುರಿತ ಸ್ಥೂಲವಿವೇಚನೆ ಇದ್ದಿದ್ದರೆ ಒಳಿತಾಗಿತ್ತು. ವಿವಾಹದ ಆಧುನಿಕ ಪ್ರವೃತ್ತಿಗಳನ್ನು ಸೂಚಿಸುವ ಪ್ರಯತ್ನ ಮಾಡಿಲ್ಲ. ಭಾರತದ ಜನಜೀವನದ ಉದಾಹರಣೆಗಳನ್ನಾಗಲಿ ಭಾರತೀಯ ಸಮಾಜಶಾಸ್ತ್ರಜ್ಞರ ಕೊಡುಗೆಗಳನ್ನಾಗಲಿ ಎಲ್ಲೂ ಕಾಣಿಸದೆ ಇರುವುದು ವಿಷಾದಕರ. ಈ ಪುಸ್ತಕದಲ್ಲಿ ಹೆಚ್ಚು ಆಳವಾದ ಪರಿಶೀಲನೆಗೆ ಒಳಗಾಗಿರುವ ವಿಷಯವೆಂದರೆ 'ಧರ್ಮ'. ಧರ್ಮವನ್ನು ವಿವಿಧ ದೃಷ್ಟಿಗಳಿಂದ ಪರಿಶೀಲಿಸಿ ಅದರ ಕಾರ್ಯಗಳನ್ನು ಸವಿಸ್ತಾರವಾಗಿ ವಿವರಿಸಲಾಗಿದೆ. ಧರ್ಮದ ಹೆಸರಿನಲ್ಲಿ ಆಗುವ ದುರಂತಗಳನ್ನು ಸೂಚಿಸಲಾಗಿದೆ.

ಪ್ರತಿಯೊಂದು ಅಧ್ಯಾಯದ ಕೊನೆಯಲ್ಲೂ ಸಾರಾಂಶವನ್ನು ಕೊಟ್ಟಿರುವುದು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕೊನೆಯಲ್ಲಿ ಇಂಗ್ಲಿಷ್–ಕನ್ನಡ ಮತ್ತು ಕನ್ನಡ–ಇಂಗ್ಲಿಷ್ ಪಾರಿಭಾಷಿಕ ಶಬ್ದಕೋಶಗಳನ್ನು ಕೊಟ್ಟಿರುವುದರಿಂದ ಈ ಪುಸ್ತಕವನ್ನು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಮಾತ್ರವಲ್ಲದೆ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳೂ ಓದಿ ಪ್ರಯೋಜನ ಪಡೆಯಲು ಅವಕಾಶವಿದೆ.

ಒಟ್ಟಿನಲ್ಲಿ ನಾಲ್ವರು ಗ್ರಂಥಕರ್ತರು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿ ಕನ್ನಡದ ಸಮಾಜಶಾಸ್ತ್ರ ಸಾಹಿತ್ಯಕ್ಕೆ ಒಂದು ಒಳ್ಳೆಯ ಕೊಡುಗೆಯನ್ನು ನೀಡಿದ್ದಾರೆ. ಪುಸ್ತಕದ ಮುದ್ರಣ ಚೆನ್ನಾಗಿದೆ.

—ಎಚ್. ಎಂ. ಸದಾಶಿವಯ್ಯ

ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ: ಲೇ: ಸಿ. ಕೆ. ಎನ್. ರಾಜ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟ: ೬೨; ಬೆಲೆ: ೨೫ ಪೈಸೆ

ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಆದ್ಯತೆ; ಇದನ್ನು ಕಾಪಾಡಲು ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು; ಮೂಲಭೂತ ಹಕ್ಕುಗಳಿಗೆ ಸರಕಾರದಿಂದ ಅಥವಾ ಬೇರೆಯವರಿಂದ ಚ್ಯುತಿಬಾರದಂತೆ ನೋಡಿಕೊಳ್ಳಲು ಶ್ರೇಷ್ಠ ನ್ಯಾಯಾಲಯುಗಳು; ಬಡವ ಬಲ್ಲಿದನೆನ್ನದೆ, ಜಾತೀಯ ತಾರತಮ್ಯವಿಲ್ಲದೆ ಪ್ರಜೆಗಳೆಲ್ಲರ ಹಿತ ಕಾಪಾಡಲು ನಿರ್ದೇಶಕತತ್ತ್ವಗಳು; ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೆಲ್ಲ ಸರಿಸಮಾನರೆಂಬ ದೃಷ್ಟಿಯನ್ನು ಇಟ್ಟುಕೊಂಡು ಅಗತ್ಯವಾದ ಕಾನೂನುಗಳ ರಚನೆ; ಅವುಗಳನ್ನು ರಚಿಸಲು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಶಾಸನಸಭೆಗಳು —ಇವು ಪ್ರಜಾಪ್ರಭುತ್ವದ ಮುಖ್ಯ ಮುಖಗಳು.

ಇಂದಿನ ಪ್ರಜಾಪ್ರಭುತ್ವದ ರೂಪುರೇಷೆಗಳ ಮಾತೃಭೂಮಿ ಇಂಗ್ಲೆಂಡ್ ಎಂದರೆ ತಪ್ಪಾಗದು. ಪ್ರಜಾಪ್ರಭುತ್ವವುಳ್ಳ ಬೇರೆಲ್ಲ ರಾಷ್ಟ್ರಗಳು ಅದರ ವಿಚಾರ ದೋಹನದಿಂದ ಪರಿಸ್ಥಿತಿಗನುಗುಣವಾಗಿ ತಮ್ಮ ತಮ್ಮ ಸಂವಿಧಾನಗಳನ್ನು ರೂಪಿಸಿಕೊಂಡಿವೆ. ಅಮೆರಿಕ ಅದರಲ್ಲೊಂದು ಪ್ರಮುಖ ರಾಷ್ಟ್ರ. ಭಾರತ ಇನ್ನೊಂದು. ಇಂಥ ರಾಷ್ಟ್ರಗಳು ಅನೇಕ.

ಪ್ರಜಾಪ್ರಭುತ್ವದಲ್ಲಿ ಕಾನೂನಿನ ಸ್ಥಾನವನ್ನು ಪರಾಮರ್ಶಿಸುವಾಗ ವಿವಿಧ ಪ್ರಜಾಪ್ರಭುತ್ವಗಳು ಕಾನೂನುಗಳಿಂದ ಅದನ್ನು ಸಾಧಿಸಿದ ಕ್ರಮವನ್ನು ಚರ್ಚಿಸದಿದ್ದರೆ ಪುಸ್ತಕ ಪರಿಪೂರ್ಣವೆನಿಸದು. ಈ ಪುಸ್ತಕದಲ್ಲಿ ಇದನ್ನು ಸ್ವಲ್ಪಮಟ್ಟಿಗಾದರೂ ವಿವೇಚಿಸಬೇಕಿತ್ತು. ಸಂವಿಧಾನ ಮಾತ್ರ ಪ್ರಜಾಪ್ರಭುತ್ವವನ್ನು ರಕ್ಷಿಸುವ ಸಾಧನವಲ್ಲ. ಅದಕ್ಕೆ ಪರಿಕರವಾಗಿ ಹಲವಾರು ಕಾನೂನುಗಳು ರಚಿಸಲ್ಪಡುವುವು. ಇದರಲ್ಲಿ ಭಾರತದ ಸಂವಿಧಾನದ ವಿಚಾರ ಬರೆದುದನ್ನು ಬಿಟ್ಟರೆ ಬೇರೆ ಕಾನೂನುಗಳ ವಿಚಾರವಾಗಲಿ, ಬೇರೆ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಕಾನೂನಿಗೆ ಇರುವ

ಸ್ಥಾನಮಾನಗಳ ವಿಚಾರವಾಗಲಿ ಏನೂ ಬಂದಿಲ್ಲ. ಪ್ರಜಾಪ್ರಭುತ್ವದಲ್ಲಿ ಕಾನೂನಿನ ಸ್ಥಾನ ಎಂಬ ಹೆಸರನ್ನಿಟ್ಟುಕೊಂಡು ಈ ಪುಸ್ತಕದ ಬಹುಭಾಗ ಭಾರತದ ಸಂವಿಧಾನದ ವಿಚಾರವನ್ನು ಮಾತ್ರ ಹೇಳುತ್ತದೆ. ಇದರಲ್ಲಿ ಹೆಸರಿಗೆ ತಕ್ಕ ವಿಷಯದ ವ್ಯಾಪ್ತಿಯಿಲ್ಲ! ಮಾನವರಿಗೆ ಗುಣಕ್ಕೆ ಒಪ್ಪುವ ಹೆಸರು ಇರುವುದು ಅಗತ್ಯವಿಲ್ಲ. ಆದರೆ ಪುಸ್ತಕದಲ್ಲಿ ಹೆಸರಿಗೊಪ್ಪುವ ವಿಷಯ ಇರುವುದು ಅಗತ್ಯ.

ದಿನಕ್ಕೊಂದು ಬರುವ ಸರಕಾರದಿಂದ ಮೂಲಭೂತ ಹಕ್ಕುಗಳು ಚ್ಯುತಿಗೊಂಡು ಸರ್ವಾಧಿಕಾರ ಬರದಂತೆ ಮೂಲಭೂತ ಹಕ್ಕುಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಶ್ರೇಷ್ಠ ನ್ಯಾಯಾಲಯಗಳು ಅವುಗಳನ್ನು ಕಾಯುವ ಸಿಪಾಯಿಗಳಂತಿವೆ. ಅವುಗಳ ತೀರ್ಪುಗಳಿಂದಾಗಿ ಸರಕಾರದ ಧೋರಣೆಗೆ ಬಾಧಕ ಬಂದಲ್ಲಿ ಸಂವಿಧಾನವನ್ನೆ ತಿದ್ದುಪಡಿಮಾಡುವುದು ಸೂಕ್ತವೇ, ಅಲ್ಲವೆ—ಎಂಬ ವಿಚಾರವನ್ನು ಲೇಖಕರು ವಿವೇಚಿಸಿದ್ದಾರೆ. ಜನರ ಆಕಾಂಕ್ಷೆಗಳನ್ನು ಪ್ರತಿಬಿಂಬಿಸದ ಸಂವಿಧಾನವನ್ನು ತಿದ್ದುಪಡಿಮಾಡಬೇಕೆಂಬ ಅಭಿಪ್ರಾಯಕ್ಕೆ ಹೆಚ್ಚಿನ ಪುಟಗಳನ್ನು ಮೀಸಲಿಡಲಾಗಿದೆ. ಆದರಿಂದ ಬರಬಹುದಾದ ಬಾಧಕದ ವಿಚಾರಕ್ಕೆ ಮೀಸಲಾಗಿರುವ ಪುಟಗಳು ಬಹು ಸ್ವಲ್ಪ. ಅದನ್ನು ಸಾಕಷ್ಟು ವಿವೇಚಿಸಿಲ್ಲ.

ಈ ಪುಸ್ತಕದಿಂದ ಭಾರತದ ಸಂವಿಧಾನದ ವಿಚಾರವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು. ಅಷ್ಟರಮಟ್ಟಿಗೆ ಈ ಪುಟ್ಟ ಹೊತ್ತಿಗೆಯ ಉಪಯುಕ್ತತೆ. ಹೆಸರೆಂತಿದ್ದರೂ ನಮ್ಮ ಸಂವಿಧಾನವನ್ನು ಕುರಿತ ಒಂದು ಚಿಕ್ಕ ವಿಮರ್ಶೆ ಈ ಪುಸ್ತಕ.

—ಕೈಂತಜೆ

ವಿಜಯನಗರ ಕಾಲದ ಧಾರ್ಮಿಕ ಜೀವನ: ಲೇ: ಸದ್ಯೋಜಾತ ಸ್ವಾಮೀಜಿ, ಎಂ.ಎ.; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ೧೯೭೧; ಪುಟ: ೬೩; ಬೆಲೆ: ೨೫ ಪೈಸೆ

ಪ್ರಸ್ತುತ ಹೊತ್ತಗೆ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ಧ್ಯೇಯವಾದ ಜನಸಾಮಾನ್ಯರಲ್ಲಿ ಜ್ಞಾನಪ್ರಸಾರ ಮಾಡುವ ಕಾರ್ಯದಲ್ಲಿ ಫಲಪ್ರದವಾದ ಪ್ರಯತ್ನ. (ಕರ್ನಾಟಕದ ಇತಿಹಾಸದಲ್ಲಿ ಉಜ್ವಲವಾದ ವಿಜಯನಗರ ಸಾಮ್ರಾಜ್ಯಕಾಲದ ಧಾರ್ಮಿಕ ಜೀವನದ ಸಂಕ್ಷಿಪ್ತ ಪರಿಚಯ ನೀಡುತ್ತದೆ, ಈ ಹೊತ್ತಗೆ.) ಸುಮಾರು ಮೂರು ಶತಮಾನಗಳ ಕಾಲ ಇಡೀ ದಕ್ಷಿಣ ಭಾರತವನ್ನಾಳಿದ ಆ ಅರಸರು ತಮ್ಮ ವೈಯಕ್ತಿಕ ಧರ್ಮ ಯಾವುದೇ ಆದರೂ ಎಲ್ಲ ಧರ್ಮಗಳವರಿಗೂ, ಸಾಮ್ರಾಜ್ಯದ ಪ್ರಥಮ ಶತ್ರುಗಳೆನಿಸಿದ್ದ ಮುಸ್ಲಿಮರಿಗೆ ಕೂಡ, ಮತೀಯ ಸ್ವಾತಂತ್ರ್ಯ ನೀಡಿದ್ದುದು ಅವರ ಔದಾರ್ಯವನ್ನು ಸಾರುತ್ತದೆ.

ಈ ಹೊತ್ತಗೆಯಲ್ಲಿ ಮೊದಲ ಅಧ್ಯಾಯ ಸಾಮ್ರಾಜ್ಯದ ಪ್ರಮುಖ ದೊರೆಗಳ ಧ್ಯೇಯಧೋರಣೆಗಳನ್ನೂ ರಾಜಕೀಯ ಹಿನ್ನೆಲೆಯನ್ನೂ ಮುಂದಿನ ನಾಲ್ಕು ಅಧ್ಯಾಯಗಳು ಶೈವ, ವೀರಶೈವ, ವೈಷ್ಣವ, ಜೈನ ಮತ್ತಿತರ ಧರ್ಮಗಳ ಕೊಡುಗೆಗಳನ್ನೂ ಕಡೆಯ ಅಧ್ಯಾಯ ಜನತೆಯ ಧಾರ್ಮಿಕ ಜೀವನದ ಸೂಕ್ಷ್ಮ ಪರಿಚಯವನ್ನೂ ನೀಡುತ್ತವೆ. ಮೊದಲ ಅನುಬಂಧ ಬುಕ್ಕರಾಯನ ಮತೀಯ ಧೋರಣೆಯನ್ನು ಸಾರುವ ಶಾಸನದ ಪಾಠವನ್ನೂ ಎರಡನೆಯ ಅನುಬಂಧ ವಿದೇಶಿ ಪ್ರವಾಸಿಯೊಬ್ಬನ ಮಹಾನವಮಿ ಉತ್ಸವದ ವರ್ಣನೆಯನ್ನೂ ಒದಗಿಸುತ್ತವೆ.

ಲೇಖಕರ ಅಭಿಪ್ರಾಯದಲ್ಲಿ ಕೆಲವು ವಾದಗ್ರಸ್ತವಾಗಿವೆ. ಕಾಶೀವಿಲಾಸ ಕ್ರಿಯಾಶಕ್ತಿ ಸಾಮ್ರಾಜ್ಯದ ಆದಿಕಾಲದಲ್ಲಿ ರಾಜಗುರುಗಳಾಗಿದ್ದರೆಂದರೆ (ಪುಟ ೨) ರಾಜ್ಯ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರವೇನು? ವಿದ್ಯಾತೀರ್ಥ ಮತ್ತು ವಿದ್ಯಾರಣ್ಯರು ರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಹರಿಹರ-ಬುಕ್ಕರ ಕ್ಷಾತ್ರ ತೇಜಸ್ಸಿಗೆ ತಮ್ಮ ಬ್ರಹ್ಮತೇಜಸ್ಸಿನ ಬೆಂಬಲವಿತ್ತರೆಂದು ಹೇಳಿದ್ದಾರೆ (ಪು. ೧೯-೨೦). ವಾದಗ್ರಸ್ತವಾದ ಇಂಥ ವಿಷಯದಲ್ಲಿ ಲೇಖಕರು ತಮ್ಮ ನಿಲವೇನೆಂಬುದನ್ನು ತಿಳಿಸಿಲ್ಲ. ಮತ್ತೆ ಕೆಲವು ಹೇಳಿಕೆಗಳು ತಪ್ಪರ್ಥವನ್ನು ಕೊಡುತ್ತವೆ. ಗೋಪಣ್ಣ ಶ್ರೀರಂಗನಾಥನ ಮೂರ್ತಿಯನ್ನು ತಿರುಪತಿಯಿಂದ ಶ್ರೀರಂಗಕ್ಕೆ ತಂದುದರಿಂದ ಶ್ರೀರಂಗಪಟ್ಟಣದ ಪುನರುಜ್ಜೀವನವಾಯಿತೆಂದಾಗ (ಪು. ೨-೩) ವಾಚಕರಲ್ಲಿ ಶ್ರೀರಂಗಂ (ತಮಿಳ್ನಾಡು) ಮತ್ತು ಶ್ರೀರಂಗಪಟ್ಟಣ (ಕರ್ನಾಟಕ) ಗಳಲ್ಲಿ ಯಾವುದರ ಬಗ್ಗೆ ಬರೆಯುತ್ತಿದ್ದಾರೆಂಬ ಸಂದೇಹ ತಲೆದೋರುತ್ತದೆ. ಇನ್ನು ಕೆಲವು ಹೇಳಿಕೆಗಳು ಸತ್ಯದೂರವಾದವು. ಶ್ರೀ ವ್ಯಾಸರಾಯರ ಮರಣ ೧೫೩೩ರಲ್ಲಿ (ಪು. ೧೩) ಅಲ್ಲ; ೧೫೩೯ರಲ್ಲಿ ಎಂಬುದು ಹೆಚ್ಚು ಮಂದಿ ವಿದ್ವಾಂಸರ ಅಭಿಪ್ರಾಯ. ಹರಪ್ಪ ಸಂಸ್ಕೃತಿಯಲ್ಲಿ ಪ್ರಧಾನವಾಗಿ ಶೈವಧರ್ಮದ ಕುರುಹುಗಳನ್ನು ಕಾಣುತ್ತೇವೆಂಬುದಕ್ಕಿಂತ (ಪು. ೧೬) ಶೈವಧರ್ಮವನ್ನು ಸೂಚಿಸುವ ಕೆಲವು ಮಾಹಿತಿಗಳನ್ನು ಕಾಣುತ್ತೇವೆಂಬುದು ಹೆಚ್ಚು ಸೂಕ್ತ. ವೇದಪೂರ್ವದಲ್ಲಿ ಲಿಂಗಪೂಜೆ ಇದ್ದುದಕ್ಕೆ ಆಧಾರಗಳಿಲ್ಲ. ಹರಪ್ಪ ಸಂಸ್ಕೃತಿಯಲ್ಲಿರುವ ಲಿಂಗಾಕಾರದ ವಸ್ತುಗಳು ಪೂಜಾವಸ್ತುಗಳಲ್ಲ. ಲಿಂಗಪೂಜೆ ಕ್ರಿ.ಶ. ೧-೨ನೆಯ ಶತಮಾನಗಳಿಂದೀಚಿನದೆಂದು ಹಲವು ವಿದ್ವಾಂಸರು ಭಾವಿಸಿದ್ದರೆ ಮತ್ತೆ ಕೆಲವರು ಆಗಮಸಾಹಿತ್ಯ ಕಾಲದಿಂದೀಚಿನದೆಂದು ಅಭಿಪ್ರಾಯಪಟ್ಟಿದ್ದಾರೆ. ಲಾಕುಲ-ಪಾಶುಪತರೂ ಕಾಳಾಮುಖರೂ ಒಂದೇ (ಪು. ೧೭) ಎಂಬುದನ್ನು ಒಪ್ಪಲಾಗುವುದಿಲ್ಲ. ವೀರಶೈವ ಧರ್ಮಸ್ಥಾಪಕರಾದ ಪಂಚಾಚಾರ್ಯರು ಶಿವನ ಪಂಚ ಮುಖಗಳಿಂದ ಹುಟ್ಟಿ, ಯುಗಯುಗಾಂತರಗಳಲ್ಲಿ ಅವತರಿಸುತ್ತಿದ್ದರು. ಕಲಿಯುಗದಲ್ಲಿ ಪ್ರಸಿದ್ಧ ಪಂಚ ಶೈವಪೀಠಗಳಲ್ಲಿಯ ಲಿಂಗಗಳಿಂದ ಉದ್ಭವಿಸಿ ಮಠಗಳನ್ನು ಸ್ಥಾಪಿಸಿದರೆಂಬುದು (ಪು. ೨೧) ತರ್ಕದೂರವಾದ ಮತೀಯ ನಂಬಿಕೆ. ಇವನ್ನು ಅವರ ಐತಿಹಾಸಿಕತೆಯೊಂದಿಗೆ

ಜತೆಗೂಡಿಸುವುದು ಅವೈಜ್ಞಾನಿಕ. ವಿಜಯನಗರದಲ್ಲಿ ಜೈನಮಂದಿರ ಕಟ್ಟಿಸಿದವನು ಇರುಗಪ್ಪನೇ (ಪು. ೬), ಈರುಗಪ್ಪನೇ (ಪು. ೪೪ ಮತ್ತು ೪೫)? ಈತ ಬಸದಿಯನ್ನು ಸ್ಥಾಪಿಸಿದ್ದು ೧೩೮೫ರಲ್ಲೋ (ಪು. ೬) ಅಥವಾ ೧೩೯೭ರಲ್ಲೋ (ಪು. ೪೪)? ಈ ರೀತಿಯ ಕೆಲವು ದೋಷಗಳು ಕಂಡುಬಂದರೂ ಲೇಖಕರ ಈ ಪ್ರಯತ್ನ ಯಶಸ್ವಿಯಾಗಿದೆ ಮತ್ತು ಆದರಿಂದ ಈ ಗ್ರಂಥಮಾಲೆಯ ಉದ್ದೇಶ ಸಫಲವಾಗುತ್ತದೆಂದು ಹೇಳಬಹುದು. ಪುಸ್ತಕದ ಹೊರ ಮೈಕಟ್ಟು, ಮುದ್ರಣ ಶೈಲಿ ಎಲ್ಲ ಸುಂದರವಾಗಿವೆ. ಎಲ್ಲೋ ಒಂದೆರಡು ಅಚ್ಚಿನ ತಪ್ಪುಗಳಿದ್ದರೂ ಮುದ್ರಣ ಉತ್ತಮವಾಗಿದೆ.

—ಬಿ. ಕೆ. ಗುರುರಾಜರಾವ್

ಜಾನಪದ ಮೈಲಿಕಲ್ಲುಗಳು: ಲೇ: ಶೀ. ನಂ. ಶಂಕರನಾರಾಯಣ ; ಪ್ರ: ಶೀ. ನಂ. ಶ್ರೀ. ಸ್ಮಾರಕ ಪ್ರಕಾಶನ, ಮೈಸೂರು ; ಪುಟ: ೧೦೦ ; ಬೆಲೆ: ರೂ. ೪

ಪ್ರಸ್ತುತ ಪುಸ್ತಕದಲ್ಲಿ ಪಾಶ್ಚಾತ್ಯ ಸಾಹಿತ್ಯದ ಎರಡು ಪ್ರಮುಖ ಕೃತಿಗಳ ಸಂಕ್ಷಿಪ್ತ ಪರಿಚಯ ಮತ್ತು ವಿಮರ್ಶೆಗಳನ್ನು ಲೇಖಕರು ನೀಡಿದ್ದಾರೆ. ಮೊದಲನೆಯದು ಕಾಲೇವಾಲಾ ; ಕಾಲೇವಾ ಎಂಬ ವೀರನ ಸಂತತಿಗೆ ಸೇರಿದ ವೀರರ ಕಥೆಯನ್ನೊಳಗೊಂಡಿರುವ ಕಾಲೇವಾಲಾ ಎಂಬ ಪದಕ್ಕೆ ವೀರರ ನಾಡು ಎಂದರ್ಥ. ಇದು ಫಿನ್ನಿಷ್ ಜನತೆಯ ಇತಿಹಾಸಪೂರ್ವ ವೃತ್ತವನ್ನು ತಿಳಿಸುವ ಕಂಠಸ್ಥ, ಪದ್ಯರೂಪಕ ಐತಿಹ್ಯಗಳನ್ನು ೧೯ನೆಯ ಶತಕದ ಪೂರ್ವಾರ್ಧದಲ್ಲಿ ಎಲಿಯಾಸ್ ಲೊನ್ರಾಟ್ ಸಂಗ್ರಹಿಸಿ, ಸಂಪಾದಿಸಿದ ಬೃಹದ್ಗ್ರಂಥ ; ಫಿನ್ಲೆಂಡಿನ ರಾಷ್ಟ್ರೀಯ ಮಹಾಕಾವ್ಯ. ಇತ್ತೀಚಿನ ವರೆಗೂ ಅಂದರೆ ೧೬ನೆಯ ಶತಮಾನದ ವರೆಗೂ ಗುಲಾಮಗಿರಿಯಲ್ಲಿ ತೊಳಲುತ್ತಿದ್ದು, ಅನಂತರದ ಮೂರು ಶತಕಗಳಲ್ಲಿ ಸ್ವೀಡನ್ ಮತ್ತು ರಷ್ಯಗಳ ಹಿಡಿತದಲ್ಲಿ ಹೆಣಗಾಡಿ, ಕಡೆಗೆ ೧೮೦೯ರಲ್ಲಿ ರಷ್ಯದ ನೇತೃತ್ವದಲ್ಲಿ ಸ್ವಯಮಾಡಳಿತ ಪಡೆದುಕೊಂಡ ಫಿನ್ಲೆಂಡಿನ ಜನರಲ್ಲಿ ರಾಷ್ಟ್ರೀಯತೆಯನ್ನು ಉದ್ರೇಕಿಸಿದ ಈ ಕೃತಿ ರಾಷ್ಟ್ರದ ಮಹಾಕಾವ್ಯವೆನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಕಾಲೇವಾಲಾದ ಕೇಂದ್ರವ್ಯಕ್ತಿ ವಾಯಿನಾ ಮಾಯಿನೆನ್ ; ಇವನು ಅತಿಮಾನವ, ಅದ್ಭುತ ಸಾಮರ್ಥ್ಯವುಳ್ಳವ, ಮಂತ್ರಶಕ್ತಿಯಲ್ಲೂ ಸಂಗೀತಪ್ರಾವೀಣ್ಯದಲ್ಲೂ ಅಸಮಾನ. ಇನ್ನೊಬ್ಬ ಪ್ರಮುಖವ್ಯಕ್ತಿ ಅದ್ವಿತೀಯನಾದ ಅನಾದಿಕಾಲದ ಶಿಲ್ಪಿ ಇಲ್‌ಮಾರಿನೆನ್. ಮೂರನೆಯ ವ್ಯಕ್ತಿ ನಿಶ್ಚಿಂತ ಸಾಹಸಿಯೂ ಹೋರಾಟಗಾರನೂ ಆದ ಲೆಮ್ಮಿಕೈನೆನ್. ಕುಲ್ಲೆರ್ವೊ ಇಲ್ಲಿ ಕಂಡುಬರುವ ವಿಚಿತ್ರ ಸ್ವಭಾವದ, ವಿಧಿಯ ಕೈಗೊಂಬೆಯಾಗಿದ್ದ ದುಃಖಕಾರ್ಪಣ್ಯಗಳಿಗೀಡಾದ "ಕಾಲೇವಾಲಾದ ಹ್ಯಾಮ್ಲೆಟ್". ಸ್ತ್ರೀಪಾತ್ರಗಳಲ್ಲಿ ಪೊಹ್ಜೋಲದ ರಾಣಿ ಲೌಹಿ, ಮತ್ತು ಅವಳ ಸುಂದರ ಪುತ್ರಿ ಗಮನಾರ್ಹರು.

ಲೇಖಕರು ಕಾಲೇವಾಲಾ ಕೃತಿಯ ವಸ್ತುಪರಿಚಯ, ಅದರ ಸಂಗ್ರಹ ಇತಿಹಾಸ, ಸಮಾಜರೂಪಣೆಯಲ್ಲಿ ಅದರ ಪಾತ್ರ, ಪಾತ್ರಗಳ ವಿಮರ್ಶೆ— ಇವುಗಳನ್ನು ವಿಶ್ಲೇಷಿಸಿದ್ದಾರೆ.

ಎರಡನೆಯ ಕೃತಿ ಮಾನವಶಾಸ್ತ್ರದ ಅಧ್ಯಯನದಲ್ಲಿ ಒಂದು ಪ್ರಮುಖ ಹಂತವೆಂದು ಪರಿಗಣಿತವಾಗಿರುವ ಗೋಲ್ಡನ್ ಬೋ. ಮಾನವಶಾಸ್ತ್ರದ ಅಧ್ಯಯನದಲ್ಲಿ ಹೆಸರಾಂತ, ಸ್ಕಾಟ್ಲೆಂಡಿನ ಜೆ. ಜಿ. ಫ್ರೇಸರ್ ಕೇಂಬ್ರಿಜ್ ಮತ್ತು ಲಿವರ್‌ಪೂಲ್ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದವರು. ಅವರು ವಿಶ್ವದ ವಿವಿಧ ಮೂಲೆಗಳಲ್ಲಿ ಪ್ರಾಚೀನ ನಾಗರಿಕತೆಗಳಲ್ಲಿ ಮತ್ತು ಆದಿವಾಸಿಗಳಲ್ಲಿ ಬಳಕೆಯಲ್ಲಿದ್ದ ಮಂತ್ರ–ಮಾಟ, ಆಚಾರ–ವ್ಯವಹಾರ ಮತ್ತು ನಂಬಿಕೆಗಳನ್ನು ಕಲೆಹಾಕಿ ವಿಶ್ಲೇಷಿಸಿರುವ ಬೃಹದ್ಗ್ರಂಥವಿದು. ಇಟಲಿಯ ಒಂದು ಭಾಗದಲ್ಲಿ ನೆಲಸಿದ್ದ ಜನರಲ್ಲಿ ಅವರ ಕುಲದೇವತೆ ಡಯಾನಾಳ ಪೂಜಾರಿಯ ಪ್ರಾಣ ಮರವೊಂದರ ಮೇಲಿನ ಬದನಿಕೆ ಅಥವಾ ಪರೋಪಜೀವಿ ಸಸ್ಯವೊಂದರ ರೆಂಬೆಯಲ್ಲಿ ಹುದುಗಿರುತ್ತಿತ್ತೆಂದೂ, ಆ ಪೂಜಾರಿಸ್ಥಾನದ ಅಭ್ಯರ್ಥಿ ಆ ಬದನಿಕೆಯ ರೆಂಬೆಯನ್ನು ಕತ್ತರಿಸಿ, ಅನಂತರ ಮೊದಲಿನ ಪೂಜಾರಿಯನ್ನು ಕೊಲ್ಲಬೇಕಾಗಿತ್ತೆಂದೂ ನಂಬಿಕೆಯಿತ್ತು. ಐತಿಹ್ಯಗಳ ಪ್ರಕಾರ ಆ ಬದನಿಕೆ ವರ್ಜಿಲನ ಏನಿಡ್ ಮಹಾಕಾವ್ಯದ ನಾಯಕ ಏನಿಸ್ ಪಾತಾಳಗಮನ ಕಾಲದಲ್ಲಿ ಹಿಡಿದಿದ್ದ 'ಗೋಲ್ಡನ್ ಬೋ' ಜಾತಿಯದಾಗಿದ್ದುದರಿಂದ, ಫ್ರೇಸರ್ ತನ್ನ ಕೃತಿಯನ್ನು ಗೋಲ್ಡನ್ ಬೋ ಎಂದು ಹೆಸರಿಸಿದ.

ಆದಿವಾಸಿಗಳ ಪ್ರಾಚೀನ ವಿಶ್ವದ ನಾಗರಿಕತೆಗಳ ಸಾಧಾರಣ ಆಚಾರ–ವಿಚಾರಗಳನ್ನು ವಿಶ್ಲೇಷಿಸಿ, ಅವುಗಳಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಸಮಾಧಾನಗಳನ್ನು ಹುಡುಕುವ ಫ್ರೇಸರರ ಈ ಪ್ರಯತ್ನ ಆಗಿನ ಪರಿಸ್ಥಿತಿಯಲ್ಲಿ ಮಾನವಶಾಸ್ತ್ರ ರಂಗದಲ್ಲಿ ಒಂದು ಅಮೋಘ ಕೃತಿಯೆಂಬುದರಲ್ಲಿ ಸಂದೇಹವಿಲ್ಲ. ಇತ್ತೀಚೆಗೆ ಈ ರಂಗದಲ್ಲಿ ಹೆಚ್ಚಿನ ಸಂಶೋಧನೆಗಳು ನಡೆದಿದ್ದು ವಿದ್ವಾಂಸರು ಫ್ರೇಸರರ ವಿಧಾನ ಮತ್ತು ತೀರ್ಪುಗಳನ್ನು ಒಪ್ಪುತ್ತಿಲ್ಲ. ಆದರೂ ೧೮೯೦ರಲ್ಲಿ ಮೊದಲ ಬಾರಿಗೆ ಪ್ರಕಟವಾಗಿ ಹಲವು ಬಾರಿ ಪುನರಾವೃತ್ತಿಯನ್ನೂ ವಿಸ್ತೃತ ರೂಪವನ್ನೂ ಕಂಡ ಗೋಲ್ಡನ್ ಬೋ ಮಾನವಶಾಸ್ತ್ರದ ವಿದ್ಯಾರ್ಥಿಗಳು ಓದಲೇಬೇಕಾದ ಒಂದು ಗ್ರಂಥ. ಇದರ ಸಂಗ್ರಹ, ಆಯ್ದ ಭಾಗಗಳ ಪ್ರಕಟಣೆ, ಪರಿಷ್ಕರಣ ಮುಂತಾದ ಕಾರ್ಯಗಳು ನಡೆಯುತ್ತಿದ್ದು ವಿದ್ವಲ್ಲೋಕ ಈ ಗ್ರಂಥಕ್ಕೆ ನೀಡಿರುವ ಮಾನ್ಯತೆಯನ್ನು ಸಾರುತ್ತವೆ. ಶ್ರೀ ತೀ. ನಂ. ಶಂಕರನಾರಾಯಣರು ಇಂಥ ಮಹತ್ಕೃತಿಯ ವಿವಿಧ ಮುಖಗಳ ಸ್ಥೂಲಪರಿಚಯವನ್ನೂ ಮಹತ್ತ್ವವನ್ನೂ ತಿಳಿಸಿದ್ದಾರೆ.

ಮೊದಲನೆಯದು ಕಂಠಸ್ಥವಾಗಿ ಉಳಿದುಬಂದಿದ್ದ ಫಿನ್ನಿಷ್ ಜನತೆಯ ಪುರಾಣಕಥೆ. ಆಧುನಿಕ ಫಿನ್ನಿಷ್ ಸಮಾಜದ ರೂಪಣೆಯಲ್ಲಿ ಮಹತ್ತ್ವದ ಪಾತ್ರ

ವಹಿಸಿದ ಜಾನಪದ ಕೃತಿ. ಆದರೆ ಎರಡನೆಯದು ವಿಶ್ವದ ಅನೇಕ ಪ್ರಾಚೀನ ಜನಾಂಗಗಳ ಲಿಖಿತ ಮತ್ತು ಆದಿವಾಸಿಗಳಲ್ಲಿ ರೂಢಿಯಲ್ಲಿದ್ದ ಸಂಪ್ರದಾಯಗಳ ಸಂಗ್ರಹಣೆ ಮತ್ತು ವಿಶ್ಲೇಷಣಾತ್ಮಕ ಅಧ್ಯಯನವಾಗಿದ್ದು ಮಾನವಕುಲಶಾಸ್ತ್ರ, ಅದರಲ್ಲೂ ಮಾನವಕುಲ ವಿವರಣಶಾಸ್ತ್ರಕ್ಕೆ ಹೆಚ್ಚು ಸಂಬಂಧಿಸಿದ್ದು. ಆದರೆ ಮಾನವ ಸಂಸ್ಕೃತಿಯನ್ನು ಅಭ್ಯಸಿಸುವ ಎಲ್ಲ ಶಾಸ್ತ್ರಗಳೂ ಪರಸ್ಪರ ಸಂಪರ್ಕವನ್ನು ಹೊಂದಿದ್ದು, ಒಂದನ್ನೊಂದು ಬಿಟ್ಟಿರಲು ಸಾಧ್ಯವಿಲ್ಲವೆಂದು ಪ್ರಸ್ತುತ ಕೃತಿಯ ಮುನ್ನುಡಿಯಲ್ಲಿ ಶ್ರೀ ಜೀ.ಶಂ.ಪ. ಹೇಳಿರುವ ಮಾತನ್ನು ಎತ್ತಿ ತೋರುತ್ತದೆ ಈ ಅಧ್ಯಯನ. ಕರ್ಣಾಟಕ ಜಾನಪದ ಜಗತ್ತಿನ ಉತ್ಸಾಹಿಗಳಲ್ಲಿ ಒಬ್ಬರಾದ ಜೀ.ಶಂ.ಪ.ರ ಮುನ್ನುಡಿ ಜನಪದಶಾಸ್ತ್ರದ ಸಂಕ್ಷಿಪ್ತ ಆದರೆ ಸಂಪೂರ್ಣ ಪರಿಚಯವನ್ನು ಒದಗಿಸುವುದರ ಮೂಲಕ ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಕರ್ಣಾಟಕ ಜನಪದಶಾಸ್ತ್ರದ ಅಧ್ಯಯನ ಮತ್ತು ಆರಂಭ ಹಂತದಲ್ಲಿರುವ ಇಂದಿನ ಪರಿಸ್ಥಿತಿಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಅನುಸರಿಸಿದ ಕ್ರಮಗಳ ಪರಿಚಯಮಾಡಿಕೊಟ್ಟಿದೆ—ಈ ಕೃತಿ.

ಅಚ್ಚಿನ ದೋಷಗಳು ಬಹಳ ಸ್ವಲ್ಪವಾಗಿದ್ದು, ಪುಸ್ತಕ ಸುಂದರವಾಗಿ ಹೊರಬಂದಿದೆ. ವ್ಯಕ್ತಿನಾಮಗಳ ಉಚ್ಚಾರಣೆಯಲ್ಲಿ ಅಲ್ಲಲ್ಲಿ ವೈವಿಧ್ಯ ಕಂಡು ಬರುವುದಾಗಲೀ (ಉದಾಹರಣೆ: ಎಲಿಯಸ್, ಎಲಿಯಾಸ್, ಇಲಿಯಸ್—ಪುಟ, XIII), ವ್ಯಕ್ತಿನಾಮಗಳ ಉಚ್ಚಾರಣೆ ತಪ್ಪಾಗಿರುವುದಾಗಲಿ (ಎಲಿಯಾಸ್ ಲೊನ್ರಾಟ್ ಎಂದಿರಬೇಕು, ಎಲಿಯಾಸ್ ಲೋನಾರ್ಟ್ ಅಲ್ಲ; ವಾಯಿನಾ ಮಾಯಿನೆನ್, ಲೆಮ್ಮಿನ್ ಕಾಯಿನೆನ್ ಎಂದಿರಬೇಕು; ವೆನ್ನಾಮೆನೆನ್, ರೆಮ್ಮಿನ್ ಕೈನೆನ್ ಎಂದಲ್ಲ) ಅಷ್ಟು ಅಪೇಕ್ಷಣೀಯವಲ್ಲ.

ಒಟ್ಟಿನಲ್ಲಿ ಇದೊಂದು ಕನ್ನಡದ ಸ್ವಾಗತಾರ್ಹ ಕೃತಿ. ಪಾಶ್ಚಾತ್ಯ ಜಗತ್ತಿನ ಎರಡು ಉತ್ತಮ ಕೃತಿಗಳ ವಿಮರ್ಶೆಮಾಡುವ ಮೂಲಕ ಜನಪದಶಾಸ್ತ್ರದ ಪರಿಚಯ ಮಾಡಿಕೊಟ್ಟಿರುವ ಲೇಖಕರು ಕನ್ನಡ ಜನದ ಕೃತಜ್ಞತೆಗೆ ಪಾತ್ರರು.

—ಬಿ. ಕೆ. ಗುರುರಾಜರಾವ್

ಭಾರತ ಸಂವಿಧಾನದ ಇತಿಹಾಸ: ಲೇ: ಸಿ. ಕೆ. ಎನ್. ರಾಜ; ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧; ಪು: ೨೦೬; ಬೆಲೆ: ರೂ. ೩

"ವಕೀಲರಾಗಿ ಆರು ವರ್ಷ, ನ್ಯಾಯಶಾಸ್ತ್ರದ ಶಿಕ್ಷಕರಾಗಿ ಹನ್ನೆರಡು ವರ್ಷ ಅನುಭವ ಪಡೆದ ಅನಂತರ ಗ್ರಂಥ ರಚನೆಗೆ ಧೈರ್ಯವಾಗಿ ಕೈ ಹಾಕಿರುವ" ಸಿ. ಕೆ. ಎನ್. ರಾಜ ಅವರು ಬರೆದಿರುವ ಈ ಪುಸ್ತಕದಲ್ಲಿ ಭಾರತದಲ್ಲಿ ಸಂವಿಧಾನ ವಿಕಾಸಗೊಂಡ ಬಗೆಯನ್ನು ವಿವರಿಸಿದ್ದಾರೆ. ಸಂವಿಧಾನದ ಬೆಳವಣಿಗೆಯ ಮೇಲೆ ಪ್ರಭಾವಬೀರಿದ ಐತಿಹಾಸಿಕ ಘಟನೆಗಳನ್ನೂ ವಿವೇಚಿಸಿದ್ದಾರೆ. ಇಂಗ್ಲಿಷರ

ಆಗಮನ, ಅಧಿಕಾರದ ವಿಕೇಂದ್ರೀಕರಣದ ದಿಕ್ಕಿನಲ್ಲಿ ಬ್ರಿಟಿಷರು ಮಾಡಿದ ವಿವಿಧ ಸುಧಾರಣೆಗಳು, ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಭಾರತದ ಸ್ಥಾನ, ಎರಡನೆಯ ಮಹಾಯುದ್ಧದ ಪರಿಣಾಮ, ದೇಶ ವಿಭಜನೆ, ಸ್ವಾತಂತ್ರ್ಯ ದಾನ ಮುಂತಾದವನ್ನೇ ಅಲ್ಲದೆ, ದೇಶೀಯ ಸಂಸ್ಥಾನಗಳ ವಿಲಯನ, ಸ್ವತಂತ್ರ ಭಾರತದ ಸಂವಿಧಾನ ರಚನೆ ಇವುಗಳನ್ನೂ ಇಲ್ಲಿ ವಿವರಿಸಲಾಗಿದೆ. ಸ್ವತಂತ್ರ ಭಾರತ ಸಂವಿಧಾನದ ತೌಲನಿಕ ವಿವೇಚನೆಯ ಜೊತೆಗೆ, ಅದು ಜಾರಿಗೆ ಬಂದ ಅನಂತರದ ಇಪ್ಪತ್ತು ವರ್ಷಗಳಲ್ಲಿ ಪಡೆದಿರುವ ಅನುಭವಗಳ ಮತ್ತು ಉದ್ಭವಿಸಿರುವ ಸಮಸ್ಯೆಗಳ ಸ್ವರೂಪವನ್ನೂ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ಪುಸ್ತಕದಲ್ಲಿ ಅನೇಕ ಅಚ್ಚಿನ ತಪ್ಪುಗಳಿವೆ. "ಮೇಲ್ಮನವೆ" ಎನ್ನುವ ಪದ ಒಂದು ಉದಾಹರಣೆ. ಪುಸ್ತಕದಲ್ಲಿರುವ ದೊಡ್ಡ ದೊಡ್ಡ ವಾಕ್ಯಗಳು ಹಲವು ವೇಳೆ ಅರ್ಥವಾಗುವುದೇ ಇಲ್ಲ. ಉದಾ : "ತಿದ್ದುಪಡಿ ಮಸೂದೆಯು ೫೪,೫೫, ೭೩ ಅಥವಾ ೨೪೧ನೇ ವಿಧಿಗಳಿಗೆ ಅಥವಾ ೫ನೆಯ ಭಾಗದ ೪ನೆಯ ಅಧ್ಯಾಯಕ್ಕೆ, ೬ನೆಯ ಭಾಗದ ೫ನೆಯ ಅಧ್ಯಾಯಕ್ಕೆ, ಹನ್ನೊಂದನೆಯ ಭಾಗದ ಒಂದನೆಯ ಅಧ್ಯಾಯಕ್ಕೆ ಅಥವಾ ಏಳನೆಯ ಷೆಡ್ಯೂಲಿನಲ್ಲಿರುವ ಯಾವುದಾದರೂ ಪಟ್ಟಿಗೆ ಅಥವಾ ೩೬೮ನೆಯ ವಿಧಿಯ ಅಂಶಗಳಿಗೇ ಬದಲಾವಣೆಯನ್ನು ತರಲು ಉದ್ದೇಶಿಸಿದ್ದರೆ— ಅಂಥ ಸಂದರ್ಭಗಳಲ್ಲಿ ಮೇಲೆ ತಿಳಿಸಿದ ಬಹುಮತವಲ್ಲದೇ, ಗಣರಾಜ್ಯದ ರಾಜ್ಯಗಳಲ್ಲಿ ಅರ್ಧಪಾಲಿಗೂ ಹೆಚ್ಚು ರಾಜ್ಯಗಳ ಶಾಸನಸಭೆಗಳು ತಮ್ಮ ಠರಾವುಗಳ ಮೂಲಕ ಒಪ್ಪಿಗೆ ನೀಡಿರಬೇಕು." (ಪುಟ ೧೪೫-೧೪೬)

ಪುಸ್ತಕದಲ್ಲಿ ಸಂವಿಧಾನದ ಬೆಳವಣಿಗೆಯಲ್ಲಿ ಕಾಂಗ್ರೆಸ್ಸಿನ ವಿವೇಚನಾರಹಿತ ಕ್ರಮಗಳನ್ನೂ (ಪುಟ ೭೬) ಅದನ್ನು ತಮ್ಮ ಸ್ವಾರ್ಥಕ್ಕೆ ಮುಸ್ಲಿಂ ಲೀಗ್ ಹೇಗೆ ಬಳಸಿಕೊಂಡಿತು ಎಂಬುದನ್ನೂ ವಿವರಿಸಿದ್ದಾರೆ. ಬ್ರಿಟಿಷರ "ವಿಭಜಿಸು ಮತ್ತು ಆಳು" ನೀತಿಯ ಫಲದಿಂದ ಮುಸ್ಲಿಂ ಲೀಗ್ ಆಗಿನ ಆಳರಸರ ಬೆಂಬಲ ಗಳಿಸಿಕೊಂಡು ಭಾರತದ ಇತಿಹಾಸದಲ್ಲಿ ಯಾವ ರೀತಿ ವರ್ತಿಸಿತು, "ದ್ವಿರಾಷ್ಟ್ರತತ್ತ್ವ" ಬೆಳೆದು ಭಾರತದ ವಿಭಜನೆಗೆ ಹೇಗೆ ಕಾರಣವಾಯಿತು ಎಂಬುದನ್ನು ಹೇಳಿದ್ದಾರೆ.

ಒಂದು ದೇಶದ ಬೆಳವಣಿಗೆಯಲ್ಲಿ ಘರ್ಷಣೆಗಳು ಸಹಜ. ಆದರೆ ಇತಿಹಾಸಕಾರರು ಮುಂದಿನ ಜನಾಂಗದಲ್ಲಿ ಕೆಟ್ಟ ಪರಿಣಾಮ ಬೀರದಿರಲೆಂಬ ಭಾವನೆಯಿಂದಲೋ ಏನೋ, ಐತಿಹಾಸಿಕ ನಿಜಸಂಗತಿಗಳನ್ನು ಮರೆಮಾಚಿಯೋ, ಇಲ್ಲವೇ ಅವನ್ನು ಕುಗ್ಗಿಸಿಯೋ ಅಥವಾ ಬಿಟ್ಟೋ ಬರೆಯುತ್ತಾರೆ. ಹೀಗೆ ಮಾಡುವುದು ತಪ್ಪು. ನಿಜವನ್ನು ಇದ್ದಹಾಗೆ ಹೇಳಿದರೆ ಮುಂದಿನ ಜನಾಂಗ ಹೆಜ್ಜೆ ಇಡುವಾಗ ಎಡವದಂತೆ ಎಚ್ಚರಿಕೆ ತೆಗೆದುಕೊಳ್ಳುತ್ತದೆ. ಪ್ರಸ್ತುತ ಪುಸ್ತಕದಲ್ಲಿ ನಿಜಸಂಗತಿ ಹೇಳಲು ಪ್ರಯತ್ನಿಸಿರುವುದು ಒಂದು ಸಮಾಧಾನಕರ ಅಂಶ.

ಭಾರತ ಸಂವಿಧಾನದ ಇತಿಹಾಸ ಕುರಿತ ಈ ಪುಸ್ತಕ ಬಹಳ ಸಂಗ್ರಹ

ವಾಗಿದೆ, ಕೆಲವು ಕಡೆ ಟಿಪ್ಪಣಿಯಂತಿದೆ. ಭಾರತದಲ್ಲಿ ಹಿಂದೆ ಇದ್ದ ರಾಜ್ಯ ಪದ್ಧತಿಗಳು. ಆಂಗ್ಲರ ಆಗಮನದಿಂದ ಆದಂಥ ಮಾರ್ಪಾಡು, ಕಾಲಕಾಲಕ್ಕೆ ಬಂದ ಸಂವಿಧಾನಗಳು ಮತ್ತು ಅವುಗಳ ಸುಧಾರಣೆ ಇವಕ್ಕೆ ಕಾರಣವಾದ ಮುಖ್ಯ ಘಟನೆ ಮತ್ತು ಕಾರಣಪುರುಷರು, ಭಾರತೀಯರಿಗೆ ಇದರಿಂದ ಆದ ಲಾಭ ಮತ್ತು ಇಂದಿನ ಸಂವಿಧಾನಕ್ಕೆ ಯಾವುವು ಪೂರಕವಾದವು ಇವನ್ನು ವಿವರವಾಗಿ ಒಳಗೊಂಡ ಒಂದು ದೊಡ್ಡ ಗ್ರಂಥವನ್ನು ಲೇಖಕರು ರಚಿಸಬೇಕು.

—ಬಿ. ಶಾಮಸುಂದರ

ವಸ್ತುಕೋಶ

ಜೀವಂತ ಶಿಲಾಯುಗ ಸಂಸ್ಕೃತಿ

ಶಿಲಾಯುಗ ಸಂಸ್ಕೃತಿ ಎಂದ ಕೂಡಲೆ ನಮ್ಮ ಮನಸ್ಸು ಹತ್ತಾರು ಸಾವಿರ ವರ್ಷಗಳ ಹಿಂದಕ್ಕೆ ಹಾರುತ್ತದೆ. ಸಾಮಾನ್ಯವಾಗಿ ಎಲ್ಲ ದೇಶಗಳ ಚರಿತ್ರೆಯಲ್ಲಿಯೂ ಅವುಗಳ ಪ್ರಾರಂಭದೆಶೆಯಲ್ಲಿ ಒಂದಲ್ಲ ಒಂದು ಕಾಲದಲ್ಲಿ ಅವು ಶಿಲಾಯುಗ ಸಂಸ್ಕೃತಿಗಳನ್ನು ಹೊಂದಿದ್ದುವೆಂಬುದು ನಮ್ಮ ಸಾಮಾನ್ಯ ಅಭಿಪ್ರಾಯ. ಇತ್ತೀಚೆಗೆ ಪಾನಾಮಿನ್ ಎಂಬ ಅಮೆರಿಕನ್ ಸಂಸ್ಥೆಯ ಆಶ್ರಯದಲ್ಲಿ, ಹಾರ್ವರ್ಡ್ ವಿಶ್ವವಿದ್ಯಾನಿಲಯದ ಎಲಿಜಲ್ಡೆ ಎಂಬ ಸಂಶೋಧಕ ಮತ್ತು ಮಾನವಶಾಸ್ತ್ರ ವಸ್ತು ಸಂಗ್ರಹಾಲಯದ ಕ್ಯುರೇಟರ್ ರಾಬರ್ಟ್ ಫಾಕ್ಸ್ ಎಂಬವರ ಸಂಶೋಧನೆಗಳಿಂದ, ಫಿಲಿಪೀನ್ಸ್‌ನ ಟಸಾಡೆ ಎಂಬ ದಟ್ಟವಾದ ಕಾಡಿನಲ್ಲಿ ಶಿಲಾಯುಗದ ಸಂಸ್ಕೃತಿಗೆ ಸೇರಿದ ಗುಂಪೊಂದು ವಾಸಿಸುತ್ತಿರುವುದು ಪತ್ತೆಯಾಗಿದೆ. ಈ ಅಮೆರಿಕನ್ ಸಂಸ್ಥೆಯ ಜನಗಳು ಅವರನ್ನು ಸಂಧಿಸುವುದಕ್ಕಿಂತ ಮುಂಚೆ ಅವರಿಗೆ ಇತರ ಮಾನವ ಪ್ರಾಣಿಗಳ ಪರಿಚಯವೇ ಇರಲಿಲ್ಲ. ಸುಮಾರು ಒಂದು ಸಾವಿರದ ಇನ್ನೂರು ಅಡಿ ಎತ್ತರದ ಬೆಟ್ಟ ಪ್ರದೇಶದ ಅರಣ್ಯ ದಕ್ಷಿಣ ಫಿಲಿಪೀನ್ಸ್‌ನ ಮಿಂದನವೊ ಪ್ರಾಂತ್ಯದಲ್ಲಿದೆ.

ಈ ಟಸಾಡೆಗಳ ಮುಖ್ಯ ಆಯುಧ ಹೆಬ್ಬೆಟ್ಟಿನ ಗಾತ್ರದ ಉಳಿ. ಇದರಿಂದ ಅವರು ಬೊಂಬುಗಳನ್ನು ಸೀಳಿ ಅದನ್ನು ಹರಿತಮಾಡಿ ಬಾಣದ ರೀತಿಯಲ್ಲಿ ಬಳಸುತ್ತಿದ್ದರು. ಮರದ ತುಂಡುಗಳು ಮತ್ತು ಬೊಂಬುಗಳನ್ನು ಒಂದಕ್ಕೊಂದನ್ನು ಉಜ್ಜಿ ಬೆಂಕಿಯನ್ನುಂಟುಮಾಡುತ್ತಿದ್ದರು. ಬೊಂಬಿನ ಬೋನಿನಲ್ಲಿ ಮಂಗಗಳನ್ನು ಹಿಡಿದು ನೀರು ತುಂಬಿರುವ ಬೊಂಬಿಗೆ ಅದನ್ನು ತಗಲಿಸಿ ಬೆಂಕಿಯಲ್ಲಿ ಸುಟ್ಟು, ಅದನ್ನು ತಿನ್ನುತ್ತಿದ್ದರು. ನೀರನ್ನು ತರಲು ಬೊಂಬನ್ನು ಉಪಯೋಗಿಸುತ್ತಿದ್ದರು. ಕಪಿಗಳ ಮಾಂಸವನ್ನೇ ವಿಶೇಷವಾಗಿ ತಿನ್ನುವುದರಿಂದ ಕಪಿಗಳ ಮೂಳೆಗಳು ಮತ್ತು ತಲೆಬುರುಡೆಗಳು ಟಸಾಡೆ ಮಕ್ಕಳ ಅತ್ಯಂತ ಪ್ರಿಯವಾದ ಆಟದ ಸಾಮಾನುಗಳಾಗಿದ್ದವು. ಅವರ ನಿವೇಶನದ ಸುತ್ತಲೂ ಇವು ಹೇರಳವಾಗಿ ಬಿದ್ದಿದ್ದುವು. ಮಡಕೆ–ಕುಡಿಕೆಗಳನ್ನು ಅವರು ನೋಡಿಯೇ ಇಲ್ಲ. ಚಕ್ರವೆಂಬುದು ಅವರಿಗೆ ಗೊತ್ತಿಲ್ಲ. ಸುಮಾರು ಐದು ಅಡಿ ಎತ್ತರ, ಹೊಳಪಿನ ನೀಲಿ ಕಣ್ಣುಗಳು ಮತ್ತು ದಷ್ಟಪುಷ್ಟ ಶರೀರದ ಇವರು ಎಲೆಗಳನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದರು. ಅದೇ ಅವರ ಬಟ್ಟೆ. ಪಾನಾಮಿನ್ ಸಂಸ್ಥೆಯವರು ಕೊಟ್ಟ ಸಕ್ಕರೆ, ಉಪ್ಪು, ಅಕ್ಕಿ, ಜೋಳ ಮುಂತಾದ ಖಾದ್ಯಪದಾರ್ಥಗಳನ್ನು ಮೊಟ್ಟಮೊದಲ ಬಾರಿಗೆ ನೋಡಿದ

ಈ ಟಸಾಡೆಗಳು ಅವು ತಿನ್ನಬಾರದ ವಸ್ತುಗಳೆಂದು ಮೊದಲು ಭಾವಿಸಿದರಂತೆ. 'ದಿವಾತ' ಎಂಬ ದೇವರು ಒಂದಲ್ಲ ಒಂದು ದಿನ ದೊಡ್ಡ ಪಕ್ಷಿಯ ಮೇಲೆ ಕುಳಿತು ತಮ್ಮಲ್ಲಿಗೆ ಬರುವನೆಂಬುದು ಅವರ ಧಾರ್ಮಿಕ ಭಾವನೆ. ಅಮೆರಿಕನ್ ಸಂಶೋಧಕರು ಹೆಲಿಕಾಪ್ಟರಿನಲ್ಲಿ ಈ ಅರಣ್ಯದಲ್ಲಿಳಿದಾಗ, ದಿವಾತನೇ ದೊಡ್ಡ ಪಕ್ಷಿಯ ಮೇಲೆ (ಹೆಲಿಕಾಪ್ಟರ್) ಬಂದನೆಂದು ಅವರ ಭಾವನೆ. ಆದರೆ ಅವರ ಭಾವನೆ ತಪ್ಪಾಗಿತ್ತು. ಇಷ್ಟೊಂದು ವರ್ಷಗಳಿಂದ ಆಧುನಿಕ ಜಗತ್ತಿಗೆ ತಮ್ಮ ಇರುವಿಕೆಯನ್ನೂ ತಿಳಿಸದೇ ಇದ್ದ ಟಸಾಡೆಗಳ ಗುಟ್ಟನ್ನು ರಟ್ಟುಮಾಡಲು ಬಂದ ಅಮೆರಿಕನ್ ಸಂಶೋಧಕರೇ ಇವರಾಗಿದ್ದರು. ಒಟ್ಟಿನಲ್ಲಿ ಇತ್ತೀಚಿನ ಮಾನವಶಾಸ್ತ್ರ ಇತಿಹಾಸದಲ್ಲಿ ಇದೊಂದು ಕುತೂಹಲಕರ ಶೋಧನೆ. ಈ ಅಮೆರಿಕನ್ ಸಂಶೋಧಕರು ಇನ್ನೂ ಹೆಚ್ಚಿನ ಮಾಹಿತಿಗಳನ್ನು ಕಲೆಹಾಕಿ, ಪರಮಾಣುಯುಗ ಕಾಲದ ಶಿಲಾಯುಗೀಯ ಜನಗಳ ಬಗ್ಗೆ ಹೆಚ್ಚು ಬೆಳಕು ಬೀರುವುದರಲ್ಲಿ ಸಂದೇಹವಿಲ್ಲ.

—ಎ. ವಿ. ಎಸ್.

ಕಾಕತೀಯರ ಮೂಲಸ್ಥಾನ ಕರ್ಣಾಟಕ

ಪ್ರಾಚೀನ ಭಾರತದ ಇತಿಹಾಸದಲ್ಲಿ ಆಳಿದ ಅನೇಕ ರಾಜಮನೆತನಗಳ ಉಗಮ ಮತ್ತು ಮೂಲಸ್ಥಾನ ಬಹು ವಿವಾದಾಸ್ಪದ ವಿಷಯವಾಗಿಯೇ ಉಳಿದಿದೆ. ಪ್ರಾಚೀನ ಶಾಸನಗಳಲ್ಲಿ ಇದಕ್ಕೆ ಸಂಬಂಧಿಸಿದ ಮಾಹಿತಿಗಳು ದೊರಕದೆ ಇರುವುದು ಇದಕ್ಕೆ ಒಂದು ಕಾರಣ. ಆಧುನಿಕ ಚರಿತ್ರಕಾರರ ಪಕ್ಷಪಾತ ದೃಷ್ಟಿ ಇದಕ್ಕೆ ಇನ್ನೊಂದು ಕಾರಣ. ಆಳಿದ ರಾಜಮನೆತನಗಳ ಉಗಮ ತಂತಮ್ಮ ಪ್ರಾಂತ್ಯಗಳಲ್ಲೇ ಆಯಿತೆಂದು ವಾದಿಸಿ ಚರಿತ್ರಕಾರರು ತಂತಮ್ಮ ಪ್ರಾಂತ್ಯಗಳ ಹಿರಿಮೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಉದಾಹರಣೆಗೆ, ಚಾಲುಕ್ಯರು ಗುಜರಾತಿನವರು; ರಾಷ್ಟ್ರಕೂಟರು ಮತ್ತು ಸೇವುಣರು ಮರಾಠರು; ಹೊಯ್ಸಳರು ತಮಿಳುನಾಡಿನ ವೆಲ್ಲಾಳರು; ವಿಜಯನಗರದರಸರು ಆಂಧ್ರರು ಎಂದು ಅನೇಕ ಚರಿತ್ರಕಾರರು ವಾದಿಸಲು ಪ್ರಯತ್ನಿಸಿ ವಿಫಲರಾಗಿರುವುದು ಎಲ್ಲ ಇತಿಹಾಸಜ್ಞರಿಗೂ ತಿಳಿದ ಸಂಗತಿಯೇ ಆಗಿದೆ. ಆಂಧ್ರದೇಶದಲ್ಲಿ ಆಳಿದ ಕಾಕತೀಯರ ಮೂಲನಿವಾಸದ ಬಗೆಗೆ ನೆಲಮಂಗಲದ ಲಕ್ಷ್ಮೀನಾರಾಯಣರಾಯರು ಹೊಸ ಬೆಳಕನ್ನು ಬೀರಿ ಆಂಧ್ರ ಚರಿತ್ರಕಾರರಲ್ಲಿ ಆಶ್ಚರ್ಯವನ್ನುಂಟುಮಾಡಿದ್ದಾರೆ. ಶ್ರೀ ಲಕ್ಷ್ಮೀನಾರಾಯಣರಾಯರು ಭಾರತ ಸರ್ಕಾರದ ವರಿಷ್ಠ ಶಾಸನತಜ್ಞರಾಗಿದ್ದು ನಿವೃತ್ತರಾಗಿದ್ದಾರೆ. ಚಾಲುಕ್ಯರು ಗುಜರಾತಿನವರಲ್ಲ, ಕನ್ನಡದವರು ಎಂದು ತೋರಿಸಿಕೊಟ್ಟ ಕೀರ್ತಿ ಇವರದು. ಈಗ ಇವರು ಆಂಧ್ರದೇಶದ ಕಾಕತೀಯರ ಮೂಲನಿವಾಸ ಕರ್ಣಾಟಕದ ಬೆಳಗಾಂ ಜಿಲ್ಲೆಯ ಕಾಕತಿ ಎಂಬ ಗ್ರಾಮ—ಎಂಬ ಹೊಸ ಸಿದ್ಧಾಂತವನ್ನು ಮಂಡಿಸಿದ್ದಾರೆ.

ಕಾಕತೀಯ ರಾಜ ಗಣಪತಿಯ ಗರಪಪಾಡು ತಾಮ್ರಶಾಸನದಲ್ಲಿ, ಗಣಪತಿಯ ಪೂರ್ವಜರು ಕಾಕತಿ ಎಂಬಲ್ಲಿ ತಮ್ಮ ರಾಜಧಾನಿಯನ್ನು ಸ್ಥಾಪಿಸಿದ್ದರು ಎಂದು ಹೇಳಿದೆ. ಇದುವರೆಗೂ ಈ ಕಾಕತಿಪುರ ಯಾವುದು ಎಂದು ತಿಳಿದಿರಲಿಲ್ಲ. ಲಕ್ಷ್ಮೀನಾರಾಯಣರಾಯರ ಸಂಶೋಧನೆಯ ಫಲವಾಗಿ, ಇದು ಬೆಳಗಾವಿಗೆ ಆರು ಮೈಲಿ ದೂರದಲ್ಲಿದೆಯೆಂದು ತಿಳಿದುಬಂದಿದೆ. ಅನೇಕ ಪ್ರಾಚೀನ ಶಾಸನಗಳಲ್ಲಿ ಈ ಗ್ರಾಮದ ಹೆಸರು ಉಲ್ಲೇಖಿತವಾಗಿದೆ. ಜೊತೆಗೆ ಈ ಗ್ರಾಮದಲ್ಲಿ ಪ್ರಾಚೀನ ಶಾಸನಗಳು ಮತ್ತು ಅವಶೇಷಗಳು ಇವೆ. ಇದೊಂದು ಪ್ರಾಚೀನ ನಗರವಾಗಿದ್ದಿತೆಂಬುದು ಇವುಗಳಿಂದ ಸ್ಪಷ್ಟಪಡುತ್ತದೆ. ಆದುದರಿಂದ ಈ ಕಾಕತಿಪುರವೇ ಕಾಕತೀಯರ ಮೂಲನಿವಾಸವೆಂದು ಲಕ್ಷ್ಮೀನಾರಾಯಣರಾಯರು ವಾದಿಸುತ್ತಾರೆ.

ಕಾಕತೀಯರ ರಾಜಧಾನಿ ಓರಂಗಲ್ಲಿಗೂ, ಅವರ ಹುಟ್ಟೂರಾದ ಕಾಕತಿಪುರಕ್ಕೂ ಇಷ್ಟೊಂದು ಅಂತರವಿರಲು ಸಾಧ್ಯವೇ ಎಂಬ ಸಂಶಯ ಬರುವುದು ಸ್ವಾಭಾವಿಕ. ಆದರೆ ಕಾಕತೀಯರು ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದರೆಂಬುದನ್ನು ನೆನಪಿಗೆ ತಂದುಕೊಳ್ಳಬೇಕು. ಚಾಲುಕ್ಯರ ಸಾಮಂತರಾಗಿದ್ದು ಇದೇ ಪ್ರದೇಶದಲ್ಲಿ ಪ್ರವರ್ಧಮಾನಕ್ಕೆ ಬರಲು ಅವಕಾಶವಿಲ್ಲದುದನ್ನು ಗಮನಿಸಿದ ಕಾಕತೀಯರು ಓರಂಗಲ್ಲಿನ ಕಡೆಗೆ ಹೋಗಿರಬೇಕು. ಓರಂಗಲ್ಲಿನ ಸಮೀಪದಲ್ಲಿರುವ ಅನುಮಕೊಂಡದಲ್ಲಿ ದೊರಕಿರುವ ಕಾಕತೀಯರ ಶಾಸನ ಭಾಗಶಃ ಕನ್ನಡದಲ್ಲಿರುವುದು ಗಮನಾರ್ಹವಾದ ಸಂಗತಿ. ಅಂದರೆ ಆಂಧ್ರ ದೇಶದಲ್ಲಿ ಪ್ರಬಲರಾದ ಮೇಲೆ ಅವರು ತೆಲುಗು ಭಾಷೆಯನ್ನು ಪ್ರೋತ್ಸಾಹಿಸಿದರೆಂಬುದು ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ಶ್ರೀ ಲಕ್ಷ್ಮೀನಾರಾಯಣರಾಯರ ಈ ಸಂಶೋಧನೆ ಮಹತ್ತ್ವಪೂರ್ಣವಾದುದು.

—ಎ. ವಿ. ಎನ್.

ಕದಂಬರ ಒಂದು ಹೊಸ ಶಾಸನ

ಕರ್ಣಾಟಕದ ಪ್ರಾಚೀನ ರಾಜಮನೆತನಗಳಲ್ಲೊಂದಾದ ಕದಂಬರ ಮೂಲಪುರುಷ ಮಯೂರಶರ್ಮ ಎಂಬುದು ತಾಳಗುಂದ ಮತ್ತು ಚಂದ್ರವಳ್ಳಿ ಶಾಸನಗಳಿಂದ ಸುವಿದಿತವಾಗಿದೆ. ಆದರೆ ಮಯೂರಶರ್ಮನ ಪೂರ್ವಜರ ಬಗ್ಗೆ ಏನೂ ಈಚಿನವರೆಗೆ ತಿಳಿದಿರಲಿಲ್ಲ; ಅವರು ಕ್ಷತ್ರಿಯರೇ? ಬ್ರಾಹ್ಮಣರೇ? ಅವರ ಮೊದಲ ರಾಜಧಾನಿ ಯಾವುದು ಎಂಬ ಬಗೆಗೂ ವಾದವಿವಾದಗಳಿದ್ದುವು. ಇತ್ತೀಚೆಗೆ ಬನವಾಸಿಯಲ್ಲಿ ನಡೆದ ಉತ್ಖನನದಲ್ಲಿ ದೊರಕಿದ ಒಂದು ಶಾಸನದಿಂದ ಅವರ ಮೊದಲ ರಾಜಧಾನಿ ಬನವಾಸಿಯೇ ಎಂಬುದು ದೃಢಪಟ್ಟಿದೆ (ಪ್ರಬುದ್ಧ ಕರ್ಣಾಟಕ, ಸಂಪುಟ ೫೨, ಸಂಚಿಕೆ ೧, ಪುಟಗಳು ೨೫–೨೯). ಬನವಾಸಿಯ ಪರಿಸರದಲ್ಲಿರುವ

ಮತ್ತು ಪ್ರಾಚೀನ ಬನವಾಸಿಯ ಭಾಗವಾಗಿದ್ದಿರಬಹುದಾದ ಗುಡ್ನಾಪುರ ಎಂಬಲ್ಲಿ ಕೆಲವು ತಿಂಗಳುಗಳ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ವಿಭಾಗದ ಡಾ. ಬಾ. ರಾ. ಗೋಪಾಲ್ ಬೆಳಕಿಗೆ ತಂದ ರವಿವರ್ಮ ಕದಂಬನ ಶಾಸನವೊಂದು ಬಹು ಉಪಯುಕ್ತ ಸಂಗತಿಗಳನ್ನೊಳಗೊಂಡಿದ್ದು ಕದಂಬರ ಚರಿತ್ರೆಯ ದೃಷ್ಟಿಯಿಂದ ಮಹತ್ತ್ವಪೂರ್ಣವಾದ್ದು.

ದಾಕ್ಷಿಣಾತ್ಯ ತೆಲುಗು–ಕನ್ನಡ ಲಿಪಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ೨೬ ಸಾಲುಗಳನ್ನೊಳಗೊಂಡಿರುವ ಪದ್ಯ–ಗದ್ಯಮಯವಾದ ಈ ಶಾಸನ ಮನ್ಮಥನ ಪ್ರಾರ್ಥನಾ ಶ್ಲೋಕದಿಂದ ಪ್ರಾರಂಭವಾಗುತ್ತದೆ. ತರುವಾಯ ಅವರ ವಂಶಾವಳಿಯನ್ನು ಹೇಳುತ್ತ, ಆ ವಂಶದ ಮೂಲಪುರುಷ ದ್ವಿಜಶ್ರೇಷ್ಠನೂ ವೇದಾಧ್ಯಯನಸಂಪನ್ನನೂ ಆದ ವೀರಸೇನನೆಂದೂ ಅವನ ಜ್ಯೇಷ್ಠ ಪುತ್ರ ಬಂಧುಸೇನ ಬ್ರಾಹ್ಮಣ್ಯವನ್ನು ತ್ಯಜಿಸಿ ಕ್ಷತ್ರಿಯ ಧರ್ಮವನ್ನವಲಂಬಿಸಿದನೆಂದೂ ತಿಳಿಸುತ್ತದೆ. ಬಂಧುಸೇನನ ಪುತ್ರನೇ ಮಯೂರಶರ್ಮ ಅಥವಾ ಮಯೂರವರ್ಮ. ಇದರಿಂದ ಮೂಲತಃ ಕದಂಬರು ಬ್ರಾಹ್ಮಣರಾಗಿದ್ದು ತದನಂತರ ಕ್ಷತ್ರಿಯರಾದವರೆಂಬುದು ಶ್ರುತವಾಗುತ್ತದೆ. ತರುವಾಯ ಮಯೂರವರ್ಮನ ಅನಂತರದ ರಾಜರನ್ನು ಸೂಚಿಸಿ, ಶಾಸನಕರ್ತನಾದ ರವಿವರ್ಮ ಮನ್ಮಥನಿಗೆ ಕಟ್ಟಿಸಿದ ದೇವಾಲಯ ಮತ್ತು ಆ ಸಂದರ್ಭದಲ್ಲಿ ಪ್ರಾರಂಭಿಸಿದ ಮನ್ಮಥೋತ್ಸವಗಳನ್ನು ಪ್ರಸ್ತಾಪಿಸುತ್ತದೆ. ಕರ್ನಾಟಕದಲ್ಲಾಗಲಿ ಭಾರತದ ಇತರ ಭಾಗಗಳಲ್ಲಾಗಲಿ ಮನ್ಮಥನಿಗೆ ಪ್ರತ್ಯೇಕ ದೇವಾಲಯ ನಿರ್ಮಿಸುವುದು ಅಪೂರ್ವವಾಗಿದ್ದು, ಇದೊಂದು ಗಮನಾರ್ಹ ವಿಷಯವಾಗಿದೆ. ಮಂದಿರದಲ್ಲಿ ಪೂಜಾಕಾರ್ಯಗಳನ್ನು ನಡೆಸಲು ದೊರೆ ಕೆಲವು ಬ್ರಹ್ಮಧೇಯಗಳನ್ನು ಕೊಂಡುಕೊಂಡು, ಅವನ್ನೂ ಇನ್ನಿತರ ಗ್ರಾಮಗಳನ್ನೂ ನೀರಾವರಿಸಹಿತವಾದ ಜಮೀನುಗಳನ್ನೂ ದತ್ತಿಬಿಟ್ಟುದಾಗಿ ಶಾಸನ ತಿಳಿಸುತ್ತದೆ. ಇದಲ್ಲದೆ ಶಾಸನದಲ್ಲಿ ಅರಮನೆ, ಅಂತಃಪುರ ಮತ್ತಿತರ ದೇವಾಲಯಗಳ ನಿವೇಶನಗಳನ್ನೂ ಸೂಚಿಸಿರುವುದಾಗಿ ಡಾ. ಗೋಪಾಲ್ ಹೇಳಿದ್ದಾರೆ.

ಈ ರೀತಿಯಾಗಿ ಈ ಶಾಸನ ಕದಂಬ ವಂಶದ ಮೂಲಪುರುಷರ ಬಗ್ಗೆ ಮಾಹಿತಿಗಳನ್ನೂ ಅಪೂರ್ವವಾದ ಮನ್ಮಥ ದೇವಾಲಯದ ನಿರ್ಮಾಣ ಸಂಗತಿಯನ್ನೂ ತಿಳಿಸುವುದರಿಂದ ಇದೊಂದು ಮುಖ್ಯ ಐತಿಹಾಸಿಕ ದಾಖಲೆ.

—ಬಿ. ಕೆ. ಗುರುರಾಜರಾವ್

ಪಲ್ಲವರ ಇತಿಹಾಸದ ಮೇಲೆ ಹೊಸ ಬೆಳಕು

ತಮಿಳುನಾಡು ಸರ್ಕಾರದ ಪ್ರಾಚ್ಯಸಂಶೋಧನ ಇಲಾಖೆಯವರು ಈಚೆಗೆ ಉತ್ತರ ಆರ್ಕಾಟ್ ಜಿಲ್ಲೆಯ ಚೆಂಗಂ ತಾಲ್ಲೂಕಿನಲ್ಲಿ ಕಂಡುಹಿಡಿದಿರುವ ಶಾಸನಗಳಿಂದೊಡಗೂಡಿದ ೧೪ ವೀರಗಲ್ಲುಗಳು ಐತಿಹಾಸಿಕ ಮಹತ್ತ್ವದವಾಗಿವೆ. ಅನಂತರಕಾಲೀನ

ಪಲ್ಲವ ವಂಶದ ಮೊದಲ ದೊರೆ ೧ನೆಯ ಮಹೇಂದ್ರವರ್ಮ, ಇವನ ಮಗ ೧ನೆಯ ನರಸಿಂಹವರ್ಮ, ೨ನೆಯ ನಂದಿವರ್ಮ ಮತ್ತು ಪಲ್ಲವರ ಕೊನೆಯ ದೊರೆಗಳ ಲ್ಲೊಬ್ಬನಾದ ಕಂಪವರ್ಮ ಇವರ ಆಳ್ವಿಕೆಯ ಕಾಲಕ್ಕೆ ಈ ವೀರಗಲ್ಲುಗಳು ಸೇರುತ್ತವೆ. ಒಂದು ವೀರಗಲ್ಲು ಚೋಳ ೧ನೆಯ ಪರಾಂತಕನ ಕಾಲದ್ದು.

ಈ ವರೆಗೆ ವಿದ್ವಾಂಸರಿಗೆ ತಿಳಿದಿರುವಂತೆ ಪಲ್ಲವ ಮಹೇಂದ್ರವರ್ಮ ಕ್ರಿ.ಶ. ೬೦೦-೬೩೦ರ ಮಧ್ಯೆ ರಾಜ್ಯವಾಳುತ್ತಿದ್ದ. ಇವನು ಬಾದಾಮಿ ಚಾಳುಕ್ಯರಲ್ಲಿ ಪ್ರಸಿದ್ಧನಾದ ೨ನೆಯ ಪುಲಿಕೇಶಿಯ ಹಿರಿಯ ಸಮಕಾಲೀನ ಮತ್ತು ಅವರಿಬ್ಬರ ನಡುವೆ ಹಲವು ಯುದ್ಧಗಳು ನಡೆದು ಮಹೇಂದ್ರ ಪಲ್ಲವ ಅವುಗಳಲ್ಲಿ ಸೋತಂತೆ ಅಥವಾ ಕಷ್ಟನಷ್ಟಗಳಿಗೀಡಾದಂತೆ ಇತಿಹಾಸಕ್ಕೆ ತಿಳಿದುಬಂದಿದೆ. ೬೩೦ರ ಸುಮಾರಿನಲ್ಲಿ ಮಹೇಂದ್ರವರ್ಮನ ಆಳ್ವಿಕೆಯ ಕಾಲವನ್ನು ಹೇಳಲಾಗಿದ್ದು ಕ್ರಮವಾಗಿ ೫೪, ೫೮ ಮತ್ತು ೫೦ನೆಯ ವರ್ಷಗಳನ್ನು ಉಲ್ಲೇಖಿಸಲಾಗಿದೆಯೆಂದು ಆ ಇಲಾಖೆಯ ನಿರ್ದೇಶಕ ಆರ್. ನಾಗಸ್ವಾಮಿಯವರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯವೇನಾದರೂ ಸರಿಯಿದ್ದಲ್ಲಿ ಪಲ್ಲವ ರಾಜವಂಶದ ಕಾಲನಿರ್ದೇಶ ಬಹಳ ವ್ಯತ್ಯಸ್ತಗೊಳ್ಳುತ್ತದೆ. ಮಹೇಂದ್ರವರ್ಮನ ತರುವಾಯ ೧ನೆಯ ನರಸಿಂಹ ವರ್ಮ ಸಿಂಹಾಸನಕ್ಕೆ ಬಂದುದು ೬೩೦ರಲ್ಲಿ. ಇದನ್ನು ಎಲ್ಲ ಇತಿಹಾಸಕಾರರೂ ಒಪ್ಪುತ್ತಾರೆ. ಆ ವೇಳೆಗೆ ಮಹೇಂದ್ರವರ್ಮ ಕೊನೆಯ ಪಕ್ಷ ೫೮ ವರ್ಷಗಳ ವರೆಗಾದರೂ ಆಳಿರಬೇಕು ಮತ್ತು ಹಾಗೆಂದಾಗ ಅವನು ಸಿಂಹಾಸನಕ್ಕೆ ಬಂದುದು ೬೦೦ರಲ್ಲಲ್ಲ, ೫೭೨ಕ್ಕೂ ಮೊದಲು. ಇದರಿಂದ ಮಹೇಂದ್ರವರ್ಮನ ತಂದೆ ಸಿಂಹ ವಿಷ್ಣು (ಈಗಿನಂತೆ ೫೮೦-೬೦೦ರಲ್ಲಿ ಅಧಿಕಾರದಲ್ಲಿದ್ದಿರಬೇಕು) ಮತ್ತು ಅವನ ತಂದೆ ಸಿಂಹವರ್ಮ (ಈಗಿನಂತೆ ೫೬೦-೫೮೦ರಲ್ಲಿ ಅಧಿಕಾರದಲ್ಲಿದ್ದಿರಬೇಕು) ಅವರ ಆಳ್ವಿಕೆ ಇನ್ನೂ ಹಿಂದಕ್ಕೆ ಹೋಗಬೇಕಾಗುತ್ತದೆ.

೧ನೆಯ ನರಸಿಂಹವರ್ಮ ಮಾಮಲ್ಲನ ಆಳ್ವಿಕೆಯ ಕಾಲದ ಬಗೆಗೂ ಈ ಶಾಸನಗಳಲ್ಲೊಂದು ಹೊಸ ಬೆಳಕನ್ನು ಚೆಲ್ಲುತ್ತದೆ. ಈಗಿನಂತೆ ಅವನು ೬೩೦ರಿಂದ ೬೬೮ರ ವರೆಗೆ ಆಳುತ್ತಿದ್ದ. ಅಂದರೆ ಅವನ ಆಳ್ವಿಕೆಯ ಅವಧಿ ೩೮ ವರ್ಷಕಾಲ. ಆದರೆ ಸಾತನೂರಿನ ಬಳಿ ದೊರಕಿದ ಈ ಶಾಸನಗಳಲ್ಲೊಂದರ ಪ್ರಕಾರ ಕುಮಾರ ಮಂಗಲ ವುಂಡನ್ ಎಂಬ ವೀರ, ನರಸಿಂಹವರ್ಮನ ಆಳ್ವಿಕೆಯ ೫೦ನೆಯ ವರ್ಷ ದಲ್ಲಿ ಕಾಳಗವೊಂದರಲ್ಲಿ ಮೃತನಾದನೆಂದು ತಿಳಿಸುತ್ತದೆ. ಹಾಗಾದಲ್ಲಿ ನರಸಿಂಹ ವರ್ಮನ ಆಳ್ವಿಕೆ ೩೮ ವರ್ಷ ಮಾತ್ರವಲ್ಲ, ಕೊನೆಯ ಪಕ್ಷ ೫೦ ವರ್ಷಗಳಷ್ಟಾದರೂ ಇದ್ದಿರಬೇಕು. ಉಳಿದ ಶಾಸನಗಳಲ್ಲಿ ತತ್ಕಾಲದ ಕೆಲವು ವೀರರು ಶತ್ರುಗಳ ವಿರುದ್ಧ ಹೋರಾಡಿ ಮಡಿದ ಘಟನೆಗಳನ್ನು ತಿಳಿಸುತ್ತದೆ.

ದಕ್ಷಿಣ ಭಾರತದ ಇತಿಹಾಸದ ಮೊದಲ ರಾಜವಂಶಗಳಲ್ಲೊಂದಾದ ಪಲ್ಲವ ಮನೆತನದ ಕಾಲನಿರ್ದೇಶನದ ಬಗ್ಗೆ ವೀರಗಲ್ಲುಗಳ ಮೇಲಿನ ಈ ಶಾಸನಗಳು

ಬಹಳ ಮಹತ್ತ್ವದವಾಗಿವೆ. ಅವುಗಳ ವಿಷಯದಲ್ಲಿ ಹೆಚ್ಚಿನ ಅಧ್ಯಯನ ನಡೆಸಿ ಫಲಿತಾಂಶಗಳು ಶೀಘ್ರವಾಗಿ ಪ್ರಕಟವಾದರೆ ಇತಿಹಾಸಜ್ಞರಿಗೆ ಹೆಚ್ಚು ಪ್ರಯೋಜನವಾದೀತು.

—ಬಿ. ಕೆ. ಗುರುರಾಜರಾವ್

ಮೂರನೆಯ ಜಾನಪದ ಸಮ್ಮೇಳನ

"ಕೆಲಸಕ್ಕೆ ಬಾರದ ವಸ್ತುವೆಂದು ದೂರ ಎಸೆದಿದ್ದ ಕಲ್ಲೇ ಮನೆಯ ಮೂಲೆಗಲ್ಲಾಯಿತು" ಎಂದು ಒಂದು ನುಡಿಯಿದೆ. ಈ ನುಡಿಯ ಸಾರ್ಥಕ್ಯವನ್ನು ದಿನಾಂಕ ೨೭–೧೦–೭೧ರ ಸಂಜೆ ೫ ರಿಂದ ೨೯–೧೦–೭೧ರ ನಡುರಾತ್ರಿಯ ವರೆಗೆ ಮಂಡ್ಯ ಜಿಲ್ಲೆಯ "ಸಿರಿಯಲ್ಲಿ ಕಳೆ, ಕಲೆಯಲ್ಲಿ ಬೆಲೆ"ಯನ್ನು ಮೈಗೂಡಿಸಿಕೊಂಡಿರುವ, ನಾಗಮಂಗಲದಲ್ಲಿ ನಡೆದ "ಅಖಿಲ ಕರ್ನಾಟಕ ಮೂರನೆಯ ಜಾನಪದ ಸಮ್ಮೇಳನ"ದಲ್ಲಿ ಕಾಣಬಹುದಾಗಿತ್ತು.

೨೭–೧೦–೭೧ರ ಸಂಜೆ ೫ಕ್ಕೆ ನಾಗಮಂಗಲದಲ್ಲಿ ಕೊಂಬುಕಹಳೆಗಳ ಧ್ವನಿ; ಡೊಳ್ಳಿನ ನಾದಮಯ ಹೊಡೆತ; ವೀರಗಾಸೆಯವರ ಆಕರ್ಷಕ ನೃತ್ಯ; ನಂದಿಕೋಲಿನವರ ಮೋಹಕ ಕುಣಿತ; ಕಡಬಡ್ಡರ (ಗೊರವರ) ಆವೇಶದ ಮೆರೆತ— ಇವೇ ಇತ್ಯಾದಿಗಳು ಆ ಊರಿನ ಮತ್ತು ಹೊರಗಿನಿಂದ ಬಂದ ಜನಸ್ತೋಮವನ್ನು ಆಕರ್ಷಿಸಿತ್ತು. ಅಂದು "ಜಾನಪದ ಮಹಾಯಾತ್ರೆ". ಸಮ್ಮೇಳನಾಧ್ಯಕ್ಷ ಶ್ರೀ ಬೆಟಗೇರಿ ಕೃಷ್ಣಶರ್ಮ ಮತ್ತು ಸಮ್ಮೇಳನದ ಉದ್ಘಾಟಕ ರಸಋಷಿ ಕುವೆಂಪು ಅವರ ಹರ್ಷಚಿತ್ತ ಮೆರವಣಿಗೆ ಸಾಗಿತು. ಸಹಸ್ರಾರು ಜನ ಕನ್ನಡದ ಆಚಾರ್ಯ ಬಿ.ಎಂ.ಶ್ರೀ. ಮಂಟಪದಿಂದ ಹೊರಟ ಮೆರವಣಿಗೆಯನ್ನು ಕುತೂಹಲಭರಿತರಾಗಿ ನೋಡಿದರು. ಮೆರವಣಿಗೆ ಸುಮಾರು ಒಂದೂಕಾಲು ಫರ್ಲಾಂಗ್ ದೂರದಲ್ಲಿದ್ದ ಜಾನಪದ ಹಿತಾಸಕ್ತ ಶ್ರೀ ಚಂದ್ರಶೇಖರನಾಥ ಅವರ ನೆನಪಿನಾರ್ಥವಾಗಿ ಕಟ್ಟಿದ್ದ ಮಂಟಪವನ್ನು ತಲುಪಿದಾಗ ಕೊಂಬುಕಹಳೆಗಳು ಮತ್ತೊಮ್ಮೆ ಜಾನಪದ ಮಹತ್ತ್ವವನ್ನು ಸಾರಿ ಸಾರಿ ಜನತೆಗೆ ಹೇಳಿದುವು.

ಸಂಜೆ ೫–೩೦ಕ್ಕೆ "ಜಯಭಾರತ ಜನನಿಯ ತನುಜಾತೆ ...."ಯ ಪ್ರಾರ್ಥನೆಯಿಂದ ಸಾವಿರಾರು ಜನರಿದ್ದ ಬೃಹತ್ ಜಾನಪದ ಸಭೆ ಆರಂಭವಾಯಿತು. "ಗುರುಸ್ವಾಮಿ ಪಾದವೋ ರಾಮ ಹೋ ರಾಮ, ಮಹಾಸ್ವಾಮಿ ಪಾದವೋ ರಾಮ ಹೋ ರಾಮ ...." ಎಂಬ ಸ್ತುತಿಗೀತೆಯನ್ನು ಹಾಡುವುದರ ಮೂಲಕ "ಬೀದಿಯ ಭಿಕಾರಿ ಹೆಳವರು" ತಮಗೂ ಶ್ರಾವ್ಯವಾಗಿ ಹಾಡುವ ವ್ಯಕ್ತಿತ್ವ ಉಂಟು ಎಂಬುದನ್ನು ಜನತೆಗೆ ತೋರಿಸಿದರು.

ಜಾನಪದ ಹಿತಚಿಂತಕ ಶ್ರೀ ಎಚ್. ಎಲ್. ನಾಗೇಗೌಡರು ನೆರೆದಿದ್ದ ಬೃಹತ್ ಸಭೆಯನ್ನು ಸ್ವಾಗತಿಸುತ್ತ ಅಚ್ಚಗನ್ನಡಕ್ಕೆ ಹೆಸರಾದ ನಾಗಮಂಗಲದ

ವೈಶಿಷ್ಟ್ಯವನ್ನು ತಿಳಿಸಿ "ಶರಾವತಿಯ ಕಾರ್ಯ ಹತ್ತು ವರ್ಷ ತಡವಾದರೆ ಅಷ್ಟೇನೂ ನಷ್ಟವಿಲ್ಲ: ಆದರೆ ಜಾನಪದ ಹಾಳಾದರೆ ಅದು ಜನಸಂಸ್ಕೃತಿಯ ನಿಧನ" ಎಂದು ಎಚ್ಚರಿಸಿದರು.

ನೆನಪಿನ ಸಂಚಿಕೆಯ ಪರವಾಗಿ ಮಾತನಾಡಿದ ಪ್ರಸಿದ್ಧ ಜಾನಪದ ವಿದ್ವಾಂಸ ಡಾ. ಹಾ. ಮಾ. ನಾಯಕರು ಪಾತ್ರದಲ್ಲಿ ಚಿಕ್ಕದಾದರೂ ಸೂತ್ರದಲ್ಲಿ ಹಿರಿದಾಗಿರುವ "ಚುಂಚನಗಿರಿ"ಯ ವೈಶಿಷ್ಟ್ಯವನ್ನು ತಿಳಿಸಿ, ಜಾನಪದದ ಎಲ್ಲ ಪ್ರಕಾರಗಳ ಸಂಗ್ರಹ ತ್ವರಿತವಲ್ಲಿ ಆಗಬೇಕೆಂದು ಆಶಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಅನಿವಾರ್ಯವಾಗಿ ಬರಲಾಗದಿದ್ದ ಕಾರಣ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ದೇ. ಜವರೇಗೌಡರು ನೆನಪಿನ ಹೊತ್ತಿಗೆ "ಚುಂಚನಗಿರಿ"ಯನ್ನು ಬಿಡುಗಡೆ ಮಾಡಿ, ಜಾನಪದ ಸಂಗ್ರಹದ ಕಡೆ ಗಮನ ಹರಿಸಬೇಕೆಂದು ಕಳಕಳಿಯಿಂದ ಕನ್ನಡ ಜನತೆಯನ್ನು ಬಿನ್ನವಿಸಿಕೊಂಡರು.

ಶ್ರೀ ಗೊ. ರು. ಚನ್ನಬಸಪ್ಪನವರು ಸಮ್ಮೇಳನಕ್ಕೆ ಯಶಸ್ಸು ಕೋರಿ ಬಂದಿದ್ದ ಸಂದೇಶಗಳನ್ನು ಓದಿದರು.

ಮೂರನೆಯ ಜಾನಪದ ಸಮ್ಮೇಳನವನ್ನು ಉದ್ಘಾಟಿಸುತ್ತ ಶ್ರೀ ಕುವೆಂಪು ಅವರು ಜಾನಪದದ ಸಂಗ್ರಹ, ಅಧ್ಯಯನ ಇವುಗಳ ಆವಶ್ಯಕತೆಯನ್ನು ವಿವರಿಸಿ ಯಾವುದೇ ಸಂಗತಿಯಾಗಲಿ ಅದನ್ನು ವೈಜ್ಞಾನಿಕ ಹಾಗೂ ವೈಚಾರಿಕ ಮಟ್ಟದಿಂದ ಅಳೆದು, ಆಮೇಲೆ ಅದನ್ನು ಸ್ವೀಕರಿಸಬೇಕೆಂದು ತಿಳಿಸಿದರು. ಜಾನಪದವನ್ನೂ ವೈಚಾರಿಕ ವೈಜ್ಞಾನಿಕ ದೃಷ್ಟಿಗಳಿಂದ ಜರಡಿ ಹಿಡಿದು—ಜಳ್ಳನ್ನು ತೂರಿ, ಗಟ್ಟಿಯನ್ನು ಗಿಟ್ಟಿಸಬೇಕೆಂದು ಜಾನಪದ ಹಿತಚಿಂತಕರಿಗೆ ಒಂದು "ನೂತನ ದೃಷ್ಟಿ"ಯನ್ನು ತೋರಿಸಿದರು.

ಜಾನಪದ ಸಮ್ಮೇಳನದ ಅಧ್ಯಕ್ಷ ಶ್ರೀ ಬೆಟಗೇರಿ ಕೃಷ್ಣಶರ್ಮ ಅವರು ತಮ್ಮ ಲಿಖಿತ ಭಾಷಣ ಮಾಡುತ್ತ "ಜಾನಪದ ಕರ್ನಾಟಕದಷ್ಟೇ ದೊಡ್ಡದು, ಅಷ್ಟೇಕೆ ಅದಕ್ಕೂ ದೊಡ್ಡದು" ಎಂದು ತಿಳಿಸಿ ಅವಿರತ ಅವಿನಾಶಿಯಾದ ಜಾನಪದದ ಸಂಗ್ರಹ, ಅಧ್ಯಯನದತ್ತ ದೃಷ್ಟಿ ಹರಿಸಬೇಕೆಂದರು. ಶ್ರೀಯುತರು ಮುಂದುವರೆದು ಕನ್ನಡದಲ್ಲಿ ಶಿಶುಪ್ರಾಸ ಪ್ರಕಾರವು ಅಷ್ಟಾಗಿ ಸಂಗ್ರಹವಾಗಿಲ್ಲವೆಂದೂ ಆ ಕ್ಷೇತ್ರ ಇನ್ನೂ ಬರಡು ನೆಲವಾಗಿದೆಯೆಂದರು. ಆ ಕಾರಣದಿಂದಾಗಿ ಅದಷ್ಟು ಬೇಗ ಸಂಗ್ರಹಕಾರ್ಯ ನಡೆಸಬೇಕೆಂದು ಜಾನಪದ ಸಂಗ್ರಹಕಾರರಿಗೆ ವಿನಂತಿಸಿ ಕೊಂಡರು.

ಶ್ರೀ ಕೆ. ಸಿಂಗಾರಿಗೌಡರು ವಂದನಾರ್ಪಣೆ ಮಾಡಿದರು. ಸಭೆ ರಾತ್ರಿ ೯ಕ್ಕೆ ಮುಗಿಯಿತು. ಅನಂತರ ಊಟಕ್ಕಾಗಿ ಸ್ವಲ್ಪ ಹೊತ್ತು ಬಿಡುವು ಕೊಟ್ಟು ಜನಪದ ಕಲಾಮೇಳ ಆರಂಭವಾಯಿತು.

ದಿನಾಂಕ ೨೮–೧೦–೭೧ ಮತ್ತು ೨೯–೧೦–೭೧ ಈ ಎರಡು ದಿನಗಳಲ್ಲಿ "ಜಾನಪದ ವಿಚಾರಗೋಷ್ಠಿ, ಜನಪದ ಸಾಹಿತ್ಯಗೋಷ್ಠಿ, ಹಾಗೂ ಜನಪದ ಕಲಾಗೋಷ್ಠಿ"— ಈ ಮೂರು ಗೋಷ್ಠಿಗಳು ಕ್ರಮವಾಗಿ ಬೆಳಗ್ಗೆ, ಸಂಜೆ ಹಾಗೂ ಮರುದಿನ ಬೆಳಗ್ಗೆ ನಡೆದವು. ವಿಚಾರಗೋಷ್ಠಿಗಳಲ್ಲಿ ಪ್ರಮುಖ ವಿದ್ವಾಂಸರುಗಳು ತಮ್ಮ ತಮ್ಮ ಪ್ರಬಂಧಗಳನ್ನು ಓದಿದರು. ಸುಮಾರು ಹದಿನೆಂಟು ಜನ ವಿದ್ವಾಂಸರು ಬೇರೆ ಬೇರೆ ಪ್ರಬಂಧಗಳನ್ನು ಓದಿದರು. ಮೇಲಿನ ಮೂರು ಗೋಷ್ಠಿಗಳಿಗೂ ಕ್ರಮವಾಗಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀ ಸಿ. ಪಿ. ಕೃಷ್ಣ ಕುಮಾರ್, ಹಾಗೂ ಡಾ. ಎಂ. ಎಸ್. ಸುಂಕಾಪುರ ಅಧ್ಯಕ್ಷರಾಗಿದ್ದರು. ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳೆಲ್ಲವೂ ವಿಚಾರಪರಿಪೂರ್ಣತವಾಗಿಯೂ ಸಂಶೋಧನಾತ್ಮಕವಾಗಿಯೂ ಇದ್ದುವು.

ದಿ. ೨೮–೧೦–೭೧ರಂದು "ಜಾನಪದ ಸಮ್ಮೇಳನ"ದ ಒಂದು ವಿಶೇಷ ಕಾರ್ಯಕ್ರಮ. ಅಂದು ಸಂಜೆ ೫–೩೦ಕ್ಕೆ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ "ಗೊರವರ ಡುಂಡುಚಿ"ಗಳಾದ ಕರಪಾಲ ಸಿದ್ಧಯ್ಯ, ವೆಂಕಟ ಶಾಮಯ್ಯ, ಶರಣಯ್ಯ ಷಡಕ್ಷರಯ್ಯ ಹಿರೇಮಠ, ಮಂಜುಪಂಬದ, ಮಳವಳ್ಳಿ ರಾಚಯ್ಯ. ಚೌಡಿಕೆ ಎಲ್ಲಯ್ಯ, ಕೃಷ್ಣ ಹಾಸ್ಯಗಾರ, ಸಂಪತ್ ಭಾಗವತ, ಎಲಿಸವ್ವ ಮತ್ತು ಸೋಬಾನೆ ಚಿಕ್ಕಮ್ಮ—ಈ ಜನಪದ ಕಲಾವಿದರ ಸನ್ಮಾನ ನಡೆಯಿತು. ಅಧ್ಯಕ್ಷ ಶ್ರೀ ನಾಗೇಗೌಡರು ಗದ್ಗದಕಂಠಿತರಾಗಿ ಜನಪದ ಕಲಾವಿದರನ್ನು ಉಳಿಸಿ ಎಂದು ಜನತೆಯಲ್ಲಿ ಮನವಿಮಾಡಿಕೊಂಡರು. ಇದಕ್ಕೆ ಮುನ್ನ ಈ ಜನಪದ ಕಲಾವಿದರ ಸನ್ಮಾನ ಸಮಾರಂಭದ ಉದ್ದೇಶವನ್ನು ಶ್ರೀಯುತ ಕೆ. ಟಿ. ವೀರಪ್ಪ ನವರು ವಿವರಿಸಿದರು. ಇಲ್ಲಿಯ ವರೆಗೂ ನಾವು ಕವಿಗಳನ್ನು ಸನ್ಮಾನಿಸಿದ್ದೇವೆ; ಆದರೆ ಜನಪದ ಕಲಾವಿದರನ್ನು ಗೌರವಿಸಿದ ಚಿಹ್ನೆ ಎಲ್ಲಿಯೂ ಕಂಡುಬರುವುದಿಲ್ಲ. ನಾವು ಇಂದು ಗೌರವಿಸುತ್ತಿರುವುದು ಕೇವಲ ಹತ್ತು ಜನರನ್ನು ಮಾತ್ರ, ಆದರೆ ಇಂತಹ ಸಾವಿರಾರು ಜನ ನಮ್ಮಲ್ಲಿದ್ದಾರೆ. ಈ ಸಮಾರಂಭದ ಔಚಿತ್ಯವನ್ನರಿತು ಜನತೆ ಕಲಾವಿದರನ್ನು ಗೌರವಿಸಬೇಕು ಎಂದು ಅಂತಃಕರಣ ತುಂಬಿ ಹೇಳಿದರು. ಅಲ್ಲದೆ ಶ್ರೀಯುತರಾದ ಮಾದಪ್ಪಗೌಡರು ಕಲಾವಿದರನ್ನು ಅಭಿನಂದಿಸಿದರು. ಡಾ. ಬೆಸಗರಹಳ್ಳಿ ರಾಮಣ್ಣನವರು ವಂದನಾರ್ಪಣೆ ಮಾಡಿದರು.

"ಜಾನಪದ ಸಮ್ಮೇಳನ" ಕೇವಲ ಭಾಷಣಗಳ ವರದಿಯಾಗದೆ ಅದು ಕ್ರಿಯಾತ್ಮಕವಾಗಿಯೂ ಇದ್ದಿತು. ಪ್ರತಿದಿನ ರಾತ್ರಿಯೂ ವಿವಿಧ ಜನಪದ ಕಲಾವಿದರಿಂದ ಅನೇಕ ಬಗೆಯ ಕಲಾಮೇಳಗಳು ಏರ್ಪಟ್ಟಿದ್ದುವು. ಯಕ್ಷಗಾನಗಳು, ಗೊಂಬೆಯಾಟಗಳು, ತೊಗಲುಗೊಂಬೆಯಾಟಗಳು, ಕುಣಿತಗಳು, ನೃತ್ಯಗಳು, ಗೀತೆಗಳು—ಇಂತಹ ಹತ್ತಾರು ಪ್ರಕಾರಗಳು ಜನಮನಸ್ಸನ್ನು ಅರ್ಧರಾತ್ರಿಯ ವರೆಗೂ ಸೆರೆ ಹಿಡಿಯುತ್ತಿತ್ತು. ಜನಪದ ಕಲಾವಿದರಲ್ಲಿ ಹುದುಗಿರುವ ಸುಪ್ತ ಪ್ರತಿಭೆ

ಯನ್ನು ಕಂಡು ಜನತೆ ದಿಗ್ಭ್ರಾಂತಿ ಹೊಂದಿತು. "ಜನಪದ ಕಲಾಮೇಳ"ದ ಯಶಸ್ಸೆಲ್ಲ ಸಲ್ಲಬೇಕಾದದ್ದು ಕೇವಲ ಇಬ್ಬರಿಗೇ. ಶ್ರೀಯುತ ಪಿ. ಆರ್. ತಿಪ್ಪೇಸ್ವಾಮಿಯವರು ತಮ್ಮ ಜೀವನವನ್ನೆ ಜನಪದ ಕಲೆಗಳಿಗಾಗಿ ಮುಡಿಪಿಟ್ಟಿರುವ ಸ್ಪಷ್ಟ ಅಂಶ ಅಲ್ಲಿ ಎದ್ದು ತೋರುತ್ತಿತ್ತು. ಅಲ್ಲದೆ ಶ್ರೀಯುತ ಗೊ. ರು. ಚನ್ನಬಸಪ್ಪ ನವರು ಕಲಾಮೇಳದ ಯಶಸ್ಸಿಗಾಗಿ ದುಡಿದರು.

ಉತ್ಸಾಹಿ ಕನ್ನಡಿಗ ಶ್ರೀ ಬಾಳಪ್ಪ ಹುಕ್ಕೇರಿಯವರು ಆಗಾಗ್ಗೆ—ಕೆಲವೊಮ್ಮೆ ದೀರ್ಘಕಾಲ—ಕನ್ನಡ ಕವಿತೆಗಳನ್ನು ಹಾಡುತ್ತ ಜನರನ್ನು ತಣಿಸುತ್ತಿದ್ದರು. ಅಲ್ಲದೆ ಶ್ರೀ ಡಿ. ಟಿ. ಚಂದ್ರಶೇಖರ, ಶ್ರೀ ಕೆ. ಆರ್. ಲಿಂಗಪ್ಪ ಇವರುಗಳೂ ಜನಪದ ಗೀತೆಗಳನ್ನು ಹಾಡಿದರು, ಶ್ರೀಯುತ ಸಿ. ಜಿ. ಪುರುಷೋತ್ತಮ ಅವರು ಕೆಲವು ಜನಪದ ಗೀತೆಗಳನ್ನು ಸಂಸ್ಕೃತಕ್ಕೆ ತರ್ಜುಮೆಮಾಡಿ, ಅವನ್ನು ಹಾಡಿದರು. ಒಟ್ಟಿನಲ್ಲಿ ಕಲಾಮೇಳ ಯಶಸ್ವಿಯಾಗಿ ನೆರವೇರಿತು.

ದಿ. ೨೯–೧೦–೭೧ರಂದು ಮುಕ್ತಾಯ ಸಮಾರಂಭ. ಆ ದಿನ ಮಧ್ಯಾಹ್ನ ಪ್ರತಿನಿಧಿಗಳ ಒಂದು ಸಭೆ ಸೇರಿ ಕೆಲವಾರು ಪ್ರಮುಖ ನಿರ್ಣಯಗಳನ್ನು ಮಾಡಿದರು. ಅಂದಿನ ಸಂಜೆಯ ಸಮಾರಂಭಕ್ಕೆ ಸ್ವಾಗತವನ್ನು ಬಯಸುತ್ತ ಶ್ರೀಯುತ ಹ. ಕ. ರಾಜೇಗೌಡರು, ಸಂಪೂರ್ಣ ಸಹಕಾರ ನೀಡಿದ ನಾಗಮಂಗಲದ ಜನತೆಯನ್ನು ವಂದಿಸಿದರು. ಅಲ್ಲದೆ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ ಶ್ರೀ ಪಿ. ಎನ್. ಜವರಪ್ಪಗೌಡರು ಕಲಾವಿದರಿಗೆ ಪ್ರಶಸ್ತಿಪತ್ರ ವಿತರಣೆ ಮಾಡಿದರು. ಶ್ರೀ ಕೆ. ವಿ. ಶಂಕರಗೌಡರು ಮುಕ್ತಾಯ ಭಾಷಣವನ್ನು ಮಾಡುತ್ತ ಜಾನಪದ ಸಂಗ್ರಾಹಕರಿಗೆ ಶುಭ ಹಾರೈಸಿದರು. ಸಮ್ಮೇಳನಾಧ್ಯಕ್ಷರು ಸಮಾರೋಪ ಭಾಷಣ ಮಾಡುತ್ತ "ಈ ಸಮ್ಮೇಳನ, ನನ್ನಲ್ಲಿ ಇನ್ನು ನಾಲ್ಕು ವರ್ಷ ಬದುಕುವ ಉತ್ಸಾಹವನ್ನು ಹುಟ್ಟಿಸಿದೆ" ಎಂದು ಸಮ್ಮೇಳನದ ಯಶಸ್ಸನ್ನು ಮನಸಾರೆ ಮೆಚ್ಚಿದರು. ಅನಂತರ ಜಾನಪದ ಕರ್ಣಾಟಕ ಪರಿಷತ್ತಿನ ಪರವಾಗಿ ಶ್ರೀ ಗೊ. ರು. ಚೆನ್ನಬಸಪ್ಪ ಹಾಗೂ ಸ್ವಾಗತ ಸಮಿತಿಯ ಪರವಾಗಿ ಶ್ರೀ ಎಸ್. ಎ. ನಿಂಗಪ್ಪ ಅವರು ವಂದನಾರ್ಪಣೆ ಮಾಡಿದರು.

ಸ್ವಾಗತ ಸಮಿತಿಯವರು ಬಂದ ಪ್ರತಿನಿಧಿಗಳಿಗೆ ಉತ್ತಮ ವಸತಿ, ಊಟದ ಸೌಕರ್ಯವನ್ನು ಒದಗಿಸಿಕೊಟ್ಟಿದ್ದು ಎಲ್ಲರಿಗೂ ತೃಪ್ತಿಯನ್ನು ತಂದಿತು.

ಈ ನಿಟ್ಟಿನಲ್ಲಿ ಬೇರೆಯಾಗಿ ಹೆಸರಿಸಬೇಕಾದ ವ್ಯಕ್ತಿಯೆಂದರೆ ಶ್ರೀ ಜೀ. ಶಂ. ಪರಮಶಿವಯ್ಯನವರು. ಸದಾ ಜಾನಪದದಲ್ಲೇ ಓಡಾಡುವ ಶ್ರೀ ಜೀಶಂಪ ಆ ಮೂರು ದಿನಗಳಲ್ಲಿ ಜಾನಪದದ ಸಮುದ್ರದಲ್ಲಿ ಹಾರಿದ್ದರು, ಮುಳುಗಿದ್ದರು.

ನಾಗಮಂಗಲದಲ್ಲಿ ನಡೆದ ಮೂರನೆಯ ಜಾನಪದ ಸಮ್ಮೇಳನ ಹತ್ತುಕಾಲ ಜನಮನದಲ್ಲಿ ನಾಟ ನಿಲ್ಲುವಂತಹುದು.

—ಹೊರೆಯಾಲ ದೊರೆಸ್ವಾಮಿ

ಅಂತರರಾಷ್ಟ್ರೀಯ ಹಣ ವ್ಯವಸ್ಥೆ

ಆಂತರಿಕ ಆರ್ಥಿಕ ಸಂಕಟಗಳ ಪರಿಹಾರಾರ್ಥವಾಗಿ ಅಮೆರಿಕದ ಅಧ್ಯಕ್ಷ ನಿಕ್ಸನರು ಜಾರಿಗೆ ತಂದ ಕೆಲವು ಕ್ರಮಗಳಿಂದಾಗಿ ಅಂತರರಾಷ್ಟ್ರೀಯ ಹಣ ಪರಿಸ್ಥಿತಿಯಲ್ಲಿ ಅಲ್ಲಕಲ್ಲೋಲಗಳಾಗಿವೆ. ಮೂವತ್ತೇಳು ವರ್ಷಗಳಿಂದ ಚಿನ್ನಕ್ಕೆ ಬಂಧಿತವಾಗಿದ್ದ ಡಾಲರನ್ನು ನಿಕ್ಸನ್ ಅದರಿಂದ ಬೇರ್ಪಡಿಸಿದ್ದಾರೆ. ಅಮೆರಿಕಕ್ಕೆ ಆಮದಾಗುವ ಸುಂಕದ ಸರಕುಗಳ ಮೇಲೆ ಸೇ. ಹತ್ತರಷ್ಟು ಮೇಲುತೆರ ವಿಧಿಸಿದ್ದಾರೆ. ಈ ಎರಡೂ ಇತರ ರಾಷ್ಟ್ರಗಳ ಮೇಲೆ ಪರಿಣಾಮ ಬೀರುವಂಥವು. ಡಾಲರುಗಳನ್ನು ಚಿನ್ನಕ್ಕೆ ಪರಿವರ್ತಿಸುವುದನ್ನು ತಪ್ಪಿಸಿರುವುದರಿಂದ, ಅಂತರರಾಷ್ಟ್ರೀಯ ಹಣದ ಕಾರ್ಯ ಭಾರ ನಿರ್ವಹಿಸುವುದಕ್ಕೆ ಆ ನಾಣ್ಯಕ್ಕಿದೆಯೆಂದುಕೊಂಡಿದ್ದ ನಂಬಿಕೆ ನಷ್ಟವಾಗಿದೆ. ದೀರ್ಘಕಾಲದಲ್ಲಿ ವಿನಿಮಯದವರನ್ನು ಒಂದೇ ಮಟ್ಟದಲ್ಲಿ ಸ್ಥಿತಗೊಳಿಸುವುದರ ಸಾಧಕಬಾಧಕಗಳೇನೆಂಬುದರ ಕಡೆಗೆ ವಿಶ್ವದ ಗಮನ ಸರಿದಿದೆ. ವಿವಿಧ ರಾಷ್ಟ್ರಗಳ ಪರಸ್ಪರ ವಿನಿಮಯ ದರಗಳನ್ನು ಹೊಸ ಮಟ್ಟದಲ್ಲಿ ನಿರ್ಧರಿಸುವುದು ಅಗತ್ಯ ವೆಂದೂ ವಿಶ್ವ ಹಣವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗಳಾಗಬೇಕೆಂದೂ ಅಂತರ ರಾಷ್ಟ್ರೀಯ ಹಣನಿಧಿಯ ಸಭೆಯಲ್ಲಿ ನಿರ್ಣಯವಾಗಿದೆ. ಈ ಸುಧಾರಣೆಯನ್ನು ಹೇಗೆ ಮಾಡಬೇಕೆಂಬುದೂ ಇದರ ಸ್ವರೂಪವೆಂಥದೆಂಬುದೂ ಕ್ರಮೇಣ ರೂಪು ಗೊಳ್ಳಬೇಕಾಗಿದೆ.

ಭಾವೀ ವಿಶ್ವ ಹಣವ್ಯವಸ್ಥೆಯ ಬಗ್ಗೆ ಅನೇಕ ಸೂತ್ರಗಳು ಈಗಾಗಲೇ ಅರ್ಥಶಾಸ್ತ್ರ ಪರಿಣತರ ವಲಯಗಳಲ್ಲಿ ಚರ್ಚಿತವಾಗುತ್ತಿವೆ. ವಿವಿಧ ರಾಷ್ಟ್ರಗಳ ಹಣಗಳು ಚಿನ್ನಕ್ಕೋ ಡಾಲರಿಗೋ ಪರಿವರ್ತನೆಯಾಗುವ ಬದಲು ಗೋದಿ, ಬೆಣ್ಣೆ, ಸಕ್ಕರೆ, ರಬ್ಬರ್ ಮುಂತಾದ ಪದಾರ್ಥಗಳಿಗೆ ಪರಿವರ್ತನೆಯಾಗುವ ವ್ಯವಸ್ಥೆ ಏರ್ಪಡ ಬೇಕೆಂಬುದು ನಿಕೊಲಾಸ್ ಕಾಲ್ಡಾರರ ಸಲಹೆ. ಡಾಲರಿನ ದೃಢತೆ ತಪ್ಪಿ, ಅದು ಚಿನ್ನಕ್ಕೆ ಪರ್ಯಾಯವೆಂಬ ನಂಬಿಕೆ ತಪ್ಪಿದೆಯೆಂಬುದಕ್ಕೆ ಇಂಥ ಹಲವಾರು ಸಲಹೆ ಗಳು ದ್ಯೋತಕ. ವಿದೇಶಿ ವಿನಿಮಯದ ಅಧಿಕೃತ ದರಗಳ ಆಚೀಚೆ ಸೇ. ೧ಕ್ಕಿಂತ ಅಧಿಕವಾಗಿ ವ್ಯತ್ಯಾಸವಾಗದಂತೆ ಆಯಾ ರಾಷ್ಟ್ರಗಳು ಕ್ರಮಕೈಕೊಳ್ಳಬೇಕೆಂಬ ಕಡ್ಡಾಯವನ್ನು ಸಡಿಲಿಸಿ, ಪರಿಸ್ಥಿತಿಯ ಅಗತ್ಯಗಳಿಗೆ ಅನುಗುಣವಾಗಿ ಅವು ವ್ಯತ್ಯಾಸವಾಗಲು ಬಿಡಬೇಕೆಂಬ ಸಲಹೆಯೂ ಇದೆ. ಅಂತರರಾಷ್ಟ್ರೀಯ ವ್ಯವಹಾರ ಗಳಲ್ಲಿ ಚಿನ್ನ ಅಥವಾ ಡಾಲರಿನ ಮಧ್ಯಸ್ಥಿಕೆಯನ್ನು ತಪ್ಪಿಸಿ ವಿವಿಧ ರಾಷ್ಟ್ರಗಳ ಲೆಕ್ಕಗಳಲ್ಲಿ ಜಮಾ–ಖರ್ಚು ಮಾಡುವ ವ್ಯವಸ್ಥೆಯನ್ನೇರ್ಪಡಿಸಬೇಕೆಂಬುದಾಗಿ ಹಲವರು ಪ್ರತಿಪಾದಿಸುತ್ತಿದ್ದಾರೆ. ಅಂತರರಾಷ್ಟ್ರೀಯ ಹಣ ನಿಧಿಯ ಈಚಿನ ಒಂದು ಪ್ರಯೋಗವಾದ ವಿಶೇಷ ಡ್ರಾಯಿಂಗ್ ಹಕ್ಕುಗಳು ಭವಿಷ್ಯಕ್ಕೊಂದು ದಿಕ್ಸೂಚಿ. ಶ್ರೀಮಂತ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಏಕರೀತಿಯಾಗಿ ಅನುಕೂಲವಾಗಿರುವ ವ್ಯವಸ್ಥೆಯೊಂದು ಇನ್ನೂ ಆವಿರ್ಭವಿಸಿಲ್ಲ.

—ಸಿ. ಕೆ. ರೇಣುಕಾರ್ಯ

ಪಾಕಿಸ್ತಾನದ ಆರ್ಥಿಕ ಸ್ಥಿತಿ

ಪಾಕಿಸ್ತಾನದ ಇತ್ತೀಚಿನ ರಾಜಕೀಯ ಬೆಳೆವಣಿಗೆಗಳು ಅದರ ಅರ್ಥವ್ಯವಸ್ಥೆಯನ್ನು ಬಹಳ ಸಂಕಷ್ಟಕ್ಕೀಡುಮಾಡಿವೆ. ಯುದ್ಧ ಅತ್ಯಂತ ಬಲಶಾಲಿ ರಾಷ್ಟ್ರಗಳನ್ನು ಸಹ ದುರ್ಬಲಗೊಳಿಸುವಾಗ, ಬಂಗ್ಲಾ ಯುದ್ಧದಿಂದಾಗಿ ಪಾಕಿಸ್ತಾನ ಹತಾಶವಾಗಿರುವುದು ಆಶ್ಚರ್ಯಕರವಾದ ವಿಷಯವಲ್ಲ.

ಪಾಕಿಸ್ತಾನದ ಕೃಷಿ, ಕೈಗಾರಿಕೆ ಮತ್ತು ವಿದೇಶಿ ವಾಣಿಜ್ಯರಂಗದಲ್ಲಿ ತೀರಾ ಸೋಲನ್ನು ಅನುಭವಿಸಿರುವುದು ವ್ಯಕ್ತವಾಗುತ್ತದೆ. ೧೯೭೦–೭೧ರ ಅವಧಿಯ ಕೃಷಿ ಉತ್ಪನ್ನ ಸೂಚ್ಯಂಕಗಳು, ಈ ರಂಗ ಹಿಮ್ಮೆಟ್ಟುತ್ತಿರುವುದನ್ನು ಸಾರುತ್ತಿವೆ. ಕೃಷಿ ಪಾಕಿಸ್ತಾನದ ರಾಷ್ಟ್ರೀಯ ಉತ್ಪನ್ನಕ್ಕೆ ಸೇ. ೪೪.೧ರಷ್ಟು ಕಾಣಿಕೆಯನ್ನು ನೀಡುತ್ತಿತ್ತು. ಆದರೆ ೭೦–೭೧ರ ಅವಧಿಯಲ್ಲಿ ಇದರ ಸೇಕಡಾಂಶ ೧.೧ರಷ್ಟು ಕೆಳಗಿಳಿಯಿತು. ಪ್ರಮುಖ ಕೃಷಿ ವಸ್ತುಗಳ ಉತ್ಪನ್ನ ಸೇ. ೩.೫ರಷ್ಟು ಕಡಿಮೆಯಾಗಿದೆ. ೧೯೬೯–೭೦ರಲ್ಲಿ ಕೈಗಾರಿಕಾ ಉತ್ಪನ್ನದ ಹೆಚ್ಚಳ ಸೇ. ೮.೮ ಇದ್ದರೆ ೧೯೭೦–೭೧ರ ಅವಧಿಯಲ್ಲಿ ಅದು ಕೇವಲ ಸೇ. ೩ರ ಪ್ರಮಾಣದಲ್ಲಿ ಮಾತ್ರ ಬೆಳೆಯಿತು.

ಸೆಣಬು ವಿದೇಶಿ ವಿನಿಮಯ ಗಳಿಕೆಯಲ್ಲಿ ಈ ಅರ್ಥವ್ಯವಸ್ಥೆಗೆ ಬೆನ್ನೆಲುಬಿದ್ದಂತೆ. ಆದರೆ ಸೇ. ೮೦ರಷ್ಟು ಸೆಣಬು ರಫ್ತು ಖೋತಾ ಆಗಿದೆ. ಇದರಿಂದ ಅರ್ಥವ್ಯವಸ್ಥೆಗೆ ಉಂಟಾಗಿರುವ ನಷ್ಟ ಹೇಳಲಾಗದು. ಬಂಗ್ಲಾ ದೇಶದ ಸುಮಾರು ೫೫ ಸೆಣಬು ಕಾರ್ಖಾನೆಗಳು ತಮ್ಮ ಉತ್ಪನ್ನಸಾಮರ್ಥ್ಯದಲ್ಲಿ ಕೇವಲ ಸೇ. ೧೫ರಿಂದ ೨೦ರಷ್ಟನ್ನು ಉಪಯೋಗಿಸಿಕೊಳ್ಳುತ್ತಿವೆ.

೧೯೭೦–೭೧ ಪಾಕಿಸ್ತಾನದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ಉತ್ಪನ್ನ ಸೇ. ೩೭ರಷ್ಟು ಹೆಚ್ಚಬೇಕೆಂದು ಅಂದಾಜುಮಾಡಲಾಗಿತ್ತು. ಪ್ರತಿಯಾಗಿ ಅದು ಸೇ. ೩.೨ರಷ್ಟು ವೃದ್ಧಿಯಾಯಿತು. ರಾಷ್ಟ್ರದಲ್ಲಿ ಯುದ್ಧದಿಂದಾಗಿ ನಾಲ್ಕನೆಯ ಯೋಜನೆಯ ಪ್ರಗತಿ ಅಸಾಧ್ಯ ಎನ್ನುವುದು ಬಹಳ ಸ್ಪಷ್ಟ.

ಆಂತರಿಕ ವ್ಯಾಪಾರದ ದೃಷ್ಟಿಯಿಂದ ಸಹ ಬಹಳ ತೊಡಕುಂಟಾಗಿದೆ. ೧೯೭೦-೭೧ರ ಜುಲೈ–ಫೆಬ್ರವರಿ ನಡುವೆ ಬಂಗ್ಲಾದೇಶದಿಂದ ಪಶ್ಚಿಮ ಪಾಕಿಸ್ತಾನಕ್ಕೆ ಆಗುತ್ತಿದ್ದ ರಫ್ತು ರೂ. ೬೮ ಕೋಟಿಗಳಿಂದ ೬೬ ಕೋಟಿಗಳಿಗೆ ಇಳಿಯಿತು. ಹಾಗೆಯೇ ಪಶ್ಚಿಮ ಪಾಕಿಸ್ತಾನದಿಂದ ಬಂಗ್ಲಾದೇಶಕ್ಕೆ ಆಗುತ್ತಿದ್ದ ರಫ್ತು ಇದೇ ಅವಧಿಯಲ್ಲಿ ೧೧೭ ಕೋಟಿ ರೂ.ಗಳಿಂದ ೧೧೨ ಕೋಟಿ ರೂ.ಗಳಿಗಿಳಿಯಿತು.

ಹೀಗೆ ಯುದ್ಧದ ಆರ್ಥಿಕ ಪರಿಣಾಮಗಳು ಈ ಅರ್ಥವ್ಯಸಸ್ಥೆಯಲ್ಲಿ ಬಹಳ ಗಂಭೀರವಾದವಾಗಿವೆ. ಈ ಪರಿಣಾಮಗಳು ಅರ್ಥವ್ಯವಸ್ಥೆಯನ್ನು ಎಲ್ಲಿಗೆ ಒಯ್ದು ಮುಟ್ಟಿಸಬಹುದು ಎನ್ನುವುದನ್ನು ಊಹಿಸುವುದು ಬಹಳ ಕಷ್ಟ. ಆದರೆ ಪ್ರಗತಿಯ

ಹಾದಿಯನ್ನು ಬಹಳ ಕಷ್ಟದಿಂದ ತುಳಿದು ಮುಂದುವರಿಯುತ್ತಿದ್ದ ಈ ರಾಷ್ಟ್ರ ತಿಂಗಳಿಗೆ ೪೫ ಕೋಟಿ ರೂ.ಗಳನ್ನು ಯುದ್ಧಕ್ಕಾಗಿ ತೊಡಗಿಸಿದೆ.

—ಸಿ. ಕೆ. ರೇಣುಕಾರ್ಯ

ಸಿಂಹಳ ಲಂಕಾದ್ವೀಪವಲ್ಲ

ರಾಮಾಯಣದಲ್ಲಿ ಉಲ್ಲೇಖಿತವಾಗಿರುವ ರಾವಣನ ಲಂಕಾದ್ವೀಪ ಈಗಿನ ಸಿಂಹಳ ದ್ವೀಪವೆಂದೇ ಸಾಮಾನ್ಯವಾದ ನಂಬಿಕೆ. ಆದರೆ ಸಂಶೋಧಕರು ಇದರ ಬಗೆಗೆ ಸಂಶಯವನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಪರಮಶಿವ ಅಯ್ಯರ್ ಮುಂತಾದ ವಿದ್ವಾಂಸರು ರಾಮಾಯಣದಲ್ಲಿ ಉಲ್ಲೇಖಿತವಾಗಿರುವ ಸಾಹಿತ್ಯಿಕ ಮಾಹಿತಿಗಳಿಂದ ಲಂಕೆ ಮಧ್ಯಪ್ರದೇಶದಲ್ಲಿದ್ದಿತೆಂದು ವಾದಿಸಿದ್ದರು. ಈ ವಾದಕ್ಕೆ ಅಷ್ಟೊಂದು ಪ್ರಾಮುಖ್ಯ ದೊರಕಿರಲಿಲ್ಲ. ಇತ್ತೀಚೆಗೆ ಈ ಪ್ರಶ್ನೆಯನ್ನು ಡೆಕ್ಕನ್ ಕಾಲೇಜಿನ ಡೈರೆಕ್ಟರೂ ಖ್ಯಾತ ಪುರಾತತ್ವಜ್ಞರೂ ಆದ ಡಾ. ಎಚ್. ಡಿ. ಸಾಂಕಳಿಯ ಪುರಾತತ್ವ ಮಾಹಿತಿಗಳಿಂದ ಪರಿಶೀಲಿಸಿದ್ದಾರೆ. ಇದೊಂದು ಸ್ವಾಗತಾರ್ಹವೂ ಮಹತ್ತ್ವಪೂರ್ಣವೂ ಆದ ಸಂಶೋಧನೆ.

ಲಂಕೆ ಮತ್ತು ಕಿಷ್ಕಿಂಧೆಗಳ ವರ್ಣನೆಯನ್ನು ನೋಡಿದರೆ ರಾಮಾಯಣದ ಕರ್ತೃವಿಗೆ ಸಿಂಹಳವಲ್ಲ, ದಕ್ಷಿಣ ಭಾರತದ ಪರಿಚಯವೂ ಇದ್ದಂತೆ ಕಾಣುವುದಿಲ್ಲ. ಈಗಿನ ಮಧ್ಯಪ್ರದೇಶದ ಜಬ್ಬಲ್‌ಪುರಕ್ಕೆ ಎಂಟುಮೈಲಿ ದೂರದಲ್ಲಿರುವ ಪ್ರದೇಶವೇ ಲಂಕೆ. ರಾಕ್ಷಸರು ಯುದ್ಧದಲ್ಲಿ ಸಾಲವೃಕ್ಷಗಳನ್ನೂ ಆಯುಧಗಳನ್ನಾಗಿ ಬಳಸುತ್ತಿದ್ದರು. ಸಾಲವೃಕ್ಷಗಳು ಇಂದಿಗೂ ಬೆಳೆಯುವುದು ಮಧ್ಯಪ್ರದೇಶದ ಕಾಡಿನಲ್ಲಿ ಮಾತ್ರ. ಸಿಂಹಳದಲ್ಲಾಗಲಿ ದಕ್ಷಿಣ ಭಾರತದಲ್ಲಾಗಲಿ ಅದು ಕಾಣಸಿಗುವುದಿಲ್ಲ. ಗಂಗಾನದಿಯ ದಕ್ಷಿಣಭಾಗ ಅಂದರೆ ಛೋಟಾನಾಗಪುರ ಮತ್ತು ಮಧ್ಯಪ್ರದೇಶಗಳ ಕೆಲಭಾಗಗಳು ಕೋಸಲವಾಗಿದ್ದಿರಬೇಕು. ಅಂದರೆ ರಾಮಾಯಣದ ಭೌಗೋಳಿಕ ವ್ಯಾಪ್ತಿಗೆ ಇವಿಷ್ಟು ಪ್ರದೇಶಗಳು ಮಾತ್ರ ಒಳಗೊಂಡಿದ್ದುವು ಎಂಬುದು ವಿದಿತವಾಗುತ್ತದೆ.

ರಾಮಾಯಣದಲ್ಲಿ ವರ್ಣಿತವಾಗಿರುವ ಜನಜೀವನ ಖಂಡಿತವಾಗಿಯೂ ಉತ್ತರಭಾರತದ್ದು. ಕ್ರಿ.ಪೂ. ಸುಮಾರು ಒಂದನೆಯ ಶತಮಾನದಿಂದ ಕ್ರಿ.ಶ. ಐದನೆಯ ಶತಮಾನದ ವರೆಗಿನ ಉತ್ತರ ಭಾರತದ ಜನಜೀವನವನ್ನು ರಾಮಾಯಣದಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. ಮುದ್ರೆಯುಂಗುರ ಭಾರತಕ್ಕೆ ಇಂಡೋಗ್ರೀಕರಿಂದ ಕ್ರಿ.ಶ. ಸುಮಾರು ನಾಲ್ಕು—ಐದನೆಯ ಶತಮಾನದಲ್ಲಿ ಬಳಕೆಗೆ ಬಂತು. ಅದಕ್ಕೆ ಮುಂಚೆ ಮುದ್ರೆಯುಂಗುರಗಳು ಭಾರತದಲ್ಲಿ ಬಳಕೆಯಲ್ಲಿದ್ದುದಕ್ಕೆ ಪ್ರಮಾಣಗಳಿಲ್ಲ. ರಾಮ ಸೀತೆಗೆ ಮುದ್ರೆಯುಂಗುರವನ್ನು ಹನುಮಂತನ ಮೂಲಕ ಕಳುಹಿಸಿದುದನ್ನು ಗಮನಿಸಿದರೆ, ಇದು ಕ್ರಿ.ಶ. ನಾಲ್ಕನೆಯ ಶತಮಾನಕ್ಕೆ

ಮುಂಚಿನದಲ್ಲವೆಂದು ಗೊತ್ತಾಗುತ್ತದೆ. ಕಾಶೇಯವಸ್ತ್ರ (ಚೀನೀ ರೇಷ್ಮೆ) ಭಾರತಕ್ಕೆ ಬಂದದ್ದು ಸುಮಾರು ಕ್ರಿ.ಶ. ನಾಲ್ಕನೆಯ ಶತಮಾನದ ಸುಮಾರಿನಲ್ಲಿ. ಸೀತೆ ಈ ವಸ್ತ್ರವನ್ನು ಧರಿಸಿದ್ದಳೆಂದು ರಾಮಾಯಣದಲ್ಲಿ ಹೇಳಿದೆ. ರಾಮಾಯಣದಲ್ಲಿ ವರ್ಣಿತವಾಗಿರುವ ಅನೇಕ ಆಯುಧಗಳು ಕಬ್ಬಿಣದ ಯುಗಕ್ಕೆ ಸೇರಿದವು. ಆಯುಧ ವರ್ಗೀಕರಣ ದೃಷ್ಟಿಯಿಂದ ಇವುಗಳನ್ನು ಪರಿಶೀಲಿಸಿದರೆ ಇವುಗಳು ಉತ್ತರ ಭಾರತದ ಉತ್ಖನನಗಳಲ್ಲಿ (ಇಂಡೋಗ್ರೀಕ್, ಕುಷಾಣ ಮತ್ತು ರೋಮನ್ನರ ಕಾಲಗಳಲ್ಲಿ ಅಂದರೆ ಕ್ರಿ.ಶ. ಒಂದು—ಎರಡನೆಯ ಶತಮಾನ) ದೊರಕಿರುವ ಆಯುಧಗಳನ್ನು ಬಹುವಾಗಿ ಹೋಲುತ್ತವೆ. ಇದರಿಂದ ರಾಮಾಯಣದ ಕಾಲ ಕಬ್ಬಿಣಯುಗದ ಮೊದಲಭಾಗವೆಂದು ಹೇಳಬಹುದು.

ಡಾ. ಸಾಂಕಳಿಯ ಅವರ ವಾದಗಳನ್ನು ಸುಲಭವಾಗಿ ಒಪ್ಪುವುದು ಕಷ್ಟ ವಾದರೂ ಗ್ರಂಥಾಧಾರಿತ ಪುರಾತತ್ವದ (ಟೆಕ್ಸ್ಟ ಬೇಸ್ಡ್ ಆರ್ಕಿಯಾಲಜಿ) ದೃಷ್ಟಿಯಿಂದ ಸ್ವಾಗತಾರ್ಹ. ಅವರು ತಮ್ಮ ಸಂಶೋಧನೆಯನ್ನು ಪೂರ್ಣಗೊಳಿಸಿ ರಾಮಾಯಣದ ಒಗಟುಗಳನ್ನು ಬಿಡಿಸಿದರೆ ಪ್ರಾಚೀನ ಭಾರತದ ಇತಿಹಾಸಕ್ಕೆ ಅದು ಮೂಲಭೂತ ಕೊಡುಗೆಯಾಗುತ್ತದೆ.

—ಎ. ವಿ. ಎನ್.

ಸಂಪಾದಕೀಯ

ಜಾನಪದ ಸಮ್ಮೇಳನ

ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ನಡೆದ ಅಖಿಲ ಕರ್ಣಾಟಕ ಮೂರನೆಯ ಜಾನಪದ ಸಮ್ಮೇಳನ ಕನ್ನಡ ಜಾನಪದ ದಲ್ಲಿ ಆಸಕ್ತಿಯುಳ್ಳವರಿಗೆಲ್ಲ ಸಂತೋಷವನ್ನುಂಟುಮಾಡುವ ಒಂದು ಮುಖ್ಯ ಘಟನೆ (ವರದಿ: ೧೪೯ನೆಯ ಪುಟದಲ್ಲಿ). ಜಾನಪದ ತುಂಬ ವ್ಯಾಪಕವಾದ ಕ್ಷೇತ್ರ. ಪುರಾತನ ಕಾಲದಿಂದ ಅಧುನಾತನದ ವರೆಗೆ ಹರಿದುಬಂದಿರುವ ಶ್ರೀಸಾಮಾನ್ಯರ ನಂಬಿಕೆ, ಸಂಪ್ರದಾಯ, ನಡೆವಳಿಕೆ, ಪದ್ಧತಿ, ಆಚಾರಗಳೆಲ್ಲ ಜಾನಪದದಲ್ಲಿ ಅಡಕ ವಾಗಿವೆ. ಜನಪದ ಕತೆ, ಹಾಡು, ಲಾವಣಿ, ಒಗಟಿ, ಗಾದೆ ಮುಂತಾದವು ಕೂಡ ಜಾನಪದದ ಸೀಮೆಗೆ ಸೇರಿದ ಕಲಾಪಗಳು.

ಜಾನಪದದ ಅಧ್ಯಯನ ಒಂದು ಕಾಲದಲ್ಲಿ ಗತಕಾಲದ ಹೆಜ್ಜೆಗುರುತು ಗಳನ್ನು ದುರ್ಬೀನಿಟ್ಟು ನೋಡುವ ಕುತೂಹಲಿಗಳಿಗೆ ಮಾತ್ರ ಸೀಮಿತವಾಗಿತ್ತು. ಅದು ಆಗ ವಿರಾಮಜೀವಿಗಳಾದ ಶ್ರೀಮಂತ ವಿದ್ವಾಂಸರ ಹೊತ್ತುಗಳೆಯುವ ಸಾಧನ. ಪುರಾತನ ಜನಜೀವನದ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗುರುತಿಸುವುದೂ ಕಲೆಹಾಕುವುದೂ ಮಾತ್ರವೇ ಇವರ ಉದ್ದೇಶವಾಗಿತ್ತು.

ಆದರೆ ಕ್ರಮೇಣ ಜಾನಪದದ ಅರ್ಥವೂ ಪ್ರಾಮುಖ್ಯವೂ ವಿಸ್ತಾರವಾದುವು. ಜಾನಪದಕ್ಕೂ ಮಾನವಶಾಸ್ತ್ರಕ್ಕೂ ನಡುವಣ ಗೆರೆ ಕ್ರಮಕ್ರಮವಾಗಿ ಸುವ್ಯಕ್ತ ವಾಯಿತು. ಅನಾಗರಿಕ ಮಾನವನ ಮಾನಸಿಕ ವಿದ್ಯಮಾನಗಳನ್ನು ಕುರಿತ ಮಾನವಶಾಸ್ತ್ರವೇ ಜಾನಪದ—ಎಂಬ ಸಂಕುಚಿತಾರ್ಥ ಮರೆಯಾಯಿತು. ಇದೊಂದು ಅವಶೇಷಶಾಸ್ತ್ರ, ವರ್ತಮಾನದ್ದಕ್ಕಿಂತ ಭಿನ್ನವಾದ ಕಾಲವೊಂದರಿಂದ ಅಭ್ಯಾಸಬಲದಿಂದ ಉಳಿದುಬಂದ ಅಸಂಗತಗಳ ಮೊತ್ತ—ಎಂಬೆಲ್ಲ ಭಾವನೆಗಳೂ ದೂರವಾದುವು. "ಅದು ಭಾಷೆಯ ಒಂದು ಖಾಯಿಲೆ" ಎಂದು ಕರೆದಿದ್ದ ವಿದ್ವಾಂಸರ ಅಭಿಪ್ರಾಯದ ತಥ್ಯತೆಯನ್ನು ಪ್ರಶ್ನಿಸುವ ಕಾಲ ಬಂತು. ಜನಜೀವನದ ಜೀವಂತಿಕೆಯನ್ನೂ ಅಖಂಡತೆಯನ್ನೂ ಬಲ್ಲ ಯಾರೂ ಇಂಥ ವ್ಯಾಖ್ಯೆಗಳನ್ನು ಒಪ್ಪುವುದಿಲ್ಲ. ಅಪೂರ್ವವಸ್ತುಸಂಗ್ರಹಣೆಯನ್ನೇ ತಮ್ಮ ಹವ್ಯಾಸವಾಗಿ ಮಾಡಿ ಕೊಂಡವರ ಕೈಯಿಂದಲೂ ಇಂದು ಅದರ ಬಿಡುಗಡೆಯಾಗುತ್ತಿದೆ. ಜಾನಪದದ ಆಧುನಿಕ ವಿದ್ಯಾರ್ಥಿಗೆ ಅದೊಂದು ಜೀವಂತವೂ ಅವಿನಾಶಿಯೂ ಆದ ಮಹಾಶಕ್ತಿ. ಗತಕಾಲದ ಸಂಪ್ರದಾಯಗಳನ್ನು ವರ್ತಮಾನಕ್ಕೆ ಹೊತ್ತು ತರುವುದರ ಜೊತೆಗೆ

ಅದು ಇಂದಿನದನ್ನೂ ತನ್ನ ವಿಶಾಲ ಕ್ಷೇತ್ರದಲ್ಲಿ ಅಡಗಿಸಿಕೊಳ್ಳುತ್ತಿದೆ. ಸಮುದ್ರದ ಅಲೆಗಳಂತೆ ಸರ್ವದಾ ವ್ಯತ್ಯಾಸಗೊಳ್ಳುತ್ತಿರುವ ಸಮಾಜದಲ್ಲಿ ಯಾವುದು ಹೊಸದು, ಯಾವುದು ಹಳೆಯದು? ನಮ್ಮ ದೃಷ್ಟಿಯನ್ನಲ್ಲಿ ನೆಡುವಷ್ಟರಲ್ಲಿ ಹೊಸದು ಹಳೆಯದಾಗಿರುತ್ತದೆ; ಹಳೆಯದು ಹೊಸದಾಗಿರುತ್ತದೆ. ರೈಲು, ಮೋಟಾರು, ವಿಮಾನ ಮುಂತಾದ ಆಧುನಿಕ ಸಾಧನಗಳು ಕೂಡ ಜಾನಪದದ ಅಂತರಂಗವನ್ನು ಸೇರಿರುವುದನ್ನು ನಾವು ಕಣ್ಣಾರ ಕಾಣುತ್ತಿದ್ದೇವೆ. ಜಾನಪದವಿಂದು ಕೇವಲ ಅನಕ್ಷರಸ್ಥರ ಆಚಾರ ನಂಬಿಕೆಗಳ ಕಂತೆಯಲ್ಲ; ಸಮಾಜದ ಮೇಲಂತಸ್ತಿನವರ ಆಚಾರ ವಿಚಾರಗಳ ಗ್ರಾಮೀಣ ಅನುಕರಣೆಯಲ್ಲ. ಅದು ಒಂದು ನಾಡಿನ ಜನರ ಸರ್ವಾಂಗೀಣ ಅಭಿವ್ಯಕ್ತಿ. ನಗರೀಕರಣದ ಹಾದಿಯಲ್ಲಿ ಹೆಜ್ಜೆಯಿಕ್ಕುತ್ತಿರುವ ನಾಡಿನ ಈ ಸಂಧಿಕಾಲದಲ್ಲಿ ಜಾನಪದ ಹೊಸ ಹೊಸ ಅನುಭವಗಳನ್ನು ಕೂಡಿಸಿ ಕೊಳ್ಳುತ್ತಿದೆ. ಆದ್ದರಿಂದ ಜಾನಪದ ಕ್ಷೇತ್ರದ ಅಧ್ಯಯನಕ್ಕೆ ಕೊನೆಯೆಂಬುದೇ ಇಲ್ಲ. ಅದಕ್ಕೆ ಹೊರತಾದ ವಿಷಯವೂ ಇಲ್ಲ. ನಾಗಮಂಗಲದಲ್ಲಿ ನಡೆದ ಮೂರನೆಯ ಜಾನಪದ ಸಮ್ಮೇಳನ ಈ ಸತ್ಯವನ್ನು ಗುರುತಿಸಿರುವುದು ಸಮಾಧಾನ ಕರವಾದ ವಿಚಾರ.

WO 9314—MUPM—2000+25 copies—11-11-71

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು–೬